ಮರಳಿ ಮನೆಗೆ

(ಕಾದಂಬರಿ)

ಅರಿಕೆ

ಇದು ನನ್ನ ಮೊದಲನೆಯ ಕಾದಂಬರಿ. ಇದನ್ನು ಬರೆದು ವರ್ಷಗಳಾದರೂ, ಪ್ರಕಟಣೆಗೆ ಹಲವಾರು ಅಡಚಣೆಗಳಿಂದ ಸಾ ದಿದ್ದು, ಇದೀಗ ಗೆಳೆಯ ಶ್ರೀ ರಾ ಮೊ. ವಿಶ್ವಾಮಿತ್ರರ ಔದಾಯ ಪ್ರಕಟನೆಯ ಯೋಗ ದೂರೆತಿದೆ.

ಸಹಕಾರ ಸಂಘಗಳು ಅದರಲ್ಲೂ ಬಹುದ್ದೇಶೀ ಅನುಗ್ರಾಮಿ ಕಾರ ಸಂಘಗಳು-ವ್ಯಕ್ತಿಗತ, ಸ್ವಾರ್ಥ, ಅಧಿಕಾರ ಲಾಲಸೆಗಳ ಗಳಿಂದ ಸಹಕಾರ ತತ್ವದ ದುರುಪಯೋಗಪಡಿಸಿಕೊಂಡ ಪತನಕ್ಕೆ ವಾಗುತ್ತಿವೆ.

ಕಾದಂಬರಿಯಲ್ಲಿ ನಿರೂಪಿತವಾಗಿರುವ ಗುರುರಾಜರಾಯರು, ಸಪ್ಪ, ಸೂಗಣ್ಣ, ಅಪ್ಪಣ್ಣರಂತಹ ಸ್ವಾರ್ಥ ಸಾಧಕರು ವಂಚಕರು ಜದ ಎಲ್ಲ ಕ್ಷೇತ್ರಗಳಲ್ಲೂ ಇರುವಂತೆ ಆನಂದ, ಬುಸ್ಸಣ್ಣರಂತಹ ವಾದಿಗಳೂ ಇದ್ದಾರೆ. ವ್ಯಷ್ಟಿಯನ್ನು ಬಿಟ್ಟು ಸಮಷ್ಟಿಯ ಹಿತಕ್ಕಾಗಿ ದರೆ ಮಾತ್ರ ಸಂಸ್ಥೆ ಹಾಗೂ ಸಮಾಜದ ಹಿತಸಾಧ್ಯವೆಂಬುದನ್ನು ಪಿಸಿಲು ಯತ್ನಿಸಿರುವೆ. ನನ್ನ ಯತ್ನ ಸಫಲವಾಗಿದೆಯೇ ಎಂಬ ಓದುಗ ಮಿತ್ರರು ತಿಳಿಸಬೇಕು.

ಈ ಹೊತ್ತಿಗೆಯನ್ನು ಬೆಳಕಿಗೆ ತಂದ ಪೂರ್ಣ ಶ್ರೇಯಸ್ಸು ನನ್ನ ಮಿತ್ರರಾದ ಶ್ರೀ ಎಂ ಆನಂದರಾಯರದು. ಹೊತ್ತಿಗೆಯನ್ನು ಓ ತಪ್ಪುಗಳನ್ನು ತಿಳಿಸಿ, ಪ್ರಕಾಶನಕ್ಕೆ ಶ್ರಮಿಸಿದ ಬಗ್ಗೆ ಅವರಿಗೆ ಅತ್ಯಂತ ಕೃತಜ್ಞನಾಗಿರುವೆ.

ಈ ಹೊತ್ತಿಗೆಯನ್ನು ಪ್ರಕಾಶಿಸಲು ದಯಮಾಡಿ ಒಪ್ಪಿದ ಶ್ರೀ ರಾ. ಮೊ ವಿಶ್ವಾಮಿತ್ರರಿಗೆ ಕೃತಜ್ಞತೆಗಳು. ಈ ಕೃತಿಯನ್ನು,

ಪೂಜ್ಯ ಗುರು, ಅಣ್ಣ

ಶ್ರೀ ಬಿ. ಆರ್. ಭೀಮರಾಯರಿಗೆ ಅರ್ಪಿ

15—2—57
ನಂ.111. ಲೇಬರ್ ಹೌಸಿಂಗ್ ಎಸ್ಟೇಟ್
ದಾವಣಗೆರೆ.

ಮೂ. ಲ. ರಂಗ

ಎರಡು ಮಾತು

ಮುರಳಿ ಮನೆಗೆ ನಮ್ಮ ೨೧ನೆಯ ಪ್ರಕಟಣೆಯಾಗಿ ವಾಚಕರ ಕೈ ಸೇರುತ್ತದೆ "ಕುರುಡು ಕಾಸು" ಕಾದಂಬರಿಯ ಎರಡನೆಯ ಭಾಗ ಮುಂದೆ ಹೊರಬರುವುದು. ನಮ್ಮ ಮುಂದಿನ ಕುಸುಮ ಅ. ಗೌ. ಕಿನ್ನಿಗೋಳಿ ಯವರ "ಒಡ್ಡಿದ ಉರುಳು" ಗಾದಂಬರಿ. ಅದು ಸದ್ಯವೇ ಪ್ರಕಟವಾಗಲಿದೆ. ಈ ಹೊತ್ತಗೆ ಹೊರಬರಲು ವಿಳಂಬವಾಗಿದೆ. ಕ್ಷಮೆಯಿರಲಿ.

ಶ್ರೀ ಮು ಲ. ರಂಗನಾಥರು ಸಹಕಾರಿ ಸಂಘ ದುರುಪಯೋಗ ಗೊಳ್ಳುತ್ತಿರುವ ಒಂದು ಚಿತ್ರವನ್ನು ಮಾರ್ಮಿಕವಾಗಿ ಇದರಲ್ಲಿ ಚಿತ್ರಿಸಿದ್ದಾರೆ. ಆನಂದ, ರಾಜಣ್ಣ, ಗುರುರಾಜರಾಯರು ನಮ್ಮಲ್ಲಿ ಒಳ್ಳೆಯ ಪರಿಣಾಮ ವನ್ನುಂಟು ಮಾಡುತ್ತಾರೆ. ಈ ಕೃತಿಯನ್ನು ಮಾಲೆಯಲ್ಲಿ ಪೋಣಿಸಲು ಅನುಮತಿಯಿತ್ತ ಬಗ್ಗೆ ಅವರಿಗೆ ಋಣಿಯಾಗಿರುವೆ. ಮುದ್ರಣ ಕಾರ್ಯ ವನ್ನೆಸಗಿದ ವಿಜಯ ಪ್ರೆಸ್ಸಿನ ಶ್ರೀ ರಾಮಚಂದ್ರ ರಾಯರಿಗೂ ಕಾದಂಬರಿ ಯನ್ನೊದಗಿಸಿ ಕೊಟ್ಟು ಸಹಕರಿಸಿದ ಶ್ರೀ ಎಂ. ಆನಂದರಾಯರಿಗೂ ಋಣಿಯಾಗಿರುವೆ.

ಸಂಪಾದಕ.

ಮುದ್ರಣ:
ವಿಜಯ ಮುದ್ರಣಾಲಯ
ಮಂಗಳೂರು-೧.

ಸಂಪಾದಕ:
ರಾಮ ಮೊಳೆಯಾರ
ವಿದ್ವಾನ್.
...ಲ್ಲಿಲ್ಲದಾಗ
...ಗಳಿಗೆ ತೊಂದರೆ

ಬೆಲೆ 1-8-0 (1·50)

ವಿವೇಕ ಸಾಹಿತ್ಯ ಮಾಲೆ, ಮಂಗಳೂರು-೩.

ನಮ್ಮ ಪ್ರಕಟಣೆಗಳು

*1	ವಿಶ್ವಪ್ರೇಮಿ	ರಾ. ಮೊ. ವಿಶ್ವಾಮಿತ್ರ	(೨ನೇ ಮುದ್ರಣ)	1—8—0
*2	ಕುಟ್ಟಿದೊಣ್ಣೆ	ಎಮ್. ಸುಬ್ರಾಯನ್	(ಕಥಾಸಂಕಲನ)	0—8—0
*3	ಸ್ವರ್ಗಲೋಕ	ಎಮ್. ಕೆ. ಭಟ್	(ನಾಟಕ)	0—4—0
*4	ತಿಳಿವಿನ ಹಾದಿ	ರಾ. ಮೊ. ವಿಶ್ವಾಮಿತ್ರ	(ಕಾದಂಬರಿ)	0-12—0
*5	ದೇವರ ದಾರಿ	ಸೇವ ನಮಿರಾಜ ಮಲ್ಲ	(ಕಾದಂಬರಿ)	1—4—0
*6	ಮಣ್ಣು ನಂಜು	ಎಮ್. ಎನ್. ಭಟ್	(ಕಾದಂಬರಿ)	0-14—0
*7	ಬೇನೆಯ ಬಾಳ್ವೆ	ರಾ. ಮೊ. ವಿಶ್ವಾಮಿತ್ರ	(ಕಾದಂಬರಿ)	1—8—0
8	ಪುರಸ್ಕಾರ	ಗಣಪತಿ ಮೊಳೆಯಾರ	(ಕಾದಂಬರಿ)	0—8—0
9	ಭ್ರಾಂತಿಯ ಸುಳಿಯಲ್ಲಿ	ಎಂ. ಎನ್. ಭಟ್	(ಕಾದಂಬರಿ)	0-12—0
*10	ಬೆಂದ ಜೀವಿ	ಪಂ.ಮೂ.ರುದ್ರಮುನಿಸ್ವಾಮಿ	(ಕಾದಂಬರಿ)	0-12—0
11	ಸಮಾಜ ದರ್ಶನ	ಇಂದಿರಾತನಯ	(ಕಾದಂಬರಿ)	0—8 0
12	ಹೃದಯ ವೀಣೆ	ಮು. ವಿ. ನಾಯಕ್	(ಕಥಾಸಂಕಲನ)	1—0—0
13	ತ್ಯಾಗಮಯಿ	ರಾ. ಮೊ. ವಿ.	(ಕಾದಂಬರಿ)	1—4—0
14	ಮೊದ್ದು ಮಗು	ನವಗಿರಿನಂದ	(ಕಾದಂಬರಿ)	0-12—0
15	ಸಂಶೋಧನೆ	ಆನಂದ ರಾವ್ ಎಂ. ಎ.	(ನಾಟಕ)	0—8—0
16	ಕಾಳಿಗೆ ಕಾಣಿಕೆ	ಕೈಂತಜೆ ಗೋವಿಂದ ಭಟ್	(ಕಥಾಸಂಕಲನ)	0—8—0
17	ರಕ್ತದಾನ	ರಾ. ಮೊ. ವಿಶ್ವಾಮಿತ್ರ	(ಕಾದಂಬರಿ)	0-12—0
18	ಕುರುಡು ಕಾಸು	ಎಮ್. ಎನ್. ಬಿ	(ಕಾದಂಬರಿ)	1—0—0
19	ಅಂಕುರ	ಯೋಗಿನಿ	(ಕಥಾ ಸಂಕಲನ)	1—0—0
20	ಹಳ್ಳಿಯ ಹಳಬರು	ರಾ. ಮೊ. ವಿ.	(ಕಥಾ ಸಂಕಲನ)	0-10—0
ನಂ.111.	[illegible] ಮನೆಚೆ	ರಂಗನಾಥ	(ಕಾದಂಬರಿ)	1—8—0

ದ.

*ಪ್ರತಿಗಳು ಮುಗಿದಿವೆ.

ಮರಳಿ ಮನೆಗೆ

೧

ಸಂಜೆ ಗುರುರಾಜರಾಯರು ಬಸ್ಸಿನಿಂದ ಇಳಿದು, ಸುತ್ತಲೂ ನಿರೀಕ್ಷಿಸಿ . ಬಸ್ಸು ಬಂದು ನಿಂತುದನ್ನು ಕಂಡು ಆ ಕಡೆಯೇ ಬರುತ್ತಿದ್ದ ಾನ ಲಿಂಗನನ್ನು ಕರೆದು, ಬಸ್ಸಿನ ಮೇಲಿದ್ದ ಸಾಮಾನುಗಳನ್ನು ಇಳಿಸಿ ಳ್ಳ ಹೇಳಿದರು. ಲಿಂಗ ಒಂದೊಂದಾಗಿ ಸಾಮಾನುಗಳನ್ನು ಇಳಿಸಿ ಅವು ನ್ನು ಹೊತ್ತುಕೊಂಡು ಮನೆಯ ಕಡೆ ಹೊರಟ. ಗುರುರಾಜರಾಯರು ನ ಹಿಂದೆಯೇ ನಿಧಾನವಾಗಿ ಹೆಜ್ಜೆ ಹಾಕುತ್ತಾ ನಡೆದರು.

ಗುರುರಾಜರಾಯರಿಗೆ ಸುಮಾರು ನಲವತ್ತೈದು ವರ್ಷವಿರಬಹುದು. ೂವರೆ ಅಡಿ ಎತ್ತರದ ಆಳು. ಎತ್ತರಕ್ಕೆ ತಕ್ಕ ಮೈಕಟ್ಟು. ತಲೆಯ ಲಿನ ಕ್ರಾಪಿನಲ್ಲಿ ಅಲ್ಲಲ್ಲಿ ಬಿಳಿಯ ಕೂದಲು ಕಾಣಿಸಿಕೊಂಡಿದ್ದುವು. ರ ಅಗಲವಾದ ಗುಂಡು ಮುಖಕ್ಕೆ ಒಪ್ಪುವ ಹಾಗೆ ಅಗಲವಾದ ಕಣ್ಣು ು, ದರ್ಪವನ್ನು ತೋರಿಸುವಂತೆ ಕಾಣುವ ಗಲ್ಲಮೀಸೆ. ಅವರು ಬಿಳಿಯ ಪ್ಪ ಹಾಕಿ, ಕಚ್ಚೆ ಪಂಚೆ ಉಟ್ಟು, ಹೆಗಲಮೇಲೆ ಉತ್ತರೀಯ ಹಾಕಿ ಂಡು ಠೀವಿಯಿಂದ ಹೊರಟರೆ, ದೂರದಿಂದಲೇ ಯಾರಾದರೂ ಸುಲಭ ಿಯೇ ಗುರುತಿಸಿಬಿಡಬಹುದಾಗಿತ್ತು. ಇವರು ಸೊಸೈಟಿಯ ಗುರುರಾಜ ಯರು ಎಂಬುದಾಗಿ, ರಾಂಪುರದ ಮಲ್ಟಿ ಪರ್ಪಸ್ ಕೋ ಆಪರೇಟಿವ್ ಸೈಟಿಯಲ್ಲಿ ಅಸಿಸ್ಟೆಂಟ್ ಸೆಕ್ರಟರಿಗಳಾಗಿದ್ದುದರಿಂದ, ಎಲ್ಲರೂ ಅವರನ್ನು ಾಸೈಟಿಯ ಗುರುರಾಜರಾಯರು,' ಎಂದು ಕರೆಯುತ್ತಿದ್ದರು.

ಗುರುರಾಜರಾಯರ ಮಗ ರಾಜಣ್ಣ S. S. L. C. ಪರೀಕ್ಷೆಯಲ್ಲಿ ತೇರ್ಗಡೆ ಾಗಿದ್ದ. ಅವನನ್ನು ಕಾಲೇಜಿಗೆ ಸೇರಿಸಿ, ಅವನಿಗೆ ಊಟ ತಿಂಡಿ, ಿಕ್ಕೊ ವ್ಯವಸ್ಥೆ ಮಾಡಿ ಬರಲು ತುಮಕೂರಿಗೆ ಹೋಗಿದ್ದವರು ಈಗತಾನೇ ುತ್ತಿದ್ದರು.

ಲಿಂಗನ ಹಿಂದೆ ಹೊರಟ ಗುರುರಾಜರಾಯರು ಗುಮಾಸ್ತ ಬಸಲಿಂಗ ನ ವಿಚಾರವನ್ನೇ ಆಲೋಚಿಸುತ್ತ ನಡೆದಿದ್ದರು. ತಾವು ಊರಲ್ಲಿಲ್ಲದಾಗ ಸೈಟಿಯಲ್ಲಿ ಮಾಲು ಇಲ್ಲದೆಹೋಗಿ, ಹಳ್ಳಿಯ ಬಡ ಜನಗಳಿಗೆ ತೊಂದರೆ

ಯಾಗಬಾರದೆಂದು ಬಗೆದು, ಅವರು ಗುಮಾಸ್ತ ಬಸಲಿಂಗಯ್ಯನಿಗೆ ಮಾಲು ತಂದು ಮಾರಾಟ ಮಾಡಲು ಹೇಳಿದ್ದರು. ಅಲ್ಲದೆ ಅದಕ್ಕಾಗಿ ಹಣವನ್ನು ಸಿದ್ಧಗೊಳಿಸಿ ಇಟ್ಟಿದ್ದರು. ಮೊದಲಿನಿಂದಲೂ ಬಸಲಿಂಗಯ್ಯನ ಉದಾಸೀನ ಪ್ರಕೃತಿ ಕಂಡಿದ್ದ ಅವರು, ತಾವು ಹೇಳಿದಂತೆ ಮಾಲು ತಂದನೋ ಇಲ್ಲವೋ, ಜನಗಳು ಏನು ಗಲಾಟೆ ಎಬ್ಬಿಸಿದ್ದಾರೋ ಏನೋ ಎಂದು ಯೋಚಿಸುತ್ತಾ ಮುಂದಡಿಯಿಡುತ್ತಿದ್ದರು.

ಹತ್ತು ಹೆಜ್ಜೆ ಹಾದಿ ತುಳಿದಿರಲಿಲ್ಲ; ಅಷ್ಟರಲ್ಲೇ ಆಂಜನಪ್ಪ ಎದುರಿಗೆ ಬಂದ. ಆಂಜನಪ್ಪ ಗುರುರಾಜರಾಯರ ಸ್ನೇಹಿತ ಹಾಗೂ ಸೊಸೈಟಿಯ ಡೈರೆಕ್ಟರುಗಳಲ್ಲೊಬ್ಬನಾಗಿದ್ದ.

ಆಂಜನಪ್ಪ ಬಂದವನೇ ಎದುರಿನಲ್ಲಿ ಯೋಚನೆಯಲ್ಲಿ ಮುಳುಗಿ ನಿಧಾನವಾಗಿ ಹೆಜ್ಜೆಹಾಕುತ್ತಿದ್ದ. ಗುರುರಾಜರಾಯರನ್ನು ಕಂಡು, "ಏನು ಗುರುರಾಜ ಬಹಳ ಅಪರೂಪವಾದ ಹಾಗಾಯಿತು. ಎಷ್ಟು ದಿನ ಹೋಗಿಬಿಟ್ಟೆ ತುಮಕೂರಿಗೆ? ಬಾ, ಹೋಗೋಣ," ಎಂದು ಕರೆದ.

"ಬಸ್ಸಿನಿಂದ ಇಳಿದು ಇದು ತಾನೇ ಬರುತ್ತ ಇದ್ದೀನಿ ಮಹರಾಯ. ಮನೆಗೆ ಹೋಗಿ ಮುಖ ತೋರಿಸಿ ಬರೋಣವೋ ಬೇಡವೋ? ಗುರುರಾಜರಾಯರು ಮನೆಯ ಕಡೆಗೆ ಹೆಜ್ಜೆ ಹಾಕುತ್ತಲೇ ಹೇಳಿದರು.

"ಇರಲಿ ಬಾರಯ್ಯ. ಈಗ ಐದೇ ಐದು ನಿಮಿಷಗಳಲ್ಲಿ ಹೋಗಿಬಿಡುವೆಯಂತೆ" ಆಂಜನಪ್ಪ ಗುರುರಾಜರಾಯರ ಭುಜ ಹಿಡಿದು ಜಗ್ಗತೊಡಗಿದ. ಗುರುರಾಜರಾಯರು ನಿರ್ವಾಹವಿಲ್ಲದೆ ಆಂಜನಪ್ಪನ ಹಿಂದೆ ಹೊರಟರು.

ಇಬ್ಬರೂ ಹೋಟೆಲಿಗೆ ಹೋಗಿ ಕಾಫಿ ತೆಗೆದುಕೊಂಡು ಹೊರಟರು. ಆಂಜನಪ್ಪ ಗುರುರಾಜರಾಯರನ್ನು ತನ್ನ ಮನೆಗೇ ಕರೆದೊಯ್ದ. ಇಬ್ಬರೂ ಮಾತಾಡುತ್ತ, ಮಾತಾಡುತ್ತ ಇಸ್ಪೇಟಿಗೆ ಕೈಹಚ್ಚಿದರು. ಆಟದ ಭರದಲ್ಲಿ ಹೊತ್ತು ಹೋದುದೇ ಅರಿವಾಗಲಿಲ್ಲ. ಆಟದಿಂದ ಎಚ್ಚೆತ್ತು ಗುರುರಾಜರಾಯರು ಮನೆಯ ಕಡೆ ಹೊರಟಾಗ ರಾತ್ರಿ ಒಂಭತ್ತು ಹೊಡೆದಿತ್ತು.

ಅನಸೂಯಮ್ಮ ಮನೆಯಲ್ಲಿ ಗಂಡನ ಬರವನ್ನೇ ನಿರೀಕ್ಷಿಸುತ್ತ ಕಾದು ಕುಳಿತಿದ್ದರು. ತಂದೆ ಬರುವುದನ್ನೇ ನಿರೀಕ್ಷಿಸುತ್ತ ಪ್ರಮೀಳ, ಪ್ರಕಾಶರೂ

ಊಟ ಮಾಡದೆ ಚಾಪೆಯ ಮೇಲೆ ಮಲಗಿ ನಿದ್ರಿಸುತ್ತಿದ್ದರು. ನಿರೀಕ್ಷಿಸಿ ನಿರೀಕ್ಷಿಸಿ ಬೇಸತ್ತು ಗೊಣಗಲಾರಂಭಿಸಿದರು.

"ಇದೇನು ಈ ಹುಚ್ಚು ಉಂಟೆ? ಮನೆಯ ಕಡೆ ಬಂದು ಹೋಗಿದ್ದರೆ ಆಗುತ್ತಿರಲಿಲ್ಲವೆ? ಬಸ್ಸಿನಿಂದ ಇಳಿದು ನೇರವಾಗಿ ಕ್ಲಬ್ಬಿಗೆ ಹೋಗಿ ಆಟಕ್ಕೆ ಕುಳಿತುಬಿಟ್ಟರೇನೊ? ದಿನದಿನಕ್ಕೂ ಅತಿಯಾಗುತ್ತ ಬಂತು. ಯಾಕೋ.... ..."

ಗೊಣಗಾಟ ಮುಗಿದಿರಲಿಲ್ಲ, ಅಷ್ಟರಲ್ಲೇ ಗುರುರಾಜರಾಯರು ಮನೆಯೊಳಗೆ ಪ್ರವೇಶಿಸಿದರು. ಗೋಡೆಯ ಮೇಲಿನ ಗಡಿಯಾರ ನೋಡಿದಾಗ ಅವರಿಗೆ ತಿಳಿಯಿತು— ತಾನು ತಪ್ಪು ಮಾಡಿದೆ ಎಂದು. 'ನನಗೆ ಸ್ವಲ್ಪವೂ ತಿಳುವಳಿಕೆ ಬರಲಿಲ್ಲ. ಸಂಜೆಯೇ ಮನೆಗೆ ಬಂದು ಹೋಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ಹುಡುಗರು ನನಗಾಗಿ ಕಾದು ಊಟ ಮಾಡದೆ ಹಾಗೆಯೇ ಮಲಗಿದರೇನೋ, ಪಾಪ!' ಎಂದುಕೊಂಡರು. ಅವರ ದೃಷ್ಟಿ ಅಲ್ಲಿಯೇ ಚಾಪೆಯ ಮೇಲೆ ಮಲಗಿದ್ದ ಪ್ರಮೀಳೆ, ಪ್ರಕಾಶರ ಕಡೆ ಹೋಯಿತು. ಲಾಟೀನಿನ ಮಂದ ಪ್ರಕಾಶದಲ್ಲಿ ಮಕ್ಕಳು ಹಸಿವಿನಿಂದ ಸಪ್ಪೆಬಿದ್ದಿದ್ದ ಮುಖಗಳು ಸ್ಪಷ್ಟವಾಗಿ ಕಾಣುತ್ತಿದ್ದುವು. ನಿರೀಕ್ಷಣೆಯಲ್ಲಿ ಬೇಸತ್ತಿದ್ದ ಅವರ ಕಣ್ಣುಗಳು ನಿದ್ರೆಯನ್ನು ಸ್ವಾಗತಿಸಿದ್ದುವು.

"ಎಲ್ಲರದೂ ಊಟವಾಯ್ತೇನು?"

ಪ್ರಶ್ನೆಯಲ್ಲಿ ತಿರುಳಿರಲಿಲ್ಲ. ಆದರೂ ಗುರುರಾಜರಾಯರು ಮೌನವನ್ನು ಕದಕಿ ಪ್ರಶ್ನಿಸಿದ್ದರು. ಅವರ ದನಿ ಪಶ್ಚಾತ್ತಾಪದಿಂದ ಕುಗ್ಗಿತ್ತು.

"ಯಾರು ಊಟ ಮಾಡಿದರೇನು ಬಿಟ್ಟರೇನು ನಿಮಗೆ? ನಿಮ್ಮ ರಾಜಕಾರ್ಯಗಳೆಲ್ಲ ಮುಗಿದುವು ತಾನೆ? ಸದ್ಯ ಇಷ್ಟು ಹೊತ್ತಿಗಾದರೂ ಮನೆಯ ನೆನಪು ಬಂತಲ್ಲ!" ಬೇಸತ್ತ ದನಿಯಲ್ಲಿ ಉತ್ತರಕೊಟ್ಟರು ಅನಸೂಯಮ್ಮ.

"ಏನೋ ಇವತ್ತು ಸ್ವಲ್ಪ ಹೊತ್ತಾಗಿ ಹೋಯಿತು" ಎಂದು ಗುರುರಾಜರಾಯರು ಎದೆಯ ಮೇಲೆ ಕೈಕಟ್ಟಿ ನಡುಮನೆಯಲ್ಲಿ ಶತಪಥ ಹಾಕತೊಡಗಿದರು. ಮುಖ ಗಂಭೀರವಾಗಿತ್ತು. ಮನಸ್ಸು ತಪ್ಪನ್ನು ಒಪ್ಪಿಕೊಂಡು ನಾಚಿಕೆಯನ್ನು ತಳೆದಿತ್ತು.

"ಹುಡುಗರು ನಿಮಗಾಗಿ ಕಾದು ಕಾದು ಈಗ ಮಲಗಿಕೊಂಡರು. ಒಬ್ಬರದ್ದೂ ಊಟವಾಗಿಲ್ಲ. ಏಳಿ, ಕಾಲು ತೊಳೆದುಕೊಳ್ಳಿ."

ಅನ್ಯ ಮನಸ್ಕರಂತೆ ಶತಪಥ ಹಾಕುತ್ತಿದ್ದ ಗಂಡನನ್ನು ಎಚ್ಚರಿಸಿ, ಹುಡುಗರನ್ನು ಎಬ್ಬಿಸಿ ಒಳಗೆ ನಡೆದರು ಅನಸೂಯಮ್ಮ. ಊಟ ಮೌನವಾಗಿಯೇ ಸಾಗುತ್ತಿರಲು—

"ಬಸ್ಸಿನಿಂದ ಇಳಿದು ಮನೆಗೆ ಬಂದಿದ್ದರೆ ಪ್ರಪಂಚ ಮುಳುಗಿ ಹೋಗುತ್ತಿತ್ತೇನೋ. ನಿಮಗೆ ನಾವು ಯಾರು; ಹೇಳಿ ಹಾಗಾದರೆ? ನಿಮ್ಮ ಆಪ್ತ ಇಷ್ಟರೆಲ್ಲ ನಿಮ್ಮ ಸ್ನೇಹಿತರೇ ತಾನೇ. ಅವರೇ ನಿಮಗೆ ಹೆಚ್ಚು" ಎಂದಳು ಅನಸೂಯಮ್ಮ.

"ಇಲ್ಲ ಅನೂ, ಮನೆಯ ಕಡೆಗೇ ನೇರವಾಗಿ ಬರುತ್ತಿದ್ದೆ. ಎದುರಿಗೆ ಆಂಜನಪ್ಪ ಸಿಕ್ಕಿದ. 'ಎಂಟು ಹತ್ತು ದಿನ ಆಯಿತಲ್ಲಯ್ಯ ಮುಖ ತೋರಿಸಿ, ಬಾ ಹೋಗೋಣ' ಅಂತ ಬಲವಂತ ಮಾಡಿದ."

"ಅದೂ, ಗೆಳೆಯರು ಬಲವಂತಮಾಡಿ ಕರೆದರೆ ನಿರಾಕರಿಸುವುದಕ್ಕೆ ಸಾಧ್ಯವಿದೆಯೆ? ನಿಮಗೋಸ್ಕರ ಎಷ್ಟು ಚಿಂತೆ ವಹಿಸಿ ಮಾತಾಡುತ್ತಾರೆ ಪಾಪ! ನಮಗೇನಾದರೂ ನಿಮ್ಮ ಮೇಲೆ ಚಿಂತೆಯಿದೆಯೆ ಹೇಳಿ?"

"ನೀನು ಈ ದಿನ ಯಾಕೋ ಮಹಾಕಾಳಿಯ ಅಪರಾವತಾರವಾಗಿಬಿಟ್ಟಿದ್ದೀ. ನಾನು ಏನು ಮಾಡಿದೆ ಅಂತ ಇಷ್ಟು ಸಿಟ್ಟು ಹೇಳು."

"ಛೆ......ಛೆ......! ಉಂಟೆ? ನಿಮ್ಮದೇನೂ ತಪ್ಪಿಲ್ಲ. ಮನೆತನಕ್ಕೆ ಬಂದ ಒಳ್ಳೆಯ ಹೆಸರು ತಾತ, ದೊಡ್ಡಪ್ಪನ ಹಿಂದೆಯೇ ಯಾಕೆ ಹೋಗಬೇಕು ಅಂತ ಉಳಿಸಿಕೊಳ್ಳಲಿಕ್ಕೆ ಕಷ್ಟಪಡುತ್ತಾ ಇದ್ದೀರಿ! ನಾನು ಅಡ್ಡಿಯಾಗಲೆ?"

ಮನೆತನದ ಮಾತು ಬರುತ್ತಲೂ ಗುರುರಾಜರಾಯರು ತಣ್ಣಗಾಗುತ್ತಿದ್ದರು. ಗುರುರಾಜರಾಯರ ತಾತ ಮತ್ತು ದೊಡ್ಡಪ್ಪ ಭಾರಿಯ ಜೂಜುಕೋರರಷ್ಟೇ ಅಲ್ಲ; ಹಗಲು ದರೋಡೆಕಾರರಾಗಿದ್ದರು. ಹುಟ್ಟು ಬ್ರಾಹ್ಮಣ ಜಾತಿಯಾದರೂ ನಡತೆ ಹೊಲೆತನವನ್ನು ಮೀರಿಸಿತ್ತು. ಅವರ ಚರಿತ್ರೆ ರಾಂಪುರದ ಸುತ್ತಮುತ್ತ ಹಳ್ಳಿಗಳಲ್ಲೆಲ್ಲ ಜನಜನಿತವಾಗಿತ್ತು.

ಆದರೆ ಗುರುರಾಜರಾಯರು ಈ ವಂಶದಲ್ಲಿ ಅಪವಾದವಾಗಿ ಹುಟ್ಟಿದ್ದರು. ಏನೋ ಕಾಲಹರಣಕ್ಕೆಂದು ಒಂದು ಸ್ವಲ್ಪ ಹೊತ್ತು ಇಸ್ಪೇಟು

ಆಡುತ್ತಿದ್ದರು. ಒಂದೊಂದು ದಿನ ಮಾತ್ರ ಈ ದಿನದ ಹಾಗೆಯೇ ಹೊತ್ತು ಹೋದುದು ಗೊತ್ತಾಗದೆ ತೊಂದರೆಯಾಗಿ ಬಿಡುತ್ತಿತ್ತು.

ರಾಯರು ತಮ್ಮ ಹಿಂದಿನವರ ಹೊಲಸು ಜೀವನಕ್ಕೆ ಹೇಗೆ, ಉತ್ತಮ ಜೀವನವನ್ನು ಆಚರಣೆಯಲ್ಲಿ, ನಡೆಯಲ್ಲಿ, ನುಡಿಯಲ್ಲಿ ಮತ್ತೆಲ್ಲದರಲ್ಲೂ ತಂದಿದ್ದರು. ಹಿಂದಿನವರು ಹೊರಿಸಿದ್ದ ಅಪಯಶದ ಗೂಬೆಯನ್ನು ಸ್ವಯಂ ಶಕ್ತಿಯಿಂದ ದೂರ ಮಾಡಿದ್ದರು. ಉತ್ತಮ ಬಾಳ್ವೆಗಾಗಿ ಶ್ರಮಿಸುತ್ತಿದ್ದರು.

ಸಂಪೂರ್ಣ ಸೋಲನ್ನೊಪ್ಪಿದ ಗುರುರಾಜರಾಯರು ಸಮಾಧಾನದ ದನಿಯಲ್ಲಿ ಹೇಳಿದರು,

"ಹೋಗಲಿ ಬಿಡು. ಇಷ್ಟಕ್ಕೇ ಸಿಟ್ಟುಮಾಡಿಕೊಂಡು ಬಿಟ್ಟೆ ನೀನು. ಇವತ್ತು ನನ್ನದೇ ತಪ್ಪು. ಕೆನ್ನೆಗೆ ಹೊಡೆದುಕೊಳ್ಳುತ್ತೇನೆ. ಇನ್ನು ಮೇಲೆ ಹೀಗೆ ಮಾಡಿದರೆ ಕೇಳು."

"ಈ ನಾಟಕ ಇವತ್ತಿನದೇನೂ ಅಲ್ಲವಲ್ಲ. ಯಾವತ್ತಿನಿಂದಲೂ ಹೀಗೇ ಹೇಳುತ್ತ ಬಂದಿದ್ದೀರಿ. ಕೆನ್ನೆಗೆ ಹೊಡಕೊಂಡು ಕೈ, ಕೆನ್ನೆ ಎಲ್ಲಾ ಜಡ್ಡು ಗಟ್ಟಿರಬೇಕು ಪಾಪ!"

ಅನಸೂಯಮ್ಮನವರು ಆಡಿದ ವ್ಯಂಗ್ಯ ನುಡಿಗೆ ರಾಯರು ಒಳಗೇ ನಕ್ಕರು. ಗುರುರಾಜರಾಯರು ಹೊತ್ತುಕಳೆಯುವುದಕ್ಕಾಗಿ ಜೊತೆಯವರ ಕೂಡ ಲೋಕಾಭಿರಾಮವಾಗಿ ಸ್ವಲ್ಪ ಕಾಲ ಆಟ ಆಡುತ್ತಾರೆಂಬುದು ಅನಸೂಯಮ್ಮನವರಿಗೂ ತಿಳಿದಿತ್ತು. ಆದರೆ ಅದೇ ಹುಚ್ಚುಗಳು ಹತ್ತಿ ಮುಂದೆ ಏನಾದರೊಂದು ಅನಾಹುತವಾಗದಿರಲೆಂದು ಅನಸೂಯಮ್ಮ ಆಗಾಗ್ಗೆ ಪತಿಯನ್ನು ಎಚ್ಚರಿಸುತ್ತಿದ್ದರು.

"ಈವತ್ತಿಗಾಯಿತಲ್ಲ, ಇನ್ನು ಮುಂದೆ ಮಾತ್ರ ಹೀಗೆ ಮಾಡಬೇಡಿ ಕಂಡಿರಾ. ಹೊರಗಿನಿಂದ ಬಂದರೆ ಮನೆಗೆ ಬಂದು ಮುಖತೋರಿಸಿ ಆ ಮೇಲೆ ಎಲ್ಲಿಗಾದರೂ ಹೋಗಿ ಈವತ್ತಿನ ಹಾಗೆ ಮಾಡಿ ಸುಮ್ಮನೆ ಆತಂಕ ಪಡೋಹಾಗೆ ಮಾಡಬೇಡಿ" ಎಂದಳು.

ರಾಯರಿಗೂ ಜೀವಬಂದ ಹಾಗಾಯಿತು.

ಅನಸೂಯಮ್ಮ ಮಜ್ಜಿಗೆಯಲ್ಲಿ ಕಲಸಲು ಅನ್ನ ಬಡಿಸುತ್ತ ಕೇಳಿದರು–

"ರಾಜುಗೆ ಸೀಟು ಸಿಕ್ಕಿತೇನು ?"

"ಹೂಂ. ಸೀಟು ಸಿಕ್ಕಿತು."

"ಊಟ ತಿಂಡಿಗೆ ಏನು ಏರ್ಪಾಡು ಮಾಡಿದಿರಿ?"

"ಹಾಸ್ಟೆಲಿಗೆ ಸೇರಿಸಿ ಬಂದೆ. ಊಟ ತಿಂಡಿಗೇನೂ ತೊಂದರೆಯಿಲ್ಲ."

"ಅಲ್ಲೆಲ್ಲಾ ಅನುಕೂಲವಾಗಿದೆ ತಾನೆ?"

ದೂರದ ಊರಿನಲ್ಲಿ ಒಬ್ಬನನ್ನೇ ಓದಲು ಬಿಟ್ಟುಬಂದುದು ತಾಯಿಯ ಹೃದಯಕ್ಕೆ ಏನೋ ಒಂದು ರೀತಿಯ ಆತಂಕ ಕೊಡುತಿತ್ತು. ಮಗನಿಗೆ ಎಲ್ಲ ಅನುಕೂಲಗಳ ಏರ್ಪಾಡಾಗಿದ್ದರೂ ದೂರದಲ್ಲಿ ಒಬ್ಬನೇ ಇರುವ ನಲ್ಲಾ, ಎಂದು ಕರುಳು ಮಿಡಿಯುತಿತ್ತು

ಹೆಂಡತಿಯ ಮಾತಿಗೆ ರಾಯರು ನಕ್ಕರು. ತಮಾಷೆ ಮಾಡುತ್ತ ಹೇಳಿದರು,

"ರಾಜು ಏನು ಚಿಕ್ಕವನೇ. ಇದಕ್ಕೆ ಮೊದಲು ಚಳ್ಳಕೆರೆಯಲ್ಲಿ ಓದು ತ್ತಿರಲಿಲ್ಲವೆ? ಎಲ್ಲರೂ ಇದ್ದ ಹಾಗೆ ಅವನೂ ಇರುತ್ತಾನೆ, ಭಯವೇತರದ್ದು? ಈ ಊರಿನ ಅವನ ಜೊತೆಯವರು, ಲಕ್ಷ್ಮಣ, ಅಣ್ಣಯ್ಯ, ಶಾಂತವೀರಯ್ಯ ಎಲ್ಲರೂ ತುಮಕೂರು ಕಾಲೇಜಿಗೇ ಸೇರಿದಾರಲ್ಲ. ನಿನಗೆ ನಿನ್ನ ಕುಮಾರ ಕಂಠೀರವನನ್ನು ಯಾರು ಏನು ಮಾಡುತ್ತಾರೋ ಅಂತ ಭಯ ಅಲ್ಲವೆ? ಧೈರ್ಯವಾಗಿರು."

ಗುರುರಾಜರಾಯರು ಊಟ ಮುಗಿಸಿ ಎದ್ದರು.

ಅನಸೂಯಮ್ಮ ಜ್ಞಾಪಿಸಿಕೊಂಡವರ ಹಾಗೆ ಹೇಳಿದರು—

"ಅಂದ ಹಾಗೆ ಆ ನಿಮ್ಮ ವಾಮನರಾಯರು ಎಂಟು ದಿನದಿಂದ ಮನೆ ಹತ್ತಿರ ತುಕ್ಕಿಬಿಟ್ಟರು. ಬಸಲಿಂಗಯ್ಯ ಸಾಮಾನೆಲ್ಲ ಮುಗಿಸಿಬಿಟ್ಟನಂತೆ. ಒಬ್ಬರಿಗೂ ಸರಿಯಾಗಿ ಕೊಡಲಿಲ್ಲವಂತೆ. ಇದ್ದ ಬದ್ದ ಮಾಲೆಲ್ಲ 'ಬ್ಲಾಕ್' ನಲ್ಲಿ ಕೊಟ್ಟುಕೊಂಡನಂತೆ ಇನ್ನೂ ಏನೇನೋ ನೂರೆಂಟು ಹೇಳಿದರು. ಯಾರಿಗೆ ಗೊತ್ತು ಎಲ್ಲಾ."

"ಅಷ್ಟೊಂದು ಮಾಲು ಇತ್ತು. ಇಷ್ಟು ಖರ್ಚು ಮಾಡಿ ಬಿಟ್ಟನೇ. ಯಾರಿಗೆ ಕೊಟ್ಟನೋ ಯಾರಿಗೆ ಬಿಟ್ಟನೋ. ಅಂತೂ ಇದೊಂದು ಫಜೀತಿ. ಬೆಳಗಾದರೆ ಮನೆಯ ಮುಂದೆ ಹಿಂಡುಗಟ್ಟಲೆ ಬಂದು ನಿಲ್ಲುತ್ತಾರೆ ಹಳ್ಳಿಯ ಜನ. ಅವರಿಗೆಲ್ಲ ಏನು ಹೇಳಬೇಕೋ ಏನು ಕೊಡಿಸಬೇಕೊ."

"ನೀವು ತುಮಕೂರಿಗೆ ಹೋದಾಗ ಅವನು ಮಾರಾಟವೇ ಮಾಡಿಲ್ಲ. ಎಲ್ಲ ಒಳಗೇ ಕೂತುಕೊಂಡು ಬ್ಲಾಕ್‌ನಲ್ಲಿ ಸಾಗಿಸಿದ್ದಾನೆ. ಸರ್ಕಾರಿ ನೌಕರರು ಅದರಲ್ಲೂ ಈ ಮೇಷ್ಟ್ರುಗಳ ಗೋಳುಬೇಡಿ ನಿತ್ಯ ಅವರಿಗೆ ಉತ್ತರ ಹೇಳಿ ಸಾಕಾಗಿದೆ ನನಗೆ. ಅವನು ಅಲ್ಲಿ 'ಇಲ್ಲ', ಅಂದುಬಿಡುತ್ತಾನೆ. ಜನರೆಲ್ಲಾ ನಿಮ್ಮನ್ನು ಹುಡುಕಿಕೊಂಡು ಬಂದು ಮನೆಗೆ ಮುತ್ತಿಗೆ ಹಾಕುತ್ತಾರೆ. ನಾವುನೂ ಡಿಪೋ ಇಟ್ಟಿದ್ದೀವಿ ಅಂದುಕೊಂಡಿದ್ದಾರೋ ಏನೋ. ಆ ವಾಮನರಾಯರ ಹೆಂಡತಿ ಅನ್ನಪೂರ್ಣಮ್ಮ, ಸಕ್ಕರೆಯಿಲ್ಲ, ಗೋಧಿ ಇಲ್ಲ ಅಂತ ಹೇಳಿಕೊಂಡು ಎರಡು ಮೂರು ಸಲ ಕೈಗಡ ತೆಗೆದುಕೊಂಡು ಹೋದರು. ಪಾಪ! ಡಾಕ್ಟರ ಮನೆಯಲ್ಲಿ ಅಕ್ಕಿ ಅಷ್ಟೂ ಮುಗಿದುಹೋಯಿತಂತೆ. ಹೊರಗೆ ಅಂಗಡಿಯಲ್ಲಿ ತರಿಸಲಿಕ್ಕೆ ನೋಡಿದರಂತೆ. ಆ ಗೇಣಪ್ಪ ಶೆಟ್ಟಿ ಸುಟ್ಟು ಮಾರುತ್ತಾನೆ. ರೂಪಾಯಿಗೆ ಒಂದು ಸೇರಂತೆ. ಉಳಿಕೆಯವರೂ ಅಷ್ಟೆ. ಡಾಕ್ಟರ ಹೆಂಡತಿ ರುಕ್ಮಿಣಮ್ಮ, 'ನಿಮ್ಮ ಮನೆಯಲ್ಲಿ ಅಕ್ಕಿ ಸ್ವಲ್ಪ ಜಾಸ್ತಿಯಿದ್ದರೆ ಕಳಿಸ್ತೀರಾ' ಅಂತ ಅಂದರು. ಹಯಾತನ ಕೈಲಿ ಹತ್ತು ಸೇರು ಅಳೆಸಿ ಕಳುಹಿಸಿದೆ. ನಾಳೆಯಿಂದ ನಮ್ಮ ಮನೆಗೂ ಸೊನ್ನೆ."

"ಅಂತೂ ನಿನ್ನ ಎಮರ್ಜೆನ್ಸಿ ಡಿಪೋನೂ ಖಾಲಿ ಅನ್ನು. ಈಗ ಏನು ಮಾಡೋದು ಮಾಲು ಮುಗಿಸಿದ್ದಾನೆ ಅಂತ ಹೇಳ್ತೀ. ಅವನಿಗೆ ಯಾವಾಗಲೂ ಬಡಕೊಂತ ಇರುತ್ತೀನಿ ಯಾವಾಗಲೂ ಹದಿನೈದು ದಿನದ ಕೋಟಾ ರಿಸರ್ವ್ ಇಟ್ಟಿರೋ ಅಂತ. ಕೇಳಿದರಲ್ಲವೆ? ಕೆಲಸದಿಂದ ತೆಗೆದು ಹಾಕಿದಾಗ ಗೊತ್ತಾಗುತ್ತೆ ಅವನಿಗೆ."

ಬಸಲಿಂಗಯ್ಯನನ್ನು ಕೆಲಸದಿಂದ ತೆಗೆಯಬೇಕೆಂದು ರಾಯರು ಆಡಿದ ಮಾತಿನಿಂದ ಅನಸೂಯಮ್ಮನವರಿಗೆ ತಟ್ಟನೆ ಜೈಲಾನನ ನೆನಪು ಬಂತು. ಜೈಲಾನ್ ಸೊಸೈಟಿಯಲ್ಲಿ ಜವಾನನ ಕೆಲಸಕ್ಕೆ ಸೇರಬೇಕೆಂದು ಒದ್ದಾಡುತ್ತಿದ್ದ. ಗುರುರಾಜರಾಯರ ವಿಶ್ವಾಸ ಗಳಿಸಿಕೊಳ್ಳಲಿಕ್ಕೆ ಮನೆಯ ಹತ್ತಿರ ಬಂದು ಚಿಕ್ಕಪುಟ್ಟ ಕೆಲಸ ಮಾಡಿಕೊಟ್ಟು ರಾಯರ ಹಿಂದೆ ಓಡಾಡುತ್ತಿದ್ದ. ಅನಸೂಯಮ್ಮನವರಿಗೂ, ಜೈಲಾನನಿಗೆ ನೌಕರಿ ಕೊಡಿಸಿದರೆ ಬಡವ ಬದುಕಿಕೊಳ್ಳುತ್ತಾನೆ. ನಮಗೂ ವಿಧೇಯನಾಗಿ ನಡೆದುಕೊಂಡಿರುತ್ತಾನೆ, ಎಂಬ ಅಭಿಪ್ರಾಯವಿತ್ತು.

"ಅವನದೇನು ಸ್ವಲ್ಪ ನೋಡಿ ಹೇಳಬಾರದೇ. ಸುಮ್ಮನೆ ಯಾವಾಗಲೂ ಮನೆಯ ಬಾಗಿಲಿಗೆ ಓಡಾಡುತ್ತಾನೆ ಆ ಜೈಲಾನ್. ಸೊಸೈಟಿಯಲ್ಲಿ ಕೆಲಸ ಸಿಕ್ಕುವುದಾದರೆ ಯಾಕೆ ಕೊಡಿಸಬಾರದು ?"

"ಏನು ಮಾಡೋಣ ಹೇಳು. ಈ ಬಸಲಿಂಗಯ್ಯನದೇ ನನಗೆ ಯೋಚನೆಯಾಗಿದೆ; ತಂದ ಮಾಲೆಲ್ಲಾ ಸಿಕ್ಕಾಪಟ್ಟೆ ಸೀದು ಬಿಡುತ್ತಾನೆ. ಸುತ್ತ ಮೂವತ್ತು ಹಳ್ಳಿಯ ಬಡಜನ ತುತ್ತುಕೂಳಿಗೆ ಗತಿಯಿಲ್ಲದೆ ದೇಹಿ, ದೇಹಿ, ಅನ್ನುತ್ತ ಗೋಳಾಡುತ್ತಿರುವಾಗ ಅವನಿಗೆ ತಮಾಷೆಯಾಗಿದೆ. ಆ ಲಿಂಗನೂ ಸರಿ. ಬಸಲಿಂಗಯ್ಯನಿಗೆ ತಕ್ಕ ಭಂಟ. ಇವರಿಬ್ಬರೂ ತೊಲಗೋ ವರೆಗೆ ಜನದ ಗೋಳೂ ತಪ್ಪೋಹಾಗಿಲ್ಲ. ನನಗೆ ನಿಷ್ಠೂರವೂ ತಪ್ಪೋ ಹಾಗಿಲ್ಲ. ನೋಡೋಣ ನಾನೂ ಯೋಚನೆ ಮಾಡುತ್ತಲೇ ಇದ್ದೀನಿ."

"ಏನೋ ನೋಡಿ, ಬಡವ ಬದುಕಿಕೋತಾನೆ ಪಾಪ! ನಮಗೂ ಮನೆ ಯಲ್ಲಿ ಚಿಕ್ಕಪುಟ್ಟ ಕೆಲಸ ಹೇಳಿದರೆ ಮಾಡಿಕೊಂಡು ಇದ್ದಾನು."

"ನೀನು ಈಗಿನಿಂದ ಏಟು ಹಾಕುತ್ತಿದ್ದೀ, ದರ್ಬಾರು ನಡೆಸಲಿಕ್ಕೆ" ರಾಯರು ಹೆಂಡತಿಯ ಮಾತಿಗೆ ನಕ್ಕು ಹೇಳಿದರು.

"ನಾನು ದರ್ಬಾರು ನಡೆಸಿದರೆ ನಡೆಸುತ್ತೀನಿ; ನೀವು ಎಂದು ನಿಮ್ಮ ಠೀವಿ ಬಿಟ್ಟುಕೊಟ್ಟಿದ್ದೀರಿ ಹೇಳಿ" ಅನಸೂಯಮ್ಮ ಗಂಡನ ಸವಾಲಿಗೆ ಮರು ಸವಾಲು ಹಾಕದೆ ಬಿಡಲಿಲ್ಲ.

ರಾಯರು ಅನಸೂಯಮ್ಮನ ಮಾತಿಗೆ ನಕ್ಕು.

"ಬೆಳಗ್ಗೆದ್ದರೆ ಮಾಲು ತರಲಿಕ್ಕೆ ಹೋಗಬೇಕು" ಎಂದು ಗೊಣಗಿ ಕೊಳ್ಳುತ್ತ ಹೊರಗೆ ಬಂದರು.

೨

ಬೆಳಗ್ಗೆ ಕಾಫಿ ಕುಡಿದು ಗುರುರಾಜರಾಯರು ಸೊಸೈಟಿಗೆ ಆಹಾರ ಸಾಮಗ್ರಿ ತರುವುದಕ್ಕಾಗಿ ದುಡ್ಡಿನ ಲೆಕ್ಕಾಚಾರ ಹಾಕುತ್ತ ನಡುಮನೆಯಲ್ಲಿ ಕುಳಿತಿದ್ದರು. ಮಾಲು ತರಲು ಇನ್ನೂ ಹಣ ಬೇಕಾಗಿದ್ದುದರಿಂದ ಬಸ ಲಿಂಗಯ್ಯನ ಬರವನ್ನೇ ನಿರೀಕ್ಷಿಸುತ್ತಿದ್ದರು.

ಬಸಲಿಂಗಯ್ಯನೂ ಅದೇ ಸಮಯಕ್ಕೆ ಆಳು ಲಿಂಗನ ಕೈಯಲ್ಲಿ ಲೆಕ್ಕದ ಪುಸ್ತಕಗಳನ್ನು ಹೊರಿಸಿಕೊಂಡು ಬಂದನು. ಗುರುರಾಜರಾಯರು ಹೊರ ಬಾಗಿಲಲ್ಲಿ ಸದ್ದಾದುದು ತಿಳಿದು ಕತ್ತೆತ್ತಿ ನೋಡಿದರು. ಬಸಲಿಂಗಯ್ಯನನ್ನು ಕಂಡಕೂಡಲೇ ಒಳಗೆ ಕರೆದರು.

"ಬಾ ಒಳಗೆ. ಈಗ ನಾನೇ ಹೇಳಿಕಳುಹಿಸಬೇಕೆಂದು ಕೊಂಡಿದ್ದೆ. ಅಷ್ಟರಲ್ಲಿ ನೀನೇ ಬಂದೆ. ಹಣ ತಂದಿದ್ದೀಯೇನು. ಎಷ್ಟಿದೆ?"

"ಆರು ಸಾವಿರ, ಚಿಲ್ಲರೆಯಿದೆ. ಮಾರಾಟವೇನು ಅಷ್ಟು ಜಾಸ್ತಿ ಯಾಗಿಲ್ಲ. ಇಷ್ಟಕ್ಕೂ ಸಾಮಾನಿದ್ದರೆ ತಾನೆ?"

"ಸಾಮಾನು ತರಲಿಕ್ಕೆ ಹೇಳಿದ್ದೆನಲ್ಲಾ, ಹಣವನ್ನೂ ಅನುಕೂಲ ಮಾಡಿದ್ದೆ ಯಾಕೆ ತರಲಿಲ್ಲ?"

"ಪುರುಸತ್ತೇ ಸಿಕ್ಕಲಿಲ್ಲ ಸ್ವಾಮಿ." ವ್ಯಂಗ್ಯವಾಗಿ ಹಲ್ಲುಕಿರಿದು ಹೇಳಿದ ಬಸಲಿಂಗಯ್ಯ. ಅವನ ಕಣ್ಣಿನಲ್ಲಿ 'ನನಗೆ ಹೇಳಲು ನೀವಾರು?' ಎಂದು ಕೇಳುವ ಔದ್ಧತ್ಯವಿತ್ತು.

ಗುರುರಾಜರಾಯರು ಕೆರಳಿಹೋದರು.

"ಸೊಸೈಟಿಯಲ್ಲಿ ಸ್ಟಾಕ್ ಇಲ್ಲದೆ ಬಾಗಿಲು ಮುಚ್ಚಿದ್ದಾಗ ಪುರುಸತ್ತು ದೊರೆಯುದಂತಹ ರಾಜಕಾರ್ಯ ಏನಿತ್ತಯ್ಯ? ಮಾಲುತರಲಿಕ್ಕೆ ಇಷ್ಟವಿರಲಿಲ್ಲ ಅನ್ನು."

"ನಿಮಗೆ ಹ್ಯಾಗೆ ತೋಚುತ್ತೋ ಹಾಗೆ ಮಾತಾಡುತ್ತೀರಿ ಸ್ವಾಮಿ. ನನಗೆ ಪುರುಸತ್ತಿರಲಿಲ್ಲ· ನಾನು ಮಾಲು ತರಲಿಲ್ಲ. ನೀವೇನುಬೇಕಾದರೂ ಅಂದುಕೊಳ್ಳಿ."

"ನಿಮ್ಮಂತಹವರನ್ನು ನಂಬಿ ಏನಾದರೂ ಹೇಳಿ ಸುಮ್ಮನಾದರೆ ಚೆನ್ನಾಗಿ ಮಾನ ತರುತ್ತೀರಿ."

"ಯಾರು ಯಾವ ಕೆಲಸ ಮಾಡಬೇಕೋ ಅದನ್ನು ಸರಿಯಾಗಿ ಮಾಡಿದರೆ ಈ ಪಂಚಾಯತಿ ಯಾಕೆಸ್ವಾಮಿ? ತಮ್ಮ ಕೆಲಸ ತಾವು ಮಾಡಿಕೊಳ್ಳದೆ ಇನ್ನೊಬ್ಬರ ಹತ್ತಿರ ಹೋಗಿ ಬೇಡುವುದು ಲಕ್ಷಣವೇ ಅಲ್ಲ. ನಾನಂತೂ ಎಂದಿಗೂ ಇನ್ನೊಬ್ಬರ ಮುಂದೆ ಹೇಳಿಕೊಂಡವನಲ್ಲ. ಕೈಲಾದರೆ ಮಾಡುತ್ತೇನೆ. ಇಲ್ಲದಿದ್ದರೆ ಬಾಯಿ ಮುಚ್ಚಿಕೊಂಡು ಬಿದ್ದಿರುತ್ತೇನೆ."

ಬಸಲಿಂಗಯ್ಯನ ಕುಹಕ ಹಾಗೂ ಹೀಯಾಳಿಕೆಯ ಮಾತಿನಿಂದ ಗುರುರಾಜರಾಯರು ತುಂಬಾ ನೊಂದುಕೊಂಡರು. ನನ್ನನ್ನು ಧಿಕ್ಕರಿಸಿ ಮಾತನಾಡುತ್ತಾನಲ್ಲ ಎಂಬ ವ್ಯಥೆಯೊಡನೆ ರೋಷ ಅಭಿಮಾನಗಳು ತಲೆ ಹಾಕಿದುವು. ಅವಮಾನ ಹಾಗೂ ಸಿಟ್ಟಿನಿಂದ ಮುಖ ಕೆಂಪೇರಿತು. ಎತ್ತರದ ಧ್ವನಿಯಲ್ಲಿ ಕೇಳಿದರು,

"ಬಾಯಿಹೋದ ಹಾಗೆ ಮಾತಾಡಿ ಬಿಡುತ್ತಿ ಬಸಲಿಂಗಯ್ಯ. ಸ್ವಲ್ಪವಾದರೂ ಮಾತಿನಲ್ಲಿ ಗಂಭೀರ, ಘನತೆಗಳಿರಬೇಕಯ್ಯ. ಸೊಸೈಟಿಗೆ ಮಾಲು ಯಾಕೆ ತರಲಿಲ್ಲ ಅಂದರೆ ಏನೇನೋ ಆಡುತ್ತೀಯಲ್ಲ."

"ಅಸಿಸ್ಟೆಂಟ್ ಸೆಕ್ರಿಟರಿ ನಾನಲ್ಲ. ನನ್ನ ಕೆಲಸ ತಂದ ಮಾಲು ಮಾರಾಟ ಮಾಡುವುದು; ಇಲ್ಲದಿದ್ದರೆ ಸುಮ್ಮನಿರೋದು. ಯಾರ ಯಾರ ಕೆಲಸವೋ ನಾನು ಯಾಕೆ ಹಚ್ಚಿಕೊಳ್ಳಲಿ? ನನ್ನದೇ ನೂರೆಂಟಿದೆ." ಕಡ್ಡಿ ಎರಡು ತುಂಡರಿಸುವಂತೆ ಮಾತಾಡಿದ ಬಸಲಿಂಗಯ್ಯ.

'ಈ ತುಚ್ಛನ ಕೈಯಲ್ಲಿ ಯಾಕಾದರೂ ಸುಮ್ಮನೆ ಮಾತು ಬೆಳೆಸಬೇಕು' ಎಂದುಕೊಂಡ ರಾಯರು,

"ಹೋಗಲಿ ಬಿಡು. ನಿನಗೆ ಹೇಳಿದ್ದೇ ತಪ್ಪಾಯಿತು. ನನ್ನ ಕೆಲಸ ನಾನು ಮಾಡಿಕೊಂಡಿದ್ದರೆ ಆಗಿತ್ತು" ಎಂದು ಮಾರಾಟದ ಪುಸ್ತಕ ತೆಗೆದುಕೊಂಡು ವ್ಯಾಪಾರ ಎಷ್ಟಾಗಿದೆಯೆಂಬುದನ್ನು ಪರಿಶೀಲಿಸಿದರು.

ಮಾರಾಟ ಹೆಚ್ಚಾಗಿಯೇ ಆಗಿತ್ತು. ಬಸಲಿಂಗಯ್ಯ ಇಡೀ ವಾರ ಕ್ಕೆಲ್ಲಾ ಎರಡೇ ಎರಡು ದಿನ ವ್ಯಾಪಾರ ನಡೆಸಿದಂತೆ ಲೆಕ್ಕ ತೋರಿಸಿದ್ದ. ಪುಸ್ತಕದ ತುಂಬಾ ಸುಳ್ಳು ರೇಷನ್ ಕಾರ್ಡುಗಳ ಸಂಖ್ಯೆಗಳನ್ನು ತುಂಬಿದ್ದ. ಅಸೈನ್‌ಮೆಂಟ್ ರಿಜಿಸ್ಟರು ನೋಡಿಕೊಂಡು ಕೆಲವು ಹಳ್ಳಿಯ ರೇಷನ್ ಕಾರ್ಡುಗಳ ನಂಬರುಗಳನ್ನು ಸೇರಿಸಿ ಅವುಗಳಿಗೆಲ್ಲಾ ಮನಸ್ಸಿಗೆ ದಿನಸಿಯ ಪ್ರಮಾಣ ಬರೆದಿದ್ದ.

ಆಹಾರ ಸಾಮಗ್ರಿಯನ್ನು ಹಳ್ಳಿಗರಿಗೂ ಹಂಚಿಲ್ಲ. ಸರಕಾರೀ ನೌಕರರಿಗೂ ಹಂಚಿಲ್ಲವೆಂದು ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ಗುರುರಾಜರಾಯರ ಸಹನೆ ಹಾರಿಹೋಯಿತು. ತೀಕ್ಷ್ಣವಾಗಿ ನೋಡುತ್ತ ಕೇಳಿದರು.

"ಎರಡೇ ದಿನದಲ್ಲಿ ಆರೇಳು ಸಾವಿರ ರೂಪಾಯಿ ವ್ಯಾಪಾರ ನಡೆಸಿದ್ದಿ. ಯಾರುಯಾರಿಗೆ ಹಂಚಿದೆ?"

"ಹಳ್ಳಿಯ ಜನ ಸ್ವಲ್ಪವಿದ್ದಾರೆಯೆ ಸ್ವಾಮಿ. ಎಲ್ಲಾ ಹಳ್ಳಿಯ ಕಾರ್ಡುಗಳಿಗೆ ಹೆಚ್ಚು ಖರ್ಚಾಗಿದೆ."

"ಇದರಲ್ಲಿ ಸರಕಾರಿ ನೌಕರರುಗಳಿಗೆ ಒಬ್ಬರಿಗಾದರೂ ಕೊಟ್ಟಹಾಗೇ ಕಾಣಿಸುವುದಿಲ್ಲ!"

"ಮಾಲು ಉಳಿದರೆ ತಾನೆ ಸ್ವಾಮಿ. ಇನ್ನು ಮೇಲೆ ಅಫಿಷಿಯಲ್ಸ್‌ಗೇ ಬೇರೆ ಸ್ಪೆಷಲ್ ಅಲಾಟ್‌ಮೆಂಟ್ ಬರೆಸಬೇಕು."

"ಅವರಿಗೋಸ್ಕರ ಹದಿನೈದು ದಿನದ ಕೋಟಾ ಬೇರೆಯಾಗಿ ರಿಸರ್ವ್ ಮಾಡಿರು ಅಂತ ಎಷ್ಟುಸಲ ಹೇಳಿಲ್ಲ. ಕೊನೆಗೆ ಸೇಕದಾರರು, ಅಮಲ್ದಾರರು ಕೂಡ ತಿಳಿಸಿದಾರಲ್ಲಯ್ಯ. ನೀನು ಯಾರ ಮಾತಿಗೂ ಸೊಪ್ಪು ಹಾಕದೆ ನಿನ್ನಿಷ್ಟ ಬಂದ ಹಾಗೆ ಮಾಡುತ್ತಿದ್ದಿ. ಇದೆಲ್ಲ ಚನ್ನಲ್ಲ. ನಾಳೆಯ ದಿನ ಇಲ್ಲದ ಪ್ರಕಾರುಗಳಿಗೆ ಅವಕಾಶವಾಗತ್ತೆ."

"ಅಯ್ಯೋ ಹೋಗಲಿ ಬಿಡಿ. ನನ್ನ ಮೇಲೆ ಗಲಾಟೆ ಮಾಡಿ ಜಯಿಸಿ ಕೊಳ್ಳಲಿ, ನೋಡಿಕೋತೀನಿ. ನನ್ನ ಕೆಲಸ ನಾನು ಮಾಡಿಕೊಂಡು ಹೋಗುತ್ತೀನಿ. ಬಾಯಲ್ಲಿ ಮಾತಾಡೋ ಆಫೀಸರುಗಳು ಸರಿಯಾದ ಸರ್ಕ್ಯುಲರ್ ಹೊರಡಿಸಿ ಇನ್‌ಸ್ಟ್ರಕ್ಷನ್ಸ್ ಕೊಡಲಿ. ಆ ಮೇಲೆ ನೋಡೋಣ" ಬಸಲಿಂಗಯ್ಯ ಅಲಕ್ಷ್ಯದಿಂದ ಹೇಳಿದ. ಅವನ ಮಾತಿನಲ್ಲಿ ಯಾರನ್ನೂ ಲಕ್ಷಿಸದ ತಲೆಹರುಕತನವಿತ್ತು.

ಗುರುರಾಜರಾಯರು, 'ಕೊಚ್ಚೆಯ ಮೇಲೆ ಕಲ್ಲೆಸೆದು ನಾನೇಕೆ ಮುಖಕ್ಕೆ ಸಿಡಿಸಿಕೊಳ್ಳಲಿ. ಅನುಭವಿಸುತ್ತಾನೆ, ಕಳ್ಳತನ ಇವತ್ತಲ್ಲ ನಾಳೆ ಬಯಲಿಗೆ ಬಂದೇ ಬರುತ್ತೆ' ಎಂದುಕೊಂಡು ಹಣ ಎಣಿಸಿಕೊಂಡು ಪುಸ್ತಕಕ್ಕೆ ರುಜು ಮಾಡಿದರು. ಬಸಲಿಂಗಯ್ಯ ಪುಸ್ತಕಗಳನ್ನು ಹೊರಿಸಿಕೊಂಡು ಮನೆಗೆ ಹೋದ.

ರಾಯರು ಆ ದಿನವೇ ಹೋಗಿ ಮಾಲುತಂದರು.

ಮಾರಾಟದ ಸಮಯದಲ್ಲಿ ಮಾಡುವ ಕೆಲಸ ಬಿಟ್ಟು ಗುರುರಾಜ ರಾಯರು ಸೊಸೈಟಿಗೆ ಹೋಗಿ ನಿಲ್ಲಬೇಕಾಗುತ್ತಿತ್ತು.

ಬಸಲಿಂಗಯ್ಯ ತನಗೆ ಬೇಕಾದವರುಗಳಿಗೆ ಇಷ್ಟಬಂದಷ್ಟು ಆಹಾರಧಾನ್ಯ ಅಳೆಸಿ ಹೊರಿಸಿ ಕಳುಹಿಸಿ ಬಿಡುತ್ತಿದ್ದ. ಆ ದಿನಸಿಯಷ್ಟೂ ಹಿಂದಿನಿಂದ

ಕಳ್ಳಪೇಟೆಗೆ ಹೋಗುತ್ತಿತ್ತು; ತೃಪ್ತಿಕರವಾದ ಹಂಚಿಕೆಯಿಲ್ಲದೆ ಬಡವರ ಗೋಳು ದಿನದಿನಕ್ಕೆ ಹೆಚ್ಚುತ್ತಿತ್ತು.

ದಿಕ್ಕುಗೆಟ್ಟ ಬಡಜನ, ರೆವಿನ್ಯೂ ಇನ್ಸ್‌ಪೆಕ್ಟರು ಕೃಷ್ಣಮೂರ್ತಿ ಹಾಗೂ ಗುರುರಾಜರಾಯರ ಬಳಿ ಹೋಗಿ ಗೋಳನ್ನು ಹೇಳಿಕೊಳ್ಳುತ್ತಿದ್ದರು.

"ಸಾವ್ಕಾರ್ರಾ, ನಾವು ಉಳಿಯೊ ಅಂಗಿಲ್ಲ ಸಾವ್ಕಾರಾ! ಕಾಳ್ನೆಲ್ಲ ಬೇಕು ಬೇಕಾದೋರ್ಗೆ ಒರಿಸಿ ಒರಿಸಿ ಕಳಿಸ್ತವ್ನೆ. ಬಡವರ್ನ ಕಣ್ಣಾಗೆ ಆಕ್ಕೋ ಒಲ್ಲ."

"ಔದುರು ತಂದೆ. ಬಿಳೇ ಬಟ್ಟೆಯೋರ್ನೆ ನೋಡಿ ನೋಡಿ ಕಾಳು ಕೊಡ್ತಾನೆ. ಇಂಗೆ ಮಾಡಿದರೆ ನಾವು ಎಂಗೆ ತಂದೆ ಬದುಕೋದು?"

"ಮುಂಜಾಲೆದ್ದು ಬದುಕುಬಿಟ್ಟು ಬಂದೇ ದಣೀ! ಮನ್ಯಾಗೆ ಮಕ್ಕಳು ಅಸ್ಕೊಂಡವೆ! ಕಾಳು ಕೊಡುಒಲ್ಲ. ನೀನಾದರೂ ಬಂದು ಕೊಡಿಸು ಬಾದಣೀ!"

"ನಾವು ಮೋಟಾ ಜನ. ಗೋಡೆಕ್ಕಿ, ಅಕ್ಕಿ ಸಕ್ಕರೆ ಬಂದೂ ಒಲ್ಲೆವಿ ಗೊಂಚಾಗ್ರಾ. ನಮಗೆ ಜ್ವಾಳ, ನವಣೆ ಕೊಡಿಸು ಗೊಂಚುಗಾರ."

"ಬಾ ದೇವ್ರು, ನಿನಗೆ ಸಣ್ಣು ಮೊಕ್ಕತೀವಿ. ನಮಗೆ ಕಾಳು ಆಕಿಸಿ ಪುಣ್ಣ ಕಟ್ಕೊ ತಂದೆ. ಇವನ ಮಂಜಾಳಾಗ! ನಮ್ಮೊಟ್ಟೆ ಉರಿಸ್ತ ಅವ್ನೆ ಅಂಗೇನೆ."

ಗಂಡಸರು, ಹೆಂಗುಸರು, ಆಬಾಲ ವೃದ್ಧರಾದಿಯಾಗಿ ಬಡ ಜನದ ನೆರಿ ಮನೆಯ ಮುಂದೆ ನಿಂತು ಹೊಟ್ಟೆಯನ್ನು ಬೆನ್ನಿಗೆ ಹತ್ತಿಸಿಕೊಂಡು ಗೋಳಿಡು ತಿದ್ದುದು ಕಂಡು ಗುರುರಾಜರಾಯರಿಗೆ ಮನಸ್ಸು ನಿಲ್ಲುತ್ತಿರಲಿಲ್ಲ. ಕ್ಷಾಮದ ಮಕ್ಕಳಂತೆ ಎದುರು ನಿಂತಿರುವ ಜನಸ್ತೋಮ — ಚೀರಾಟ ಎಲ್ಲವನ್ನೂ ನೋಡಿ ಕಣ್ಣುತುಂಬಿ ಬರುತ್ತಿತ್ತು. ಅವರನ್ನೇ ಅನುಸರಿಸಿ ಸೊಸೈಟಿಗೆ ಹೋಗು ತ್ತಿದ್ದರು.

ನೆರೆದಿರುವ ಜನರೆಲ್ಲರ ರೇಷನ್‌ಕಾರ್ಡುಗಳನ್ನು ಸಂಗ್ರಹಿಸಿ ಒಬ್ಬೊಬ್ಬ ರನ್ನೇ ಕರೆದು ಅವರಿಗೆ ದಿನ ಕೊಡಿಸುತ್ತಿದ್ದರು.

ರಾಯರು ತನ್ನ ವ್ಯವಹಾರಕ್ಕೆ ಅಡ್ಡಿಯಾಗುತ್ತಿದ್ದುದರಿಂದ ಬಸಲಿಂಗಯ್ಯ ಹಾರಾಡುತ್ತಿದ್ದ. 'ಈ ಶನಿ ಇಲ್ಲೇಕೆ ಬಂತೋ', ಎಂದು ಅಸಹನೆಯಿಂದ ಗೊಣಗಿಕೊಳ್ಳುತ್ತಿದ್ದ. ಆದರೆ ಗುರುರಾಜರಾಯರು ಬಡಜನಗಳನ್ನೆಲ್ಲಾ

ಕಳುಹುವ ವರೆಗೆ ಸೊಸೈಟಿಯಲ್ಲಿಂದ ಕದಲುತ್ತಿರಲಿಲ್ಲ. ಬಸಲಿಂಗಯ್ಯ ಅವರನ್ನು ತಿಂದುಬಿಡುವ ಹಾಗೆ ನೋಡುತ್ತಾ,

"ನೀವು ಇಲ್ಲಿಗೇಕೆ ಬಂದಿರಿ ಸ್ವಾಮಿ? ನಾವಾಟಕ್ಕೆ ಎಷ್ಟು ಅಡಚಣೆ-ತೊಂದರೆಯಾಗುತ್ತದೆ? ನೀವು ಬಂದುಬಿಡುತ್ತೀರಿ. ನಿಮ್ಮ ಮುಖ ನೋಡಿದ ಕೂಡಲೆ ಜನದ ಗುಂಪು ಗಲಾಟೆಗೆ ಪ್ರಾರಂಭಿಸುತ್ತೆ," ಎನ್ನುತ್ತಿದ್ದ."

"ಅವರಿಗೆಲ್ಲಾ ಸರಿಯಾಗಿ ಕಾಳು ಹಂಚಿದರೆ ಯಾಕಯ್ಯ ಗಲಾಟೆ ಮಾಡ್ತಾರೆ? ಎಲ್ಲರನ್ನೂ ಹಿಂದೆ ಹಾಕಿ ನಿನಗೆ ಬೇಕಾದವರಿಗೆ ಕೊಡತೀಯಂತೆ."

"ನೀವು ಯಾರ ಯಾರ ಮಾತನ್ನೋ ಕೇಳಿಕೊಂಡು ಬರುತ್ತೀರಿ. ಈ ಜನಗಳಿಗೆ ಹಂಚದೆ ಇನ್ಯಾರಿಗೆ ಹಂಚಲಿ? ಯಾರೋ ಅವರು ಕಾಣೆ, ತರಲೆ ಸೂ......ಮಕ್ಕಳು. ಇಲ್ಲದ್ದೇ ಹೇಳಿದಾರೆ."

"ಯಾರೋ ಯಾಕೆ ಹೇಳುತ್ತಾರೆ? ಕಳ್ಳನ ಮನಸ್ಸು ಹುಳ್ಳ ಹುಳ್ಳಗೆ ಅಂದ ಹಾಗೆ, ನಿನ್ನ ವ್ಯವಹಾರ. ನಾನು ಬಂದರೆ ನಿನಗೇನು ತೊಂದರೆ? ನ್ಯಾಯವಾಗಿ ಕೆಲಸ ಮಾಡಿಕೊಂಡು ಹೋದರೆ ಜನ ಯಾಕಯ್ಯ ತಿರುಗಿ ಬೀಳ್ತಾರೆ? ಸುಮ್ಮನೆ ಯಾರು ಯಾರನ್ನೋ ಬೈದಾಡುತ್ತೀ."

"ನನ್ನ ಹತ್ತಿರ ನ್ಯಾಯ ಅನ್ಯಾಯದ ವಿಷಯವಾಗಿ ಧರ್ಮೋಪದೇಶ ಮಾಡಬೇಕಾಗಿಲ್ಲ. ನಿಮ್ಮ ಕೆಲಸ, ನನ್ನ ಲೆಕ್ಕಪತ್ರ ಸರಿಯಾಗಿದೆಯೋ ಇಲ್ಲವೋ ನೋಡಿಕೊಳ್ಳೊದೆಷ್ಟೋ ಅಷ್ಟೆ. ಅದು ಬಿಟ್ಟು ನನ್ನ ಮೇಲೆ ಇಲ್ಲದ ಅನುಮಾನ ಇಟ್ಟುಕೊಂಡು ನನ್ನನ್ನು ಕೆಣಕಬೇಡಿ. ನಾನು ಅನ್ಯಾಯ ಮಾಡುತ್ತ ಇದ್ದೀನಿ ಅನ್ನುವದಾದರೆ ಪ್ರತ್ಯಕ್ಷ ಪ್ರಮಾಣ ತೋರಿಸಿ ಕೊಡಿ. ನಾನು ಒಪ್ಪಿಕೊಳ್ಳುತ್ತೇನೆ."

ಬಸಲಿಂಗಯ್ಯ ಗಟ್ಟಿಸಿ ಮಾತಾಡಿದರೂ ಗುರುರಾಜರಾಯರು ಸಮಾಧಾನದಿಂದಲೇ ವರ್ತಿಸಿ ಜನಗಳಿಗೆ ಸಮರ್ಪಕವಾಗಿ ಧಾನ್ಯ ಹಂಚಿಸುತ್ತಿದ್ದರು. ರಾಯರು ತೋರುತ್ತಿದ್ದ ಕರುಣೆ ಸಹಾನುಭೂತಿಗಳಿಗೆ ಸಂತಸಗೊಂಡ ಬಡ ಜನ ಮುಕ್ತಕಂಠದಿಂದ ಅವರಿಗೆ ಒಳ್ಳೆಯದಾಗಲೆಂದು ಹಾರೈಸುತ್ತಿದ್ದರು.

"ನಮ್ಮಪ್ಪ ಬಡವರ್‍ನ ಕಣ್ಣಾಗೆ ಆಕ್ಕೊಂತಾನೆ. ಈ ಸ್ವಾಮಿ ಇಲ್ದಿದ್ರೆ ನಮ್ನ ಯಾರು ಕೇಳ್ತಿದ್ರು? ತಣ್ಣಗೆ ಬದುಕಲಿ!"

"ಔದು ನೋಡು, ಈ ಸ್ವಾಮಿ ಎದುರಿಗಿದ್ದಾಗಲೇ ಈಟೊಂದು ದಿಮಾಕು ನಡೆಸ್ತಾನಲ್ಲ, ಇನ್ನು ನಮ್ಮ ಲೆಕ್ಕದಾಗೆ ಮಡಗ್ತಾನ? ಇವನ ಟೇಮ್ಯಾಗೆ ಮಣ್ಣಾಕ."

"ಅಯ್ ಬುಡು, ಇಂಗೆ ಅನ್ನಾಯ ಮಾಡಿ ನಮ್ಮೆಲ್ಲ ಉರಿಸಿ ದುಡಿದ ಅಣ ಏಟು ದಿನ ಉಳಿದಾತು? ದರ್ಮ ದೇವ್ರು ಇಂದಿಂದೇ ಅವ್ನೆ. ಯಾವಾಗಲಾಗ ಒಡೀತಾನೊ ಒಡೀತಾನೆ ನೋಡು!"

"ನಮುಗ್ಯಾಕ ಬುಡು. ಅವನ ಅನ್ನಾಯ ಅವನ್ನ ತಿನ್ತದೆ. ನಾವ್ಯಾಕ ಬಾಯಾಗಂದು ಪಾಪ ಕಟಿಕಂಬಾನ. ದೇವ್ರಿದ್ದಂಗೆ ಈ ಸ್ವಾಮಿ ಅವ್ನಲ್ಲ. ಇನ್ನೇನು ಬಯ? ನಮ್ಮಪ್ನ ಕಣ್ಣಗೆ ಮಡಗಿರಲಿ ದೇವ್ರು!"

ಎಷ್ಟೋ ಸಾರಿ ರೆವಿನ್ಯೂ ಇನ್ಸ್‌ಪೆಕ್ಟರು ಕೃಷ್ಣಮೂರ್ತಿಗಳು ಕೂಡ ಬಸಲಿಂಗಯ್ಯನ ಬಳಿ ನಿಷ್ಠುರವಾಗಿ ಮಾತಾಡುತ್ತಿದ್ದರು. ಆದರೆ ಬಸ ಲಿಂಗಯ್ಯ ಯಾರ ಮಾತಿಗೂ ಸೊಪ್ಪು ಹಾಕುತ್ತಿರಲಿಲ್ಲ. ಸೊಸೈಟಿಯ ವ್ಯವಹಾರದಲ್ಲಿ ಹೆಚ್ಚು ಬಳಕೆಯಲ್ಲಿದ್ದ ಆಹಾರ ದಿನಸಿ, ಸೀಮೆ ಎಣ್ಣೆ, ವ್ಯವಸಾಯೋಪಕರಣಗಳು ಮತ್ತು ಬಟ್ಟೆ ಎಲ್ಲದರಲ್ಲಿಯೂ ಲಾಭಗಿಟ್ಟಿಸುತ್ತಿದ್ದ.

ಹೊರಗಡೆ, ಅಂದರೆ ಮದರಾಸು ಪ್ರಾಂತದಲ್ಲಿ ಮೇಲಿನ ಸಾಮಗ್ರಿಗಳಿಗೆ ಒಳ್ಳೆಯ ಧಾರಣೆಯಿತ್ತು. 'ಗಾಳಿ ಬಂದಾಗ ತೂರಿಕೊ', ಎಂಬಂತೆ ಬಸ ಲಿಂಗಯ್ಯ ಇದೇ ಸದವಕಾಶವೆಂದು ಕಳ್ಳಸಂತೆ ವ್ಯಾಪಾರವನ್ನು ಜೋರು ಮಾಡಿದ್ದ.

ಬಸಲಿಂಗಯ್ಯನ ಸ್ವಸ್ಥಳ ರಾಂಪುರವೇ ಆಗಿತ್ತು. ಯಾವ ಯೋಚ ನೆಯೂ ಇಲ್ಲದೆ ಕೂತು ತಿನ್ನುವಷ್ಟು ಆಸ್ತಿಯಿತ್ತು. ಈ ಕೆಲಸ ಕೈಬಿಟ್ಟು ಹೋದರೆ ಮುಂದೇನು ಗತಿ? ಎಂಬ ಆತಂಕವೇನೂ ಇರಲಿಲ್ಲ. ಹೇಗೂ ಕೆಲಸ ಮಾಡಿಕೊಂಡಿದ್ದೇನೆ. ದುಡಿಯುವಷ್ಟು ದುಡಿದುಬಿಡೋಣ. ಏನಾ ದರೂ ಗಲಾಟೆಯಾದರೆ ಮೆಲ್ಲಗೆ ಜಾರಿಕೊಂಡರಾಯಿತು, ಎಂಬ ಧೋರಣೆ. ಆದ್ದರಿಂದ ಅವನು 'ಶಕೇಮಿರಾ' ಆಗಿ ಮೆರೆಯುತ್ತಿದ್ದ.

ರೆವಿನ್ಯೂ ಇನ್ಸ್‌ಪೆಕ್ಟರು, (ಸೊಸೈಟಿಯ ಸೆಕ್ರೆಟರಿ) ಗುರುರಾಜರಾಯರು ಮತ್ತಿತರ ಡೈರೆಕ್ಟರುಗಳಿಗೂ ಬಸಲಿಂಗಯ್ಯನ ವಿಷಯ ತಲೆನೋವಿಗೆ ಕಾರಣ ವಾಗಿತ್ತು. ಯಾವುದಾದರೂ ತಪ್ಪು ದೊರೆತರೆ ಸಾಕು ಎಂದು ಯೋಚಿಸು ತ್ತಿದ್ದರು, ಬಸಲಿಂಗಯ್ಯನನ್ನು ಕೆಲಸದಿಂದ ದಾಟಿಸಲಿಕ್ಕೆ.

ಒಂದು ದಿನ ಸಂಜೆ ಗುರುರಾಜರಾಯರೂ, ವಾಮನರಾಯರೂ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರೂ ಕೃಷ್ಣಮೂರ್ತಿಗಳೂ ತಿರುಗಾಡಿಕೊಂಡು ಬರಲು ಹೊರಟಿದ್ದರು. ಮೂವರೂ ಚಾಕೆಮಠದ ಕಡೆ ನಡೆದುಕೊಂಡು ಹೊರಟಿದ್ದರು.

ಮೂವರೂ ಬಸಲಿಂಗಯ್ಯನ ಸುದ್ದಿಯನ್ನೇ ಮಾತಾಡಿಕೊಂಡು ಬರು ತ್ತಿದ್ದರು. ಬಸಲಿಂಗಯ್ಯನನ್ನು ಕೆಲಸದಿಂದ ತಗೆಯುವ ಬಗ್ಗೆ ಮಾತು ನಡೆದಿತ್ತು.

ಒಂಟಿ ಕಣ್ಣಿನ ಶುಕ್ರಾಚಾರಿ ವಾಮನರಾಯರು ತಮ್ಮ ಒಂದು ಕಣ್ಣನ್ನೇ ಅರ್ಧ ಮುಚ್ಚಿ ಹುಬ್ಬು ಮೇಲೇರಿಸಿ ದೂರದ ರಸ್ತೆಯ ಕಡೆ ಸಿಂಹಾವ ಲೋಕನ ಮಾಡುತ್ತ ಬರುತ್ತಿದ್ದರು. ಅವರ ದೃಷ್ಟಿಗೆ ಎಂಟು ಹತ್ತು ಕಮಾನು ಗಾಡಿಗಳು ರಾಂಪುರದ ಕಡೆಗೇ ಬರುತ್ತಿರುವುದು ಗೋಚರವಾಯಿತು.

"ಎಲ್ಲಿಗೋ ಕಾಣೆ ಇಷ್ಟೊಂದು ಬಂಡಿಗಳು ಒಮ್ಮೆಗೇ ಹೊರಟಿವೆ" ಎಂದು ಕೇಳಿಸಿಯೂ ಕೇಳಿಸದ ಹಾಗೆ ತಮ್ಮಲ್ಲೇ ಮಾತನಾಡಿಕೊಂಡು ಮತ್ತೆ ಎದುರು ಬರುತ್ತಿದ್ದ ಗಾಡಿಗಳನ್ನೇ ನಿರೀಕ್ಷಿಸತೊಡಗಿದರು.

"ಏನೋ ಗೊಣಗಿಕೊಂಡೆಯಲ್ಲ ವಾಮನರಾಯ" ಗುರುರಾಜರಾಯರು ಕೇಳಿದರು. ಕೃಷ್ಣಮೂರ್ತಿಗಳು ವಾಮನರಾಯರತ್ತ ತಿರುಗಿದರು.

ವಾಮನರಾಯರು ಬಹಳಕಾಲ ಸಂಶೋಧನೆಯನ್ನು ನಡೆಸಿದ ವಿಜ್ಞಾ ನಿಯ ಗಾಂಭೀರ್ಯ ವ್ಯಕ್ತಪಡಿಸುತ್ತ ಹೇಳಿದರು,

"ನೋಡಿಸ್ವಾಮಿ ಸೇಕದಾರರೆ, ಎಲ್ಲಿಯವೋ ಏನೋ ಗಾಡಿಗಳು ಸಂಜೆ ಸಮಯದಲ್ಲಿ ಹೊರಟಿವೆ. ಯಾವುದೋ ಕಳ್ಳ ಸಾಗಾಣಿಕೆಯ ಗಿರಾಕಿ ಇರ ಬಹುದು. ಹತ್ತಿರ ಬರುತ್ತಲೂ ಸ್ವಲ್ಪ ವಿಚಾರಿಸುತ್ತೀರಾ?"

"ಒಳ್ಳೆಯ ಶಾನುಭೋಗ ಕಣಯ್ಯ ನೀನು. ರಸ್ತೆಯ ಮೇಲೆ ಹಾದು ಹೋಗುವ ಗಾಡಿಗಳಿಗೂ ಹೆಸರಿಟ್ಟು ಬಿಟ್ಟೆ. ಯಾರೋ ಏನೋ, ಯಾವ ಕೆಲಸದ ಮೇಲೆ ಹೋಗುತ್ತ ಇದ್ದಾರೋ ಏನೋ ಪಾಪ! ಅವರ ಕುಲ ಗೋತ್ರ ವಿಚಾರಿಸು. ಸಂಬಂಧವಿಲ್ಲದಿದ್ದರೂ ಏನಾದರೂ ಹುಡುಕಿಕೊಂಡು ಹೋಗುವುದು ಶಾನುಭೋಗರುಗಳ ಜಾಯಮಾನವಿರಬೇಕು."

"ವಾಮನರಾಯರ ಮಾತು ನಿಜವಿದ್ದರೂ ಇರಬಹುದ್ರೀ ಗುರುರಾಜ ರಾಯರೇ, ಗಾಡಿಯವರನ್ನು ವಿಚಾರಿಸೋಣವಂತೆ. ಇಲ್ಲೇ ಹಳ್ಳಿಗಳಿಗೆ ಹೋಗಿ ಕಳ್ಳತನದಲ್ಲಿ ಆಹಾರವನ್ನು ಗಡಿಯಿಂದ ಆಚೆಗೆ ದಾಟಿಸು ತ್ತಿದ್ದರೂ ಇರಬಹುದು. ಈ ಕೆಲಸಗಳಿಗೆಲ್ಲ ಸಂಜೆಗತ್ತಲು ತುಂಬಾ ಅನು ಕೂಲ ಸ್ವಾಮಿ. ಎಲ್ಲಿಗೋ ಹೊರಟ ಹಾಗೆ ಹೊರಡುತ್ತಾರೆ. ಕತ್ತಲಾಗು ತ್ತಲೂ ಮಾರ್ಕೆಟ್ ಪ್ರಾರಂಭ ಮಾಡಿಕೊಂಡು ಬೆಳಗಾಗುವ ವೇಳೆಗೆ ಯಥಾಪ್ರಕಾರ ಏನೂ ತಿಳಿಯದವರಾಗಿ ಬಿಡುತ್ತಾರೆ," ಎಂದು ಕೃಷ್ಣಮೂರ್ತಿ ಗಳು ವಾಮನರಾಯರ ಆಲೋಚನೆಗೆ ಸಮರ್ಥನೆ ಕೊಡುತ್ತ ಹೇಳಿದರು.

"ಈ ರೆವಿನ್ಯೂ ಬಾಬು, ಪೋಲೀಸುಬಾಬಿನಲ್ಲಿರುವ ಅಧಿಕಾರಿಗಳ ಹಣೇ ಬರಹವೇ ಇಷ್ಟು ಸ್ವಾಮಿ. ಏನಾದರೂ ಒಂದು ಹುಡುಕದೆ ಹೋದರೆ ನಿಮ್ಮ ಜೀವ ಸುಮ್ಮನಿರೋದಿಲ್ಲ. ಆಗಲಿ, ನಡೆಯಲಿ ನಿಮ್ಮ ತನಿಖೆ," ಗುರುರಾಜರಾಯರು ತಮಗೂ ಪ್ರಸ್ತುತ ವಿಷಯಕ್ಕೂ ಏನೂ ಸಂಬಂಧವಿಲ್ಲ ದವರಂತೆ ಮಾತನಾಡಿ ತಾವು ಕೌತುಕವನ್ನು ನೋಡತೊಡಗಿದರು.

ಕೃಷ್ಣಮೂರ್ತಿಗಳು ಅಧಿಕಾರದ ಗತ್ತಿನಲ್ಲಿ ಹೇಳಿದರು, "ಹಾಗಲ್ಲ ಗುರುರಾಜರಾಯರೇ ನಾವು ಆ ತರದ ಧೋರಣೆಯಲ್ಲಿ ಇಲ್ಲದೆ ಹೋದರೆ ತುಂಬಾ ಕಷ್ಟ ಸ್ವಾಮಿ. ಜನಗಳು ಈ ಕಾಲದಲ್ಲಿ ಇನ್ನೂ ಕೊಬ್ಬಿಹೋದಾರು."

ಗಾಡಿಗಳು ಹತ್ತಿರ ಹತ್ತಿರ ಬಂದುವು. ಕೃಷ್ಣಮೂರ್ತಿಗಳು ಅಧಿಕಾರ ದರ್ಪವನ್ನು ಬಿಚ್ಚಿ ಗಡಸುಧ್ವನಿಯಲ್ಲಿ ಎಲ್ಲಕ್ಕೂ ಮುಂದಿದ್ದ ಗಾಡಿಯವನನ್ನು ವಿಚಾರಿಸತೊಡಗಿದರು.

"ಯಾವೂರು ನಿಮ್ಮದು ?"

ಗಾಡಿಯವನು ಮೊದಲು ಸ್ವಲ್ಪ ತಬ್ಬಿಬ್ಬಾದರೂ ಧೈರ್ಯವಾಗಿ ಉತ್ತರಿಸಿದ.

"ನಮ್ಮದು ಕೂಡಿಲಿಗಿರ್ರೀ ಸ್ವಾಮಿ."

"ಕೂಡಲಿಗಿಯಲ್ಲಿ ಯಾರ ಮನೆಯವನೋ ನೀನು ?" ವಾಮನ ರಾಯರು ತಮ್ಮ ಒಂಟಿ ಕಣ್ಣಿನಿಂದ ಅವನ ರಹಸ್ಯವನ್ನೊಡೆಯುವ ಹಾಗೆ ನೋಡುತ್ತ ಕೇಳಿದರು.

"ದೊಡ್ಡ ಹಂಪಣ್ಣಾರ್ರೀ, ಪಕ್ಕ್ಯಾರ್ತಿಗೆ ಬಂಡಿ ಕಟ್ಟಕ್ಕೆ ಹೇಳಿದ್ರು. ಕಟ್ಟಿಸಿಕೊಂಡು ಬಂದೆನ್ರೀ."

"ಪಕ್ಕ್ಯಾರ್ತಿಯಿಂದ ಏನು ಹಾಕಿಕೊಂಡು ಬರುತ್ತೀರಿ?"

"ಜ್ವಾಳದ ಸೊಪ್ಪೆ ದೇವ್ರು."

"ಸರಿ ಹೋಗಿ."

ಗಾಡಿಗಳು ಒಂದೊಂದಾಗಿ ಮುಂದೆ ಹೊರಟುವು. ಗಾಡಿಗಳ ಕಡೆಯೇ ನೋಡುತ್ತ ವಾಮನರಾಯರು ಒಂದೊಂದೇ ಪದವನ್ನೂ ತೂಕ ಮಾಡುತ್ತ ಹೇಳಿದರು.

"ನೀವೇನೇ ಹೇಳಿ ಇದರಲ್ಲಿ ಮೋಸವಿದೆ ಸೇಕದಾರರೇ. ಜ್ವಾಳದ ಸೊಪ್ಪೆಗೆ ಸವಾರಿಬಂಡಿ ಬೇಕೇ ಹೇಳಿ. ಸವಾರಿ ಬಂಡಿಗಿಂತ ಬೋಳು ಬಂಡಿಗಳಲ್ಲಿ ಜಾಸ್ತಿ ಹೇರಬಹುದಲ್ಲ. ಏನಂತಿ ಗುರುರಾಜ?"

ವಾಮನರಾಯರ ಮಾತಿನಲ್ಲಿ ಸ್ವಲ್ಪ ಸತ್ಯವನ್ನು ಕಂಡ ಗುರುರಾಜ ರಾಯರು ತಮ್ಮ ವಿಚಾರಧಾರೆಯನ್ನೂ ವ್ಯಕ್ತಪಡಿಸಿದರು.

"ನಿಜ ವಾಮನರಾಯ. ನನಗೂ ಹಾಗೇ ಅನ್ನಿಸುತ್ತೆ. ಒಂದು ವೇಳೆ ಇವು ಸೊಪ್ಪೆ ಹೇರಲು ಬಂದಿದ್ದರೂ ದೊಡ್ಡ ಹಂಪಣ್ಣನಂತೂ ಬಂಡಿ ಕಟ್ಟಿ ಸಿಲ್ಲ. ಕೂಡಿಲಿಗಿಯ ಗಾಡಿಗಳಂತೂ ಅಲ್ಲವೇ ಅಲ್ಲ. ಹಂಪಣ್ಣನಂತಹ ದೊಡ್ಡ ಮನುಷ್ಯನಿಗೂ ಜ್ವಾಳದ ಸೊಪ್ಪೆಗೆ ತಾಪತ್ರಯುವೆ? ಸರಕಾರ ಹುಲ್ಲಿನ ಡಿಪೋ ಓರ್ಪ ಮಾಡಿದರೆ ಆರು ತಿಂಗಳಿಗಾಗೋ ಹುಲ್ಲು, ಸೊಪ್ಪೆ ಒಮ್ಮೆಗೇ ಕೊಡುವಂಥ ಭಾರೀ ಕುಳ. ಅದೂ ಅಲ್ಲದೆ ಮೊನ್ನೆ ಮೊನ್ನೆ ಮೊಳಕಾಲ್ಮುರು ಹುಲ್ಲಿನ ಡಿಪೋವಿಗೆ ಎಷ್ಟು ಸಪ್ಲೈ ಮಾಡಿದಾನೆ ಏನು ಕತೆ! ಎಲ್ಲಾ ತಲೆ ಬುಡವಿಲ್ಲದ ಮಾತು ಬಂಡಿಯುವರದು. ಬಂಡಿಗಳು ಎಲ್ಲಿಗೆ ಹೋಗುತ್ತವೆ. ಏನು ಮಾಡುತ್ತವೆ. ಅನ್ನೋದನ್ನ ಕಂಡುಹಿಡಿಯಬೇಕು."

"ಹೌದು ಹಾಗೇ ಮಾಡಬೇಕು. ಒಂದು ವೇಳೆ ಕಳ್ಳತನದಲ್ಲಿ ಮಾಲು ಸಾಗಿಸೊ ಬಂಡಿಗಳಾದರೆ ಹಿಡಿದು ಮಾಲನ್ನೆಲ್ಲಾ ಸೊಸೈಟಿಗೆ ಹೊಡೆಸ ಬಹುದು." ಕೃಷ್ಣಮೂರ್ತಿಗಳು ಮುಂದಿನ ಕ್ರಮಕ್ಕೆ ಪೀಠಿಕೆ ಕೊಟ್ಟು ಹೇಳಿದರು.

"ಹಾಗಾದರೆ ಹಿಂದಿರುಗಿಬಿಡೋಣ ಸ್ವಾಮಿ. ಬಂಡಿಗಳು ಬಹಳ ದೂರ ಹೋಗಿಬಿಡಬಹುದು. ಈಗಲೇ ಹೋದರೆ ಪತ್ತೇದಾರಿ ಕೆಲಸ ಸುಲಭವಾಗಬಹುದು. ನಾವು ಈಗಲೇ ಹೋಗಿ ಎಲ್ಲವನ್ನೂ ಪತ್ತೆಹಚ್ಚಲು

ಯಾರನ್ನಾದರೂ 'ಛೂ' ಬಿಡೋಣ. ಗುರುರಾಜ ನೀನು ಲಿಂಗನನ್ನು ಕರೆಸಿ ಹೇಳಿ ಕಳುಹಿಸು. ನಾನೂ ತಳವಾರನನ್ನು ಕಳಿಸುತ್ತೇನೆ. ಸೇಕದಾರರು ತಮ್ಮ ಜವಾನನ್ನು ಕಳಿಸಲಿ."

ಲಿಂಗನ ಸುದ್ದಿ ಹೇಳಿದ ಕೂಡಲೇ ಗುರುರಾಜರಾಯರು ಚಟ್ಟನೆ ಹೇಳಿದರು.

"ಲಿಂಗ ಬೇಡ. ಒಂದು ವೇಳೆ ಬಸಲಿಂಗಯ್ಯನೇ ಸನ್ನಾಹ ನಡೆಸಿದ್ದರೆ ಲಿಂಗನಿಗೆ ಹೇಳಿ ಕಳುಹಿಸಿದರೆ ನಮಗೇ ಸೋಲು. ಆ ಜೈಲಾನ್ ಬರುತ್ತಿರು ತಾನಲ್ಲ. ಅವನಿಗೆ ಹೇಳಿ ಕಳುಹಿಸಿದರೆ ಆಯಿತು. ಅವನು ತುಂಬಾ ಚೂಟಿ. ಎಲ್ಲಿದ್ದರೂ ನಮಗೆ ಸರಿಯಾದ ಸುದ್ದಿ ತಂದು ಮುಟ್ಟಿಸಬಲ್ಲ."

"ಹೌದರೀ ಗುರುರಾಜರಾಯರೇ ನಿಮ್ಮ ಮಾತು ನ್ಯಾಯವಾಗಿದೆ. ನಮಗಿದು ಹೊಳೆಯಲೇ ಇಲ್ಲ ನೋಡಿ."

ಕತ್ತಲು ಹತ್ತಿರ ಹತ್ತಿರ ಸಾರುತ್ತಿತ್ತು. ಸಂಶಯಕ್ಕೆ ಗುರಿಯಾಗಿದ್ದ ಗಾಡಿಗಳು ದೂರ ಹೋಗಿಬಿಟ್ಟರೆ ಪತ್ತೆ ಹಚ್ಚುವ ಕೆಲಸ ಸುಲಭವಾಗಲಾರ ದೆಂದು ಬಗೆದು ಮೂವರೂ ಊರಕಡೆ ದೊಡ್ಡ ಹೆಜ್ಜೆಗಳನ್ನು ತುಳಿಯುತ್ತ ನಡೆದರು.

* * * *

ಗುರುರಾಜರಾಯರ ತರ್ಕ ಸುಳ್ಳಾಗಲಿಲ್ಲ. ಜೈಲಾನನ್ನು ರಾಯರು ತನಗೆ ವಹಿಸಿದ್ದ ಕಾರ್ಯವನ್ನು ಚೆನ್ನಾಗಿಯೇ ನಿರ್ವಹಿಸಿದ್ದ. ಗಾಡಿಗಳು ರಾಂಪುರದಲ್ಲೇ ಉಳಿದುಕೊಂಡಿದ್ದುವು. ಸೊಸೈಟಿಯ ಹಿಂಭಾಗದ ಓಣಿ ಯಲ್ಲಿ ಗಾಡಿಗಳನ್ನು ನಿಲ್ಲಿಸಿದ್ದರು. ಜೈಲಾನನು ವಿಷಯವನ್ನು ರಾಯರ ಬಳಿ ತಿಳಿಸಿದಾಗ ನಿರ್ಧಾರದ ಭಾವನೆಯನ್ನು ವ್ಯಕ್ತಪಡಿಸುತ್ತ, ಕೆಳತುಟಿಯನ್ನು ನಿಧಾನವಾಗಿ ಕಚ್ಚಿ ಎಡ ಅಂಗೈಯ ಮೇಲೆ ಬಲಗೈ ಮುಷ್ಟಿಯನ್ನು ಬಲವಾಗಿ ಗುದ್ದಿಕೊಂಡರು. ಅವರ ಮುಖದಲ್ಲಿ ಗಂಭೀರತೆಯಿತ್ತು. ಏನೇನು ನಡೆಯುವುದೆಂಬುದನ್ನು ತಿಳಿಸಲು ಹೇಳಿ ಜೈಲಾನನನ್ನು ಕಳುಹಿಸಿ ತಾವು ನೇರವಾಗಿ ಕೃಷ್ಣಮೂರ್ತಿಗಳನ್ನು ಕಾಣಲು ಹೊರಟರು.

ಗಾಡಿಗಳನ್ನು ಬಸಲಿಂಗಯ್ಯನೇ ಹೂಡಿಸಿದ್ದ. ಆ ದಿನ ರಾತ್ರಿ ಜೋಳ, ನವಣೆ, ಅಕ್ಕಿ ಮತ್ತು ಸೀಮೆಎಣ್ಣೆ ಡಬ್ಬಗಳನ್ನು ಬಳ್ಳಾರಿಗೆ ಸಾಗಿಸಲು ಏರ್ಪಾಡು ಮಾಡಿದ್ದ. ಅದಕ್ಕೋಸ್ಕರವಾಗಿಯೇ ಒಂದು ದಿನ ಮುಂಚಿತ

ವಾಗಿ ಬಳ್ಳಾರಿಗೆ ಹೋಗಿ ಗಿರಾಕಿಯೊಂದನ್ನು ಕುದುರಿಸಿಕೊಂಡು ಬಂದಿದ್ದ. ಆ ದಿನ ಸಾಗಿಸಲಿದ್ದ ಮಾಲಿನಿಂದ ಬಸಲಿಂಗಯ್ಯನಿಗೆ ಏನಿಲ್ಲವೆಂದರೂ ಆರು ನೂರು ರೂಪಾಯಿಗಳು ಲಾಭ ದೊರೆಯುತ್ತಿತ್ತು. ಈ ಸುವರ್ಣ ಸಂಧಿಯನ್ನು ಬಸಲಿಂಗಯ್ಯನು ಹೇಗೆ ಕಳೆದು ಕೊಂಡಾನು!

ಬಸ್ ಸ್ಟಾಂಡಿನಿಂದ ಊರೊಳಗೆ ಹೋಗುವ ರಸ್ತೆಯ ಎಡ ಪಕ್ಕದಲ್ಲಿ ಸೊಸೈಟಿಯ ಕಟ್ಟಡವಿತ್ತು. ಅದು ಬಹಳ ಹಳೆಯ ಕಾಲದ್ದು. ಸೊಸೈಟಿಯ ವ್ಯವಹಾರಕ್ಕೆ ತಕ್ಕ ಕಟ್ಟಡವಿಲ್ಲದಿದ್ದುದರಿಂದ ಈ ಕಟ್ಟಡವನ್ನು ಬಾಡಿಗೆಗೆ ಕೊಂಡಿದ್ದರು. ಅದೊಂದು ದೊಡ್ಡ ಅನ್ನಸತ್ರದಂತೆ ಇತ್ತು. ಕಟ್ಟಡದ ಒಳಗಿನ ಕೈಸಾಲೆ ಸುಮಾರು ಏಳು ಎಂಟು ಸಾವಿರ ಮೂಟೆ ಅಡಗುವಷ್ಟು ವಿಶಾಲವಾಗಿತ್ತು. ಅಲ್ಲಿಂದ ಸ್ವಲ್ಪ ಒಳಗೆ ನಡೆದರೆ ಮೇಲೆ ಹೋಗಲು ಮೆಟ್ಟಲು. ಮೇಲೆ ಖಾಲಿಯ ಚೀಲ, ಡಬ್ಬ ಮೊದಲಾದ ಸಾಮಾನುಗಳನ್ನು ತುಂಬಲು ಅನುಕೂಲವಾಗಿದೆ ಅಟ್ಟ. ಅಟ್ಟದ ಮೆಟ್ಟಲಿನ ಹಿಂದೆ ಒಂದು ನೆಲಮನೆಯ ಬಾಗಿಲು ಅಲ್ಲಿ ಇಳಿದು ಹೋದರೆ ಒಳಗೆ ಕಣಜದಂತೆ ಸ್ವಲ್ಪ ವಿಶಾಲವಾದ ಸ್ಥಳಗಿದೆ. ಕಣಜದಿಂದ ಹೊರಗಡೆಗೆ ಹೋಗಿ ಬರಲು ಅನುಕೂಲವಾಗಿ ಒಂದು ಬಾಗಿಲು. ಅದು ಕಟ್ಟಡದ ಹಿಂಭಾಗದ ಹಿತ್ತಲು ಪ್ರದೇಶ.

ರಾತ್ರಿಯ ಕತ್ತಲಿನಲ್ಲಿ ಸೊಸೈಟಿಯ ಹಿಂದಣ ಹಿತ್ತಲಿನಲ್ಲಿ ಬೆಳಕು ಕಾಣುತ್ತಿದೆ. ಸ್ವಲ್ಪ ದೂರದಲ್ಲಿ ಸಂಜೆ ಬಂದ ಗಾಡಿಗಳು ನಿಂತಿವೆ. ಐದಾರು ಜನ ವ್ಯಕ್ತಿಗಳು ಯಂತ್ರದಂತೆ ದಿನಸಿಯ ಮೂಟೆಗಳನ್ನು ಗಾಡಿಗೆ ಹೇರಲು ಒಳಗೆ ಹೊರಗೆ ಓಡಾಡುತ್ತಿದ್ದಾರೆ. ಕಣಜದ ಒಳಬಾಗಿಲಿನಲ್ಲಿ ನಿಂತು ಲಿಂಗ ಅವರಿಗೆ ಬೆಳಕು ತೋರಿಸುತ್ತಿದ್ದಾನೆ. ಗಾಳಿಗೆ ಎಲೆಗಳು ಅಲುಗಿದರೂ ಕೂಡ ಯಾರಾದರೂ ಬಂದುಬಿಟ್ಟರೋ ಏನೋ ಎಂಬ ಭಯದಿಂದ ಆಗಾಗ್ಗೆ ಸ್ವಲ್ಪಕಾಲ ತಟಸ್ಥರಾಗಿ ಮತ್ತೆ ಕೆಲಸ ಮಾಡತೊಡಗುತ್ತಿದ್ದರು.

ಇದ್ದಕ್ಕಿದ್ದಂತೆ ಯಾರೋ ಕೆಮ್ಮಿದಂತಾಗಿ ಲಿಂಗ ದೀಪ ಎತ್ತಿ ಹಿಡಿದು ನೋಡಿದ. ದೂರದಲ್ಲಿ ಯಾರೋ ಸರಸರ ಹೋಗುತ್ತಿದ್ದ ಹಾಗೆ ಕಂಡು ಬಂತು. ಇನ್ನು ತಡಮಾಡುವುದು ಕ್ಷೇಮವಲ್ಲವೆಂದು ಬೇಗ ಬೇಗ ಮೂಟೆಗಳನ್ನು ಸಾಗಿಸತೊಡಗಿದರು ಗಾಡಿಯವರು.

ಗಾಡಿಗಳು ಇನ್ನೇನು ಹೊರಡುವುದರಲ್ಲಿದ್ದಾಗ ಲಿಂಗನಿಗೆ ದೂರದಲ್ಲಿ ಪೋಲಿಸ್ ಸಬ್ ಇನ್ಸ್‌ಪೆಕ್ಟರು, ಕೃಷ್ಣಮೂರ್ತಿಗಳು, ಗುರುರಾಜರಾಯರು

ಹಾಗೂ ವಾಮನರಾಯರು ಬರುತ್ತಿರುವುದು ಕಾಣಿಸಿತು. ಅವರ ಹಿಂದೆ ಜೈಲಾನ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ ಜವಾನ ಇವರುಗಳೂ ಬರುತ್ತಿದ್ದರು.

ಲಿಂಗ ದೀಪ ಆರಿಸಿ ಗಾಡಿಯವರಿಗೆ 'ನೀವು ಬೇಗ ಹೊರಡಿ,' ಎಂದು ಹೇಳಿ ಕತ್ತಲಿನಲ್ಲೇ ಬೀಗಹಾಕಿದ ಶಾಸ್ತ್ರ ಮಾಡಿ ಓಡಿ ಬಿಟ್ಟ.

ಗಾಡಿಗಳು ಒಂದು ಮಾರು ಕೂಡ ಮುಂದುವರಿದಿರಲಿಲ್ಲ; ಸಬ್ ಇನ್ಸ್‌ಪೆಕ್ಟರು ಗಾಡಿಗಳನ್ನು ತಡೆದರು. ಇನ್ಸ್‌ಪೆಕ್ಟರನ್ನು ಕಂಡಕೂಡಲೇ ಗಾಡಿ ಹೊಡೆಯುವವರ ಜಂಘಾಬಲ ಉಡುಗಿಹೋಯಿತು. ಗಾಡಿಗಳು ನಿಂತುವು. ಒಳಗಿನಿಂದ ದಿನಸಿಯ ಮೂಟೆಗಳು ಸ್ಪಷ್ಟವಾಗಿ ಕಾಣುತ್ತಿದ್ದುವು. ಗುರುರಾಜರಾಯರು ಎಲ್ಲ ಗಾಡಿಗಳನ್ನೂ ಪರೀಕ್ಷಿಸುತ್ತ ಬಂದರು. ಕೊನೆಯ ಎರಡು ಗಾಡಿಗಳಲ್ಲಿ ಸೀಮೆಎಣ್ಣೆ ಡಬ್ಬಗಳೂ ಇದ್ದುವು.

"ಯಾವೂರು ನಿಮ್ಮದು?"

ಇನ್ಸ್‌ಪೆಕ್ಟರ ಗರ್ಜನೆಗೆ ಗಾಡಿಯವರು ನಡುಗಿಹೋದರು. ಬಾಯಿ ಒಣಗಿ ಬಂತು. ಭಯದಿಂದ ಮುಖದ ಮೇಲೆ ಬೆವರಿನ ಹನಿಗಳು ಕಾಣಿಸಿ ಕೊಂಡುವು.

"ಉಂ! ಮಾತಾಡುತ್ತೀರೊ ಬೆಲ್ಟಿನ ರುಚಿ ತೋರಿಸಬೇಕೋ?" ಇನ್ಸ್‌ಪೆಕ್ಟರು ಸೊಂಟದಲ್ಲಿದ್ದ ಬೆಲ್ಟನ್ನು ಬಿಚ್ಚಿ ತಿರುಗಿಸತೊಡಗಿದರು.

"ಬಿಗಿಯಿರಿ ಸ್ವಾಮಿ ಒಂದು ನಾಲ್ಕು ಏಟು. ಆಗ ಬಾಯಿ ಬಿಡುತ್ತಾರೆ. ಕಳ್ಳ......ಮಕ್ಕಳನ್ನು ತಂದು."

ವಾಮನರಾಯರು ಒಂದೇ ಕಣ್ಣಿನಿಂದಲೇ ಗಾಡಿಯವರ ಕಡೆ ಕೆಕ್ಕರಿಸಿ ನೋಡುತ್ತ ಗುಡುಗಿದರು.

ಇನ್ಸ್‌ಪೆಕ್ಟರು ಎದುರಿನಲ್ಲೇ ನಡುಗಿಕೊಂಡು ನಿಂತಿದ್ದ ಒಬ್ಬನ ಮುಂದೆ ನಿಂತು ಕೈಯಲ್ಲಿ ಹಿಡಿದಿದ್ದ ಬೆಲ್ಟನ್ನು ಜೋರಾಗಿ ತಿರುಗಿಸುತ್ತ,

"ಬೊಗಳೋ ಕತ್ತೆಮಗನೆ, ಸುಮ್ಮನೆ ನಿಂತುಕೊಂಡರೆ ಚರ್ಮ ಸುಲಿಸಿ ಬಿಡುತ್ತೀನಿ" ಎಂದು ಒಂದು ಹೊಡೆತ ಕೊಟ್ಟರು ಬೆಲ್ಟಿನಿಂದ.

ಪೆಟ್ಟಿತಿಂದ ಗಾಡಿಯವನು ಕಣ್ಣೀರು ಸುರಿಸುತ್ತ ಹೇಳಿದ,

"ಒಡಿಬೇಡ ದೇವ್ರು. ನೀ ಏಳ್ದಂಗೆ ಕೇಳತೀನಿ!"

"ಯಾವೂರು ನಿಮ್ಮದು?"

"ಗೌರ ಸಮುದ್ರ ದೇವ್ರು."

"ಗುಮಾಸ್ತರು ಗಾಡಿ ಹೂಡಿಸಿದರೋ? ಎಲ್ಲಿಗೆ ಸಾಗಿಸುತ್ತಿದ್ದಿರಿ?

"ಬಳ್ಳಾರಿಗೆ ದೇವ್ರು. ಕೊಳೇನಳ್ಳಿ ಸಿದ್ದಪ್ಪಾವ್ರ ಮಳಿಗೇಗೆ."

"ಯಾರು ಹೂಡಿಸಿದರೋ?"

"ಗುಮಾಸ್ತೆ ಬಸಲಿಂಗಪ್ಪಾವ್ರು ಹೂಡಿಸಿದ್ರು ದೇವ್ರು."

"ತಿರುಗಿಸಿ ಗಾಡಿಗಳನ್ನು. ಕಳ್ಳ ಸೂ......ಮಕ್ಕಳ ನಡೀರಿ ಲಾಕಪ್ಪಿಗೆ. ನಿಮಗೆ ತೋರಿಸುತ್ತೇನಿ."

"ಹ್ಞಾಂ ತಿರುಗಿಸಿರೋ ಗಾಡಿಗಳನ್ನ ಹಿಂದಕ್ಕೆ. ಯಾರಿಗೆ ಹೇಳುತ್ತ ಇರೋದು. ಇನ್ನೆರಡು ಬಿಗಿಯಬೇಕೊ?" ಗುರುರಾಜರಾಯರು ಗುಡುಗಿದರು.

ಗಾಡಿಯುವರೆಲ್ಲ ಒಮ್ಮೆಗೇ ಬಂದು ಇನ್ಸ್‌ಪೆಕ್ಟರ ಕಾಲಿಗೆ ಬಿದ್ದರು. ದೈನ್ಯದಿಂದ ಕ್ಷಮೆ ಬೇಡಲಾರಂಭಿಸಿದರು.

"ನಮ್ಮ ತಪ್ಪಿಲ್ಲ ದೇವ್ರು. ನಾವು ಬಡಜನ. ಒಟ್ಟೆ ಪಾಡಿಗೆ ಗಾಡಿ ಊಡಿದ್ವಿ. ಗುಮಾಸ್ತೇರು ಜಾಸ್ತಿ ಬಾಡಿಗೆ ಕೊಡ್ತೇನಿ ಅಂದರು. ಆಸೆ ಬಿದ್ವಿ."

"ಆಸೆ ಬಿದ್ದಿರೋ? ಆಗಲಿ ಕತ್ತಲು ಮನೆಯಲ್ಲಿ ಕೂಡಿ ಹಾಕಿದಾಗ ಗೊತ್ತಾಗುತ್ತೆ. ಕಳ್ಳ ಗೊರವಮರನ್ನ ತಂದು......"

"ನಿಮ್ಮ ದಮ್ಮಯ್ಯ!......ಈ ಸಲಕೆ ಬಿಟ್ಬುಬುಡಿ ದೇವ್ರು. ಇನ್ನು ಮ್ಯಾಗೆ......ಗಾಡಿ ಊಡಲ್ಲ......ಈ ಸಲಕ್ಕೆ ಕ್ಷಮ್ಸಿ ದೇವ್ರು......!"

"ದಿನ ಬೆಳಗೆದ್ದರೆ ತಿನ್ನಲಿಕ್ಕೆ ಕೂಳಿಲ್ಲ ಅಂತ ಬಡಕೊಳ್ಳುತ್ತೀರಿ. ಹೊರಗೆ ಸಾಗಿಸಿ ಕೊಡುತ್ತೀರಾ? ನಿಮಗೆಲ್ಲಾ ಸೊಸೈಟಿಯಲ್ಲಿ ಕಾಳು ಯಾಕ್ರೋ ಕೊಡಿಸಬೇಕು. ನಾಲ್ಕು ಜನ ತಿನ್ನೋ ತುತ್ತಿಗೆ ಮಣ್ಣು ಹಾಕೋರಿಗೆ?"

ಗುರುರಾಜರಾಯರು ಗದರಿಕೊಂಡರು.

"ಇಲ್ಲ ಸಾವ್ಕಾರಾ, ನಾವು ತಪ್ಪು ಮಾಡಿದೊ. ಇನ್ನು ಇಂಗೆ ಮಾಡಾಕಿಲ್ಲ ಸಾವ್ಕಾರಾ. ಮುಂದೆ ಇಂಗಿ ಮಾಡಿದ್ರೆ ಕಾಲಾಗ್ನದು ಕಳಚಿಕೊಂಡೇ ಬಡೀ ಸಾವ್ಕಾರ. ಆ ಗುಮಾಸ್ತನ ಮಾತು ಕೇಳಿಕೊಂಡು ಮಣ್ಣು ತಿಂದೊ. ಇವತ್ಗೆ ಬಿಟ್ಬುಡು ಸಾವ್ಕಾರಾ!"

ಪೋಲೀಸ್ ಸಬ್ ಇನ್ಸ್‌ಪೆಕ್ಟರು ಮತ್ತೊಮ್ಮೆ ಗದರಿ ಗಾಡಿಗಳನ್ನು ಹಿಂತಿರುಗಿಸಿದರು. ಜೈಲಾನ್ ಗುರುರಾಜರಾಯರ ಮನೆಗೆ ಹೋಗಿ ಲಾಟೀನ್ ತೆಗೆದುಕೊಂಡು ಬಂದ. ಹಿಂಬಾಗಿಲಿನ ಬೀಗ ಮುರಿದು ಮೂಟೆಗಳನ್ನೆಲ್ಲಾ ಒಳಗೆ ಇಡಿಸಿದರು. ಎಲ್ಲ ಆದ ಮೇಲೆ ಗುರುರಾಜರಾಯರು ಮನೆಯಿಂದ ಬೇರೆ ಬೀಗ ತರಿಸಿ ಹಾಕಿಸಿ ಸೀಲು ಮಾಡಿಸಿದರು. ಗಾಡಿಯುವರನ್ನು ಬಯ್ದು ಅವರ ಪಾಡಿಗೆ ಅವರು ಹೋಗಲು ಬಿಟ್ಟುಬಿಟ್ಟರು.

ರಾತ್ರಿಯ ಕಾವಲಿಗೆ ಸಬ್ ಇನ್ಸ್‌ಪೆಕ್ಟರು ಒಬ್ಬ ಕಾನ್‌ಸ್ಟೇಬಲನ್ನು ಕಳುಹಿಸಿಕೊಟ್ಟರು.

ರಾತ್ರಿಯ ಘಟನೆಯಿಂದ ಬಸಲಿಂಗಯ್ಯ ಅಡಗಿಹೋದ. ಈ ರೀತಿ ಆಗಬಹುದೆಂದು ಅವನು ಕನಸಿನಲ್ಲೂ ಭಾವಿಸಿರಲಿಲ್ಲ. ಕೃಷ್ಣಮೂರ್ತಿಗಳು ಸೊಸೈಟಿಯ ತನಿಖೆ ತೆಗೆದುಕೊಂಡರು. ಬಸಲಿಂಗಯ್ಯ ಯಾವ ಲೆಕ್ಕವನ್ನೂ ಸಮರ್ಪಕವಾಗಿಟ್ಟಿರಲಿಲ್ಲ. ಆಹಾರ ದಿವಸಿ, ಸೀಮೆ ಎಣ್ಣೆಯ ಡಬ್ಬಗಳು, ಕಬ್ಬಿಣದ ಸಾಮಾನುಗಳು ಮತ್ತು ಗೊಬ್ಬರ ಬೀಜದ ಭತ್ತ ಇವುಗಳ ಸ್ಟಾಕ್ ಗಳು ಯದ್ವಾತದ್ವಾ ಆಗಿದ್ದುವು. ಸ್ಟಾಕ್ ಲೆಡ್ಜರಿನಲ್ಲಿ ತೋರಿಸಿರುವ ಸಿಲ್ಕಿಗೂ ಹಾಲಿ ಇರುವ ಸಿಲ್ಕಿಗೂ ಸಂಬಂಧವೇ ಇರಲಿಲ್ಲ. ಯಾವೊಂದು ಮಾಲಿನ ಮಾರಾಟವಾದ ಬಗ್ಗೆ ಮಾರಾಟದ ಪುಸ್ತಕದಲ್ಲಿ ವಿವರವಿರಲಿಲ್ಲ.

ಕೃಷ್ಣಮೂರ್ತಿಗಳು ಸೊಸೈಟಿಯ ಮಾಲು ದಾಸ್ತಾನು ಇಳುವರಿಯ ಬಗ್ಗೆ ಬಸಲಿಂಗಯ್ಯನಿಂದ ಸಮಾಧಾನದ Explanation ಬರೆಸಿಕೊಂಡು ಸೊಸೈಟಿಯ ಸಂಪೂರ್ಣ ಚಾರ್ಜನ್ನು ತಮ್ಮ ವಶಕ್ಕೆ ತೆಗೆದುಕೊಂಡರು.

ಮಧ್ಯಾಹ್ನವೇ ಕೃಷ್ಣಮೂರ್ತಿಗಳು ಸೊಸೈಟಿಯ ಡೈರೆಕ್ಟರುಗಳನ್ನೆಲ್ಲಾ ಕರೆಸಿಕೊಂಡು ಮೀಟಿಂಗ್ ನಡೆಸಿದರು. ಮೀಟಿಂಗಿನಲ್ಲಿ ಹಿಂದಿನ ರಾತ್ರಿಯ ಘಟನೆಯನ್ನು ತಿಳಿಸಿ ಬಸಲಿಂಗಯ್ಯ ಹಾಗೂ ಜವಾನ ಲಿಂಗನಿಂದ ಆಗುತ್ತಿದ್ದ ಅನ್ಯಾಯಗಳನ್ನೆಲ್ಲಾ ತಿಳಿಯಹೇಳಿದರು.

ಡೈರೆಕ್ಟರುಗಳೆಲ್ಲಾ ಬಸಲಿಂಗಯ್ಯ ಮತ್ತು ಲಿಂಗನನ್ನು ಕೆಲಸದಿಂದ ನಿವೃತ್ತಿ ಮಾಡಿ, ಹೊಸ ಗುಮಾಸ್ತ ಹಾಗೂ ಹೊಸ ಜವಾನನನ್ನು ನೇಮಿಸಿ ಕೊಳ್ಳಬೇಕೆಂದು ಸರ್ವಾನುಮತದಿಂದ ನಿರ್ಣೈಸಿದರು.

ಹೊಸಬರನ್ನು ನೇಮಿಸುವ ಬಗ್ಗೆ ವಾದ ವಿವಾದವಾಯಿತು. ಕೃಷ್ಣ ಮೂರ್ತಿಗಳೇ ಸಮಸ್ಯೆಯನ್ನು ಬಿಡಿಸಿದರು. ಸರಿಯಾದ ಗುಮಾಸ್ತೆಯನ್ನು

ನೇಮಿಸುವ ವರೆಗೆ ಗುರುರಾಜರಾಯರೇ ಗುಮಾಸ್ತೆಯ ಕೆಲಸವನ್ನು ನಿರ್ವಹಿಸಬೇಕೆಂದೂ, ಹೊಸ ಜವಾನನನ್ನಾಗಿ ಜೈಲಾನನನ್ನು ನೇಮಿಸಬೇಕೆಂದೂ ಸಲಹೆಕೊಟ್ಟರು. ಕೃಷ್ಣಮೂರ್ತಿಗಳ ಸಲಹೆಯನ್ನು ಸಭೆ ಅನುಮೋದಿಸಿತು.

ಬಸಲಿಂಗಯ್ಯನಿಂದ ಚಾರ್ಜು ವಹಿಸಿಕೊಂಡಾಗ ಲೆಕ್ಕದ ಪ್ರಕಾರ ಕಂಡುಬಂದ ಷಾರ್ಟೇಜುಗಳೆಲ್ಲವನ್ನೂ ಇದೇ ದಿನ ಭರಿಸಬೇಕೆಂಬುದಾಗಿ ತೀರ್ಮಾನಿಸಿದರು.

ಬಸಲಿಂಗಯ್ಯ ಮರುಮಾತಾಡದೆ ಹಣವನ್ನು ತಂದೊಪ್ಪಿಸಿದ.

ಕೊನೆಯದಾಗಿ, ಡೈರೆಕ್ಟರುಗಳು ಬಸಲಿಂಗಯ್ಯನ ಕಾಲದ ಲೆಕ್ಕಪತ್ರಗಳ ಆಡಿಟ್ ಮಾಡಿಸಿ, ಆದಷ್ಟು ಜಾಗ್ರತೆ ಸೊಸೈಟಿಯ ಜನರಲ್ ಬಾಡಿ ಮೀಟಿಂಗ್ ಕರೆಯುವ ಸಲುವಾಗಿ ಲೆಕ್ಕಪತ್ರಗಳ ಆಡಿಟ್ ನಡೆಸಲು ಒಬ್ಬ ಸರ್ಟಿಫೈಡ್ ಆಡಿಟರನ್ನು ನೇಮಿಸಬೇಕೆಂದು ಆಸಿಸ್ಟೆಂಟ್ ರಿಜಿಸ್ಟ್ರಾರರನ್ನು ಕೇಳಿಕೊಳ್ಳಬೇಕೆಂದು ತೀರ್ಮಾನಿಸಿದರು.

ಬಸಲಿಂಗಯ್ಯನಿಗೆ ತಲೆ ಹೊಯ್ದುಷ್ಟು ಅವಮಾನವಾಗಿತ್ತು. ಸೊಸೈಟಿಯಲ್ಲಿ ತನ್ನ ಲೆಕ್ಕಗಳ ತನಿಖೆ ಹಾಗೂ ಛಾರ್ಜು ಬಿಟ್ಟುಕೊಡುವ ಸಮಯದಲ್ಲಿ ಊರಿನ ಜನಗಳು ಪರಿಷೆಯಂತೆ ನೆರೆದಿದ್ದರು. ಹಳ್ಳಿಯ ಜನಗಳಿಗಂತೂ ಲೆಕ್ಕವೇ ಇರಲಿಲ್ಲ. ಎಲ್ಲರೂ ಬಸಲಿಂಗಯ್ಯನ ಎದುರಿನಲ್ಲೇ ಮನಬಂದಂತೆ ಅವನನ್ನು ಹೀಯಾಳಿಸಿ ಮಾತಾಡಿದರು. ಕೆಲವರಂತೂ ತಮ್ಮ ನಾಲಗೆಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಅವಾಚ್ಯ ಶಬ್ದಗಳನ್ನೂ ಆಡಿ ತಮ್ಮ ಸಂಕಟವನ್ನು ಸಮಾಧಾನ ಮಾಡಿಕೊಂಡರು.

ಬಸಲಿಂಗಯ್ಯನಿಗೆ ಈ ಅಪಮಾನ ಸಹಿಸಲು ಸಾಧ್ಯವಾಗಲಿಲ್ಲ. ಹೊಸ ಗುಮಾಸ್ತೆಯೊಬ್ಬ ಬಂದು, ತನ್ನ ನೆನಪು ಜನಗಳ ಮನಸ್ಸಿನಿಂದ ಅಳಿಸಿ ಹೋಗುವ ವರೆಗೆ ದೂರವಿರುವುದೇ ಯುಕ್ತವೆನಿಸಿತು. ಮನೆಯವರನ್ನು ಕೇಳಿಕೊಂಡು ತನ್ನ ಅಕ್ಕನ ಊರಾದ ಭದ್ರಾವತಿಗೆ ನಡೆದುಬಿಟ್ಟ. ಕೆಲವೇ ದಿನದಲ್ಲಿ ಭದ್ರಾವತಿಯ ಕಾರ್ಖಾನೆಯಲ್ಲಿ ಕೆಲಸ ದೊರೆಯಿತು. ರಾಂಪುರದ ಪ್ರಸಂಗವನ್ನು ಮರೆತು ನೆಮ್ಮದಿಯನ್ನು ಕಾಣಲು ಪ್ರಯತ್ನಿಸಿದ.

೩

ಸೊಸೈಟಿಯಲ್ಲಿ ವ್ಯಾಪಾರದ ಕೆಲಸ ಮುಗಿಸಿಕೊಂಡು ಮನೆಗೆ ಬರುವ ವೇಳೆಗೆ ಗುರುರಾಜರಾಯರಿಗೆ ಸಾಕಾಗಿ ಹೋಗುತ್ತಿತ್ತು. ಬೆಳಗ್ಗಿನಿಂದ ಸಂಜೆಯ ವರೆಗೆ ಸೊಸೈಟಿಯೊಳಗೆ ಧವಸಧಾನಗಳ ಧೂಳು, ಜನಗಳ ಗುಂಪಿನಲ್ಲಿ ಗಾಳಿಯ ಪ್ರವೇಶವಿಲ್ಲದೆ ಉಂಟಾಗುತ್ತಿದ್ದ ಉಷ್ಣಹವೆ ಇವೆಲ್ಲವುಗಳ ಮಧ್ಯೆ ಉಸಿರು ಬಿಗಿಹಿಡಿದು ವ್ಯಾಪಾರ ಮಾಡಲು ಕೂಡಬೇಕು.

ವ್ಯಾಪಾರ ಮುಗಿಸಿಕೊಂಡು ಮನೆಗೆ ಬಂದರೂ ಜನರ ಕಾಟದಿಂದ ಬಿಡುವು ದೊರೆಯುವುದು ದುಸ್ತರವಾಗುತ್ತಿತ್ತು. ಬೆಳಗೆಲ್ಲಾ ಹೊಟ್ಟೆಯ ಪಾಡಿಗಾಗಿ ಕಷ್ಟಪಟ್ಟು ದುಡಿದು ದಿನದ ಕೂಲಿ ಪಡೆದು ಆಹಾರ ದಿನಸಿಗಾಗಿ ಅದೆಷ್ಟೋ ಜನ ಹಳ್ಳಿಗರು ಸಂಜೆಯ ವೇಳೆಗೆ ಧಾವಿಸಿ ಬರುತ್ತಿದ್ದರು. ಬಂದವರೆಲ್ಲಾ ಗುರುರಾಜರಾಯರ ಮನೆಯ ಮುಂದೆ ಸತ್ಯಾಗ್ರಹಿಗಳ ಹಾಗೆ ಸಾಲಾಗಿ ಕುಳಿತುಬಿಡುತ್ತಿದ್ದರು. ದೂರದಿಂದ ಬಂದ ಹಳ್ಳಿಗರಿಗೆ ಮತ್ತೊಮ್ಮೆ ಸೊಸೈಟಿಯ ಬಾಗಿಲು ತೆರೆದು ದಿನಸಿ ಹಂಚಬೇಕು. ಇಲ್ಲದಿದ್ದರೆ ಮಾರನೆಯ ದಿನ ಬರುವಂತೆ ಸಮಾಧಾನ ಹೇಳಬೇಕು.

ಮೊದಲ ದಿನವೇ ಗುರುರಾಜರಾಯರಿಗೆ, 'ಸಾಕಪ್ಪಾ ಈ ಸೊಸೈಟಿಯ ಸಹವಾಸ. ಇದಕ್ಕೆ ಬಸಲಿಂಗಯ್ಯನಂತಹರೇ ತಕ್ಕವರು,' ಎನ್ನಿಸಿತು. ಆದರೆ ಕೆಲವು ದಿನಗಳ ಮಟ್ಟಿಗಾದರೂ ಹೊಸ ಗುಮಾಸ್ತೆಯೊಬ್ಬನ ನೇಮಕವಾಗುವ ವರೆಗೆ ಸೊಸೈಟಿಯ ಕೆಲಸವನ್ನು ನಿರ್ವಹಿಸುವುದು ಅನಿವಾರ್ಯವಾಗಿತ್ತು.

ಮನೆಗೆ ಬಂದಕೂಡಲೇ ಲೆಕ್ಕವನ್ನು ಮಾಡಲು ಕೂಡುತ್ತಿದ್ದರು. ದಿನದ ಆಖೈರು ಸಿಲ್ಕಿಗೆ ಲೆಕ್ಕವನ್ನು ತಾಳಿ ನೋಡಿ, ತಪ್ಪಿದರೆ ನಿದಾನವಾಗಿ ಮತ್ತೊಮ್ಮೆ ಪರಿಶೀಲಿಸಿ ಸರಿಪಡಿಸುತ್ತಿದ್ದರು. ಎಷ್ಟೇ ಕಷ್ಟವಾದರೂ, ಬೇಜಾರಾದರೂ ಅಂದಂದಿನದ ಲೆಕ್ಕವನ್ನು ಪೂರ್ತಿ ಮಾಡಿಡುವ ವರೆಗೆ ಅವರ ಮನಸ್ಸಿಗೆ ಸಮಾಧಾನವೇ ಇರುತ್ತಿರಲಿಲ್ಲ.

ಲೆಕ್ಕಪತ್ರಗಳ ಗೊಂದಲದಿಂದ ಪಾರಾದ ಮೇಲೆ ಮನಸ್ಸು ಶಾಂತಿಯನ್ನು ಬಯಸುತ್ತಿತ್ತು. ಗುರುರಾಜರಾಯರು ಸ್ವಲ್ಪ ಹೊತ್ತು ತಿರುಗಾಡಿಕೊಂಡು ಬರಲು ಹೋಗುತ್ತಿದ್ದರು. ತಿರುಗಾಡುವುದೂ ಬೇಸರವೆನಿಸಿದಾಗ

ಜೊತೆಗಾರರ ನೆನಪು ಬಂದು ನೇರವಾಗಿ 'ಗೆಳೆಯರ ಬಳಗ' (ಇಸ್ಪೇಟು ಕ್ಲಬ್) ಕೂಡುವಲ್ಲಿಗೆ ಕಾಲುಗಳು ತಾವಾಗಿಯೇ ಸಾಗುತ್ತಿದ್ದುವು.

ಗೆಳೆಯರ ಬಳಗದಲ್ಲಿ ರಾಯರ ಜೊತೆಗಾರರು—ಬಾಲ್ಯದಿಂದಲೂ, ಒಡನಾಡಿಗಳಾಗಿ ಬಂದಸ್ನೇಹಿತರುಗಳು ಈವೊದಲೇ ಬಂದುಸೇರಿರುತ್ತಿದ್ದರು. ರಾಯರ ಸವಾರಿಯೂ ನಿಧಾನವಾಗಿ ಚಿತ್ತೈಸುತ್ತಿತ್ತು.

ಧರಣಯ್ಯ, ಶಾನುಭೋಗ ವಾಮನರಾಯರು, ತಾರಾನಾಥ ಕ್ಲಿನಿಕ್ ಚಿನ್ನಪ್ಪ, ಆಂಜನಪ್ಪ, ಗೆಡ್ಡೆಸೂಗಣ್ಣ, ಗಡ್ಡೆ ಬೀರಣ್ಣ ಮತ್ತು ತೆಂಗಿನಕಾಯಿ ಅಪ್ಪಣ್ಣ—ಇವರುಗಳು ಬಳಗದ ಯಾವತ್ತಿನ ಸದಸ್ಯರು. ಗುರುರಾಜರಾಯರು ಆಗಾಗ್ಗೆ ಬಳಗದ ಅಥಿತಿಗಳಾಗಿರುತ್ತಿದ್ದರು.

ಗುರುರಾಜರಾಯರು ಬಳಗಕ್ಕೆ ಬಂದ ದಿನ ಎಲ್ಲರಿಗೂ ಹೊಸ ಹುರುಪು ಬರುತ್ತಿತ್ತು. ರಾಯರು ಬರುವುದಕ್ಕೆ ಮುಂಚೆ ಯಾರು ಯಾವುದೇ ಮಾತಾಡುತ್ತಿದ್ದರೂ, ಅವರು ಎದುರಿಗೆ ಬಂದಕೂಡಲೇ,

"ನಿನಗೆ ಸಾವಿರ ವರ್ಷ ಆಯುಸ್ಸು ಕಣಯ್ಯ! '—ನೆನೆದವರ ಮನದಲ್ಲೇ' ಅಂದ ಹಾಗೆ ನಿನ್ನ ಸುದ್ದಿ ಮಾತಾಡುವ ವೇಳೆಗೆ ನೀನೇ ಬಂದುಬಿಟ್ಟೆ" ಎಂಬ ಸ್ವಾಗತ ಅವರಿಗಾಗಿ ಕಾದಿರುತ್ತಿತ್ತು.

ಗುರುರಾಜರಾಯರು ಕೂಡ ದೇಶಾವರದ ನಗೆ ಬೀರುತ್ತ,

"ಎಲ್ಲರೂ ಇಲ್ಲೇ ಸೇರಿದ್ದೀರಿ. ಈ ದಿನ ಯಾವುದು ಪ್ರಾರಂಭ ಮಾಡಿದ್ದೀರಿ?"—ಎನ್ನುತ್ತಲೇ ಕಟ್ಟೆಯೇರಿ ಕೂಡುತ್ತಿದ್ದರು.

"ಇನ್ನಾವ ಆಟವಪ್ಪಾ? ಇದೆಯಲ್ಲಾ ಮಾಮೂಲು ಆಟ 'ಸೆಟ್' ಅದನ್ನೇ ಪ್ರಾರಂಭಿಸಿದ್ದೀವಿ. ಈ ಆಟ ಬೇಡ. ಈಗ ನೀನು ಬೇರೆ ಬಂದಿದ್ದೀಯಲ್ಲ. ಹೊಸದಾಗಿ ಕಲಸಿಕೆ ಆಗಲಿ."

"ಆಟಕ್ಕೆ ಮೊದಲು ಏನಾದರೂ ಶಾಂತಿ ಆಗಬೇಡವೇನಯ್ಯಾ?" ಯಾರಾದರೂ ಒಬ್ಬರು ಸಲಹೆ ಕೊಡುತ್ತಿದ್ದರು.

ಗುರುರಾಜರಾಯರು ಮರುನಿಮಿಷದಲ್ಲೇ ಜೇಬಿನಿಂದ ಎಂಟಾಣೆಯ ಬಿಲ್ಲೆ ತೆಗೆದು ಜಮಖಾನದ ಮೇಲೆ ಒಗೆಯುತ್ತಿದ್ದರು. ಸ್ವಲ್ಪ ಹೊತ್ತಿನಲ್ಲೇ ಜಮಖಾನದ ಮೇಲೆ ಡಾಣಿ, ಮಂಡಕ್ಕಿಯ ರಾಶಿ ಇರುತ್ತಿತ್ತು. ಎಲ್ಲರೂ

ಸೇರಿ ರಾಶಿಯನ್ನು ಕರಗಿಸುತ್ತಿದ್ದರು. ನಂತರ ಕಾಫಿ, ಅನಂತರ ಆಟದ ಪ್ರಾರಂಭ.

ಮೊದ ಮೊದಲು ಕೆಲ ದಿನಗಳು ದುಡ್ಡಿಲ್ಲದೆಯೇ ಆಟ ಸಾಗುತ್ತಿತ್ತು. ಆದರೆ ದುಡ್ಡಿಲ್ಲದ ಆಟ ಮನಸ್ಸಿಗೆ ಅಷ್ಟು ಹಿತವೆನಿಸಲಿಲ್ಲ. ಸರಿ, ಕಾಲಾಣೆಯಿಂದ ಪ್ರಾರಂಭವಾದ ಮೋಜು ಕಾಲು ರೂಪಾಯಿ, ಅರ್ಧ ರೂಪಾಯಿ ವರೆಗೆ ನಡೆಯತೊಡಗಿತ್ತು.

ಸೊಸೈಟಿಯಲ್ಲಿ ಮಾರಾಟದ ಕೆಲಸವನ್ನೂ ವಹಿಸಿಕೊಂಡಿದ್ದ ಗುರುರಾಜರಾಯರಿಗೆ ವಿಶ್ರಾಂತಿ ಬೇಕಾಗುತ್ತಿತ್ತು. ಅದರಲ್ಲೂ 'ಗೆಳೆಯರ ಬಳಗದ ವಿಶ್ರಾಂತಿ' ಅಗತ್ಯವೆಂದು ಅವರ ಮನಸ್ಸು ಹೇಳುತ್ತಿತ್ತು. 'ವಿಶ್ರಾಂತಿ'ಯನ್ನಪೇಕ್ಷಿಸುತ್ತಿದ್ದ ರಾಯರು ನಿತ್ಯವೂ ಬಳಗದ ಕಡೆಗೆ ಹೋಗತೊಡಗಿದ್ದರು.

ಮೊದಲು ಬಳಗ ನಡೆಯುತ್ತಿದ್ದುದು ಧರಣಯ್ಯನ ಮನೆಯ ಜಗಲಿಯ ಕಟ್ಟೆಯ ಮೇಲೆ. ಆದರೆ ಅಲ್ಲಿ ಬಹಳ ದಿನ ನಡೆಯಲಾಗಲಿಲ್ಲ. ಈಗ ಕೆಲವು ದಿನಗಳಿಂದ ದುಡ್ಡಿಟ್ಟು ಆಟವಾಡುತ್ತಿದ್ದುದರಿಂದ, ಆಟ ಹುರುಪಿಗೇರಿ ರಾತ್ರೆ ಹನ್ನೆರಡು ಒಂದು ಗಂಟೆ ಬಡಿದರೂ ಆಟವೇ ಮುಗಿಯುತ್ತಿರಲಿಲ್ಲ. ಇದರಿಂದ ಧರಣಯ್ಯನ ಮನೆಯವರಿಗೆ ವಿಪರೀತ ಸಿಟ್ಟು. ಏಕೆಂದರೆ ಆಟಗಾರರಿಂದ ಉಂಟಾಗುತ್ತಿದ್ದ ಹೊಲಸು ನಿವಾರಿಸುವುದೇ ಒಂದು ದೊಡ್ಡ ಪ್ರಮಾದವೆನಿಸಿತ್ತು.

ಧರಣಯ್ಯನಿಗೆ ಮೂವರು ಹೆಂಡಿರು. ಗಂಡು ಮಕ್ಕಳಿಲ್ಲದ ಕೊರತೆ ನೀಗಿಸಿಕೊಳ್ಳಲು ಧರಣಯ್ಯ ಒಂದಲ್ಲ ಮೂರು ಮದುವೆಯಾದರೂ, ಆದುದು ಮಾತ್ರ ಹೆಣ್ಣು ಸಂತಾನವೇ; ಕುಲದ ಹೆಸರು ಹೇಳುವುದಕ್ಕೆ ಒಂದು ಗಂಡು ಕೂಡ ಆಗಲಿಲ್ಲ. ಮೂವರಿಗೂ ಮೂರು ಮೂರು ಹೆಣ್ಣು ಮಕ್ಕಳು. ಧರಣಯ್ಯನ ಗೆಳೆಯರು ಅವನನ್ನು,

"ಇನ್ನೊಂದು ಮದುವೆ ಮಾಡಿಕೊಂಡು ಬಿಡು ಧರಣಯ್ಯ. ಹೊಸದಾಗಿ ಬರುವ ಹೆಂಡತಿಯಿಂದಲೂ ಮೂರು 'ಪಿಳ್ಳೆ'ಗಳಾಗಿ ಬಿಟ್ಟರೆ ಒಂದು ಡಜನ್‌ಗೆ ಲೆಕ್ಕ ಸರಿ ಹೋಗುತ್ತದೆ" ಎಂದು ಲೇವಡಿಯೆಬ್ಬಿಸುತ್ತಿದ್ದರು.

ಇಸ್ಪೇಟು ಗೆಳೆಯರು ರಾತ್ರಿಯೆಲ್ಲಾ ಸೇದಿ ಎಸೆದ ಬೀಡಿ ಸಿಗರೇಟುಗಳ ತುಂಡುಗಳು, ಸುಟ್ಟ ಬೆಂಕಿಯ ಕಡ್ಡಿಗಳು ಕುಪ್ಪೆ ಕುಪ್ಪೆಯಾಗಿ ಜಗ

ಲಿಯ ಮೇಲೆ ಬಿದ್ದಿರುತ್ತಿದ್ದುವು. ಅಷ್ಟೇ ಅಲ್ಲ, ಜಗಲಿಯ ಕೆಳಗೆ ಉಗಿದಿರುವ ಅಡಕೆ ಎಲೆಯ ಚರಟ–ತಂಬುಲ ಕೂಡ ಇರುತ್ತಿದ್ದವು.

ಬೀಡಿ ಬೆಂಕಿಕಡ್ಡಿಗಳ ಕುಪ್ಪೆಯನ್ನು ಗುಡಿಸಿ ತುಂಬಲವನ್ನು ಪರಕೆಯಿಂದ ಬಾಚಿ ಹಾಕಿ ನೀರಿನಿಂದ ಶುದ್ಧ ಮಾಡುವ ಕೆಲಸ ಗಂಟುಬಿದ್ದಾಗಿನಿಂದ ಧರಣಯ್ಯನ ಮೂವರು ಹೆಂಡತಿಯರೂ ಸಿಡಿಮಿಡಿಯಾಗತೊಡಗಿದ್ದರು. ಪ್ರತಿನಿತ್ಯ ಬೆಳಗೆ ಆಟಗಾರರ ಕುಲಗೋತ್ರಗಳೆಲ್ಲಾ ಧರಣಯ್ಯನ ಪತ್ನಿಯರ ಬಾಯಿಂದ ಬರುತ್ತಿದ್ದು, ಸಹಸ್ರನಾಮಗಳಿಂದ ಪವಿತ್ರವಾಗುತ್ತಿದ್ದುವು.

ಕೊನೆಗೆ ರೋಸಿದ ಮಡದಿಯರು, ರಾತ್ರಿಯ ವೇಳೆ ಆಟ ಮುಗಿದ ಕೂಡಲೇ ಒಳಗೆ ಬರುತ್ತಿದ್ದ ಗಂಡನಿಗೆ ಬಾಗಿಲು ತೆಗೆಯುವುದನ್ನೇ ಬಿಟ್ಟುಬಿಟ್ಟರು. ಧರಣಯ್ಯ ಸಿಟ್ಟಿನಿಂದ ಹೆಂಡತಿಯರ ಮೇಲೆ ಹಾರಾಡಿದ. ಆದರೆ ಏನೂ ಪ್ರಯೋಜನವಾಗಲಿಲ್ಲ. ಅದಕ್ಕೆ ಬದಲು ಧರಣಯ್ಯನಿಗೆ ರಾತ್ರಿಯ ಚಳಿಯಲ್ಲಿ ನಡುಗುತ್ತ ಜಮಖಾನದ ಒಂದು ತುದಿಯಲ್ಲಿ ಮಲಗಿ, ಇನ್ನೊಂದು ತುದಿಯನ್ನು ಹೊದಿಕೆಯಂತೆ ಮೈಮೇಲೆ ಎಳೆದುಕೊಂಡು ಬಿದ್ದುಕೊಳ್ಳುವ ಅವಸ್ಥೆಯೊದಗಿತು. ನಾಲ್ಕೈದು ರಾತ್ರಿ ಈ ರೀತಿಯಾಗಿಯೇ ಕಳೆದರೂ, ಧರಣಯ್ಯನ ರಾಣಿಯರಿಗೆ ದಯೆಬರಲಿಲ್ಲ. ಒಂದು ದಿನ ಧರಣಯ್ಯ "ಇನ್ನು ಮೇಲೆ ಇಲ್ಲಿ ಬೈಠಕ್ ಸೇರುವುದು ಸಾಧ್ಯವಿಲ್ಲ." ಎಂದು ಹೇಳಿಬಿಟ್ಟ ತನ್ನ ಗೆಳೆಯರಿಗೆ.

ಎಲ್ಲರೂ ಎಲ್ಲಿ ಏರ್ಪಡಿಸಬೇಕೆಂಬ ಬಗ್ಗೆ ಚರ್ಚಿಸಿದರು. ಆದರೆ ಸಮಸ್ಯೆ ಬಗೆಹರಿಯಲಿಲ್ಲ. ಕೊನೆಗೆ ಆಂಜನಪ್ಪನೇ ನಿರ್ಧರಿಸಿ ಹೇಳಿದ,

"ಎಲ್ಲೋ ಯಾಕಯ್ಯಾ? ನಮ್ಮ ಮನೆ ಮಹಡಿಯ ಮೇಲೆ ಆಗಲಿ. ಅಲ್ಲಿ ಯಾವ ರೀತಿಯ ಬಾಧೆಯೂ ಇಲ್ಲ. ನಿಮ್ಮ ತುಂಡು ಬೀಡಿ ಸಿಗರೇಟುಗಳನ್ನು ಒಪ್ಪಮಾಡಲು ಆಷ್–ಟ್ರೇ, ತಂಬುಲ ಉಗಿಯಲಿಕ್ಕೆ ಪೀಕದಾನಿ–ಎಲ್ಲವನ್ನೂ ಅನುಕೂಲ ಮಾಡಿದರೆ ಆಯಿತಲ್ಲ. ಬೇಕಾದರೆ ಹಗಲೆಲ್ಲಾ ಆಡಿದರೂ ಏನೂ ಅಡ್ಡಿಯಿಲ್ಲ. ಆಗಬಹುದು ತಾನೆ?"

ಅಂಜನಪ್ಪನ ಸಲಹೆ ಎಲ್ಲರಿಗೂ ಒಪ್ಪಿತು. ಮಾರನೆಯ ದಿನದಿಂದ 'ಬಳಗ' ಅಲ್ಲೇ ಸೇರಬೇಕೆಂದು ತೀರ್ಮಾನವಾಯಿತು.

"ಈ ದಿನ ಪೂರ್ತಿ ಬಳಗಕ್ಕೆರಜ," ಎಂದು ಎಲ್ಲರೂ ಹೊರಬಿದ್ದರು.

ಮಾರಣೆಯ ದಿನ ರಾಯರು ಮುಂಚಿತವಾಗಿಯೇ ಅಂಜನಪ್ಪನು ಮನೆಯ ಮಹಡಿಗೆ ಬಂದರು. ಅವರು ಬರುವ ವೇಳೆಗೆ ಗೆಳೆಯರೆಲ್ಲಾ ಬಂದು ಸೇರಿದ್ದರು. ಎಲ್ಲರೂ ಗುರುರಾಜರಾಯರ ಬರವನ್ನೇ ನಿರೀಕ್ಷಿಸುತ್ತಿದ್ದರು.

"ನನಗಿಂತಲೂ ಮೊದಲೇ ಬಂದುಬಿಟ್ಟಿದ್ದೀರಿ? ಸುಮ್ಮನೆ ಕುಳಿತಿದ್ದಿರಲ್ಲ ಪ್ರಾರಂಭವಾಗಲಿ" ಜಮಖಾನದ ಮೇಲೆ ಬಂದು ಕುಳಿತರು ರಾಯರು.

ರಾಯರು ಜೇಬಿನಿಂದ ಎರಡು ರೂಪಾಯಿಯ ನೋಟು ತೆಗೆದು,

"ತಗೋ ಆಂಜನಪ್ಪ. ಏನೇನು ತರಿಸುತ್ತಿಯೋ ತರಿಸಿಬಿಡು" ಎಂದು ಆಂಜನಪ್ಪನಿಗೆ ನೋಟನ್ನು ಕೊಟ್ಟರು.

ಸ್ವಲ್ಪ ಹೊತ್ತಿನಲ್ಲೇ ಹೋಟೆಲ್ ಮಾಣಿ ತಿಂಡಿ, ಕಾಫಿ, ಕ್ರಿಪ್ ತೆಗೆದುಕೊಂಡು ಮೇಲೆ ಬಂದ. ಉಪಹಾರ ಮುಗಿದ ಮೇಲೆ ಎಲ್ಲರೂ ಸಿಗರೇಟು ಹಚ್ಚಿಕೊಳ್ಳುತ್ತಲೇ ಆಟಕ್ಕೆ ಕುಳಿತರು.

ಗುರುರಾಜರಾಯರ ಕಲಸಿಕೆಯಿಂದ ಆಟ ಪ್ರಾರಂಭವಾಯಿತು. ಈ ದಿನ ರಾಯರ ಕೈ ಮುಂದಾಗಿತ್ತು. ಎಲ್ಲರೂ ಆಟ ಮುಗಿಸಿಕೊಂಡು ನಿಷ್ಕ್ರಮಿಸುವ ವೇಳೆಗೆ ರಾಯರ ಜೇಬು ಭರ್ತಿಯಾಗಿತ್ತು. ಅಪ್ಪಣ್ಣ, ಸೂಗಣ್ಣರಿಗೂ ಸ್ವಲ್ಪ ಸ್ವಲ್ಪ ಗಿಟ್ಟಿತ್ತು. ಸೂಗಣ್ಣ ರಾಯರ ಕಡೆ ನೋಡಿ,

"ನಾಳೆ ಬರೋದು ಮರೆಯಬೇಡಿ ರಾಯರೇ" ಎಂದು ಎಚ್ಚರಿಸಿದ.

ರಾಯರು ಜೇಬು ಮುಟ್ಟಿ ನೋಡಿಕೊಳ್ಳುತ್ತಾ ಸೂಗಣ್ಣನ ಮಾತಿಗೆ ಅನುಮತಿಯ ನಗೆನಕ್ಕು ಅಲ್ಲಿಂದ ಹೊರಬಿದ್ದರು.

ರಾಯರು ಮನೆಗೆ ಬರುವ ವೇಳೆಗೆ ಹತ್ತು ಹೊಡೆದಿತ್ತು. ಪ್ರಮಿಳಾ, ಪ್ರಕಾಶರಾಗಲೇ ನಿದ್ರಿಸುತ್ತಿದ್ದರು. ಅನಸೂಯಮ್ಮನವರು ಮಾತ್ರ ಪತಿಯ ಹಾದಿಯನ್ನೇ ಇದಿರುನೋಡುತ್ತ ಕುಳಿತಿದ್ದರು.

ರಾಯರು ಬಂದರು. ಅನಸೂಯಮ್ಮ ಎಂದಿನ ಪ್ರಶ್ನೆಯನ್ನೇ ಇಂದು ಕೂಡ ಕೇಳಿದರು—

"ಈ ದಿನವೇಕೆ ಇಷ್ಟು ತಡವಾಯಿತು? ಇವತ್ತೂ ಕ್ಲಬ್ಬಿಗೆ ಹೋಗಿದ್ದೀರಾ?"

ರಾಯರಿಗೆ ಆಟದಲ್ಲಿ ಗೆಲುವಾದ್ದರಿಂದ ಅವರ ಸಂತೋಷಕ್ಕೆ ಮಿತಿಯೇ ಇಲ್ಲ. ಉಬ್ಬಿದ ದನಿಯಲ್ಲಿ ಹೇಳಿದರು—

"ಹೌದು, ಇವತ್ತು ಸ್ವಲ್ಪ ತಡವಾಯಿತು. ಆದರೂ ಇವತ್ತು ಎಂತಹ ಒಳ್ಳೆಯ ದಿನ!"

ಅನಸೂಯಮ್ಮ ಆಶ್ಚರ್ಯದಿಂದ ಕೇಳಿದರು—

"ಏನು ಸಮಾಚಾರ?"

"ಸಮಾಚಾರವೇನು ಬಂತು, ಇಲ್ಲಿ ನೋಡು," ಎಂದು ರಾಯರು ಜೇಬಿನಲ್ಲಿ ತುಂಬಿಕೊಂಡಿದ್ದ ನೋಟು, ಚಿಲ್ಲರೆಗಳನ್ನು ಚಾಪೆಯ ಮೇಲೆ ಸುರಿದುಕೊಂಡು ಎಣಿಸುತ್ತ ಹೇಳಿದರು.

"ಇವತ್ತು ನೋಡು ಒಳ್ಳೆಯ ಕೇಪು ಹೊಡೆದುಬಿಟ್ಟೆ!"

ಅನಸೂಯಮ್ಮನವರಿಗೆ ರಾಯರು ದುಡ್ಡಿಟ್ಟು ಜೂಜಾಡುವ ವಿಷಯ ಗೊತ್ತಿರಲಿಲ್ಲ. ಆತಂಕದಿಂದ ಕೇಳಿದರು—

"ದುಡ್ಡಿಟ್ಟು ಜೂಜಾಡಲು ಪ್ರಾರಂಭ ಮಾಡಿದಿರೇನು?"

"ಈಗ ಎರಡು ಮೂರು ದಿನದಿಂದ ಅಷ್ಟೆ."

"ನಿಮಗೆ ಯಾಕೆ ಈ ಬುದ್ಧಿ ಬಂತು ಅನ್ನುತ್ತೀನಿ? ಇಸ್ಪೇಟು ಆಡುವುದೇ ತಪ್ಪು, ಅದರಲ್ಲೂ ದುಟ್ಡಿಟ್ಟು ಆಡುವುದೆಂದರೆ. . . ."

"ನನಗೆ ಅಷ್ಟು ತಿಳುವಳಿಕೆ ಇಲ್ಲವೇನೇ ಅನೂ? ನಾನು ನಿತ್ಯ ಆಡುವುದಿಲ್ಲ. ಒಂದೊಂದು ದಿನ ಅಷ್ಟೆ."

"ಸುಮ್ಮನೆ ಹಾಗನ್ನುತ್ತೀರಿ. ನಿತ್ಯವೂ ಆಡುವುದು ಮಾತ್ರ ತಪ್ಪಿಲ್ಲ. ಈಚೆಗೆ ಸೊಸೈಟಿಯ ಕೆಲಸ ಹಚ್ಚಿ ಕೊಂಡಾಗಿನಿಂದ ನಾಲ್ಕು ಕಾಸು ಕೈಯಲ್ಲಿ ಆಡುತ್ತಾ ಇದೆ. ಅದನ್ನು ದುರುಪಯೋಗಪಡಿಸಲಿಕ್ಕೆ ಹೊರಟಿದ್ದೀರಿ. ಸರಕಾರೀ ದುಡ್ಡು ಇಟ್ಟುಕೊಂಡು ಸರಸ ಆಡೋದು ಚೆನ್ನಲ್ಲ. ನನಗೆ ನೀವು ದುಡ್ಡಿಟ್ಟು ಜೂಜಾಡುವುದು ಗೊತ್ತಿರಲಿಲ್ಲ."

"ಹೋಗಲಿಬಿಡು. ನಿನಗೇಕಿಷ್ಟು ಭಯ? ನಾನು ಮೇಲೆ ಕ್ಲಬ್ಬಿಗೆ ಹೋದರೆ ಕೇಳು."

"ಇಸ್ಪೇಟು ಮನೆ ಹಾಳು ಮಾಡೋ ಆಟ. ಯಾವಾಗಲೋ ಒಂದೊಂದು ಸಲ ಬೇಜಾರಾದಾಗ ಆಡಿದರೆ ಆಡಿ. ಆದರೆ ಹೀಗೆ ಅತಿ ಹುಚ್ಚಿ

ಕೊಂಡು ದುಡ್ಡಿಟ್ಟು ಆಡುವುದು ಖಂಡಿತ ಒಳ್ಳೆಯದಲ್ಲ. ಇನ್ನು ಮೇಲೆ ನೀವು ಕ್ಲಬ್ಬಿಗೆ ಹೋಗಬೇಡಿ."

ಗುರುರಾಜರಾಯರು ಹೆಂಡತಿಯ ಮಾತಿಗೆ ಸೋಲೊಪ್ಪಿಕೊಳ್ಳಬೇಕಾಗಿ ಬಂತು. ಹೇಳಿದರು—"ಇನ್ನು ಮೇಲೆ ಹೋಗುವುದಿಲ್ಲ."

"ನಿಜವಾಗಿಯೂ ?"

"ದೇವರಾಣೆಗೂ........"

ಅನಸೂಯಮ್ಮನವರ ಮನಸ್ಸಿಗೆ ಸಮಾಧಾನವಾಯಿತು.

ಹಾಸಿಗೆಯ ಮೇಲೆ ಉರುಳಿಕೊಂಡು ರಾತ್ರಿಯೆಲ್ಲಾ ಆಲೋಚನೆ ಮಾಡತೊಡಗಿದರು ರಾಯರು. ಹೆಂಡತಿಯಾಡಿದ ಒಂದೊಂದು ಮಾತನ್ನೂ ತೂಕಮಾಡಿ ನೋಡಿದರು. ಆ ಮಾತುಗಳಲ್ಲಿ ಸತ್ಯವಿತ್ತು. ಮುಂದಾಲೋಚನೆಯ ಎಚ್ಚರಿಕೆಯಿತ್ತು. ಇನ್ನು ಮುಂದೆ ಕ್ಲಬ್ಬಿನ ಕಡೆಗೆ ತಿರುಗಿಯೂ ನೋಡಬಾರದೆಂದು ದೃಢನಿಶ್ಚಯ ಮಾಡಿದರು.

ಆದರೆ ಮರುದಿನ ಸಂಜೆ ಸಮಿಾಪಿಸುತ್ತಲೂ ಯಾವುದೋ ಪ್ರಚಂಡ ಶಕ್ತಿ ಅವರನ್ನು ಎಳೆಯತೊಡಗಿತು. ಹಿಂದಿನ ದಿನ ಹೆಂಡತಿಯೆದುರು ಮಾಡಿದ ಆಣೆ, ರಾತ್ರಿಯೆಲ್ಲಾ ಆಲೋಚಿಸಿ ಮಾಡಿದ್ದ ದೃಢ ನಿಶ್ಚಯಗಳು ಆ ಶಕ್ತಿಯೆದುರು ದುರ್ಬಲವಾಗಿ, ಶಿಥಿಲವಾಗಿ ಕೆಳಗೆ ಕೆಡೆದುವು. ರಾಯರು ನೇರವಾಗಿ ಆಂಜನಪ್ಪನ ಮನೆಯ ಹಾದಿ ತುಳಿಯತೊಡಗಿದರು.

ನಿತ್ಯವೂ ರಾತ್ರಿಯ ವೇಳೆ ಕ್ಲಬ್ಬಿಗೆ ಹೋಗುವುದಿಲ್ಲವೆಂದು ಪ್ರತಿಜ್ಞೆ ಮಾಡುತ್ತಿದ್ದರು. ಮರುದಿನ-ಸಂಜೆ ಸಮಿಾಪಿಸಿದಂತೆಲ್ಲ ಪ್ರತಿಜ್ಞೆ ಮರೆತು ಹೋಗುತ್ತಿತ್ತು. ಆದರೆ ಒಂಭತ್ತು ಬಡಿಯುವುದರೊಳಗೆ ಆಟ ಎಷ್ಟೇ ಹುರುಪುಗೊಂಡಿದ್ದರೂ ಎದ್ದು ಮನೆಗೆ ಬಂದುಬಿಡುತ್ತಿದ್ದರು. ತಾನು ತಡ ಮಾಡಿ ಮನೆಗೆ ಹೋದರೆ ಹೆಂಡತಿ ವ್ಯಥೆಪಡುತ್ತಾಳೆ, ಎಂಬ ಎಚ್ಚರಿಕೆಯಿಂದ ಹಾಗೆ ಮಾಡುತ್ತಿದ್ದರು. ಆದರೆ ಆ ಎಚ್ಚರಿಕೆಯಲ್ಲಿ ಹುರುಳಿತ್ತೇ ?

೪

ಒಂದು ದಿನ ಸಂಜೆ ಮಾರಾಟ ಮುಗಿಸಿಕೊಂಡು ಸೊಸೈಟಿಯಿಂದ ಮನೆಗೆ ಬಂದಾಗ ರಾಯರ ದೃಷ್ಟಿಗೆ ಮನೆಯ ಮುಂಭಾಗದಲ್ಲಿ ಒಂದು

ಟ್ರಂಕು, ಒಂದು ಪುಟ್ಟ ಹಾಸಿಗೆ ಇದ್ದುದು ಕಂಡು ಬಂತು. ಅಲ್ಲಿಯೇ ಕಿಟಿಕಿಗೆ ಒರಗಿ ಬೀದಿಯ ಕಡೆ ದೃಷ್ಟಿ ಹರಿಸಿ ಟ್ರಂಕು ಹಾಸಿಗೆಗಳ ಯಜಮಾನ ನಿಂತಿದ್ದ. ರಾಯರು ಬಂದುದು ಕಂಡು ಸರಿಯಾಗಿ ನಿಂತು,

"ನಮಸ್ಕಾರ, ತಾವು ಗುರುರಾಜರಾಯರು ತಾನೆ?" ಎಂದು ಪ್ರಶ್ನಿಸಿದ ಆಗಂತುಕ ವಿನಯದಿಂದ.

"ಹೌದು. ಏನು ಬೇಕಾಗಿತ್ತು? ಒಳಗೆ ಬಾಪ್ಪ" ಎಂದು ರಾಯರು ಒಳಗೆ ನಡೆದರು. ಅವರನ್ನೇ ಅನುಸರಿಸಿ ಆಗಂತುಕನೂ ಒಳಗೆ ಬಂದ.

"ಸಾಮಾನುಗಳನ್ನೂ ಒಳಗೆ ತಂದಿಡಪ್ಪ. ಹೊರಗೆ ಯಾರೂ ಇಲ್ಲ" ಎಂದು ರಾಯರು ಒಳಗೆ ಹೋಗಿ ಕೈಕಾಲು ತೊಳೆದುಕೊಂಡು ಬಂದರು. ಆ ವೇಳೆಗೆ ಆಗುಂತಕ ಸಾಮಾನುಗಳನ್ನು ಒಳಗೆ ತಂದಿಟ್ಟು ಪಡಸಾಲೆಯಲ್ಲಿ ಹಾಸಿದ್ದ ಚಾಪೆಯ ಮೇಲೆ ಕುಳಿತಿದ್ದ.

ಅಷ್ಟರಲ್ಲಿ ಅನಸೂಯಮ್ಮ ಒಳಗಿನಿಂದ ಎರಡು ಲೋಟಗಳಲ್ಲಿ ಕಾಫಿಯನ್ನು ತಂದರು. ಬಂದಿದ್ದವನು ಸಂಕೋಚದಿಂದ,

"ಇದೇ ಈಗ ಹೋಟೆಲಿನಲ್ಲಿ ಕುಡಿದು ಬಂದೆ ತಾಯಿ. ನನಗೆ ಬೇಡಿ" ಎಂದು ಹೇಳಿದ.

ರಾಯರು ತಾವು ಒಂದು ಲೋಟವನ್ನು ತೆಗೆದುಕೊಳ್ಳುತ್ತ,

"ಇರಲಿ ತಗೋಪ್ಪ" ಎಂದು ಕಾಫಿಯನ್ನು ಸವಿಯತೊಡಗಿದರು. ಆಗುಂತಕ ಮರುಮಾತಾಡದೆ ಲೋಟವನ್ನು ತೆಗೆದುಕೊಂಡು ಕಾಫಿಯನ್ನು ಕುಡಿಯತೊಡಗಿದರು.

"ನಿನ್ನ ಹೆಸರೇನು? ಸ್ಥಳ ಯಾವುದು?"

"ನನ್ನ ಸ್ಥಳ ಇಲ್ಲಿಂದ ಬಹಳ ದೂರಸಾರ್, ನೆಲಮಂಗಲ. ನನ್ನ ಹೆಸರು ಆನಂದ."

"ಇಲ್ಲಿ ಯಾರಾದರೂ ಬಂಧು ಬಳಗ ಇದ್ದಾರೇನೋ......" ಒಳ ಬಾಗಿಲಿನಲ್ಲಿ ಕುಳಿತಿದ್ದ ಅನಸೂಯಮ್ಮ ಕುತೂಹಲದಿಂದ ಕೇಳಿದರು. ಆನಂದ ಒಳಬಾಗಿಲ ಕಡೆ ನೋಡಿದ. ತಾಯಿಯ ಮಗ್ಗುಲಲ್ಲಿ ಕುಳಿತು ಆನಂದನ ಕಡೆಗೇ ದೃಷ್ಟಿಸುತ್ತಿದ್ದ ಪ್ರಮೀಲ ಸ್ವಲ್ಪ ಹಿಂದೆ ಸರಿದು ಕುಳಿತಳು. ಆನಂದ ಆ ಕಡೆಯಿಂದ ದೃಷ್ಟಿ ಹೊರಳಿಸಿ ಹೇಳಿದ.

"ಇಲ್ಲಿ ತಾಯಿ; ಇಲ್ಲಿ ಬಂಧುಬಳಗಗಳಾರೂ ಇಲ್ಲ."

"ಯಾವುದಾದರೂ ಕೆಲಸದ ಮೇಲೆ ಬಂದಿದ್ದೀಯಾ?" ರಾಯರು ಪ್ರಶ್ನಿಸಿದರು.

"ಕೆಲಸವೇನೂ ಇಲ್ಲ ಸಾರ್."

"ಮತ್ತೆ?"

"ಕೆಲಸಕ್ಕೋಸ್ಕರ ಬಂದಿದ್ದೇನೆ ಸಾರ್. ಇಲ್ಲಿನ ಮಲ್ಟಿ ಪರ್ಪಸ್ ಕೋಆಪರೇಟಿವ್ ಸೊಸೈಟಿಯಲ್ಲಿ ಕ್ಲಾರ್ಕ್ ಕೆಲಸ ಖಾಲಿಯಿದೆಯೆಂದು ತಿಳಿಯಿತು........"

"ಓಹೊ, ಹಾಗೋ? ಏನು ಓದಿದ್ದೀ?"

S.S.L.C. ಆಗಿದೆ ಸಾರ್."

"ಇದೇ ಮೊದಲೋ ಅಥವಾ ಇನ್ನೆಲ್ಲಾದರೂ ಕೆಲಸಮಾಡಿದ್ದೀಯೊ?"

"ಕ್ಲಾರ್ಕ್ ಕೆಲಸಮಾಡಿಲ್ಲ. ಇದಕ್ಕೆ ಮೊದಲು ಒಂದೆರಡು ಕಡೆ ಮಿಡಲ್‌ಸ್ಕೂಲುಗಳಲ್ಲಿ ಟೀಚರ್ ಆಗಿದ್ದೆ ಅಷ್ಟೆ. ಈಗ ಅಲ್ಲಿ ಇಲ್ಲಿ ಕೆಲಸ ಹುಡುಕುತ್ತಾ ಇಲ್ಲಿಗೆ ಬಂದಿದ್ದೇನೆ."

"ಯಾಕಪ್ಪಾ, ಈಗೇನು ಎಲ್ಲಾ ಕಡೆಯಲ್ಲೂ ಕೆಲಸ ಸಿಕ್ಕುತ್ತಂತೇ. ನಿನಗೇ ಸಿಕ್ಕಲಿಲ್ಲವೆ?"

"ಕೆಲಸವೇನೋ ಸಿಕ್ಕಬಹುದು. ಆದರೆ ಕೊಡುವವರೊಬ್ಬರು ಇರಬೇಕಲ್ಲಾ. ಅದರಲ್ಲೂ ಜನಿವಾರದ ಟ್ರೇಡ್ ಮಾರ್ಕ್ ಇರುವಾಗ ನಮ್ಮಂತಹವರಿಗೆ ಎಲ್ಲಿ ಸಿಕ್ಕಬೇಕು ಸಾರ್? ಒಂದು ವೇಳೆ ಕೆಲಸಸಿಕ್ಕಬಹುದಾದರೂ ದೊಡ್ಡ ದೊಡ್ಡವರ ಶಿಫಾರಸಿರಬೇಕು, ಇಲ್ಲದಿದ್ದರೆ ಕೈತುಂಬಾ ಲಂಚಕೊಡಲು ಸಿದ್ಧರಿರಬೇಕು."

"ಅದೂ ನಿಜವೇ ಅನ್ನು. ಕೆಲಸಗಳಿದ್ದರೂ ಕೊಡುವುದಕ್ಕೇ ಗೋಳು ಈ ಸರಕಾರದವರಿಗೆ. ಜಾತೀಯತೆ ಕೂಡದು ಅನ್ನುವವರೂ ಅವರೇ, ಜಾತಿವಿಂಗಡನೆ ಮಾಡೋದು ಅವರೇ. ಜಾತಿ....ಜಾತಿ! ಜಾತಿಯ ಮೇಲೆ ಬಿದ್ದು ಬಡಕೋತಾರೆ. ಜಾತಿಯ ಮುಂದೆ ವಿದ್ಯೆ, ಬುದ್ಧಿ ಯಾವುದಕ್ಕೂ ಬೆಲೆಯಿದ್ದ ಹಾಗೇ ಇಲ್ಲ." ರಾಯರು ಆನಂದನ ಮಾತಿಗೆ ಸಹಾನುಭೂತಿ

ಯನ್ನು ವ್ಯಕ್ತಪಡಿಸುತ್ತಾ ಹೇಳಿದರು. ಸ್ವಲ್ಪ ಹೊತ್ತು ತಡೆದು ಆನಂದ ನನ್ನೇ ದೃಷ್ಟಿಸುತ್ತಿದ್ದು ಕೇಳಿದರು.

"ಇಲ್ಲಿ ಕೆಲಸವಿದೆಯೆಂದು ನಿನಗೆ ಯಾರು ಹೇಳಿದರು?"

ರಾಯರ ಪ್ರಶ್ನೆಯಲ್ಲಿ 'ನ'ಕಾರದ ಸೂಚನೆ ಇದ್ದಂತೆ ಭಾಸವಾಗಿ ಆನಂದ ತಬ್ಬಿಬ್ಬಾದ.

"ಕೆಲಸಕ್ಕಾಗಿ ಎಲ್ಲಕಡೆಯೂ ಸುತ್ತಾಡಿದೆ; ಎಲ್ಲೂ ಸಿಕ್ಕಲಿಲ್ಲ. ಮೊಳಕಾಲ್ಮುರುವಿಗೆ ಬಂದೆ. ತಾಲ್ಲೂಕಾಫಿಸಿನಲ್ಲಿ ವಿಚಾರಿಸಿದಾಗ, ಒಬ್ಬ ಕ್ಲಾರ್ಕ್ ಇಲ್ಲಿ ಕೆಲಸ ಖಾಲಿಯಿದೆ ಅಂತ ಹೇಳಿದರು. ತಮ್ಮ ಹೆಸರು ಕೂಡ ಹೇಳಿದರು. ಇಲ್ಲಿಗೆ ತಮ್ಮನ್ನು ಕಾಣಲಿಕ್ಕಾಗಿಯೇ ಬಂದಿದೆ. ಕೆಲಸ ಖಾಲಿಯಿದ್ದರೆ ದಯೆಯಿಟ್ಟು ಕೊಡಿಸಿ ಕೊಡಬೇಕು ಸಾರ್."

"ಕೆಲಸವೇನೋ ಇದೆ. ಆದರೆ ದಕ್ಷತೆಯಿಂದ ಮಾಡಿಕೊಂಡು ಹೋಗಬೇಕು. ದುಡ್ಡುಕಾಸಿನ ಜವಾಬ್ದಾರಿ ಜಾಸ್ತಿ. ಒಂದೊಂದು ಸಮಯ ತಲೆ ಹೋಗುವ ಸಂದರ್ಭ ಬಂದು ಬಿಡುತ್ತೆ. ಅದರಲ್ಲೋ ಈ ಊರು ಶುದ್ಧ ಪುಂಡುಕೋಂಪೆ. ಯಾರನ್ನೂ ನಂಬಬಾರದು. ಯಾರ ಬಳಿಯೂ ಸಲುಗೆ ಹೆಚ್ಚಿಸಿಕೊಳ್ಳಬಾರದು. ನೋಡೋಣ. ರಾತ್ರಿ ಊಟ ಆದ ಮೇಲೆ ಮಾತಾಡೋಣ," ಎಂದು ರಾಯರು ಹೊರಗೆ ತಿರುಗಾಡಿಕೊಂಡು ಬರಲು ಹೊರಟರು.

ರಾತ್ರಿ ಊಟಕ್ಕೆ ಕುಳಿತಿದ್ದಾಗ ರಾಯರು ಆನಂದನೊಡನೆ, "ತಾಯಿ ತಂದೆ ಊರಲ್ಲೇ ಇದ್ದಾರೋ?" ಎಂದು ಪ್ರಶ್ನಿಸಿದರು.

"ತಾಯಿ ತಂದೆ ಯಾರೂ ಇಲ್ಲ ಸಾರ್; ಚಿಕ್ಕಂದಿನಲ್ಲೇ ತೀರಿಕೊಂಡರು. ಕೆಲವು ದಿನ ನನ್ನ ಚಿಕ್ಕಪ್ಪ ತಮ್ಮ ಮನೆಯಲ್ಲೇ ಇಟ್ಟುಕೊಂಡು ನನ್ನನ್ನು ಪೋಷಿದರು. ಆ ಮೇಲೆ ಯಾಕೋ ಏನೋ ಮನೆಯಿಂದ ಓಡಿಸಿಬಿಟ್ಟರು."

"ವಿದ್ಯಾಭ್ಯಾಸಕ್ಕೆ ಹೇಗೆ ಮಾಡಿದೆ?"

"ನೆಲಮಂಗಲ ಬಿಡುವಾಗ ನಾನು ಲೋವರ್ ಸೆಕೆಂಡರಿ ಪರೀಕ್ಷೆಗೆ ಕಟ್ಟಿದೆ. ಆ ವರ್ಷ ಹೇಗೋ ಕಷ್ಟಪಟ್ಟು ಪಾಸುಮಾಡಿದೆ. ಬೆಂಗಳೂರಿಗೆ ಬಂದ. ಭಿಕ್ಷಾನ್ನ ವಾರಾನ್ನ ಮಾಡಿಕೊಂಡು ಹೈಸ್ಕೂಲಿನಲ್ಲಿ ಓದಲಾರಂಭಿಸಿದೆ. ಹೈಸ್ಕೂಲಿನ ಓದು ಮುಗಿಸಬೇಕಾದರೆ ಬಹಳ ಕಷ್ಟವಾಯಿತು."

"ಅಲ್ಲವೇ ಮತ್ತೆ, ತನ್ನವರೆನ್ನುವವರು ಯಾರೂ ಇಲ್ಲದೆ ಏನೊಂದು ಆಧಾರವೂ ಇಲ್ಲದೆ ಅಷ್ಟು ದೊಡ್ಡ ಪಟ್ಟಣದಲ್ಲಿ ಓದೋದೂ ಅಂದರೆ ಸಾಮಾನ್ಯವೇ ಹೇಳಿ. ಫೀಜು, ಬಟ್ಟೆಬರೆಗಳಿಗೆ ಏನು ಮಾಡುತ್ತಿದ್ದಿರೋ ಪಾಪ!" ಅನಸೂಯಮ್ಮ ಕರುಣೆಯಿಂದ ಕೇಳಿದರು.

"ನಾನು ಓದುತ್ತಿದ್ದ ಹೈಸ್ಕೂಲ್ ಹೆಡ್‌ಮಾಸ್ಟರು ತುಂಬಾ ಒಳ್ಳೆಯವರು. ನನಗೆ ಫೀಜು ಮಾಫಿಮಾಡಿಸಿದ್ದರು. ಯಾವಾಗಲಾದರೂ ಅವರೇ ಪುಸ್ತಕ ವೊದಲಾದುವುಗಳಿಗೆ ಸ್ವಲ್ಪ ದುಡ್ಡು ಕೊಡುತ್ತಿದ್ದರು. ಬಟ್ಟೆಬರೆಯ ಖರ್ಚುಗಳಿಗೆ ಒಂದೆರಡು ಮನೆಗಳಲ್ಲಿ ನೀರು ಸೇದಿ ಹಾಕಲು ಗೊತ್ತುಮಾಡಿಕೊಂಡಿದ್ದೆ. ತಿಂಗಳಿಗೆ ಎಂಟು ಹತ್ತು ರೂಪಾಯಿಗಳು ಆಗುತ್ತಿತ್ತು. ಅಷ್ಟರಲ್ಲೇ ಕಾಲತಳ್ಳುತ್ತಿದ್ದೆ. S. S. L. C.ಗೆ ಕಟ್ಟಿದ್ದ ವರ್ಷದಲ್ಲಿ ವೆಂಕಟರಾಯರು ಅನ್ನುವ ಪುಣ್ಯಾತ್ಮರೊಬ್ಬರು ತಮ್ಮ ಮನೆಯಲ್ಲೇ ಓದಿಕೊಂಡಿರಲು ಅನುಕೂಲಮಾಡಿಕೊಟ್ಟರು. ಅವರ ಮನೆಯಲ್ಲೇ ಊಟ ತಿಂಡಿ ಆಗುತ್ತಿತ್ತು. ತುಂಬಾ ಒಳ್ಳೆಯ ಜನ."

"ದಿಕ್ಕಿಲ್ಲದವರಿಗೆ ದೇವರು ಹೇಗಾದರೂ ಒಂದು ದಾರಿ ತೋರಿಸಿಯೇ ಇರುತ್ತಾನೆ." ರಾಯರು ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾ ಮತ್ತೆ ಕೇಳಿದರು—

"ಬರಿಯ S. S L. C. ನೇನೋ ಮುಂದೂ ಓದಿದ್ದೀಯೊ?"

"ಮುಂದೆ ಓದಲು ಹಣವೊಂದು ಬೇಕಲ್ಲ. ಮುಂದೆ ಓದಲಿಲ್ಲ, ಏನೋ ಸ್ವಲ್ಪ ಹಿಂದಿ ಕಲಿತುಕೊಂಡಿದ್ದೇನೆ ಅಷ್ಟೆ"

"ಹಿಂದಿ ಎಲ್ಲಿನ ವರೆಗೆ ಓದಿದ್ದಿ?"

"ಪ್ರವೇಶಿಕಾ ಆಗಿದೆ. ವಿಶಾರದ ಮಾಡಿಕೊಳ್ಳಲು ಆಗಲಿಲ್ಲ. ಯಾವುದಾದರೂ ಕೆಲಸಕ್ಕೆ ಸೇರಿದ ಮೇಲೆ ವಿಶಾರದ ಪರೀಕ್ಷೆಗೆ ಕೂಡಬೇಕೆಂದು ಕೊಂಡಿದ್ದೇನೆ."

"ಅಂತೂ ತುಂಬಾ ಕಷ್ಟ ಸೋಸಿದ್ದೀರಿ", ಎನ್ನುತ್ತ ಅನಸೂಯಮ್ಮ ರಾಯರನ್ನುದ್ದೇಶಿಸಿ ಸಹಾನುಭೂತಿಯ ದನಿಯಲ್ಲಿ ಹೇಳಿದರು, "ಏನೋ ನೋಡಿ, ಪರವಾಗಿಲ್ಲ ಅನ್ನೋದಾದರೆ ಸೊಸೈಟಿಯಲ್ಲಿ ಕೆಲಸಮಾಡಿಸಿಕೊಡಿ. ನಿಮಗೂ ತೊಂದರೆ ತಪ್ಪುತ್ತೆ"

ಅನಸೂಯಮ್ಮನವರಿಗೆ ಹುಡುಗ ಪರವಾಗಿಲ್ಲ. ಮರ್ಯಾದಸ್ಥ ಒಳ್ಳೆಯ ನಡವಳಿಕೆಯುಳ್ಳವನು, ಎಂಬ ಭಾವನೆ ಮೂಡಿತ್ತು. ರಾಯರಿಗೂ ಕೂಡ ಬಂದಿರುವವನು ಸಭ್ಯ; ಸೊಸೈಟಿಯಲ್ಲಿ ಕೆಲಸಕೊಡಿಸಿದರೆ ನಷ್ಟ ವೇನಿಲ್ಲ ಎನ್ನಿಸಿತು.

"ನಾಳೆ ಒಂದು ಅಪ್ಲಿಕೇಷನ್ ಕೊಡು, ನೋಡೋಣ," ಎನ್ನುತ್ತ ರಾಯರು ಕೈತೊಳೆಯಲು ಎದ್ದರು.

ಆನಂದನೂ ಕೈತೊಳೆದುಕೊಂಡು ಹೊರಗೆ ಬರುತ್ತಾ,

"ಏನೋ ಸಾರ್, ತಾವು ದಯೆಯಿಟ್ಟು ಕೆಲಸಕೊಡಿಸಿಕೊಟ್ಟರೆ ನಾನು ತುಂಬಾ ಕೃತಜ್ಞನಾಗಿರುತ್ತೇನೆ," ಎಂದು ಬೇಡಿಕೆಯ ದನಿಯಲ್ಲಿ ಹೇಳಿದ.

ಮಾರನೆಯ ದಿನ ರಾಯರು ಆನಂದನನ್ನು ಜೊತೆಯಲ್ಲೇ ಕರೆದು ಕೊಂಡು, ಕೃಷ್ಣಮೂರ್ತಿಗಳ ಬಳಿ ಹೋದರು.

ಕೃಷ್ಣಮೂರ್ತಿಗಳು ಆನಂದನಿಂದ ಒಂದು ಅಪ್ಲಿಕೇಷನ್ ತೆಗೆದು ಕೊಂಡರು.

"ಈತ ಪರವಾಗಿಲ್ಲ ಸ್ವಾಮಿ. ಬುದ್ಧಿವಂತ, ಓದಿಯೂ ಇದ್ದಾನೆ. ಕೆಲಸಕ್ಕೆ ತೆಗೆದುಕೊಂಡು ಬಿಡೋಣ. ನನಗೂ ತಲೆಚಿಟ್ಟುಹಿಡಿದುಹೋಗಿದೆ. ಈ ಸೊಸೈಟಿಯ ಹವ್ಯಾಸ ಎಂದಿಗೆ ತಪ್ಪುತ್ತೋ ಅಂತ ಕಾದಿದ್ದೆ. ಈತ ಬಂದದ್ದೂ ಒಳ್ಳೆಯದೇ ಆಯಿತು."

ಹಾಗೇ ಆಗಲಿ. ನೀವು ಈ ದಿನವೇ ಚಾರ್ಜೆಲ್ಲಾ ವಹಿಸಿಕೊಟ್ಟು ಬಿಡಿ. ಇವತ್ತಿನಿಂದಲೇ ಡ್ಯೂಟಿಯ ಮೇಲೆ ಬಂದ ಹಾಗೆ ಮಾಡೋಣ. ನೀವೊಂದು ಮೀಟಿಂಗ್ ನೋಟೀಸ್ ಬರೆದು ಡೈರೆಕ್ಟರುಗಳಿಗೆಲ್ಲಾ ತಿಳಿಯ ಪಡಿಸಿ. ಹೊಸಬರ ನೇಮಕದ ಬಗ್ಗೆ ಮೀಟಿಂಗ್ ನಡೆಸಿದ ಶಾಸ್ತ್ರ ಮಾಡಿ ಬಿಡೋಣ. ಡೈರೆಕ್ಟರುಗಳ ರುಜುಮಾಡಿಸಿಬಿಟ್ಟರಾಯಿತು. ಅವರೂ ಒಪ್ಪೇ ಒಪ್ಪುತ್ತಾರೆ."

"ಸರಿ ಹಾಗೇ ಆಗಲಿ," ಎಂದು ರಾಯರು ಆನಂದನಿಗೆ ಸೊಸೈಟಿಯ ಚಾರ್ಜು ವಹಿಸಿಕೊಡಲು ಅವನೊಡನೆ ಸೊಸೈಟಿಯ ಕಡೆ ನಡೆದರು.

ಆನಂದ ಕೆಲಸಕ್ಕೆ ಸೇರಿ ನಾಲ್ಕೈದು ದಿನಗಳಾಗಿದ್ದುವು. ಒಂದು ದಿನ ರಾತ್ರಿ ಊಟದ ಸಮಯದಲ್ಲಿ ಆನಂದ ತಾನು ಬೇರೆ ಮನೆಯನ್ನು

ನೋಡಿಕೊಳ್ಳುತ್ತಿರುವುದಾಗಿಯೂ, ಮಾರನೆಯ ದಿನದಿಂದ ಅಲ್ಲಿಗೇ ಹೋಗು ವುದಾಗಿಯೂ ತಿಳಿಸಿದ.

ರಾಯರು ಆಶ್ಚರ್ಯದಿಂದ ಆನಂದನ ಕಡೆ ನೋಡಿದರು. ರಾಯರಿಗಾಗಲಿ ಅನಸೂಯಮ್ಮನವರಿಗಾಗಲಿ ಆನಂದ ಬೇರೆ ಇರುವುದು ಇಷ್ಟವಿರಲಿಲ್ಲ. ರಾಯರು ಹೇಳಿದರು.

"ಯಾಕಪ್ಪಾ, ನೀನೊಬ್ಬನೇ ಬೇರೆ ಏರ್ಪಾಡು ಯಾಕೆ ಮಾಡಿಕೊಳ್ಳ ಬೇಕು. ಇಲ್ಲಿಯೇ ಇದ್ದುಬಿಟ್ಟರಾಯಿತು."

"ಹಾಗಲ್ಲ. ತಮಗೇಕೆ ವೃಥಾ ತೊಂದರೆ? ಇದುವರೆಗೆ ಇಲ್ಲೇ ಇದ್ದೆನಲ್ಲ. ನೀವು ನನಗೆ ಕೆಲಸ ದೊರೆಯಲು ಸಹಾಯಮಾಡಿದಿರಿ. ಅದಕ್ಕೋಸ್ಕರ ನಾನು ಋಣಿ."

"ಛೆ....ಹಾಗೆಲ್ಲ ಆಡಬೇಡಪ್ಪ. ಕೆಲಸಕೊಡಿಸಲು ನಾವು ಯಾರು? ಡೈರೆಕ್ಟರುಗಳೆಲ್ಲಾ ಒಪ್ಪಿದರು. ಕೆಲಸ ದೊರೆಯಿತು ಅಷ್ಟೆ."

"ನೀವೊಬ್ಬರು ನಮಗೇನೂ ಭಾರವಾಗುವುದಿಲ್ಲ. ಇಲ್ಲೇ ನಮ್ಮ ಮನೆಯಲ್ಲೇ ಇದ್ದು ಬಿಡುವುದು ಬಿಟ್ಟು ಬೇರೆ ಯಾಕೆ ಪ್ರಯತ್ನ ಮಾಡಬೇಕು ಹೇಳು, ಅನಸೂಯಮ್ಮ ಅನ್ನಕ್ಕೆ ಹುಳಿಯನ್ನು ಬಡಿಸುತ್ತ ಹೇಳಿದರು.

"ಊಟಕ್ಕೆ ಏನು ಮಾಡುತ್ತಿ?" ರಾಯರು ಕೇಳಿದರು.

"ಅಡಿಗೆಮಾಡಿಕೊಳ್ಳಲು ಬರುತ್ತೆ; ಮಾಡಿಕೊಳ್ಳುತ್ತೇನೆ."

"ಬೆಳಗ್ಗಿನಿಂದ ಸಂಜೆಯವರೆಗೂ ಮಾರಾಟ ಇದ್ದೇ ಇರುತ್ತೆ. ಅಡಿಗೆ ಮಾಡಿಕೊಳ್ಳಲು ಬಿಡುವು ಯಾವಾಗ? ಸ್ನಾನ ತಿಂಡಿ ಎಲ್ಲ ಹೊತ್ತಿಗೆ ಗೊತ್ತಿಗೆ ಆಗುತ್ತೆಯೇ ಹೇಳಿ. ಬೇರೆ ಕಡೆ ಇದ್ದುಗೊಂಡು ಕೈಬಾಯಿ ಸುಟ್ಟುಕೊಂಡು ಅಡುಗೆಮಾಡಿಕೊಳ್ಳೋದು ಯಾಕೆ? ನಿಮ್ಮ ಮನೆ ಅಂತ ತಿಳಕೊಂಡು ಇಲ್ಲೇ ಇದ್ದುಬಿಡಿ."

ಅನಸೂಯಮ್ಮನವರ ಒತ್ತಾಯದ ನುಡಿಗೆ ಏನು ಹೇಳಬೇಕೋ ತಿಳಿಯದೆ ತೊಂಚವಂಚ ಪಡುತ್ತ ಇದ್ದ ಆನಂದನ ಕಡೆ ತಿರುಗಿ ರಾಯರು ಹೇಳಿದರು.

"ನಾನೂ ಅದನ್ನೇ ಅನ್ನುವುದು. ಇಲ್ಲೆ ಇದ್ದು ಬಿಡಪ್ಪ ಆನಂದ. ಹೇಗೂ ನಿನಗೆ ಇಂಗ್ಲೀಷು, ಹಿಂದಿ ಬರುತ್ತದೆ. ಪ್ರಕಾಶನು ಇದೇ ಮಿಡಲ್

ಸ್ಕೂಲಿಗೆ ಸೇರಿದ್ದಾನೆ. ನಿನಗೆ ತಿಳಿದದ್ದು ನಾಲ್ಕು ಅಕ್ಷರಅವಕಾಶವಾದಾಗ ಹೇಳಿಕೊಂಡು ಇದ್ದುಬಿಡು. ಯಾಕೆ ಸುಮ್ಮನೆ ಎಪ್ಪತ್ತೆಂಟು ಕಷ್ಟವ್ಯಸನ ಹಚ್ಚಿಕೊಳ್ಳುತ್ತೀ ?"

"ಅವರು ಹೇಳಿದ ಹಾಗೆ ಮಾಡ್ರಪ್ಪ" ಅನುಸೂಯಮ್ಮ ಒತ್ತಾಯದ ವಾಣಿಯಲ್ಲಿ ಹೇಳಿದರು.

ಆನಂದನಿಗೆ ಯಾರ ಬಳಿಯಲ್ಲೂ ದಾಕ್ಷಣ್ಯ ವಹಿಸುವುದು ಇಷ್ಟವಿರ ಲಿಲ್ಲ. ಆದರೆ ಈಗ ಒಪ್ಪಲೇ ಬೇಕಾಗಿಬಂದಿತ್ತು. ಅವನು ಸ್ವಲ್ಪ ಆಲೋ ಚನೆಮಾಡತೊಡಗಿದ. ಹೇಗೂ ತಾನೊಬ್ಬನೇ ಇರುವುದು. ನನ್ನ ತಿಂಗಳ ಸಂಬಳದಲ್ಲಿ ತಿಂಗಳಿಗೆ ಅಲ್ಪ ಸ್ವಲ್ಪ ಸಾಮಾನು ಮನೆಗೆ ತಂದು ಹಾಕು ತ್ತಿದ್ದರೆ ಸರಿಹೋಗಬಹುದು ಎಂದುಕೊಂಡ. ಮನಸ್ಸಿಗೆ ಸಮಾಧಾನ ವಾಗಿ 'ಆಗಲಿ' ಎಂದು ಒಪ್ಪಿಗೆಯಿತ್ತ.

ರಾಯರು ಮಾರನೆಯ ದಿನವೇ ಆನಂದನಿಗಾಗಿ ತಮ್ಮ ಮೇಲ್ಮನೆಯ ಕೊಠಡಿಯನ್ನು ತೆರವು ಮಾಡಿಕೊಟ್ಟರು. ಬೇರೆಯ ಕೊಠಡಿಯಲ್ಲಿ ಉಪ ಯೋಗಿಸದೆ ಧೂಳು ಹಿಡಿದು ಕುಳಿತಿದ್ದ ಮೇಜು, ಕುರ್ಚಿ ಮತ್ತು ಮಂಚ ಗಳನ್ನು ತೆಗೆಸಿ ಆನಂದನ ಕೊಠಡಿಯಲ್ಲಿ ಹಾಕಿಸಿದರು. ಇದನ್ನೆಲ್ಲಾ ನೋಡಿದ ಆನಂದ,

"ಇವೆಲ್ಲಾ ನನಗೇಕೆ ಸಾರ್ ?" ಎಂದ.

"ಮೇಜು ಕುರ್ಚಿಗಳು ನಿನ್ನ ಲೆಕ್ಕಪತ್ರಗಳನ್ನು ಮಾಡಲು ಅನುಕೂಲ ವಾಗಿದೆ. ಮಂಚವನ್ನು ನಾವು ಯಾರೂ ಉಪಯೋಗಿಸುತ್ತಿಲ್ಲ. ಸುಮ್ಮನೆ ಧೂಳು ಹಿಡಿದುಕೊಂಡು ಯಾಕೆ ಬಿದ್ದಿರಬೇಕು ? ನೀನು ಉಪಯೋಗಿಸು ತ್ತಿರು, ಆಗಬಹುದಲ್ಲ ?

ಆನಂದನಿಗೆ ರಾಯರ ಉಪಚಾರ ಕಂಡು ಬಹಳ ಆಶ್ಚರ್ಯವಾಯಿತು. 'ಇವರೇಕೆ ನನಗೋಸ್ಕರ ಇಷ್ಟು ಹಚ್ಚಿಕೊಳ್ಳುತ್ತಾರೆ!' ಎಂದುಕೊಂಡ.

ಪ್ರತಿನಿತ್ಯವೂ ಎಷ್ಟು ಹೊತ್ತು ಮಾರಾಟನಡೆಸಿದರೂ, ಜನಗಳ ತಂಡ ಕಡಮೆಯಾಗುತ್ತಿರಲಿಲ್ಲ. ಹಳ್ಳಿಗರು ಗುಂಪುಗುಂಪಾಗಿ ಮೇಲಿಂದ ಮೇಲೆ ಬರುತ್ತಲೇ ಇದ್ದರು. ಆನಂದನಿಗೆ ಎಲ್ಲಾ ಕಡೆಗೂ ದೃಷ್ಟಿಯಿಟ್ಟು ನಿಭಾಯಿ ಸಲು ವ್ಯವಧಾನವೇ ದೊರೆಯುತ್ತಿರಲಿಲ್ಲ.

ಆನಂದ ಇದನ್ನೆಲ್ಲಾ ಯೋಚಿಸಿ ಒಂದು ತೀರ್ಮಾನಕ್ಕೆ ಬಂದ. ಸೊಸೈಟಿಗೆ ಸೇರಿದ್ದ ಮೂವತ್ತೈದು ಹಳ್ಳಿಗಳನ್ನೂ ಸರಿಯಾಗಿ ವಿಂಗಡಿಸಿದ. ವಾರದಲ್ಲಿ ಐದು ದಿನಗಳು ಆಹಾರಧಾನ್ಯಗಳ ಮಾರಾಟಕ್ಕೆಂದು ಗೊತ್ತು ಮಾಡಿ, ಒಂದೊಂದು ದಿನಕ್ಕೆ ಏಳು ಏಳು ಹಳ್ಳಿಗಳನ್ನು ಗೊತ್ತುಮಾಡಿದ. ಉಳಿದ ಎರಡು ದಿನಗಳನ್ನು ಬಟ್ಟೆ ಮತ್ತು ವ್ಯವಸಾಯೋಪಕರಣಗಳ ಮಾರಾಟಕ್ಕೆಂದು ತೀರ್ಮಾನಿಸಿದ.

ತಾನು ಯೋಚಿಸಿದ ಏರ್ಪಾಡಿನಂತೆ ಒಂದು ಪ್ರಕಟನೆಯನ್ನು ಬರೆದು ಹಾಕಿದ. ಅದರಂತೆ ಬಂದ ಜನರಿಗೂ ತಿಳಿಯಪಡಿಸಿದ. ಹೊಸ ವ್ಯವಸ್ಥೆ ಯಿಂದ ಆನಂದನಿಗೆ ಸ್ವಲ್ಪ ಸಮಾಧಾನವಾಯಿತು. ಹಳ್ಳಿಗರ ಗಲಾಟೆಯೂ ತಪ್ಪತೊಡಗಿತು.

ಆನಂದ ತಾನು ಮಾಡಿಕೊಂಡ ಹೊಸ ವ್ಯವಸ್ಥೆಯನ್ನು ರಾಯರಿಗೆ ತಿಳಿಸಿದ. ರಾಯರು ಅವನ ಏರ್ಪಾಡಿಗೆ ಮೆಚ್ಚುಗೆ ತೋರುತ್ತ ಹೇಳಿದರು, "ನೀನು ಹೀಗೆ ಮಾಡಿದ್ದು ತುಂಬಾ ಒಳ್ಳೆಯದೇ ಆಯಿತು. ಈ ಹಳ್ಳಿಗರ ಗಲಾಟೆ ಅಡಗಿಸಲು ಸಾಧ್ಯವೇ ಇರುತ್ತಿರಲಿಲ್ಲ. ಆ ಬಸಲಿಂಗಯ್ಯ ಇದೊಂ ದನ್ನೂ ಹಚ್ಚಿಕೊಳ್ಳುತ್ತಿರಲಿಲ್ಲ. ಕೊಟ್ಟೋರಿಗೆ ಕೊಡುತ್ತಿದ್ದ; ಇಲ್ಲದವರಿಗೆ ಇಲ್ಲವೇ ಇಲ್ಲ. ಎಲ್ಲಾ ಕುರುಡು ದರಬಾರು ನಡೆಸಿಬಿಟ್ಟ. ಆಗ ಜನರ ಗೋಳು ಹೇಳ ತೀರದು. ಈಗ ನೀನು ಮಾಡಿರುವುದು ಸರಿಯಾಗಿದೆ. ಹೀಗೇ ನಡೆಸಿಕೊಂಡುಹೋಗು.

ಆನಂದನಿಗೆ ಹಳ್ಳಿಯ ಜನರನ್ನು ಅನುಸರಿಸಿ, ಅವರನ್ನು ಸಮಾಧಾನ ಪಡಿಸುವುದೇ ಕಷ್ಟವಾಗಿ ಬಿಡುತ್ತಿತ್ತು. ಹಳ್ಳಿಗರಲ್ಲಿ ಎಷ್ಟೋ ಜನ ಸ್ಥಿತಿ ವಂತರೂ ಇದ್ದರು. ಸಾಮಾನ್ಯವಾಗಿ ಅಂತಹವರೇ ಸೊಸೈಟಿಯ ಮೆಂಬರು ಗಳು, ಡೈರೆಕ್ಟರುಗಳಾಗಿರುತ್ತಿದ್ದರು. ಅವರನ್ನೆಲ್ಲಾ ಪರಿಚಯಮಾಡಿಕೊಳ್ಳು ವುದು ಕಷ್ಟವಾಗಿತ್ತು.

ಒಂದು ದಿನ ಮುರುಡಿಯವನೊಬ್ಬ ಸೊಸೈಟಿಗೆ ಧಾನ್ಯಕ್ಕಾಗಿ ಬಂದ. ಅವನು ಸ್ವಲ್ಪ ಸ್ಥಿವಂತ ಹಾಗೂ ಸೊಸೈಟಿಗೆ ಡೈರೆಕ್ಟರಾಗಿದ್ದ. ಮುರುಡಿ ಯವರಿಗೆ ಬೇರೆಯದಿನ ಧಾನ್ಯದ ಹಂಚಿಕೆಯಿದ್ದುದರಿಂದ ಆನಂದ ಕೊಡುವು ದಿಲ್ಲವೆಂದು ಖಡಾ ಖಂಡಿತವಾಗಿ ಹೇಳಿಬಿಟ್ಟ.

ಬಂದಿದ್ದವನ ಅಭಿಮಾನ ಕೆರಳಿತು. ಕೋಪದಲ್ಲಿ ಮನಸ್ಸಿಗೆ ಮಾತಾಡಿದ. ಸೊಸೈಟಿಯ ಡೈರೆಕ್ಟರಾದ ತನ್ನನ್ನೇ ತಿರಸ್ಕಾರದಿಂದ ಕಾಣುತ್ತಾನಲ್ಲಾ ಎಂಬ ಕಿಚ್ಚನ್ನು ಹತ್ತಿಕ್ಕಿಕೊಂಡು ಕೇಳಿದ,

"ಸೊಸೂಟಿ ಡೈರಕ್ಟ್ರು ಆಗೀನಿ. ನನಗೇನೀನು ಇಲ್ಲಾಂದೇನು? ನಾವು 'ಹ್ಞೂ', ಅಂದಲೇನೇ ಬಂದೀಯೇನು ನೀನು ಈ ಶೀಟಿಗೆ? ಅದು ಎಂಗೆ ಕಾಳು ಮಾರ್ತೀಯೋ ಮಾಡು ನೋಡಾನು. ತಟುಗನ್ನ ಮರ್ಯೇದೇ ಅಂಬೋದು ಬ್ಯಾಡೇನು ಮಾತಿನಾಗೆ? ಕಪ್ಪು ಜನಗಳ್ನ ಮಾತಾಡಿಸಿದಂಗೆ ಮಾತಾಡಿಸ್ತೀಯಾ ನನ್ನ? ಮುನ್ಸು ಮಾಡಿದರೆ ಈಗ ಕಿತ್ತಾಕ್ಸೇನು ಕೆಲಸದಿಂದ ಉಸ್ನಾರಿ!"

ಹಳ್ಳಿಯ ಗೌಡನ ದರ್ಪ ಕಂಡು ಏನು ಮಾಡಬೇಕೆಂಬುದು ಗೊತ್ತಾಗಲಿಲ್ಲ ಆನಂದನಿಗೆ. ತಿಳಿಯದ ಜನಗಳ ಹತ್ತಿರ ಮಾತಿಗೆ ಮಾತು ಬೆಳೆಸುವುದೂ ಸರಿಯಿರಲಿಲ್ಲ. ಮೆಲ್ಲನೆ ಉಪಾಯದಿಂದ ಹಾಗು ಹಾಕುವ ಯೋಚನೆ ಆನಂದ ಆತನೊಡನೆ ಹೇಳಿದ,

"ನೋಡಿ ನೀವು ತಪ್ಪು ತಿಳಕೊಳ್ಳಬೇಡಿ. ನಾನಿನ್ನೂ ಹೊಸಬ. ನನಗೆ ಯಾರ ಪರಿಚಯವೂ ಇನ್ನೂ ಸರಿಯಾಗಿ ಆಗಿಲ್ಲ. ನೀವು ನಮ್ಮ ಸೊಸೈಟಿಯ ಡೈರೆಕ್ಟರು ಅನ್ನುವುದು ನೀವು ಹೇಳಿದ್ದರಿಂದ ಗೊತ್ತಾಯಿತು. ಇಲ್ಲದಿದ್ದರೆ ಹೇಗೆ ಗೊತ್ತಾಗಬೇಕು? ಇನ್ನು ಮೇಲೆ ನೀವು ಇಲ್ಲಿನ ತನಕ ಬರುವ ಗೋಜೇ ಹಚ್ಚಿಕೊಳ್ಳಬೇಡಿ. ಹೊರಗೇ ನಿಂತುಕೊಂಡು ಯಾರ ಕೈಲಾದರೂ ಹೇಳಿ ಕಳುಹಿಸಿದರೆ, ಆ ಕೂಡಲೇ ನಿಮಗೆ ಬೇಕಾದ್ದು ಕಳಿಸಿಕೊಡುತ್ತೇನೆ. ನಮ್ಮ ಸೊಸೈಟಿಯ ಡೈರೆಕ್ಟರುಗಳು, ಮೆಂಬರುಗಳಿಗೆ ಗೌರವ ಕೊಡದ ಮೇಲೆ ನಾವು ಯಾಕೆ ಕೆಲಸ ಮಾಡಬೇಕು ಹೇಳಿ. ಜನ ತುಂಬಾ ಇದ್ದಾರೆ. ನಿಮಗೆ ಏನು ಬೇಕು? ಈಗಲೆ ತಗೋತೀರೊ ಅಥವಾ ಹಿಂದಿನಿಂದ ಯಾರನ್ನಾದರೂ ಕಳಿಸುತ್ತೀರೊ?"

ಆನಂದನ ಮಾತಿನಲ್ಲಿ ಎಷ್ಟು ಉಪಚಾರವಿತ್ತೊ ಅಷ್ಟೇ ವ್ಯಂಗ್ಯವೂ ತುಂಬಿತ್ತು.

ಆನಂದನ ಉಪಚಾರಕ್ಕೆ ಬಂದಿದ್ದವನು ಉಬ್ಬಿಹೋದ. ಅಭಿಮಾನದಿಂದ ತನ್ನ ಮೀಸೆಯ ಮೇಲೆ ಕೈಆಡಿಸುತ್ತ,

"ಅಂಗೆ ಮೊದಲೇ ತಟುಗು ಸೂಕ್ಷ್ಮ ಹೇಳಿದ್ರೆ ನಾನು ಕೂಗಾಡುತಿದ್ನಾ? ಜನ ಓಗ್ಲೇಳು; ಹಿಂದೇಗಡಿಂದ ಬತ್ತೀನಿ. ನಾನು ತಟುಗು ಗುರುರಾಜಪ್ಪನ್ನ ನೋಡಿ ಬತ್ತೀನಿ" ಎಂದ.

"ಹ್ಞಂ, ಹಾಗೇ ಮಾಡಿ. ರಾಯರೂ ಮನೆಯಲ್ಲೇ ಇರಬಹುದು."

"ಅಂದಂಗೆ ನೀನೂ ನಮ್ಮ ಗುರುರಾಜಪ್ನ ಮುನ್ನಾಗೇ ಇದೀಯಂದೆ. ಬೇಸ್ಮಾಡ್ದೆ ಬುಡು. ಇನ್ಮ್ಯಾಗೆ ಇಂಗೆಲ್ಲ ನಮ್ನ ನಿಂದರ್ಸಬ್ಯಾಡ. ನಮ್ಗೆ ಮನಮಾನಿ (ಬಹಳ) ಕೆಲಸಿರತ್ತೈತೆ" ಎಂದು ಅಲ್ಲಿಂದ ಹೊರಬಿದ್ದ ಆ ಡೈರೆಕ್ಟರು!

ರಾತ್ರಿ ಪ್ರಕಾಶನಿಗೆ ಪಾಠ ಹೇಳುತ್ತ ಕುಳಿತಿದ್ದಾಗ ಗುರುರಾಜರಾಯರೇ ಬೆಳಗಿನ ಪ್ರಸಂಗವನ್ನು ಎತ್ತಿಕೊಂಡರು.

"ಇವತ್ತೇನೋ ಸೊಸೈಟಿಯಲ್ಲಿ ಗಲಾಟೆ ಮಾಡಿಕೊಂಡೆಯಂತೆ?"

"ಏನೂ ಗಲಾಟೆಯಾಗಲಿಲ್ಲವಲ್ಲ!" ಆನಂದ ಆಶ್ಚರ್ಯದಿಂದ ಕೇಳಿದ.

"ಮುರುಡಿ ನಾಗನಾಥಪ್ಪ ಬಂದಿದ್ದ. ಸೊಸೈಟಿಗೆ ಬಂದಿದ್ದನಂತೆ. ನೀನು ಮೊದಲು ಸರಿಯಾಗಿ ಮರ್ಯಾದೆ ಮಾಡಲಿಲ್ಲವಂತೆ. ನನ್ನ ಕೈಲಿ ಹೇಳಿದ."

"ಓಹೋ, ಆ ಡೈರೆಕ್ಟರೋ? ಏನು ಹೇಳಿದರು?"

"ನೀನು ಆ ಮೇಲೆ ಅವನಿಗೆ ಮರ್ಯಾದೆ ಕೊಟ್ಟು ಮಾತಾಡಿಸಿದೆಯಂತೆ. 'ಬಲು ಸೂಕ್ಷ್ಮ ಹುಡುಗ! ಹಿಂದೇಗಡಿಂದ ಬಲು ಬಡಾನೆ ತಿಳಕೊಂಡ ನನ್ನ,' ಅಂತ ಏನೇನೋ ಹೇಳಿಕೊಂಡ. ಗೋಧಿ ಸಕ್ಕರೆ ಬೇಕಾಗಿತ್ತಂತೆ, ಕೊಟ್ಟೆಯೇನು?"

"ಹ್ಞಂ, ಹಿಂದಿನಿಂದ ಬಂದು ತೆಗೆದುಕೊಂಡು ಹೋದರು. ಅಂತೂ ಒಳ್ಳೆಯ ಡೈರೆಕ್ಟರು!" ಎಂದು ಆನಂದ ನಕ್ಕ. ಗುರುರಾಜರಾಯರೂ ನಗುತ್ತ,

"ಹಳ್ಳಿಯ ಜನಗಳ ಹಣೇಬರಹವೇ ಇಷ್ಟು ನೋಡು. ನಾಗನಾಥಪ್ಪ ನಿರಕ್ಷರ ಕುಕ್ಷಿ! ಅವನೂ ಒಬ್ಬ ಡೈರೆಕ್ಟರು ಈ ಸೊಸೈಟಿಗೆ. ಆ ಸುತ್ತಿಗೆಲ್ಲ ಇವನೇ ಮುಖಂಡ. ಒಳ್ಳೆಯ ಆಸ್ತಿವಂತ ಕೂಡ. ದರ್ಪ ತೋರಿಸುತ್ತಾನೆ. ಈ ಸೊಸೈಟಿಯಲ್ಲಿ ಇಂತಹ ನಿರಕ್ಷರ ಕುಕ್ಷಿಗಳು ಇನ್ನೂ ಮೂವರಿದ್ದಾರೆ. ರಾಮಸಾಗರವನೊಬ್ಬ, ಗೌರಸಮುದ್ರದವನೊಬ್ಬ ಮತ್ತು ಸಂತೆ

ಗುಡ್ಡದವನೊಬ್ಬ. ಎಲ್ಲರೂ ಅಷ್ಟೆ, ದರ್ಪ ತೋರಿಸುವುದರಲ್ಲಿ ನಿಸ್ಸೀಮರು. ಅವರು ಹೇಳಿದಂತೆ ನಡೆಯಬೇಕು. ಇಲ್ಲದಿದ್ದರೆ ಸುಮ್ಮನೆ ಜಗಳ ಎಬ್ಬಿಸುತ್ತಾರೆ. ಇದಕ್ಕೆಲ್ಲಾ ಒಂದೇ ಮಂತ್ರ – ಅವರುಗಳು ಬಂದಾಗ, ಅವರ ಮೂಗಿನ ನೇರಕ್ಕೆ ಮಾತನಾಡಿ ಅವರಿಗೆ ಬೇಕಾದ್ದು ಅಕ್ಕಿಯೋ ಸಕ್ಕರೆಯೋ ಯಾವುದಾದರೂ ಸರಿ, ಕೊಟ್ಟು ಕಳಿಸಿಬಿಡಬೇಕು. ನಿನಗೆ ಇಲ್ಲಿನ ಜನಗಳ ಸ್ವಭಾವ ತಿಳಿಯುವುದು ಸ್ವಲ್ಪ ಕಷ್ಟ. ಏನಾದರೂ ತೊಡಕುಗಳಿದ್ದರೆ ಕೇಳಿ ತಿಳಿದುಕೊ. ನಾನು ನಿನಗೆ ಉಪದೇಶ ಮಾಡುತ್ತ ಇದ್ದೀನಿ ಅಂದುಕೊಳ್ಳಬೇಡ," ಎಂದರು.

"ಛೆ! ಹಾಗುಂಟೆ? ನೀವು ಹೇಳುವುದಾದರೂ ನನ್ನ ಒಳ್ಳೆಯದಕ್ಕೇ ಅಲ್ಲವೆ? ನಿಮ್ಮ ಹಿತನುಡಿಗಳನ್ನು ನಾನು ತಪ್ಪು ತಿಳಿದುಕೊಳ್ಳಲೆ?" ಎಂದ ವಿನಯದಿಂದ ಆನಂದ.

ರಾಯರು ಆಗಾಗ್ಗೆ ಆನಂದನಿಗೆ ಎಷ್ಟೋ ವಿಷಯಗಳನ್ನು ತಿಳಿಯ ಹೇಳುತ್ತಿದ್ದರು. ಮುಖ್ಯವಾಗಿ ರಾಂಪುರದ ಜನಗಳ ಬಗ್ಗೆ ಹೆಚ್ಚು ಹೇಳುತ್ತಿದ್ದರು. ಅವನ ಲೆಕ್ಕಪತ್ರಗಳಲ್ಲಿ ಕೂಡ ಸಹಕರಿಸಿ ತಿಳಿಯಹೇಳುತ್ತಿದ್ದರು. ಇದರಿಂದ ಆನಂದನಿಗೆ ರಾಯರ ಬಗ್ಗೆ ಅಸೀಮ ಭಕ್ತಿ, ಶ್ರದ್ಧೆ ಮೂಡಿತು.

ಅನಸೂಯಮ್ಮ ಆನಂದನನ್ನು ಬಹುವಚನದಲ್ಲೇ ಸಂಬೋಧಿಸುತ್ತಿದ್ದರು. ಇದರಿಂದ ಆನಂದನಿಗೆ ಸಂಕೋಚವೂ ದುಃಖವೂ ಆಗುತಿತ್ತು. 'ಇವರೇಕೆ ನನ್ನನ್ನು ಬಹುವಚನದಲ್ಲಿ ಗೌರವಿಸಿ ಮಾತಾಡುತ್ತಾರೆ?' ಎಂದುಕೊಳ್ಳುತ್ತಿದ್ದ. ಒಂದು ದಿನ ಅನಸೂಯಮ್ಮನವರೊಡನೆ ಮಾತಾಡುತ್ತಿದ್ದಾಗ ಹೇಳಿದ.

"ನೀವು ನನಗೆ ಗೌರವಕೊಟ್ಟು ಮಾತಾಡಿಸುತ್ತೀರಿ. 'ನೀವು, ತಾವು' ಎಂದು ಸಂಬೋಧಿಸುತ್ತೀರಿ. ನನಗೆ ಅದು ಸರಿಯೆನಿಸುವುದಿಲ್ಲ. ನೀವು ಹಿರಿಯರು. ಅಲ್ಲದೆ ತಾಯಿಯ ಸಮಾನ. ನನಗೆ ತಾಯಿತಂದೆಗಳು ಯಾರೂ ಇಲ್ಲ. ನೀವುಗಳೇ ತಾಯಿತಂದೆ ಎಲ್ಲ, ಎಂದು ನನ್ನ ಭಾವನೆ. ಇನ್ನು ಮೇಲೆ ಹಾಗೆ ಕರೆಯಬಾರದು. ನನಗೇಕಷ್ಟು ಮರ್ಯಾದೆ?"

"ಹಾಗೇ ಆಗಲಿ. ಈ ದೊಡ್ಡ ಗುಣವೇ ಮನುಷ್ಯನನ್ನು ಕಾಯೋದು. ನೀನು ಕೂಡ ಅಷ್ಟೆ; ಇದು ನಿನ್ನ ಮನೆ ಈ ಮನೆಯವರು ನಿನ್ನವರು ಅನ್ನುವ ಭಾವನೆ ಇಟ್ಟುಕೊಂಡು ಬಾಪ್ಪಾ!"

ಆನಂದನ ವಿನಯ ನಮ್ರತೆಗಳಿಗೆ ಗದ್ಗದಿತರಾಗಿ ಅನಸೂಯಮ್ಮ ಹೇಳಿದರು. ಅವರ ಹೃದಯ ವಾತ್ಸಲ್ಯದಿಂದ ತುಂಬಿಹೋಗಿತ್ತು.

ಜೀವನದಲ್ಲಿ ಮೊದಲಬಾರಿಗೆ ಮಾತೃವಾತ್ಸಲ್ಯವನ್ನು ಕಂಡ ಆನಂದನ ಹೃದಯ ಆತ್ಮೀಯತೆಯ ಭಾರದಿಂದ ಸೋತಿತ್ತು. ಕಣ್ಣುಗಳು ತುಂಬಿ ಬಂದಿದ್ದುವು. ಆನಂದ ಅನಸೂಯಮ್ಮನವರಿಗೆ ಭಕ್ತಿಯಿಂದ ಬಾಗಿ ನಮಸ್ಕರಿಸಿ ಹೇಳಿದ, "ಹಾಗೇ ಆಗಲಿ ಅಮ್ಮ; ನಿಮ್ಮ ಆಶೀರ್ವಾದ!"

ಆನಂದ ನಮಸ್ಕರಿಸಿದಾಗ ಅನಸೂಯಮ್ಮನವರ ಕಣ್ಣು ಹನಿಗೂಡಿತು.

ಹದಿನೈದೇ ದಿನಗಳಲ್ಲಿ ಆನಂದನಿಗೆ ರಾಂಪುರದ ಜೀವನ ಒಗ್ಗಿಹೋಯಿತು. ಮನೆಯಲ್ಲಂತೂ ಅವನು ಮಗನಿಗಿಂತ ಹೆಚ್ಚಿನ ಮಮತೆ ಗಳಿಸಿದ್ದ.

ರಾಯರೇ ಆಗಲಿ, ಅನಸೂಯಮ್ಮನವರೇ ಆಗಲಿ, ಆನಂದನನ್ನು ಉಪೇಕ್ಷೆಯಿಂದ ಕಾಣುತ್ತಿರಲಿಲ್ಲ. ತಮ್ಮ ಮನೆಯಲ್ಲಿ ಬಿಟ್ಟಿಕೂಳು ಉಣ್ಣಬೇಕು, ಹುಡುಗನಿಗೆ ಪಾಠ ಹೇಳಿಕೊಂಡಿರಲಿ ಎಂಬ ಭಾವನೆಯೂ ಇರಲಿಲ್ಲ. ಆನಂದ ಬಂದ ದಿನವೇ ಒಂದು ವಿಧವಾದ ಅಪೂರ್ವ ಮಮತೆ ಅವರನ್ನು ಆಕರ್ಷಿಸಿತ್ತು. ಮಮತೆಗೆ ಸೋತ ಮನಸ್ಸು ಆನಂದನನ್ನು ಮನೆಯವನನ್ನಾಗಿಯೇ ಕಾಣಲು ಅವಕಾಶ ಕೊಟ್ಟಿತ್ತು.

ಆನಂದ ವಿಚಾರಪ್ರಿಯ. ಅವನ ತಾಯಿತಂದೆಗಳು ತೀರಿದಂದಿನಿಂದ ಇಂದಿನವರೆಗೆ ಸ್ವತಃ ಬುದ್ಧಿವಂತಿಕೆಯಿಂದಲೇ ಮುಂದುವರಿದಿದ್ದ ರಾಂಪುರದ ಮನೆಯಲ್ಲಿ ತನಗೆ ದೊರೆತ ಆಶ್ರಯ, ವಾತ್ಸಲ್ಯ, ಹಾಗೂ ಪ್ರೀತಿಗಳ ಬಗ್ಗೆ ಆನಂದ ಪದೇ ಪದೇ ಆಲೋಚಿಸುತ್ತಿದ್ದ. ಅವನ ಮನಸ್ಸು ರಾಯರು ಮತ್ತು ಅನಸೂಯಮ್ಮನವರಿಗೆ ಭಕ್ತಿಯಿಂದ ಮಣಿಯುತ್ತಿತ್ತು.

೫

"ಪ್ರಕಾಶ ಓದಿಕೊಳ್ಳುವುದಿಲ್ಲವೇನೊ? ಮಾಸ್ಟರು ಬರುವ ಹೊತ್ತಾಯಿತು. ಪಾಠ ಬರುತ್ತದೇನು?" ಮೇಲುಗಡೆ ಆನಂದನ ಕೊಠಡಿಯಲ್ಲಿ ಕುಳಿತು ವಾರ ಪತ್ರಿಕೆಯೊಂದರಲ್ಲಿ ಸಿನಿಮಾ ಚಿತ್ರಗಳನ್ನು ನೋಡುತ್ತಿದ್ದ ಪ್ರಕಾಶನ ಬಳಿಗೆ ಬಂದು ಕೇಳಿದಳು ಪ್ರಮೀಳಾ.

"ಹ್ಞೂಂ, ಬರುತ್ತೆ." ಚಿತ್ರಗಳನ್ನು ನೋಡುವುದರಲ್ಲೇ ಮಗ್ನನಾಗಿದ್ದ ಪ್ರಕಾಶ ಪುಟವನ್ನು ಮಗುಚುತ್ತ ಹೇಳಿದ.

"ಹ್ಞೂಂ, ಬರುತ್ತೆ ಅಂತೆ! ಇದುವರೆಗೆ ಗೋಲಿ ಆಡುತ್ತಿದ್ದ ಅಪ್ಪಯ್ಯ. ಈಗ ಮಾಸ್ತರು ಬರುವ ಹೊತ್ತಾಯಿತು ಅಂತ ಬಂದು ಕುಳಿತು ಕೊಂಡು................"

ಮಾತು ಮುಗಿಯುವ ಮುನ್ನ ಅಕ್ಕನ ಕಡೆ ತಿರುಗಿ ಹೇಳಿದ ಪ್ರಕಾಶ,

"ಇಷ್ಟಕ್ಕೂ ಪಾಠ ಬಾರದಿದ್ದರೂ ಏನೂ ಪರವಾಗಿಲ್ಲ. ಮಾಸ್ತರು ತುಂಬಾ ಒಳ್ಳೆಯವರು. ನನ್ನನ್ನೇನೂ ಬಯ್ಯುವುದಿಲ್ಲ. ತಪ್ಪು ಹೇಳಿದರೆ ಇನ್ನು ಮೇಲೆ ಚೆನ್ನಾಗಿ ಓದಬೇಕಪ್ಪ ಅಂತಾರೆ. ಇಷ್ಟಕ್ಕೂ ನಾನೇನೂ ದಡ್ಡ ಅಲ್ಲವಂತೆ. ಮಾಸ್ತರೇ ಹೇಳಿದರು."

"ಹಾಗಾದರೆ ಒಳ್ಳೆಯ ಮಾಸ್ತರೇ ಸಿಕ್ಕಿದರು; ನಿನಗೆ ತಕ್ಕವರು!"

"ಹೌದೇ ಹೌದು. ಅವರು ಪಾಠ ಹೇಳುವಾಗ ನನಗೇನೂ ಭಯವಾಗಲ್ಲ. ಸ್ಕೂಲಿನ ಮಾಸ್ತರನ್ನು ಕಂಡರೆ ನನಗೆ ತುಂಬಾ ಭಯ. ಅವರು ನನ್ನ ಹೊಡೀತಾರೆ; ಈ ಮಾಸ್ತರೇ ಒಳ್ಳೆಯವರು. ಕೇಳಿದ ಪ್ರಶ್ನೆಗೆ ಸರಿಯಾಗಿ ಉತ್ತರ ಹೇಳಿದರೆ 'ಶಭಾಸ್' ಎಂದು ಹತ್ತಿರ ಕೂರಿಸಿಕೊಳ್ಳುತ್ತಾರೆ.

"ಹಿಂದಿಯನ್ನೂ ಹೇಳಿಕೊಡುತ್ತಾರೇನೋ?"

"ಹ್ಞೂಂ, ನನಗೆ ಆಗಲೇ ನಾಲ್ಕು ಪಾಠಗಳು ಬರುತ್ತವೆ,"

ಹೆಮ್ಮೆಯಿಂದ ಅಕ್ಕನ ಕಡೆಗೆ ತಿರುಗಿ ಕಣ್ಣರಳಿಸಿ ತನ್ನ ವ್ಯಾಸಂಗದ ಮುನ್ನಡೆಯನ್ನು ವಿವರಿಸಿದ ಪ್ರಕಾಶ.

"ಸರಿ ಹಾಗಾದರೆ............"

"ಅವರೂ ಓದುತ್ತಿರುತ್ತಾರೆ ಕಣೇ ಅಕ್ಕ. ಅವರ ಹತ್ತಿರ ಎಷ್ಟು ಎಷ್ಟು ದಪ್ಪ ಪುಸ್ತಕಗಳಿವೆ ಗೊತ್ತೇನು? ಒಂದೊಂದು ದಿನ ನಾನು ತಡವಾಗಿ ಪಾಠಕ್ಕೆ ಬರುತ್ತೀನಲ್ಲ, ಆಗ ಓದುತ್ತಾ ಇರುತ್ತಾರೆ. ಇಲ್ಲಿ ನೋಡು ಎಷ್ಟೊಂದು ಪುಸ್ತಕಗಳಿವೆ." ಪ್ರಕಾಶ ಮೇಜಿನ 'ಡ್ರಾವನ್ನು ಎಳೆದು ಒಳಗಿದ್ದ ಪುಸ್ತಕಗಳನ್ನು ತೋರಿಸಿದ. ಅಲ್ಲದೆ ತನಗೆ ಮಾಸ್ತರ ವಿಷಯ ಎಲ್ಲಾ ಚೆನ್ನಾಗಿ ಗೊತ್ತು ಎಂಬಂತೆ ಹೆಮ್ಮೆಯಿಂದ ಹೇಳಿದ.

"ಇವಿಷ್ಟೇ ಅಲ್ಲ. ಪೆಟ್ಟಿಗೆಯಲ್ಲೂ ತುಂಬಾ ಇಟ್ಟಿದ್ದಾರೆ!"

"ಎಲ್ಲಾ ಕತೆಯ ಪುಸ್ತಕಗಳೇನೋ?"

"ಇರಬಹುದು; ನನಗೆ ಗೊತ್ತಿಲ್ಲ." ಮಾಸ್ತರ ಬಳಿ ಇರುವ ಪುಸ್ತಕಗಳು ಎಂತಹವೆಂಬುದನ್ನು ತಿಳಿದುಕೊಂಡಿದ್ದರೆ ಚೆನ್ನಾಗಿತ್ತು ಎನ್ನಿಸಿತು, ಪ್ರಕಾಶನಿಗೆ. ಆದರೂ ತನಗೆ ಮಾಸ್ತರ ಬಳಿ ಸಂಪೂರ್ಣ ಸಲುಗೆ ಸ್ವಾತಂತ್ರ್ಯವಿರುವವನಂತೆ,

"ನಿನಗೆ ಯಾವುದಾದರೂ ಬೇಕೇನು? ಬೇಕಿದ್ದರೆ ಮಾಸ್ತರನ್ನು ಕೇಳಿ ತಂದು ಕೊಡುತ್ತೇನೆ," ಎಂದ.

"ಥೂ! ಹಾಗೆಲ್ಲ ಕೇಳಿದರೆ..........."

ಪ್ರಮಿಳಾ ಇನ್ನು ಮುಂದೆ ಏನೋ ಹೇಳುತ್ತಿದ್ದಳು. ಅಷ್ಟರಲ್ಲಿ ಹೊರಗೆ ಕಾಲ ಸಪ್ಪಳವಾಯಿತು. ತಿರುಗಿ ನೋಡಿದಳು. ಆನಂದ ಬರುತ್ತಿದ್ದ, ಸರಸರ ಅಲ್ಲಿಂದೆದ್ದು ಹೊರಟಳು. ಆನಂದ ಬಾಗಿಲವರೆಗೆ ಬಂದಿದ್ದ. ಹೊರಗೆ ಹೋಗಲು ದಾರಿಯಿಲ್ಲದೆ ಪ್ರಮಿಳಾ ಪಕ್ಕಕ್ಕೆ ಸರಿದು ನಿಂತಳು. ಆನಂದ ಒಳಗೆ ಬರುತ್ತಲೂ ಅವನ ಕಡೆಗೆ ಒಂದು ಸಲ ತಿರುಗಿ ನೋಡಿ ಕೆಳಗಿನ ಡೆದಳು.

ಪ್ರಮಿಳಾ ಹದಿನಾರರ ಗಡಿ ದಾಟುತ್ತಿದ್ದ ಹೆಣ್ಣು. ವಯಸ್ಸಿಗನುಗುಣವಾದ ಬೆಳವಣಿಗೆ, ಮೋಹಕತೆ, ಸ್ತ್ರೀ ಸಹಜವಾದ ಲಜ್ಜೆ, ಭಯ ಹಾಗೂ, ಆಕಾಂಕ್ಷೆ ಅವಳಲ್ಲಿ ಮೂಡಿದ್ದುವು.

ಆನಂದನ ಆಗಮನ ಅವಳ ಹೃದಯದಲ್ಲಿ ಬಿರುಗಾಳಿ ಎಬ್ಬಿಸಿತ್ತು. ಮೊದಲ ದಿನ ಆನಂದನನ್ನು ನೋಡಿದಾಗ "ಯಾರೋ ಕೆಲಸ ಹುಡುಕಿಕೊಂಡು ಬಂದಿರುವ ಪರದೇಶಿ!" ಎಂಬ ಉಪೇಕ್ಷೆಯ ಭಾವನೆ ಅವಳ ಮನದಲ್ಲಿ ಮೂಡಿದ್ದರೂ, ಅವನು ಸುಂದರಪುರುಷನೆಂದು ಹೃದಯ ಒಪ್ಪಿತ್ತು. ಆನಂದನ ಕತೆಯನ್ನು ಕೇಳಿದ ಮೇಲೆ ಅವನ ಬಗ್ಗೆ ಒಂದು ವಿಧವಾದ ಆದರ ಉಂಟಾಗಿತ್ತು.

ಆನಂದ ಬಂದು ಮೂರು ದಿನವಾಗಿತ್ತು. ಆ ದಿನ ರಾತ್ರಿ ಪಡಸಾಲೆಯಲ್ಲಿ ಕುಳಿತು ಆನಂದ ಪ್ರಕಾಶನಿಗೆ ಪಾಠ ಹೇಳುತ್ತಿದ್ದ. ರಾಯರು ಹೊರಗೆ ಹೋಗಿದ್ದವರಿನ್ನೂ ಬಂದಿರಲಿಲ್ಲ. ಆನಸೂಯಮ್ಮ ಅಡುಗೆಯ

ಕೆಲಸದಲ್ಲಿ ತೊಡಗಿದ್ದರು. ಪ್ರಮಿಳಾಲ ನಡುಮನೆಯಲ್ಲಿ ಚಾಪೆಯ ಮೇಲೆ ಅರ್ಧ ಮಲಗಿ, ಆನಂದನ ಕಡೆಯೇ ದೃಷ್ಟಿ ಕೀಳದೆ ನೋಡುತ್ತಿದ್ದಳು. ಭೂಗೋಳ ಪಾಠದಲ್ಲಿ ಆನಂದ ಲಂಡನ್ನಿನ ವಿಷಯವಾಗಿ ಹೇಳುತ್ತಿದ್ದ. ಪ್ರಕಾಶ,

"ನೀವು ಲಂಡನ್ ನೋಡಿದ್ದೀರಾ ?" ಮುಗ್ಧ ಪ್ರಶ್ನೆ ಹಾಕಿದ, ಸಹಜ ಕುತೂಹಲದಿಂದ.

ಪ್ರಕಾಶನ ಪ್ರಶ್ನೆಗೆ ಆನಂದ ನಕ್ಕುಬಿಟ್ಟ, ನಕ್ಕಾಗ ಅವನ ಎರಡೂ ಕೆನ್ನೆಗಳಲ್ಲಿ ಗುಳಿಗಳು ಆಳವಾಗಿ ಮೂಡಿದುದನ್ನು ಮೊಟ್ಟ ಮೊದಲ ಬಾರಿಗೆ ನೋಡಿದ ಪ್ರಮಿಳಾಲಳಿಗೆ ಹೇಗೆ ಹೇಗೋ ಆಯಿತು. ಗುಂಡು ಮುಖ, ಉಂಗುರ ಉಂಗುರವಾಗಿ ಹಣೆಯ ಕಡೆ ಬಾಗಿರುವ ತಲೆಗೂದಲು, ಹೊಳಪಿನ ಕಣ್ಣುಗಳು, ತುಟಿಯ ಮೇಲಿನ ಮೋಹಕ ನಗೆ ಮತ್ತು ನಕ್ಕಾಗ ಕೆನ್ನೆ ಗುಳಿಗಳು............ಪ್ರಮಿಳಾಲೆಯ ಸೋತ ಮನಸ್ಸು 'ಎಷ್ಟು ಮುದ್ದಾಗಿದ್ದಾರೆ!" ಎಂದಿತು.

ಅದೇ ಸಮಯದಲ್ಲಿ ಆನಂದ ಒಳ ಬಾಗಿಲಕಡೆ ಯಾಕೋ ದೃಷ್ಟಿ ಹಾಯಿಸಿದ್ದ. ಆನಂದನ ದೃಷ್ಟಿ ತನ್ನ ದೃಷ್ಟಿಯೊಡನೆ ಬೆರೆತಾಗ, ತನ್ನ ದೇಹದಾದ್ಯಂತ ಮಿಂಚು ಹರಿದಂತಾಗಿ ಪ್ರಮಿಳಾಲ ಓಡುಗೆಚ್ಚಿ ತಲೆತಗ್ಗಿಸಿದಳು!

ಇನ್ನೊಂದು ಭಾನುವಾರದ ದಿನ ಆನಂದ ಸ್ನಾನಮಾಡಿ ಹಿತ್ತಲಿನಲ್ಲಿ ಟವಲು ಒಣಗ ಹಾಕಲು ಹೋಗುತ್ತಿದ್ದ. ಅದೇವೇಳೆಗೆ ಹಿತ್ತಲಿನ ಬಾವಿಯಿಂದ ನೀರು ತರುತ್ತಿದ್ದ ಪ್ರಮಿಳಾಲ ಬಾಗಿಲಿನಲ್ಲಿ ಎದುರಾದಳು. ಬಿಸಿಲಿನಿಂದ ಒಳಗೆ ಬರುತ್ತಿದ್ದುದರಿಂದ ಆನಂದ ಅವಳ ಕಣ್ಣಿಗೆ ಬಿದ್ದಿರಲಿಲ್ಲ. ಪ್ರಮಿಳಾಲಳನ್ನು ಕಂಡ ಆನಂದನೇ ಪಕ್ಕಕ್ಕೆ ಸರಿದುನಿಂತ. ಇಲ್ಲದಿದ್ದರೆ, ಪ್ರಮಿಳಾಲ ಆನಂದನನ್ನು ಹಾದುಕೊಂಡೇ ಹೋಗಿಬಿಡುತ್ತಿದ್ದಳು. ಒಳಗೆ ಬಂದಾಗ ತನ್ನೆದುರಿನಲ್ಲಿ ಯಾರೋ ಪಕ್ಕಕ್ಕೆ ಸರಿದು ನಿಂತಿರುವುದು ಭಾಸವಾಗಿ ಕತ್ತೆತ್ತಿ ನೋಡಿದಳು. ನಿಂತಿರುವುದು ಆನಂದನೆಂದು ಗೊತ್ತಾಗಿ ನಾಚಿಕೆಯಿಂದ ತಲೆತಗ್ಗಿಸಿದಳು.

"ಬಿಸಿಲಿನಿಂದ ಬರುತ್ತಿದ್ದೆ....ಕಾಣಿಸಲಿಲ್ಲ...."

"ಏನೂ ಪರವಾಗಿಲ್ಲ." ಆನಂದ ಉತ್ತರಿಸಿದ.

ಪ್ರಮೀಲ ಕತ್ತೆತ್ತಿ ನೋಡಿದಳು. ಆನಂದ ಹಿತ್ತಿಲಿನಕಡೆಗೆ ಸಾಗಿದ್ದ. ಅವನ ಕಡೆಯೇ ನೋಡುತ್ತಾ ಒಳಗೆ ಬಂದಳು. ನೀರು ತರಲು ಇನ್ನೊಮ್ಮೆ ಹೋಗಬೇಕಾಗಿತ್ತು. ಆದರೆ ಲಜ್ಜೆ ಅವಳನ್ನು ತಡೆದಿತು.

ನಿತ್ಯವೂ ಸಂಜೆ ಮೇಲ್ಮನೆಯ ಕೊಠಡಿಯಲ್ಲಿ ಪ್ರಕಾಶನಿಗೆ ಪಾಠ ನಡೆಯುತ್ತಿದ್ದಾಗ, ಪ್ರಮೀಲ ನೆಪಮಾಡಿಕೊಂಡು ಮೇಲೆ ಬರುತಿದ್ದಳು. ಮರೆಯಲ್ಲಿ ನಿಂತು ಆನಂದ ಪಾಠ ಹೇಳುವುದನ್ನೇ ಗಮನಿಸುತ್ತಿದ್ದಳು. ಆನಂದನ ಗಂಭೀರವಾಣಿಯಲ್ಲಿ ಒಂದು ರೀತಿಯ ನೂತನತೆ ಹಾಗೂ ಆಕರ್ಷಣೆಯನ್ನು ಕಂಡು ಅವಳಿಗೆ ಆನಂದವಾಗುತ್ತಿತ್ತು. ಒಂದೊಂದು ದಿನ ಪಾಠ ಮುಗಿಯುವುದು ತಡವಾದರೆ, ಪ್ರಮೀಲ ಬಾಗಿಲ ಬಳಿ ನಿಂತು —

"ಊಟಕ್ಕೆ ಹೊತ್ತಾಗಲಿಲ್ಲವೇ ಪ್ರಕಾಶ? ಇವತ್ತೇನು ಪಾಠದಲ್ಲಿ ಬಹಳ ಶ್ರದ್ಧೆ ಬಂದ ಹಾಗಿದೆಯಲ್ಲ! ವರ್ಷದಪಾಠವೆಲ್ಲಾ ಇವತ್ತೇ ಹೇಳಿಸಿಕೊಳ್ಳಬೇಕೆಂದಿದ್ದೀಯೇನು? ನಾಳೆಗೆ ಸ್ವಲ್ಪ ಇರಲಿ ಏಳು," ಎನ್ನುತ್ತಿದ್ದಳು. ಮಾತಿನಲ್ಲಿ ತುಂಟ ನಗೆಲಾಸ್ಯವಾಡುತ್ತಿತ್ತು.

ಪ್ರಕಾಶ ಪುಸ್ತಕಗಳನ್ನು ಜೋಡಿಸಿಕೊಂಡು ಹೊರಗೆ ಬರುತ್ತಿದ್ದಾಗ, "ನಿನಗೊಬ್ಬನಿಗೇ ಹಸಿವಾಗುವುದೇನು? ಇನ್ನಾರಿಗೂ ಹಸಿವಾಗುವುದಿಲ್ಲವೆ? ನಿಮ್ಮ ಮಾಸ್ಟರನ್ನೂ ಕರಿ....ಎಲೆ ಹಾಕಿದೆ; ಅಪ್ಪ ಕಾದಿದ್ದಾರೆ," ಎನ್ನುತಿದ್ದಳು. ಇದಿಷ್ಟೂ ಆನಂದನನ್ನುದ್ದೇಶಿಸಿ ಹೇಳುತ್ತಿದ್ದ ಆ ಸಮಯದಲ್ಲಿ ಅವಳ ಮನಸ್ಸಿಗೆ ಒಂದು ವಿಧವಾದ ಉಲ್ಲಾಸವಾಗುತ್ತಿತ್ತು.

ಒಮ್ಮೊಮ್ಮೆ ಮೈಮರೆತು ಬಾಗಿಲ ಬಳಿನಿಂತುಬಿಡುತ್ತಿದ್ದಳು. ಆನಂದ ಬಂದುದು ಕಂಡಾಗ ನಾಚಿಕೆಯಿಂದ ಧಡಧಡ ಕೆಳಗಿಳಿದು ಹೋಗಿಬಿಡುತ್ತಿದ್ದಳು.

ಊಟದ ಸಮಯದಲ್ಲಿ ಪ್ರಮೀಲ ನಡುಮನೆಯ ಬಾಗಿಲಿನಲ್ಲಿ ನಿಂತು ತುಂಬಿದ ಹೃದಯದಿಂದ ಆನಂದನಕಡೆ ನೋಡುತ್ತಿದ್ದಳು. ಊಟ ಮುಗಿದುದು ತಿಳಿದಾಗ, ತಟ್ಟನೆ ಹೋಗಿ ನೀರು ಸಿದ್ಧಮಾಡಿ, ಪಡಸಾಲೆಯಲ್ಲಿ ಏನಾದರೂ ಕೆಲಸಹುಡುಕುತ್ತಿದ್ದು ಆನಂದ ಅಂಗಿಹಾಕಿಕೊಂಡು ಮೇಲೆ ಹೋಗುವವರೆಗೆ ಅಲ್ಲಿಯೇ ಇದ್ದು, ನಂತರ ತಾಯಿಯ ಜೊತೆಯಲ್ಲಿ ಊಟಕ್ಕೆ ಕೂಡಲು ಹೋಗುತ್ತಿದ್ದಳು.

ಆನಂದ ತನ್ನ ಕೊಠಡಿಯನ್ನು ಅಂದವಾಗಿಟ್ಟುಕೊಂಡಿದ್ದ. ತನಗಾಗಿ ಒದಗಿಸಿಕೊಟ್ಟಿದ್ದ ಮೇಜು, ಕುರ್ಚಿಗಳನ್ನು ಕೊಠಡಿಯ ಬಾಗಿಲಿನ ಒಂದು ಮಗ್ಗುಲಿಗೆ ತನಗನುಕೂಲವಾಗುವಂತೆ ಇಟ್ಟುಕೊಂಡಿದ್ದ. ಮೇಜಿನ ಮೇಲೆ ಒಂದು ಮಗ್ಗುಲಿಗೆ ಸೊಸೈಟಿಗೆ ಸಂಬಂಧಿಸಿದ ಲೆಕ್ಕಪತ್ರಗಳು; ಇನ್ನೊಂದು ಮಗ್ಗುಲಿಗೆ ತಾನು ಬೇಜಾರು ಕಳೆಯಲು ಓದುವುದಕ್ಕಿಟ್ಟುಕೊಂಡಿದ್ದ ಹಿಂದಿ, ಕನ್ನಡ ಪುಸ್ತಕಗಳು; ಹಾಗೂ ಗೀತೆ ಇವುಗಳನ್ನು ಇಟ್ಟಿದ್ದ. ಮೇಜಿನಿಂದ ಸ್ವಲ್ಪ ಮೇಲಕ್ಕೆ ಗೋಡೆಯ ಮೇಲೆ ತನ್ನ ಮೆಚ್ಚಿನ ಪಟಗಳು ಬುದ್ಧದೇವ, ಸ್ವಾಮಿ ವಿವೇಕಾನಂದ ಹಾಗೂ ಪಾರ್ಥಸಾರಥಿ—ಇವುಗಳನ್ನು ತಗಲು ಹಾಕಿದ್ದ. ಅವುಗಳ ಒಂದು ಪಕ್ಕಕ್ಕೆ ಸ್ವಲ್ಪ ಕೆಳಗೆ ತನ್ನದೇ ಎರಡು ಭಾವ ಚಿತ್ರಗಳು— ಒಂದು, ತಾನು S. S. L. C. ತರಗತಿಯಲ್ಲಿ ಓದುತ್ತಿದ್ದಾಗ ತಾನು ಇದ್ದವರ ಮನೆಯವರೆಲ್ಲರೊಡನೆ ತೆಗೆಸಿಕೊಂಡುದು; ಇನ್ನೊಂದು, ತಾನು ಅಭ್ಯಾಸವನ್ನೂ ಬಿಟ್ಟು ಕೆಲಸಕ್ಕೆ ಸೇರಿದ ಮೇಲೆ ಒಬ್ಬನೇ ತೆಗೆಸಿ ಕೊಂಡುದು. ಎರಡನ್ನೂ ತಗಲುಹಾಕಿದ್ದ. ಕುರ್ಚಿಯಿಂದ ಸ್ವಲ್ಪ ಹಿಂದಕ್ಕೆ ಮಂಚ, ಮಂಚದಮೇಲೆ ತನ್ನ ಹಾಸಿಗೆ. ಮಂಚದ ಕೆಳಗೆ ಪೆಟ್ಟಿಗೆಯನ್ನಿಟ್ಟಿದ್ದ. ಕೊಠಡಿಯ ಇನ್ನೊಂದು ಕಡೆ ಗೋಡೆಗೆ ಮೊಳೆ ಹೊಡೆದು ಬಿಗಿದಿದ್ದ ತಂತಿಯ ಮೇಲೆ ಒಪ್ಪವಾಗಿ ಮಡಿಸಿಹಾಕಿದ ಬಟ್ಟೆಗಳು.

ಬೆಳಗಿನ ವೇಳೆ ಮೇಲಿನ ಕೊಠಡಿಯನ್ನು ಅನಸೂಯಮ್ಮನವರೇ ಗುಡಿಸುತ್ತಿದ್ದರು. ಈಚೆಗೆ ಪ್ರಮೀಲಳೇ ಆ ಕೆಲಸವನ್ನು ವಹಿಸಿಕೊಂಡಳು. ಆನಂದ ಕೊಠಡಿಯನ್ನು ಬಿಟ್ಟು ಸ್ನಾನಕ್ಕೆ ನಡೆದ ಮೇಲೆ, ತಾನು ಹೋಗಿ ಕಸ ಗುಡಿಸುತ್ತಿದ್ದಳು. ಆನಂದ ಸ್ನಾನವಾದಿ ತಿಂಡಿ, ಕಾಫಿಗಳನ್ನು ಮುಗಿಸಿಕೊಂಡು ಬರುವವರೆಗೆ ಅವಕಾಶವಿರುತ್ತಿದ್ದುದರಿಂದ, ಅದುವರೆಗೆ ಕೊಠಡಿಯನ್ನು ಅಂದಗೊಳಿಸುವುದರಲ್ಲೇ ಮಗ್ನಳಾಗುತ್ತಿದ್ದಳು. ಈ ಭರದಲ್ಲಿ, ಆನಂದ ತನಗೆ ಅನುಕೂಲವಾಗಿ ಮಾಡಿಕೊಂಡಿದ್ದ ವ್ಯವಸ್ಥೆಗಳು ಸ್ವಲ್ಪ ಬದಲಾಗಿ ಹೋಗುತ್ತಿದ್ದುವು. ಅವಳಿಗೆ ಆನಂದನ ಭಾವಚಿತ್ರವನ್ನು ನೋಡಲು ಬಹಳ ಆಸ್ಥೆ. ಭಾವಚಿತ್ರವನ್ನು ಕೈಗೆ ತೆಗೆದುಕೊಂಡು ಮನ ಹೋಲುವವರೆಗೆ ನೋಡುತ್ತಿದ್ದಳು. ಆನಂದ ಬರುವಸಮಯವಾಗುತ್ತಲೂ, ಸೊಸೈಟಿಗೆ ತೆಗೆದುಕೊಂಡು ಹೋಗಬಹುದಾದ ಲೆಕ್ಕದ ಪುಸ್ತಕಗಳನ್ನು ಜೋಡಿಸಿಟ್ಟು ಕೆಳಗೆ ನಡೆಯುತ್ತಿದ್ದಳು.

ಈಚೆಗೆ ತನ್ನ ಕೊಠಡಿಯಲ್ಲಿ ಕಾಣುತ್ತಿದ್ದ ಬದಲಾವಣೆ ಹಾಗೂ ನವ್ಯತೆಯಿಂದ ಆನಂದನಿಗೆ ಅಚ್ಚರಿಯಾಗತೊಡಗಿತು. ಇದು ಯಾರ ಕೆಲಸವೆಂದು ಅವನ ಮನಸ್ಸು ಕೌತುಕದಿಂದ ಪ್ರಶ್ನಿಸುತ್ತಿತ್ತು. ಅನಸೂಯಮ್ಮನವರು ಮೇಲೆ ಬಂದು ಕಸಗುಡಿಸುತ್ತಾರೆಯೆ? ಛೆ! ಅವರೇಕೆ ಇಲ್ಲಿ ಕಸಗುಡಿಸುತ್ತಾರೆ? ಒಂದುವೇಳೆ ಕಸಗುಡಿಸಿದರೂ ಈ ಬದಲಾವಣೆಗಳು! ಅದು ಹೋಗಲಿ. ಸೊಸೈಟಿಯ ಲೆಕ್ಕದ ಪುಸ್ತಕಗಳನ್ನು ಅವಶ್ಯಕತೆಗೆ ತಕ್ಕಂತೆ ಜೋಡಿಸಿಡುವುದು ಅವರಿಗೇನು ಗೊತ್ತು? ಇದು ಅನಸೂಯಮ್ಮನವರ ಕೆಲಸವಂತೂ ಖಂಡಿತವಾಗಿಯೂ ಅಲ್ಲವೆಂದು ಮನಸ್ಸು ಸಮರ್ಥಿಸಿತು. ಹಾಗಾದರೆ ಇನ್ನಾರ ಕೆಲಸವಿದು? ಪ್ರಮಿಾಲಳ ಕೆಲಸವೇ? ಇರಬಹುದು. ಆದರೆ ಹೀಗೇಕೆ ಮಾಡುತ್ತಾಳೆ? ಆನಂದನ ತಲೆಯಲ್ಲಿ ತಟ್ಟನೆ ಹಿಂದೆ ಒಂದೆರಡು ಬಾರಿ ಪ್ರಮಿಾಲ ತನ್ನನ್ನು ಕದ್ದುನೋಡುತ್ತಿದ್ದುದು, ಭಾನುವಾರದ ದಿನದ ಘಟನೆ–ಎಲ್ಲವೂ ಕಣ್ಮುಂದೆ ಸುಳಿದು ಆ ಬಗ್ಗೆ ಯೋಚನೆ ತಲೆಹಾಕಿತು. ಪ್ರಮಿಾಲ ಹೀಗೇಕೆ ಮಾಡುತ್ತಾಳೆ? ಏಕಿರಬಹುದು? ಉತ್ತರ ಹೊಳೆಯದಿದ್ದರೂ ಆ ಬಗ್ಗೆ ಅಲ್ಪ ಸಮಾಧಾನ ದೊರೆಯುತ್ತಿತ್ತು.

ಆನಂದ ಬಂದು ನಾಲ್ಕೈದು ತಿಂಗಳಾಗಿದ್ದರೂ ಒಂದು ದಿನವೂ ಅವಳನ್ನು ಕಣ್ಣೆತ್ತಿ ಸರಿಯಾಗಿ ನೋಡಿರಲಿಲ್ಲ. ಕೆಲವು ಸಂದರ್ಭಗಳಲ್ಲಿ ನೋಡಿದ್ದ, ಆದರೆ ಅಪೇಕ್ಷಿತವಾಗಿ ಎಂದೂ ನೋಡಿರಲಿಲ್ಲ. ಪ್ರಮಿಾಲೆಯ ಬಗ್ಗೆ ಯೋಚಿಸುತ್ತಿದ್ದಂತೆ ಅವನ ಮನಸ್ಸು ತನಗರಿಯದಂತೆ ಅವಳ ಕಡೆಗೆ ಹರಿಯತೊಡಗುತ್ತಿತ್ತು. ಆದರೆ ಆ ಕೂಡಲೇ ತನ್ನದು ತಪ್ಪುಭಾವನೆ ಎಂದುಕೊಂಡು ಸಮಾಧಾನಹೊಂದಲು ಪ್ರಯತ್ನಿಸುತ್ತಿದ್ದ. ಆದರೆ ದಿನಗಳಾದಂತೆ ಅವನ ಮನಸ್ಸು ಸೂಜಿಗಲ್ಲಿನಿಂದ ಆಕರ್ಷಿಸಲ್ಪಟ್ಟ ಕಬ್ಬಿಣದಂತೆ ಪ್ರಮಿಾಲೆಯ ಕಡೆವಾಲತೊಡಗಿತು.

ಒಂದು ದಿನ ಬೆಳಗ್ಗೆ ಕೃಷ್ಣಮೂರ್ತಿಗಳು ಸೊಸೈಟಿಯ ಸ್ಟಾಕ್ ಚೆಕ್ ಮಾಡಲು ಬರುವೆನೆಂದು ಆನಂದನಿಗೆ ಹೇಳಿಕಳುಹಿಸಿದರು. ಆನಂದ ಬೇಗ ಬೇಗ ಸ್ನಾನ, ತಿಂಡಿಗಳನ್ನು ಮುಗಿಸಿಕೊಂಡು ಮೇಲೆ ಬಂದ. ಪ್ರಮೀಲಳಿಗೆ ಇದು ಗೊತ್ತಿರಲಿಲ್ಲ. ಅವಳು ಆನಂದನ ಭಾವಚಿತ್ರ ಹಿಡಿದು ನೋಡುತ್ತ ನಿಂತಿದ್ದಳು. ಆನಂದ ಬಂದುದು ಕಂಡು ಬೆಚ್ಚಿ, ಮತ್ತೆ ಭಾವಚಿತ್ರವನ್ನು ಅಲ್ಲಿಯೇ ತಗಲುಹಾಕಿ, ಮೇಜಿನ ಮೇಲಿದ್ದ ಪುಸ್ತಕಗಳ ಧೂಳನ್ನು ಕೊಡವತೊಡಗಿದಳು. ಆನಂದ ಒಳಬಾಗಿಲಿನಲ್ಲಿ ನಿಂತು ತನ್ನ ಕಡೆಯೇ ನೋಡು

ತ್ತಿದ್ದುದು ಕಂಡು ಬೆದರಿದ ದನಿಯಲ್ಲಿ ಹೇಳಿದಳು.

"ಪುಸ್ತಕಗಳಲ್ಲಿ ತುಂಬಾ ಧೂಳು ಕುಳಿತಿತ್ತು, ಅದಕ್ಕೆ......" ಮುಂದೆ ಮಾತು ಹೊರಡಲಿಲ್ಲ.

ಆನಂದ ಎದುರು ನಿಂತಿದ್ದ ರೂಪಸಿಯನ್ನು ನೋಡಿದ. ದುಂಡನೆಯು ಹೆಚ್ಚು ಉದ್ದವಿಲ್ಲದ ಮುಖ, ಗುಲಾಬಿಗೆಂಪಿನ ಕೆನ್ನೆಗಳು, ಬೆದರಿದ ಕಣ್ಣು ಗಳ ಮಿಂಚಿನಂತಹ ಹೊಳಪು, ಬಿಲ್ಲಿನಂತೆ ಬಾಗಿ ಕಪ್ಪಾಗಿ ಸ್ವಲ್ಪ ಒತ್ತಾಗಿ ಬೆಳೆದಿರುವ ಹುಬ್ಬುಗಳು, ನಗೆಯ ಲೇಪನವಾಗಿರುವ ಕೆಂಪು ತುಟಿ, ತಿಳಿ ಗುಲಾಬಿಯ ದೇಹದ ಕಾಂತಿ, ದುಂಡನೆಯ ತೋಳುಗಳು, ಆದೇಹಸೌಷ್ಠವ ಹಾಗೂ ನಿಲುವಿನ ಭಂಗಿ!

ಗುಲಾಬಿಯ ವರ್ಣದ ಮಿರುಗುವ ಸೀರೆಯುಟ್ಟು, ತಿಳಿಹಸುರಿನ ಜಾಕೇಟ್ ಧರಿಸಿದ್ದ ಪ್ರಮೀಲ ಆನಂದನಿಗೆ ಸುರಸುಂದರಿಯಂತೆ ಕಂಡಳು ಅವನು ಇನ್ನೂ ನೋಡುತ್ತಲೇ ಇದ್ದ. ಅವಳಲ್ಲಿಂದ ಕಣ್ಣನ್ನು ಕೀಳಲು ಅವನಿಂದ ಸಾಧ್ಯವಾಗಲಿಲ್ಲ.

ಆನಂದನ ಮನಸ್ಸು ಪ್ರಮೀಲೆಯೊಡನೆ ಮಾತಾಡಲು ತವಕಿಸುತ್ತಿತ್ತು. ಏನೆಂದು ಮಾತಾಡಿಸಬೇಕು? ಎಂಬುದು ಹೊಳೆಯಲಿಲ್ಲ. ಅವನ ದೃಷ್ಟಿ ಪ್ರಮೀಲ ಹಿಡಿದಿದ್ದ ಪುಸ್ತಕದ ಕಡೆ ಹೋಯಿತು ಪ್ರಮೀಲೆಯ ಕೈಯಲ್ಲಿ ತಾನು ಅರ್ಧ ಓದಿ ಬಿಟ್ಟಿದ್ದ ಕಾದಂಬರಿ ಇತ್ತು. ಮಾತಿಗೊಂದು ಆಧಾರ ದೊರೆಯಿತು. ಸ್ವಲ್ಪ ಮುಂದೆ ಮೇಜಿನ ಬಳಿ ಬಂದು ಮೇಜಿನ ಒಂದು ಕೊನೆಯನ್ನು ಹಿಡಿದು ಕೇಳಿದ,

"ಆ ಪುಸ್ತಕ ಬೇಕಾಗಿತ್ತೇನು?" ಉತ್ತರಕ್ಕಾಗಿ ಆಸೆಯಿಂದ ಅವಳ ಕಡೆಯೇ ನೋಡುತ್ತ ನಿಂತ.

ಆನಂದನ ಪ್ರಶ್ನೆಗೆ ಬೆಚ್ಚಿದ ಪ್ರಮೀಲ, "ಆ......!", ಎಂದು ಕತ್ತೆತ್ತಿ ನೋಡಿದಳು. ಆನಂದ ತನ್ನ ಹತ್ತಿರ–ಬಹಳ ಹತ್ತಿರ, ಮೇಜಿನ ಇನ್ನೊಂದು ಮೂಲೆಯನ್ನು ಹಿಡಿದು ನಿಂತಿದ್ದಾನೆ. ಆನಂದ ಲುಂಗಿಯುಟ್ಟು ಹೆಗಲ ಮೇಲೆ ಟವಲು ಹಾಕಿಕೊಂಡಿದ್ದ. ಅದೇ ತಾನೇ ಸ್ನಾನಮಾಡಿ ಬಂದಿದ್ದು ದರಿಂದ ಹಬೆಯಾರುತ್ತಿದ್ದ ದೇಹದಲ್ಲಿ ಕೆಂಪು ಮೂಡಿತ್ತು. ಆನಂದನ ವಿಶಾಲವಾದ ಉಕ್ಕಿನಂತಹ ಎದೆ, ಮಾಂಸಖಂಡ ಉಬ್ಬಿ ಕಾಣುತ್ತಿದ್ದ ತೋಳುಗಳು ಅವಳ ಮನಸ್ಸಿನಲ್ಲಿ ಕೋಲಾಹಲವನ್ನೆಬ್ಬಿಸಿದುವು. ಆನಂದ

ನಗುತ್ತ ನಿಂತಿದ್ದ. ಅವನ ಕಣ್ಣುಗಳಲ್ಲಿ ತುಂಟತನವಿತ್ತು. ಅವನ ಕ್ರಾಪಿನ ಕೂದಲು ಉಂಗುರದಂತೆ ಹಣೆಗೆ ಅಂಟಿಕೊಂಡಿತ್ತು.

"ಎಷ್ಟು ಚೆನ್ನಾಗಿದ್ದಾರೆ!" ಪ್ರಮೀಲಳ ಹೃದಯ ಒಳಗೇ ಮಿಡಿಯಿತು.

"ಆ ಪುಸ್ತಕವನ್ನು ಓದುತ್ತೀರೇನು?" ಮತ್ತೆ ಅದೇ ಪ್ರಶ್ನೆ. ಪ್ರಶ್ನೆಗೆ ಉತ್ತರ ಕೊಡಬೇಕಾಗಿತ್ತು. ತಲೆ ತಗ್ಗಿಸಿ ಹೇಳಿದಳು—

"ನೀವು ಬಹಳ ಒಳ್ಳೊಳ್ಳೆಯ ಪುಸ್ತಕಗಳಿಟ್ಟಿದ್ದೀರಂತೆ, ಪ್ರಕಾಶ ಹೇಳಿದ". ಮಾತಿನಲ್ಲಿ ಅರ್ಥವಿರಲಿಲ್ಲ, ಆದರೂ ಉತ್ತರ ಕೊಟ್ಟಪುದಾಗಿತ್ತು.

"ಯಾವುದು ಬೇಕೋ ತೆಗೆದುಕೊಂಡು ಹೋಗಬಹುದಲ್ಲ."

"ಮಧ್ಯಾಹ್ನದ ವೇಳೆ ಹೊತ್ತುಹೋಗುವುದಿಲ್ಲ. ಯಾವುದಾದರೂ ಪುಸ್ತಕವಿದ್ದರೆ ಓದಬಹುದಾಗಿತ್ತು ಎನ್ನುತ್ತಾಳೆ ಅಮ್ಮ."

"ನಿಮ್ಮ ತಾಯಿಯವರೂ ಓದುತ್ತಾರೇನು?" ಆನಂದ ಕೊಂಕು ನಗೆ ನಕ್ಕು ಕೇಳಿದ. ಅನಸೂಯಮ್ಮನವರಿಗೆ ಓದು ಬಾರದೆಂಬ ವಿಷಯ ಗೊತ್ತಿತ್ತು. ಅದೂ ಅಲ್ಲದೆ ಮಧ್ಯಾಹ್ನ ಕೆಲಸವೆಲ್ಲ ಮುಗಿದ ಮೇಲೆ ಡಾಕ್ಟರ ಮನೆಗೆ ಹೋಗಿ ರುಕ್ಮಿಣಮ್ಮನವರೊಡನೆ ಹೂಬತ್ತಿ ಮಾಡಲು ಕೂಡುವ ರೆಂಬುದೂ ತಿಳಿದಿತ್ತು.

ಪ್ರಮೀಲ ಸ್ವಲ್ಪ ಕತ್ತೆತ್ತಿ, "ಅಮ್ಮನಿಗೆ ಓದಲು ಬರುವುದಿಲ್ಲ; ನಾನೇ ಓದಿ ಹೇಳುತ್ತೇನೆ," ಎಂದಳು. ಅವಳ ಮನಸ್ಸು ಕಳ್ಳ ನಗೆ ನಗುತ್ತಿತ್ತು.

"ಯಾವುದಾದರೂ ಒಳ್ಳೆಯ ಪುಸ್ತಕವಿದ್ದರೆ ಕೊಡುವಿರಾ?"

"ಓಹೋ! ಅಗತ್ಯವಾಗಿ ತೆಗೆದುಕೊಂಡು ಹೋಗಿ," ಎಂದು ಆನಂದ ಮೇಜಿನ 'ಡ್ರಾ' ಎಳೆದು, ಎರಡು ಪುಸ್ತಕಗಳನ್ನು ತೆಗೆದು ಅವಳ ಮುಂದೆ ಕೈನೀಡಿ "ತೆಗೆದುಕೊಳ್ಳಿ" ಎಂದ.

ಪ್ರಮೀಲ ತಲೆ ತಗ್ಗಿಸಿಕೊಂಡೇ ಕೈನೀಡಿ ಪುಸ್ತಕಗಳನ್ನು ತೆಗೆದು ಕೊಂಡಳು. ಪುಸ್ತಕಗಳನ್ನು ತೆಗೆದುಕೊಂಡಾಗ ಆನಂದನ ಬೆರಳುಗಳು ಬಳ್ಳಿಯಂತೆ ಮೃದುವಾಗಿದ್ದ ಪ್ರಮೀಲೆಯ ಬೆರಳುಗಳಿಗೆ ಸೋಕಿದುವು. ಇಬ್ಬರ ದೇಹದಲ್ಲೂ ವಿದ್ಯುತ್ ಸಂಚಾರವಾದಂತಾಗಿ ಮೈ 'ಝುಂ' ಎಂದಿತು. ಪ್ರಮೀಲ ಕಾತರಳಾಗಿ ಕತ್ತೆತ್ತಿದಳು. ಆನಂದ ಅವಳ ಮುಖವನ್ನೇ ನೋಡುತ್ತ ನಿಂತಿದ್ದ. ನಾಲ್ಕು ಕಣ್ಣುಗಳು ಕೂಡಿ, ಪರಸ್ಪರ ಮಾತನಾಡಿ

ಕೊಂಡುವು. ಆನಂದ ನಕ್ಕ. ಅವನ ಕೆನ್ನೆಗಳಲ್ಲಿ ಮೂಡಿದ ಗುಳಿಗಳನ್ನು ಕಂಡ ಪ್ರಮೀಲೆಯ ಮನಸ್ಸು ಹೊಯ್ದಾಡಿತು. ಪ್ರಮೀಲ ನಕ್ಕು ತಲೆತಗ್ಗಿಸಿದಳು. ಹೃದಯದ ಸಂದೇಶ ಹೃದಯಕ್ಕೆ ಮುಟ್ಟಿತ್ತು. ಕೊಠಡಿಯಲ್ಲಿ ಮೌನ ಆವರಿಸಿತ್ತು. ಇಬ್ಬರಿಗೂ ಮಾತು ಮುಂದುವರಿಸಬೇಕೆಂಬ ಆಸೆ. ಆದರೆ ವಿಷಯಗಳಿರಲಿಲ್ಲ. ಆ ಮೌನ ವಾತಾವರಣದಲ್ಲಿ ಜೇನಿಗಿಂತಲೂ ಸವಿಯಾದ ಸುಖವಾದ ಆ ಕೆಲವು ನಿಮಿಷಗಳು ಅವರಿಬ್ಬರ ಹೃದಯಗಳನ್ನು ಹತ್ತಿರ ಹತ್ತಿರ ತಂದು ಪರಿಚಯ ಮಾಡಿಸಲು ಪ್ರಯತ್ನಿಸುತ್ತಿದ್ದುವು.

ಆನಂದ ಅವಳ ಬಳಿ ನಿಂತು ಕೇಳಿದ. ದನಿಯಲ್ಲಿ ಮಮತೆಯಿತ್ತು— "ನಿತ್ಯವೂ ಮೇಲೆ ನೀವೇ ಗುಡಿಸುತ್ತೀರೇನು?"

"ಮೊದಲು ಅಮ್ಮನೇ ಗುಡಿಸುತ್ತಿದ್ದಳು. ನಾನೇ ಬೇಡವೆಂದೆ."

"ಅಂದರೆ ಈಗ ನಿತ್ಯವೂ ನೀವೇ ಗುಡಿಸುತ್ತೀರಿ?"

ಪ್ರಮೀಲ ಹೌದೆಂಬಂತೆ ತಲೆದೂಗಿದಳು. ಆನಂದ ಪಶ್ಚಾತ್ತಾಪದ ದನಿಯಲ್ಲಿ,

"ಛೆ, ಛೆ, ನೀವೇಕೆ ಗುಡಿಸಬೇಕು? ಅವನಿಲ್ಲವೇ ಜೈಲರ್, ಅವನಿಗೇನು ಕೆಲಸವಿರುತ್ತೆ? ಬಂದು ಗುಡಿಸುತ್ತಾನೆ" ಎಂದು ಹೇಳಿದ. ಮನಸ್ಸು ನಗುತ್ತಿತ್ತು. ಪ್ರಮೀಲ ಕತ್ತೆತ್ತಿ ಆನಂದನ ಕಡೆ ನೋಡುತ್ತ,

"ನಾನೇಕೆ ಗುಡಿಸಬಾರದು?" ಎಂದು ಕೇಳಿದಳು.

"ಹಾಗಲ್ಲ, ಅವನಿದ್ದೂ ನೀವೇಕೆ ವೃಥಾ ತೊಂದರೆ ಪಡಬೇಕು ಹೇಳಿ? ಸೋಮಾರಿಯ ಹಾಗೆ ಅಲೆದುಕೊಂಡಿರುತ್ತಾನೆ. ಅವನಿಗೆ ಹೇಳುತ್ತೇನೆ."

ಪ್ರಮೀಲ ಆನಂದನ ಕಡೆ ದೀನಭಾವದಿಂದ ನೋಡಿ,

"ನನಗೆ ನಿಮ್ಮ ಕೋಣೆಯನ್ನು ಅಂದವಾಗಿಡುವುದಕ್ಕೆ ಕಷ್ಟವೇನಿಲ್ಲ. ನಿಮ್ಮ ಕೋಣೆಯನ್ನು ಅಂದಗೊಳಿಸಲು ನನಗೆ ತುಂಬಾ......"ಎಂದು ತುಟಿ ಕಚ್ಚಿದಳು. ಅವಳ ವಾಣಿಯಲ್ಲಿ ಕಳಕಳಿಯಿತ್ತು. ಜೈಲಾನ ತನ್ನ ಕೆಲಸದಲ್ಲಿ ಭಾಗವಹಿಸುವುದಾದರೂ ಏಕೆಂದು ಕಣ್ಣುಗಳು ಪ್ರಶ್ನಿಸುತ್ತಿದ್ದುವು.

ಆನಂದ ಏನೋ ಹೇಳುವುದರಲ್ಲಿದ್ದ. ಅಷ್ಟರಲ್ಲೇ ಕೆಳಗೆ ಪ್ರಕಾಶ ಕೂಗಿದ ಶಬ್ದ ಕೇಳಿಸಿತು. ಪ್ರಮೀಲ ಗಾಬರಿಯಿಂದ ಪುಸ್ತಕಗಳನ್ನು ಅಲ್ಲಿಯೇ ಬಿಟ್ಟು ಓಡಿದಳು.

"ಪುಸ್ತಕಗಳನ್ನು ಇಲ್ಲೇ ಬಿಟ್ಟಿರಲ್ಲ!" ಎಂದು ಪುಸ್ತಕಗಳನ್ನು ಹಿಡಿದು ಬಾಗಿಲ ಕಡೆ ಬಂದ. ಪ್ರಮೀಲ ಪುನಃ ಬಂದು, "ಕೊಡಿ" ಎಂದು ಕೈನೀಡಿ ನಕ್ಕಳು. ಆನಂದ ಪುಸ್ತಕಗಳನ್ನು ಕೊಟ್ಟು ಅವಳ ಮುಖವನ್ನೇ ನೋಡುತ್ತ ನಗುತ್ತಿದ್ದ.

"ಹೋಗುತ್ತೇನೆ" ಎಂದು ಓರೆನೋಟ ಬೀರಿ ನಕ್ಕು ಪ್ರಮೀಲ ಕೆಳಗೆ ನಡೆದಳು. ಆನಂದ ಉಬ್ಬಿದ ಹೃದಯದಿಂದ ಒಳಗೆ ಬಂದ.

ಮಧ್ಯಾಹ್ನ ಊಟವಾದ ಮೇಲೆ ಪ್ರಮೀಲ ನಡುಮನೆಯಲ್ಲಿ ಚಾಪೆ ಉರುಳಿಸಿಕೊಂಡು ಬೆಳಗ್ಗೆ ಆನಂದನು ಕೊಟ್ಟಿದ್ದ ಪುಸ್ತಕಗಳನ್ನು ಓದಲು ಕುಳಿತಳು 'ಹೊಂಗನಸು' ಎಂಬ ಪುಸ್ತಕ ತೆಗೆದು ನೋಡಿದಳು. ಇದು ಬೇಡ, ಇನ್ನೊಂದು ನೋಡೋಣವೆಂದು ಎರಡನೆಯ ಪುಸ್ತಕವನ್ನು ಕೈಗೆತ್ತಿ ಕೊಂಡಳು. 'ಹುಣ್ಣಿಮೆಯ ರಾತ್ರಿ' ಎಂದು ಮೇಲೆ ಢಾಳಾಗಿ ಕಾಣುತ್ತಿತ್ತು ಪುಸ್ತಕದ ಹೆಸರು.

ಪ್ರಮೀಲ ಪುಸ್ತಕದ ರಕ್ಷಾಪತ್ರ ತೆರೆದು ಒಳಗೆ ನೋಡಿದಳು. ಒಳಗೆ ನೋಡಿದಳು. ಒಳಗೆ ತೆಳುವಾದ ಕವರು ಕಾಗದದ ಹಿಂದಿನಿಂದ ಆನಂದನ ಭಾವಚಿತ್ರ ಕಂಗೊಳಿಸುತ್ತಿತ್ತು. ಭಾವಚಿತ್ರ ನೋಡಿದ ಕೂಡಲೆ ಪ್ರಮೀಲೆಯ ಮೈ ಪುಳಕಿಸಿತು. ಚಿತ್ರದ ಕೆಳಗೆ ಮುದ್ದಾದ ದುಂಡು ಅಕ್ಷರದಲ್ಲಿ 'ಆನಂದ' ಎಂದು ಬರೆದಿತ್ತು. ಭಾವಚಿತ್ರವನ್ನು ಆಲ್ಬಂನ ಮೌಂಟ್ ಕಾಗದದಲ್ಲಿ ಸೇರಿಸಿತ್ತು. ಪ್ರಮೀಲ ಮೆಲ್ಲಗೆ ಭಾವಚಿತ್ರದ ಮೂಲೆಗಳನ್ನು ಮೌಂಟದಿಂದ ಬಿಡಿಸಿಕೊಂಡು ಹೊರತೆಗೆದಳು. ಚಿತ್ರದ ಹಿಂದೆಯೂ ಅಂದವಾದ ಅಕ್ಷರ ದಲ್ಲಿ 'ಆನಂದ' ಎಂದು ಬರೆದಿತ್ತು ಪ್ರಮೀಲ ಕೆಲನಿಮಿಷ ಹಾಗೆಯೇ ನೋಡುತ್ತಿದ್ದು, ಪುಟ ತಿರುಗಿಸಿದಳು. ಶುಭ್ರವಾದ ಬಿಳಿಯ ಕಾಗದದ ಮೇಲೆ ಮುತ್ತಿನಂತಹ ಅಕ್ಷರದಲ್ಲಿ ಏನೋ ಬರೆದಿದ್ದುದು ಕಂಡು ಅವಳ ಕುತೂಹಲ ಕೆರಳಿತು ಓದತೊಡಗಿದಳು. ಓದುತ್ತ ಓದುತ್ತ ಮುಖ ಅರಳಿತು. ಆನಂದ ಹಿಂದೆಂದೋ ಒಂದು ದಿನ ಬರೆದಿದ್ದ ಎರಡು ಪದ್ಯಗಳು. ಪ್ರಮೀಲ ಮೆಲ್ಲನೆ ನುಡಿಯತೊಡಗಿದಳು.

"ಹುಣ್ಣಿಮೆಯ ಬೆಳಗ ವೀಣೆ,
ಮಿಡಿಯುತಿದೆ ಮಧುರತಾನ,
ಕರೆಯುತಿದೆ ಪ್ರಿಯತಮನ
ನೀನು ಬಾರ ನನ್ನ ಸುಮನ."

ಇನ್ನೊಂದು ಪದ್ಯ ಮೊದಲದಕ್ಕಿಂತ ಚೆನ್ನಾಗಿದೆಯೆನ್ನಿಸಿತು, ಪ್ರಮೀಲ ಹೇಳತೊಡಗಿದಳು.

"ಸಮರಸತೆ ಕಾಣಲೆಂದು,
ಸುಖದ ಸವಿಯ ಹೀರಲೆಂದು,
ಹೃದಯ ಪಕ್ಷಿ ಕರೆಯುತಿದೆ,
ಬೇಗ ಬಾರ ನನ್ನ ಸುಮನ."

"ಆನಂದ."

ಪ್ರಮೀಲೆಗೆ ಇದು ತನ್ನನ್ನೇ ಉದ್ದೇಶಿಸಿ, ಆನಂದ ಬರೆದಿರುವಂತೆ ಭಾಸವಾಯಿತು. 'ಹೃದಯ ಪಕ್ಷಿ ಕರೆಯುತಿದೆ, ಬೇಗ ಬಾರ ನನ್ನ ಸುಮನ', ಎಂದು ಮತ್ತೆ ಮತ್ತೆ ಮೆಲುಕು ಹಾಕುತ್ತ, ಕೈಲಿದ್ದ ಭಾವಚಿತ್ರ ನೋಡಿದಳು. ಆನಂದ ನಗುತ್ತ ತನ್ನನ್ನು ಕರೆಯುತ್ತಿರುವಂತೆ ಭಾಸವಾಯಿತು. ತಾನೂ ನಕ್ಕಳು.

ತಾನೂ ಏನಾದರೂ ಮೇಲಿನ ಪದ್ಯಗಳಿಗೆ ತಕ್ಕ ಹಾಗೆ ಬರೆಯಬೇಕೆನ್ನಿಸಿತು, ಅವಳಿಗೆ. ಪೆನ್ನು ಕೈಯಲ್ಲಿ ಹಿಡಿದು ಕುಳಿತಳು. ಏನು ಬರೆಯಲಿ? ಬರೆದರೆ ಈ ಪದ್ಯಗಳಿಗೂ ಚೆನ್ನಾಗಿ ಆನಂದ ಮೆಚ್ಚುವಂತೆ ಬರೆಯಬೇಕು. ತನಗೆ ಬರೆಯಲು ಬಾರದು; ಆದರೂ ಬರೆಯಬೇಕೆಂಬ ಹಂಬಲ. ಪದಗಳನ್ನು ಜೋಡಿಸಿ ಸರಿಯಾದ ಅರ್ಥ ಬರುವಂತೆ ಮುದ್ದಾದ ಅಕ್ಷರದಲ್ಲಿ ಮೇಲಿನ ಪದ್ಯಗಳಿಂದ ಸ್ವಲ್ಪ ಕೆಳಗೆ ಬರೆದಳು,

"ಒಲವ ಗಾನ ಕೇಳುತಿರಲಿ,
ಹೃದಯ ವೀಣೆ ಮಿಡಿಯುತಿರಲಿ,
ಪ್ರೇಮ ಗಂಗೆ ಹರಿಯುತಿರಲಿ,
ಮಿಲನ ಸುಖವ ಬಯಸುತಿರಲಿ.

ಪದ್ಯ ನೋಡಿದಳು. ಚೆನ್ನಾಗಿದ್ದಂತೆ ಕಂಡುಬಂತು. ತಾನೂ ಬರೆಯಬಲ್ಲೆನೆಂಬ ಸಂತೋಷದಿಂದ ಹೃದಯ ಅರಳಿತು. ಮುಂದೆ ಬರೆದಳು,

"ಒಲವಿನ ಕರೆಗೆ 'ಓ' ಎಂದು,
ಪ್ರೇಮ ಅಮರವೆನಿಸಲೆಂದು,
ನಾನೇ ನಿನ್ನ ಸುಮನಳೆಂದು,
ಭರದಿ ಬರುವೆ ಪ್ರಿಯತಮಾ"

'ಪ್ರಮೀಲ'

ಬರೆದ ಮೇಲೆ ತನ್ನ ಪದ್ಯಗಳಿಗೂ, ಆನಂದನ ಪದ್ಯಗಳಿಗೂ ಹೋಲಿಕೆ ನೋಡಿದಳು. ತನ್ನದು ಗೆಲುವೆಂದು ಹೃದಯ ಸಮರ್ಥಿಸಿತು. ಭಾವ ಚಿತ್ರವನ್ನು ತಿರುಗಿಸಿ, 'ಆನಂದ' ಎಂಬ ಮೂರಕ್ಷರದ ಕೆಳಗೆ 'ಪ್ರಮೀಲ' ಎಂದು ಬರೆದಳು. 'ಈಗ ಸರಿಹೋಯಿತು; ಮೊದಲು ಒಂದೇ ಹೆಸರು ಭಣಗುಟ್ಟುತ್ತಿತ್ತು', ಎಂದು ಹೃದಯ ಹರ್ಷತಾಳಿತು. ಚಿತ್ರವನ್ನು ಎಂದಿನಂತೆ ಮೌಂಟಿನಲ್ಲಿ ಸೇರಿಸಿದಳು. ಸ್ವಲ್ಪ ಹೊತ್ತಿನ ಮೇಲೆ ಆನಂದನ ಪುಸ್ತಕದಲ್ಲಿ ಹುಚ್ಚು ಹುಚ್ಚಾಗಿ ಬರೆದುಬಿಟ್ಟೆನಲ್ಲಾ, ನನಗೇನು ಬುದ್ಧಿ ಬಂದು ಹೀಗೆ ಬರೆದೆ. ಆನಂದನ ಹೆಸರಿನ ಕೆಳಗೆ ನನ್ನ ಹೆಸರೂ ಬರೆದು ಬಿಟ್ಟಿದ್ದೇನೆ. ಅಯ್ಯೋ! ಈಗೇನು ಮಾಡಲಿ? ಆನಂದ ಏನೆಂದುಕೊಳ್ಳುತ್ತಾನೋ, ಎಂದು ಅವಳ ಮನಸ್ಸು ಗಾಬರಿಯಿಂದ ಮಿಡಿಯತೊಡಗಿತು. ಮತ್ತೆ ಸಮಾಧಾನ ಮಾಡಿತು. 'ಬರೆದರೆ ಏನು ತಪ್ಪು? ನಾನು ಆನಂದನನ್ನು ಪ್ರೀತಿಸುತ್ತೇನೆ; ಆನಂದನೂ ನನ್ನನ್ನು ಪ್ರೀತಿಸುತ್ತಾನೆ. ನಾನು ಮಾಡಿದುದು ಸರಿ, ಎಂದುಕೊಂಡಳು. ಕೂಡಲೇ ಆನಂದ 'ನನ್ನನ್ನು ಪ್ರೀತಿಸುತ್ತಾನೆಯೆ? ಪ್ರೀತಿಸುತ್ತಾನೆಯೆ?' ಎಂಬ ಸಂಶಯದ ಪ್ರಶ್ನೆ ಅವಳ ಮನಸ್ಸನ್ನು ಕಲಕಿತು. ಕೂಡಲೇ ಆನಂದನ ಮುದ್ದು ಮುಖ, ಕೆನ್ನೆ ಗುಳಿಯ ಮೋಹಕ ನಗೆ ಕಣ್ಣ ಮುಂದೆ ನಿಂತು ಸಂಶಯವನ್ನು ದೂರ ಮಾಡಿತು. ಹರ್ಷದಿಂದ ಹೃದಯ ಹಿಗ್ಗಿತ್ತು. ಸುಖದ ಕಲ್ಪನೆಗಳಿಂದ ದೇಹವೆಲ್ಲಾ ಒಂದು ರೀತಿಯ ಮಧುರ ವೇದನೆಯನ್ನನುಭವಿಸುತ್ತಿತ್ತು. ಪುಸ್ತಕವನ್ನು ಎದೆಯ ಮೇಲೆ ಒರಗಿಸಿಕೊಂಡು ಚಾಪೆಯ ಮೇಲೆ ಒರಗಿದಳು. ಎಚ್ಚರವಾದಾಗ ಪ್ರಕಾಶ ಕೈಯಲ್ಲಿ ಕಾಫಿಯ ಲೋಟ ಹಿಡಿದು, 'ಏಳಕ್ಕ' ಎಂದು ಕೂಗುತಿದ್ದ.

ಪುಸ್ತಕಗಳು ವಾಪಸು ಬಂದ ದಿನ ಆನಂದನಿಗೆ ತನ್ನ ಪುಸ್ತಕದಲ್ಲಿ ಆಗಿದ್ದ ಬದಲಾವಣೆಗಳನ್ನು ಕಂಡುಹಿಡಿಯುವುದು ಕಷ್ಟವಾಗಲಿಲ್ಲ. ತಾನು ಬರೆದಿದ್ದ ಪದ್ಯಗಳಿಗೆ ಸರಿಯಾದ ಉತ್ತರವೆಂಬಂತೆ ಬರೆದಿದ್ದ ಆ ಹೊಸ ಪದ್ಯಗಳನ್ನು ಕಂಡು, ಪ್ರಮೀಲ ನಿಜಕ್ಕೂ ರಸಿಕಳು ಎಂದುಕೊಂಡ. ರಸಿಕತೆಗೆ ಮೆಚ್ಚಿದ ಆನಂದ, "ಎಲಾ ಕಳ್ಳೀ......!" ಎಂದ

೬

ಪರೀಕ್ಷೆ ಮುಗಿಸಿಕೊಂಡು ರಜೆಯಲ್ಲಿ ಮನೆಗೆ ಬಂದಾಗ, ರಾಜಣ್ಣನಿಗೆ ಮನೆಯಲ್ಲಿ ಹೊಸಬನೊಬ್ಬ ಮನೆಯವನಂತೆ ಮಮತೆ ಗಳಿಸಿರುವುದು ಕಂಡು

ಅಚ್ಚರಿಯಾಯಿತು ಮೂರು ಹೊತ್ತು ಮನೆಯಲ್ಲಿ ಕುಳಿತಿರುವುದೆಂದರೆ ಬೇಜಾರು ಬರುತ್ತಿತ್ತು. ಈ ಬೇಜಾರನ್ನು ಆನಂದನ ಸಖ್ಯ ನೀಗಲು ಅನುಕೂಲವಾಯಿತು. ಮನೆಯವರೆಲ್ಲರೂ ಆನಂದನನ್ನು ಆದರಿಸುತ್ತಿದ್ದರು. ರಾಜಣ್ಣನೂ ಅದೇ ಆದರವನ್ನು ತೋರಿಸಲಾರಂಭಿಸಿದ.

ವಯಸ್ಸಿನಲ್ಲಿ ಒಂದೆರಡು ವರ್ಷ ಹಿರಿಯನಾದರೂ, ಹಿರಿತನದ ಹೆಮ್ಮೆಯನ್ನು ದೂರವಿರಿಸಿ ಸ್ನೇಹದ ವೈಶಾಲ್ಯತೆಗೆ, ಆತ್ಮೀಯತೆಗೆ ಆನಂದನಿಟ್ಟಿದ್ದ ಬೆಲೆ ಹೆಚ್ಚಿನದೆಂದುಕೊಂಡ. ಅದರಿಂದಲೇ ಆನಂದನಿಂದು ಎಲ್ಲರ ಪ್ರೀತಿಗೆ ಪಾತ್ರನಾಗಿದ್ದಾನೆ ಎಂದುಕೊಂಡ. ಅವನಿಗೆ ಆನಂದನ ನಡತೆ ಹಿಡಿಸಿತ್ತು.

ದಿನವೂ ಬೆಳಗ್ಗೆ ರಾಜಣ್ಣ ಆನಂದನ ಜೊತೆಯಲ್ಲಿ ಸೊಸೈಟಿಗೆ ಹೋಗತೊಡಗಿದ. ಆನಂದ ತನ್ನ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಿಕೊಂಡು ಹೋಗುತ್ತಿರುವ ಬಗ್ಗೆ ಅವನಿಗೆ ಆಶ್ಚರ್ಯವೇ ಆಯಿತು. ಆ ಜನದ ಗುಜುಗುಂಪಲಿನಲ್ಲಿ ಹೇಗೆ ವ್ಯಾಪಾರ ಮಾಡುತ್ತಾನೆ? ಗಲಾಟೆಯೊಳಗೆ ಹಣವೇನಾದರೂ ವ್ಯತ್ಯಾಸವಾದರೆ! ಎಂದು ಯೋಚಿಸುತ್ತಿದ್ದ. ನಿತ್ಯವೂ ಅವನ ಜೊತೆ ಹೋಗಿ ಅವನ ಕೆಲಸದಲ್ಲಿ ತಾನೂ ಭಾಗಿಯಾಗತೊಡಗಿದ.

ಆನಂದ, "ನಿನಗೇಕೆ ತೊಂದರೆ ರಾಜು. ಅಪರೂಪಕ್ಕೆ ರಜಾ ದಿನಗಳಲ್ಲಿ ಮನೆಗೆ ಬಂದಿದ್ದೀ ಹಾಯಾಗಿರಬಾರದೆ ಮನೆಯಲ್ಲಿ? 'ನಿತ್ಯ ಸಾಯುವವರಿಗೆ ಅಳುವರಾರು?' ಎನ್ನುವ ಹಾಗೆ ಈ ಕೆಲಸ ಒಂದು ದಿನದ್ದೆ? ಹೇಳು" ಎನ್ನುತ್ತಿದ್ದ.

"ಮನೆಯಲ್ಲಿ ಹೊತ್ತು ಹೋಗುವುದಿಲ್ಲ; ಹಾಳು, ಬೇಜಾರಾಗುತ್ತೆ. ನಿನ್ನ ಜೊತೆಯಲ್ಲಿದ್ದರೆ ಬೇಜಾರೂ ಕಳೆಯುತ್ತೆ. ನಿನಗೂ ಜನಗಳ ಮಧ್ಯೆ ಸ್ವಲ್ಪ ಸಹಾಯವಾಗತ್ತೆ" ಎನ್ನುತ್ತಿದ್ದ ರಾಜು.

ಸಂಜೆಯ ವೇಳೆ ಬಿಡುವು ಮಾಡಿಕೊಂಡು ರಾಜಣ್ಣನೊಡನೆ ಹೊರಗೆ ಹೋಗಿ ಬರಬೇಕೆಂದು ಆನಂದನ ಅಪೇಕ್ಷೆ. ಆದರೆ ಬಿಡುವು ದೊರೆಯುತ್ತಲೆ ಇರಲಿಲ್ಲ. ದಿನವೂ ನಾಲ್ಕೈದು ಸಾವಿರ ರೂಪಾಯಿಗಳ ವರೆಗೆ ವ್ಯಾಪಾರವಿರುತ್ತಿದ್ದುದರಿಂದ, ಲೆಕ್ಕವನೆಲ್ಲಾ ಮುಗಿಸಿ ಮಾರನೆಯ ದಿನ ವ್ಯಾಪಾರಕ್ಕೆ ಸಿದ್ಧವಾದರೆ ಸಾಕಾಗುತ್ತಿತ್ತು.

ರಾಜಣ್ಣ ಬಂದು ನಾಲ್ಕೈದು ದಿನಗಳ ನಂತರ ಒಂದು ದಿನ ಇಬ್ಬರೂ ವ್ಯಾಪಾರ ಮುಗಿಸಿಕೊಂಡು ಮನೆಗೆ ಬಂದರು. ಆನಂದ ಬೇಜಾರಿನಿಂದ

ಹಾಸಿಗೆಯುರುಳಿಸಿ ಮಲಗಿಕೊಂಡ. ರಾಜಣ್ಣ ತಾನೇ ಲೆಕ್ಕ ಮಾಡಲು ಕುಳಿತ. ಅವನಿಗೊಂದು ಯೋಚನೆ ಹೊಳೆಯಿತು. ಕೆಳಗಿಳಿದು ಪ್ರಮೀಲೆಯ ಹತ್ತಿರ ಬಂದ. ಪ್ರಮೀಲ ರಂಗೋಲೆಯಲ್ಲಿ ಹೊಸ ಹಸೆಯೊಂದನ್ನು ಕಲಿಯಲು ಪ್ರಯತ್ನಿಸುತ್ತಿದ್ದಳು. ರಾಜಣ್ಣ ಹಸೆಯ ಕಡೆಯೇ ನೋಡುತ್ತ,

"ಬರಿಯ ಹಸೆ ತಿದ್ದುವುದರಲ್ಲೇ ಆಯಿತೋ ಅಥವಾ ಇನ್ನೇನಾದರೂ ಬರೆಯುವುದೋ ಲೆಕ್ಕ ಮಾಡುವುದೋ ಯಾವುದಾದರೂ ಉಂಟೋ?" ಎಂದ.

"ನಾನು ಏನಾದರೂ ಮಾಡಿಕೊಳ್ಳುತ್ತೀನಿ ನಿನಗೇನು?"

"ಏನೂ ಇಲ್ಲ. ನಾನೊಂದು ಲೆಕ್ಕ ಹೇಳುತ್ತೀನಿ. ಮಾಡುತ್ತೀಯಾ?"

"ಯಾವ ಲೆಕ್ಕ?"

"ಕೂಡುವ ಲೆಕ್ಕ."

ಅಲ್ಲಿಯೇ ಕುಳಿತಿದ್ದ ಅನಸೂಯಮ್ಮ ಮಗನ ಕಡೆ ತಿರುಗಿ, "ಇದೇನೋ ರಾಜು ಹೀಗಂತೀ, ಲೋವರ್ ಸೆಕೆಂಡರಿ ಪರೀಕ್ಷೆ ಪಾಸು ಮಾಡಿಕೊಂಡು ಕೂಡೋಲೆಕ್ಕ ಬರದಿದ್ದರೆ ಸಾರ್ಥಕವಾಯಿತು ಓದು ಕಲಿತು!" ಎಂದರು.

"ನೀನೊಬ್ಬಳು ಸುಮ್ಮನಿರು. ನನ್ನ ತಮಾಷೆ ಮಾಡಲಿಕ್ಕೆ ಕೇಳುತ್ತಾ ಇದ್ದಾನೆ ರಾಜು, ನನಗೆಲ್ಲ ಗೊತ್ತು."

"ತಮಾಷೆಗಲ್ಲ ಪ್ರಮೀ, ನಿಜವಾಗಿಯೂ ಮಾಡುತ್ತೇನೆಂದರೆ ಹೇಳುತ್ತೇನೆ" ಎಂದು ರಾಜಣ್ಣ ಮೇಲೆ ಹೋಗಿ ಮಾರಾಟದ ಗೋಪಾಲರೆಯ ಬುಕ್ಕು ತಂದು ಹೇಳಿದ,

"ನೋಡು, ಈ ಮೊದಲ ಪೇಜಿನ ದವಸದ ಕಾಲಂ ಎಲ್ಲಾ ಕೂಡಿಸು ನೋಡೋಣ."

ಪ್ರಮೀಲ ರಾಜಣ್ಣ ಹೇಳಿದಂತೆ ಎಲ್ಲಾ ಕಾಲಂಗಳನ್ನೂ ಕೂಡಿಟ್ಟಳು. ರಾಜಣ್ಣ ಅವಳು ಮಾಡಿರುವುದು ಸರಿಯಾಗಿದೆ ಎಂಬುದನ್ನು ಗಮನಿಸಿ, ಮುಂದಿನ ಪುಟವನ್ನೂ ಹಾಗೆಯೇ ಮಾಡಲು ಹೇಳಿದ. ಪ್ರಮೀಲೆಗೆ ರಾಜಣ್ಣನ ಉಪಾಯ ಹೊಳೆಯಿತು. ಪುಸ್ತಕವನ್ನು ಅವನ ಮುಂದೆ ತಳ್ಳಿ, ತುಂಟಕೋಪ ನಟಿಸುತ್ತ,

ಈಗ ಗೊತ್ತಾಯಿತು ನಿನ್ನ ಉಪಾಯ ನಿನ್ನ ಕೈಯಲ್ಲಿ ಲೆಕ್ಕ ಮಾಡಲು ಮೈಬಗ್ಗಲಿಲ್ಲಾಂತ ನನಗೆ ಹೇಳಿದೆಯೋ? ಒಬ್ಬರಲ್ಲಾ ಅಂತ ಇಬ್ಬರು ಇದ್ದೀರಿ ಹೇಮಾ ಹೇಮಿಗಳು! ಮಾಡಿಕೊಳ್ಳಿ. ನಾನು ಮಾಡುತ್ತೀನಿ ಬಾ ಅಂತ! ಎಂದಳು.

"ಏನೋ ರಾಜು ಸೊಸೈಟಿಯ ಲೆಕ್ಕ ಅವಳಿಗೆ ಗೊತ್ತೇನೋ. ಲೆಕ್ಕ ತಪ್ಪಾಗಿಪ್ಪಾದರೆ ಆ ಹುಡುಗನಿಗೆ ತೊಂದರೆಯಾಗುತ್ತೆ ಪಾಪ! ನೀನು ಸುಮ್ಮ ನಿರಪ್ಪ" ಅನಸೂಯಮ್ಮ ಮಗಳ ಪರವಾಗಿ ಮಾತಾಡಿದರು.

"ಕೊಡುವ ಲೆಕ್ಕ ಬರದಿದ್ದರೆ ಹೇಗಮ್ಮಾ! ತಪ್ಪಾಗತ್ತಂತ್ತೆ, ಯಾಕಾಗತ್ತೆ ಹೇಳು? ಈಗಲೇ ಹೀಗಾದರೆ ನಾಳೆ ಗಂಡನ ಮನೆಯಲ್ಲಿ ಏನಾದರೂ ಒಂದು ಲೆಕ್ಕಾಚಾರ ಹಾಕಬೇಕಾಯಿತು; ಆಗ ಏನು ಮಾಡುತ್ತಾಳಂತೆ?!–" ರಾಜಣ್ಣ ಪ್ರಮೀಲಳನ್ನು ಹಾಸ್ಯ ಮಾಡಲು ಪ್ರಾರಂಭಿಸಿದ.

"ಹೌದುಕಣೋ, ನಿನ್ನ ಮಾತಿಗಂತೂ! ಅವಳ ಗಂಡ ಮೂರು ಹೊತ್ತೂ ಸೊಸೈಟಿಯ ಲೆಕ್ಕ ಮುಂದಿಡ್ತಾನೇನು? ನಿನ್ನದೆಲ್ಲ ಅಗಟ ವಿಗಟ?" ಅನಸೂಯಮ್ಮನವರೂ ರಾಜಣ್ಣನೊಡನೆ ದನಿಗೂಡಿಸಿದರು.

"ಏನೋ ಯಾರಿಗೆ ಗೊತ್ತು? ಒಂದು ವೇಳೆ ಹಾಗೇ ಆಗುವುದಾದರೆ, ಈಗಿನಿಂದ ಟ್ರೈನಿಂಗ್ ಆಗಿದ್ದರೆ ಒಳ್ಳೆಯದಲ್ಲವೇನಮ್ಮಾ?"

"ಏ! ಹೋಗೋ, ನಾನು ಲೆಕ್ಕಾನೂ ಮಾಡೊಲ್ಲ ಏನೂ ಇಲ್ಲ; ನನಗೆ ಬರೋದೂ ಇಲ್ಲ."–ಗಂಡನ ಸುದ್ದಿ ಆಡುತ್ತಲೂ ಪ್ರಮೀಲ ನಾಚಿಕೆಯಿಂದ ಹುಸಿಮುನಿಸು ತೋರಿಸಿದಳು.

"ಲೆಕ್ಕ ಬರೊಲ್ಲ ಎನ್ನುತ್ತೀ; ನಾಚಿಗೆಯಾಗೊಲ್ಲವೇನೇ ಪ್ರಮೀ? ರಂಗೋಲೆ ಮಣ್ಣಿನಲ್ಲಿ ಬರೆದು ಮನೆ ತುಂಬಾ ಧೂಳು ಮಾಡಲಿಕ್ಕೆ ಮಾತ್ರ ಬರುತ್ತೆ ಅಲ್ಲವೆ?"

"ನನ್ನಿಷ್ಟ; ಏನಾದರೂ ಮಾಡಿಕೊಳ್ಳುತ್ತಿನಿ. ನಿನಗೇನು?"

"ನನಗೇನೂ ಎಂದಿದ್ದಕ್ಕೇ ಲೆಕ್ಕ ಮಾಡಲು ಹೇಳಿದ್ದು. ನೀನು ಜಾಣೆ ಎಲ್ಲಾ ಪುಟಗಳನ್ನೂ ಕೂಡಿ ಅಬ್‌ಸ್ಟ್ರಾಕ್ಟ್ ಹಾಕಿಡಮ್ಮ. ನಮಗೆ ಬೇಜಾರಾಗಿದೆ ಸ್ವಲ್ಪ ಹೊರಗೆ ಹೋಗಿ ಬರುತ್ತೀವಿ." ರಾಜಣ್ಣ ಗೋಗರೆಯುವ ದನಿಯಲ್ಲಿ ಪ್ರಮೀಲಳನ್ನು ಪುಸಲಾಯಿಸ ತೊಡಗಿದ.

"ತಪ್ಪಾದರೆ ನನ್ನ ಮೇಲಿಲ್ಲಾ"

“ಹಾಗೇ ಆಗಲಿ” ಎಂದು ರಾಜಣ್ಣ ಲೆಕ್ಕ ಮಾಡುವ ವಿಧಾನವನ್ನೆಲ್ಲಾ ತಿಳಿಸಿ ಮೇಲೆ ಬಂದ. ಆನಂದ ಇನ್ನೂ ಮಲಗಿ ಹೊರಳಾಡುತ್ತಲೇ ಇದ್ದ. ರಾಜಣ್ಣ,

“ಸ್ವಲ್ಪ ಹೊರಗೆ ಹೋಗಿ ಬರೋಣ ಬಾ ಆನಂದ” ಎಂದ.

“ಲೆಕ್ಕ ಬಹಳವಿದೆ, ನೀನು ಹೋಗಿ ಬಾ ರಾಜು.”

“ಬೇಗ ಬಂದು ಬಿಡೋಣ ಬಾ; ನಿನಗೂ ಬೇಜಾರು ಕಳೆಯುತ್ತದೆ. ಏಳು ಹೋಗೋಣ.”

ಇಬ್ಬರೂ ತಲೆ ಬಾಚಿ ಕೊಂಡು ಹೊರಗೆ ಹೊರಟರು. ರಾಜಣ್ಣ,

“ನೀನು ಸೋಮಾರಿ ಕಟ್ಟೆ ನೋಡಿದ್ದೀಯಾ?” ಎಂದು ಕೇಳಿದ.

“ಸೋಮಾರಿ ಕಟ್ಟೆ! ಈ ಊರಿಗೆ ಬಂದು ವರ್ಷವಾದರೂ ನೀನು ಹೇಳಿದ ಸೋಮಾರಿಕಟ್ಟೆ ಯಾವುದೆಂಬುದು ನನಗೆ ಗೊತ್ತೇ ಇಲ್ಲ.

“ಬಾ, ಇವತ್ತು ಅಲ್ಲಿಗೇ ಹೋಗೋಣ.”

ಇಬ್ಬರೂ ಬಸ್‌ಸ್ಟಾಂಡಿನ ಕಡೆ ನಡೆದರು. ಬಸ್‌ಸ್ಟಾಂಡಿನ ಬೇವಿನ ಕಟ್ಟೆಯ ಮೇಲೆ ರಾಜಣ್ಣನ ಕಾಲೇಜುಗೆಳೆಯರೆಲ್ಲಾ ಮಾತಾಡುತ್ತಾ ಕುಳಿತಿದ್ದರು.

“ಇದೇ ನಮ್ಮೂರಿನ ಸೋಮಾರಿಕಟ್ಟೆ. ಇವರೆಲ್ಲಾ ಸೊಮಾರಿಕಟ್ಟೆಯ ಸದಸ್ಯರು. ನಾನೂ ಒಬ್ಬ ಸದಸ್ಯ. ಇಲ್ಲಿ ಬಂದು ಕೊಡುವವರೆಲ್ಲಾ ನನ್ನಂತಹ ನಿರುದ್ಯೋಗಿಗಳೇ ಜಾಸ್ತಿ. ಆದ್ದರಿಂದ ಈ ಕಟ್ಟೆಗೆ ನಾವೆ ನಾಮಕರಣ ಮಾಡಿದ್ದೀವಿ, ಸೋಮಾರಿಕಟ್ಟೆ ಅಂತ!” ರಾಜಣ್ಣನ ಮಾತಿಗೆ ಆನಂದ ನಕ್ಕುಬಿಟ್ಟ.

ಕಟ್ಟೆಯ ಮೇಲೆ ಕುಳಿತಿದ್ದ ತೆಳ್ಳನೆಯ ಕುಳ್ಳ ವ್ಯಕ್ತಿ ರಾಜಣ್ಣನ ಕಡೆ ತಿರುಗಿ,

“ಬಾರೋ ಹಾರುವಯ್ಯ, ನೀನೊಬ್ಬ ಕಡಮೆಯಾಗಿದ್ದೆ. ನಾಲ್ಕೈದು ದಿನದಿಂದ ಮನೇ ಬಿಟ್ಟು ಬರಲಿಲ್ಲ. ಗೋಷಾ ಇದೆಯೇನು?” ಎಂದ

“ಗೋಷಾ ತೋಷಾ ಎಲ್ಲ ಶುಕ್ರಿಯಾ ಸೇರಿಗೇ ಹೇಳು. ಸ್ವಲ್ಪ ಕೆಲಸವಿತ್ತು ಬರಲಿಲ್ಲ ಅಷ್ಟೆ ಕಣೋ, ಡೋವಿಂಗೋ!”

“ಇವರು ಯಾರು?”

“ಇವರು ನಮ್ಮೂರ ಸೊಸೈಟಿಯ ಕ್ಲಾರ್ಕ್; ಇವರ ಹೆಸರು ಆನಂದ.”

"ನಮಸ್ಕಾರ ಸಾರ್" ಕಟ್ಟೆಯ ಮೇಲಿದ್ದ ಗೆಳೆಯರೆಲ್ಲಾ ಕುರಿಗಳು ಒಂದರ ಹಿಂದೊಂದು ನೀರಿಗೆ ಬೀಳುವಂತೆ ಕೆಳಗೆಧುಮುಕಿ ಆನಂದನಿಗೆ ತಮ್ಮ ಮರ್ಯಾದೆ ಸಲ್ಲಿಸಿದರು. ಆನಂದ ನಗುತ್ತಲೇ ಎಲ್ಲರಿಗೂ ಪ್ರತಿವಂದನೆ ಹೇಳಿದ. ರಾಜಣ್ಣ ಆನಂದನ ಕಡೆ ತಿರುಗಿ,

"ಇವರೊಬ್ಬರ ಪರಿಚಯವೂ ನಿನಗಿದ್ದಂತೆ ಕಾಣುವುದಿಲ್ಲ ಅಲ್ಲವೇ?" ಎಂದು ಕೇಳಿದ. ಆನಂದ 'ಇಲ್ಲ' ಎನ್ನುವಂತೆ ತಲೆ ಅಲ್ಲಾಡಿಸಿದ

"ಇವನು ಕೊಂಡಾಪುರದ ಶಾಂತ ವೀರಯ್ಯ,ಫುಟ್‌ಲಾಯರಿಯ ಹಾಗೆ ಏನಾದರೂ ಇವನ ತಲೆಯಲ್ಲಿ ಇದ್ದೇ ಇರತ್ತೆ ವಿಚಾರಗಳು; ಯಾರಿಗೂ ಉಪಯೋಗವಿಲ್ಲ ಆದ್ದರಿಂದ ಕಂಪನಿ 'ಡೋಮಿಂಗೋಲಾಯರ್,' ಅಂತ ಹೆಸರಿಟ್ಟಿದೆ

"ಇವನು ಗರಗಪ್ಪ, ನಮ್ಮೂರ ಕೊಳೀ ಸೀನು ಬಸುಮಯ್ಯನವರ ಮೊಮ್ಮಗ. ರಾಂಪುರಕ್ಕೇ ಯಾಕೆ, ನಮ್ಮ ತಾಲೂಕಿಗೇ ಎತ್ತರವಾದ ವ್ಯಕ್ತಿ; ಆರೂ ಮುಕ್ಕಾಲು ಅಡಿ ಇದ್ದಾನೆ ಇವನಿಗೆ ಕಂಪೆನಿಯಿಟ್ಟಿರುವ ಹೆಸರು 'ಲಂಬೂದ್ರಿ.'

"ಇವನು ಗೋಪಣ್ಣಾಚಾರಿಗಳ ಮಗ ಅಣ್ಣಯ್ಯ ಕಂಪೆನಿಯಲ್ಲೆಲ್ಲಾ ಇವನೇ ಚಿಕ್ಕವನು. ಇವನ ಹೆಸರು 'ಪಾಪಚ್ಚಿ.'

"ಇವರು ಗಾಣಿಗರಾನಿಯವರ ಮಗ ಇವರಿಗೆ ಸ್ವಲ್ಪ ಪೌರುಷ ಜಾಸ್ತಿ; ಮುಂಗೋಪಾನೂ ಜಾಸ್ತಿ. ಇವರ ಹೆಸರು ತಿಪ್ಪಣ್ಣ; ಕಂಪೆನಿ ಇವರನ್ನು 'ಪಿಡ್ಡ' ಎಂದು ಕರೆಯತ್ತೆ.

"ಇವರು 'ಶುಕ್ರಿಯಾಸೇಠ್'. ಚಕ್ಕೆಮಂಡಿ ಜಲಾಲ್ ಸಾಹೇಬರ ಮಕ್ಕಳು. ಮಾತು ಮಾತಿಗೂ ಶುಕ್ರಿಯಾ ಎನ್ನುವುದು ಜನಾಬರ ವಾಡಿಕೆಯಾಗಿತ್ತು. ಆದ್ದರಿಂದ ಅದೇ ಹೆಸರು ಖಾಯಂ ಆಗಿದೆ. ಒರಿಜಿನಲ್ ನೇಂ, ಜಕ್ರಿಯ

"ಇವರು ಲಕ್ಷ್ಮಣ ಅಂತ. ಇವರಿಗೆ ಜಾತಿಯ ಹೆಸರು ತುಂಬಾ ಪ್ರೀತಿ. ಇವರ ಅನ್ವರ್ಥನಾಮ 'ಈಡಿಗ.'

"ಇವರು ನೀಲಕಂಠಯ್ಯ. ಸೊಸೈಟಿಯ ಪ್ರೆಸಿಡೆಂಟ್ ಸಜ್ಜಿಗೆ ಬುಸ್ಸಣ್ಣನವರ ತಮ್ಮ. ಇವರು ವಯಸ್ಸಿನಲ್ಲಿ ಚಿಕ್ಕವರಾದರೂ ಬುದ್ಧಿಯಲ್ಲಿ ನಮ್ಮೆಲ್ಲರಿಗಿಂತಲೂ ಮೇಲು,ಒಳ್ಳೆಯ ವಿಚಾರಪರರು; ನಮ್ಮ ಕಂಪೆನಿ

ಮುಂದಾಳುಗಳು. ಇವರ ಅಭಿಪ್ರಾಯವಿಲ್ಲದೆ ಕಂಪೆನಿ ಏನೂ ಮಾಡುವುದಿಲ್ಲ. ಇವರ ಹೆಸರು 'ಧಣಿ'. ಇಷ್ಟು ಜನವೂ ಸೋಮಾರಿಕಟ್ಟೆಯ ಪ್ರಮುಖರೇ.

ಆನಂದ, ರಾಜಣ್ಣನ ಪರಿಚಯ ಭಾಷಣ ಕೇಳುತ್ತಾ ನಗುತ್ತ ನಿಂತಿದ್ದ. ಎಲ್ಲಾ ಆದ ಮೇಲೆ, "ನಿನ್ನ ಪರಿಚಯವೇ ಆಗಲಿಲ್ಲ ರಾಜು" ಎಂದು ನಕ್ಕ.

ಶಾಂತವೀರಯ್ಯ ಮುಂದೆ ಬಂದು ರಾಜಣ್ಣನ ಪರಿಚಯ ಮಾಡಿ ಕೊಡುತ್ತಾ,

"ಇವನ ಒರಿಜಿನಲ್ ನೇಂ, ನಿಮಗೆ ಗೊತ್ತಿದೆ ಇವನು ಲೋವರ್ ಸೆಕೆಂಡರಿ ಪಾಸಾದಾಗ, ನಮಗೆಲ್ಲಾ ಹಯಗ್ರೀವ ಮಾಡಿಸಿ ಔತಣಕ್ಕೆ ಕರೆದಿದ್ದ. ಆವತ್ತಿನಿಂದ ಇವನ ಹೆಸರು ಹಯಗ್ರೀವ ಅಂತಲೇ ರಿಜಿಸ್ಟ ರಾಯಿತು!" ಎಂದು ಜೋರಾಗಿ ನಕ್ಕ.

ನೀಲಕಂಠಯ್ಯ ಒಂದು ಪ್ಯಾಕ್ ಬರ್‌ಕ್ಲೀ ತಂದು ಎಲ್ಲರಿಗೂ ಒಂದೊಂದು ಹಂಚಿ ರಾಜಣ್ಣನಿಗೂ ಕೊಡ ಹೋದ. ಜೊತೆಯಲ್ಲಿ ಆನಂದನೂ ಇದ್ದುದರಿಂದ ರಾಜಣ್ಣ ಸಂಕೋಚದಿಂದ 'ಬೇಡ ಬೇಡ' ಎಂದ. ಅದು ಕಂಡ ಶಾಂತವೀರಯ್ಯ,

"ನಿನ್ನದೆಲ್ಲಾ ಗೊತ್ತು. ಸುಮ್ಮನೆ ತಗೊಳ್ಳೋ ರಾಜ. ನೋಡಿ ಮಿ। ಆನಂದ, ನಮ್ಮ ಕಂಪೆನಿಯಲ್ಲೆಲ್ಲಾ ಹೆಚ್ಚು ಸಿಗರೇಟು ಸೇದುವುದು ಈ ಹಯಗ್ರೀವನೇ." ಎಂದು ಬಿಟ್ಟ.

ರಾಜಣ್ಣ ನಿರ್ವಾಹವಿಲ್ಲದೆ ತಾನೂ ಸಿಗರೇಟು ತೆಗೆದು ಕೊಂಡ. ಆನಂದ ಅವನ ಕಡೆ ನೋಡಿ ನಕ್ಕು ಸುಮ್ಮನಾದ. ನೀಲಕಂಠಯ್ಯ ತನಗೂ ಸಿಗರೇಟು ಕೊಡ ಬಂದಾಗ ಆನಂದ,

"ನನಗೆ ಆ ಅಭ್ಯಾಸವಿಲ್ಲ. ಇದ್ದಿದ್ದರೆ ಎಲ್ಲರಿಗಿಂತಲೂ ಮೊದಲೇ ನಾನು ಸಿಗರೇಟು ಹಚ್ಚುತ್ತಿದ್ದೆ." ಎಂದ.

ಎಲ್ಲರೂ ಬಳ್ಳಾರಿಯ ರೋಡಿನಲ್ಲಿ ನಿಧಾನವಾಗಿ ನಡೆಯ ತೊಡಗಿದರು. ಲಕ್ಷ್ಮಣ ಸಿಗರೇಟಿನ ಹೊಗೆಯನ್ನು ಗುಂಗುರ ಗುಂಗುರವಾಗಿ ಬಿಡುತ್ತ,

"ಏನು ಸಾರ್, ನಿಮ್ಮ ಬಿಸಿನೆಸ್ ಚೆನ್ನಾಗಿ ನಡೆಯುತ್ತಿರ ಬಹುದು ಅಲ್ಲವೆ? ಧಾರಣೆ ಹೇಗಿದೆ?" ಎಂದು ನಗುತ್ತ ಕೆಣಕು ಪ್ರಶ್ನೆ ಹಾಕಿದ,

"ಪರವಾಗಿಲ್ಲ ವ್ಯಾಪಾರ ಸಾಧಾರಣವಾಗಿ ನಡೆಯುತ್ತಿದೆ. ಧಾರಣೆಗಳೇನೂ ವ್ಯತ್ಯಾಸವಾಗಿಲ್ಲ. ಆದರೂ ಬಡಜನ ಈಗಿನ ಧಾರಣೆಗೆಕೊಳ್ಳಲು ಹೆದರುತ್ತಾರೆ"–ಲಕ್ಷ್ಮಣನ ಮಾತಿನ ಮೋಡಿಯನ್ನು ಅಂತೂ ಅರಿಯದವನಂತೆ ಹೇಳಿದ ಆನಂದ ನಿಧಾನವಾಗಿ ಹೆಜ್ಜೆ ಹಾಕುತ್ತಾ.

"ಎಲ್ಲರೂ ಬಸಲಿಂಗಯ್ಯನ ಹಾಗೇ ಇರುತ್ತಾರೆಂದುಕೊಂಡೆಯೇನೋ ಲಕ್ಷ್ಮಣ"- ಗರಗಪ್ಪ ಮುಂದೆ ಕೆಣಕಲು ದಾರಿ ತೋರಿಸಿದ.

"ಇನ್ನೂ ಒಂದು ಕೈ ಮೇಲಿರಬಹುದು !"–ಶಾಂತವೀರಯ್ಯ ಹೇಳಿದ.

ಆನಂದನಿಗೆ ಸ್ವಲ್ಪ ಅಸಮಾಧಾನವಾಯಿತು, ಆದರೂ ತೋರಗೊಡಲಿಲ್ಲಿ. ರಾಜಣ್ಣನಿಗೆ ತಲೆಗೆ ಹೊಯ್ದಹಾಗಾಯಿತು. ಆನಂದನನ್ನು ಸುಮ್ಮನೆ ಕರೆತಂದು ಅವಮಾನ ಮಾಡಿದ ಹಾಗಾಯಿತಲ್ಲಾ, ಎಂದು ನೊಂದುಕೊಂಡ.

ಆನಂದನ ಮುಖದ ಮೇಲೆ ಆಗಿದ್ದ ಬದಲಾವಣೆಯನ್ನು ಗುರುತಿಸಿದ ನೀಲಕಂಠಯ್ಯ ಹೇಳಿದ--

"ನಮ್ಮ ಹುಡುಗರ ಸ್ವಭಾವವೇ ಹೀಗೇ ಮಿ। ಆನಂದ. ಯಾರಾದರೂ ಹೊಸಬರು ಬಂದರೆ ಅವರಿಗೆ ಮೊದಲು ಮಂಕು ಹಿಡಿಸಿ ಬಿಡುತ್ತಾರೆ. ಆ ಮೇಲೆ ನಿಜವಾದ ವಿಷಯ ಗೊತ್ತಾದ ಮೇಲೆ ಹೊಸಬರೂ ನಮ್ಮ ಗುಂಪಿನಲ್ಲಿ ಒಬ್ಬರಾಗಿ ಬಿಡುತ್ತಾರೆ. ನೀವು ದಯವಿಟ್ಟು ತಪ್ಪುತಿಳಕೋ ಬೇಡಿ. ಬಸಲಿಂಗಯ್ಯನ ಅನ್ಯಾಯ ಕಂಡು ನಮಗೆಲ್ಲಾ ಬೇಸರವಾಗಿತ್ತು. ಏನಾದರೂ ಮಾಡಿ ಅವನನ್ನೂ ಓಡಿಸಬೇಕು ಎಂದುಕೊಂಡಿದ್ದವು. ಇದುವರೆಗೂ ಬಸಲಿಂಗಯ್ಯ ಇದ್ದಿದ್ದರೆ ಈ ರಜವಲ್ಲಿ ನಾವು ಅವನನ್ನೂ ಖಂಡಿತ ಓಡಿಸುತ್ತಿದ್ದೆವು. ನಿಮ್ಮ ವಿಷಯ ನಮ್ಮ ಹುಡುಗರಿಗೆಲ್ಲಾ ಗೊತ್ತಿದೆ. ಆದರೂ ಪರೀಕ್ಷೆ ಮಾಡುವುದಕ್ಕಾಗಿ ಹಾಗೆ ವ್ಯಂಗ್ಯ ಮಾಡಿದರು ಅಷ್ಟೆ. ನೀವು ಅನ್ಯಥಾಭಾವಿಸಬೇಡಿ"

"ಛೆ ಛೆ, ಹಾಗೇನಿಲ್ಲ ಮಿ। ನೀಲಕಂಠಯ್ಯ, ಒಂದು ವೇಳೆ ನೀವು ನಿಜವಾಗಿ ನನ್ನನ್ನು ಓಡಿಸಿದರೂ ನಾನು ತಪ್ಪು ತಿಳಿದುಕೊಳ್ಳಲಾರೆ. ಯಾಕೆ ಎನ್ನುವಿರಾ ? ನಾನು ಇರುವ ಉದ್ಯೋಗ ಅಂತಹುದು. ಎಲ್ಲರಿಗೂ ಸಂಶಯಕ್ಕೆ ಕಾರಣ."

"ನೀವು ಹೇಳುವುದೂ ನಿಜವೇ ಅನ್ನಿ. ಆದರೆ ಒಂದು ವಿಷಯ ಮಿ। ಆನಂದ, ಅನೇಕ ಜನ ಅನೇಕ ರೀತಿ ಈ ಕೆಲಸದಲ್ಲಿ ಹಣ ಸಂಪಾದಿಸಿದ್ದಾರೆ. ಆದರೆ ಅದಕ್ಕೂ ವಿಚಕ್ಷಣತೆ, ನೀತಿಯಿರ ಬೇಡವೇ ಹೇಳಿ. ಜನಗಳ ಬಾಯಿಗೆ ಸಂಪೂರ್ಣ ಮಣ್ಣು ಹಾಕಿ, ಹೊಟ್ಟೆ ತುಂಬಿಸಿಕೊಳ್ಳಲು ಪ್ರಯತ್ನಿಸುವುದರಲ್ಲಿ ನ್ಯಾಯವಿದೆಯೇ ಹೇಳಿ. ಬಸಲಿಂಗಯ್ಯ ಮಾಡಿದ ಅನ್ಯಾಯಕ್ಕೆ ಹೊಟ್ಟೆ ಉರಿಯುತ್ತೆ. ಅವನ ಕಾಲದಲ್ಲಿ ಹಳ್ಳಿಯಲ್ಲಿನ ಎಷ್ಟೋ ಕುಟುಂಬಗಳು ಹೊಟ್ಟೆಗೆ ಗತಿಯಿಲ್ಲದೆ ಊರು ಬಿಟ್ಟು ಬೇರೆ ಊರು ಸೇರಿದವು. ಅವನು ನಮ್ಮೂರವನಾದರೂ ನಮಗೇನೂ ಅವನ ಮೇಲೆ ಅಭಿಮಾನವಿಲ್ಲ. ಇದುವರೆಗೆ ಅವನು ಸೊಸೈಟಿಯಲ್ಲೇ ಇದ್ದಿದ್ದರೆ ನಮ್ಮಿಂದ ಏಟುಗಳೂ ಬೀಳುತ್ತಿದ್ದುವು ಈಬಾರಿ" ಎಂದ ಲಕ್ಷ್ಮಣ. ಅದು ಕೇಳಿ ಆನಂದ ಬೆಚ್ಚಿದ.

"ನೀವು ಬ್ಲಾಕ್ ಮಾರ್ಕೆಟ್ ವ್ಯವಹಾರ ಮಾಡುತ್ತಿದ್ದರೆ ಮಾಡಿ, ಆದರೆ ಬಡವರ ಮೇಲೆ ಬಲಗಣ್ಣ ದೃಷ್ಟಿಯಿರಲಿ. ಪಾಪ ಮಾಡುವುದು ತಪ್ಪು. ಮಾಡುವುದಾದರೂ ಸಕ್ಕಕ್ಕ ಹೆದರಿ ಮಾಡಬೇಕು ಅಲ್ಲವೇ ಮಿ। ಆನಂದ"–ಗೌಸಾನಿ ತಿಪ್ಪಣ್ಣ ಪಾಪ ಪುಣ್ಯಗಳನ್ನು ವಿಮರ್ಶಿಸಿ ಹೇಳಿದ.

ಎಲ್ಲರೂ ಊರಿನಿಂದ ಬಹುದೂರ ನಡೆದು ಗಂಗಮ್ಮನ ಹಳ್ಳಿ ಎಂಬ ತೊರೆಯ ವರೆಗೆ ಬಂದಿದ್ದರು. ಎಲ್ಲರೂ ಹೋಗಿ ಹಳ್ಳದ ಮಧ್ಯೆ ಕಾಣುತ್ತಿದ್ದ ಎತ್ತರವಾದ ಮರಳುದಿಬ್ಬದ ಮೇಲೆ ಹೋಗಿ ಕುಳಿತರು.

"ಪಾಪ–ಪುಣ್ಯ ಎಲ್ಲಾ ಯಾರಿಗೆ ಬೇಕೋ ಪಿಡ್ಡಾ. ನಮ್ಮ ಜೋಳಿಗೆ ತುಂಬುವ ಪೂರ್ತಿ ಏನು ಮಾಡಿದರೂ ಪರವಾಗಿಲ್ಲ ಅನ್ನೋದು ಸಂಪಾದನೆ ಮಾಡುವವರ ವಾದ ನೋಡುತ್ತಿಲ್ಲವೇನು ನಿತ್ಯಾನೂ ಅಂಜನಪ್ಪ, ಧರಣಯ್ಯ, ವಾಮನ ರಾಯ–ಇವರನ್ನೆಲ್ಲ? ಅವರಿಗೆ ಪಾಪ–ಪುಣ್ಯದ ಉಪದೇಶ ಕಿವಿಗೆ ಹಿಡಿಸುತ್ತೇ ಹೇಳು." ಶಾಂತ ವೀರಯ್ಯ, ತಿಪ್ಪಣ್ಣ ಆಡಿಬಿಟ್ಟಿದ್ದ ಮಾತು ಮುಂದುವರಿಸಿದ.

"ನಿಮ್ಮ ಮಾತು ನ್ಯಾಯವಿದ್ದರೂ ನಾನದನ್ನೂ ಒಪ್ಪಲಾರೆ. ಪಾಪ ಪುಣ್ಯಕ್ಕೆ ಹೆದರಿ ನಡೆಯಬೇಕೆನ್ನುವುದೇನು? ಬಡವರ ಮೇಲೆ ಬಲಗಣ್ಣ ದೃಷ್ಟಿಯಿಟ್ಟು ಬ್ಲಾಕ್ ವ್ಯವಹಾರ ಮಾಡಿದರೂ ಮಾಡಿ ಎನ್ನುವುದೇನ? ತಪ್ಪು ಎಂದ ಮೇಲೆ ಸಣ್ಣದಾದರೂ ತಪ್ಪೇ; ದೊಡ್ಡದಾದರೂ ತಪ್ಪೇ. ಅಂದ ಮೇಲೆ ತಪ್ಪು ಮಾಡಲೇಬಾರದು. ತಪ್ಪು ಮುಚ್ಚಿ ಕೊಳ್ಳುವುದಕ್ಕೆ ಇಲ್ಲದ

ನಟನೆ ತೋರುವುದಂತೂ ನನಗೆ ಹಿಡಿಸದು. ನಾಲ್ವರ ತುತ್ತು ಕಸಿದು ತಾನೊಬ್ಬನೇ ತಿನ್ನುವುದು. ಅದನ್ನು ಮುಚ್ಚಿಟ್ಟು ಜನಗಳೆದುರು ತೋರಿಕೆಗೆ ಒಳ್ಳೆಯತನವನ್ನು ಮೆರೆಸುವುದು ನನಗೆ ಖಂಡಿತ ಸರಿಬೀಳುವುದಿಲ್ಲ. ನನಗೆ ಈ ಕೆಲಸದಕ್ಕದಿದ್ದರೂ ಚಿಂತೆಯಿಲ್ಲ. ಇಂತಹ ವ್ಯವಹಾರ ಮಾಡಲಾರೆ!"

ಆನಂದನವಾಣಿಯಲ್ಲಿ ನಿಶ್ಚಲ ಧ್ಯೇಯವಾದಿಯ ಗಂಭೀರತೆ ಇತ್ತು.

"ನಿಮ್ಮಂತಹ ಧ್ಯೇಯವಾದಿಗಳು ಯಾರೂ ಬಹಳ ದಿನ ಕೆಲಸಮಾಡಿ ಊರ್ಜಿತವಾಗಿಲ್ಲ ಮಿ। ಆನಂದ. ನಿಮ್ಮ ಅಲ್ಪ ಸೌಖ್ಯಕ್ಕಾದರೂ ಕಸುಬು ಕುದುರಿಸಿಕೊಳ್ಳಬೇಕಾಗುತ್ತೆ. 'ಅಕ್ಕಸಾಲೆ ಅಕ್ಕ ಕೊಟ್ಟ ಚಿನ್ನದಲ್ಲೂ ಎಕ್ಕ ಹುಟ್ಟಿಸಿದ,' ಅಂದ ಹಾಗೆ ಆಯಾ ಕಸುಬಿನಲ್ಲಿ ಅದರ ಲಕ್ಷಣ ತಿಳಿಯುತ್ತೆ. ಸೊಸೈಟಿ, ಡಿಪೋಗಳಲ್ಲಿ ಕೆಲಸ ಮಾಡುವವರೂ ಅಷ್ಟೆ. ಎಷ್ಟೇ ನ್ಯಾಯವಾಗಿದ್ದರೂ ಕಳ್ಳತನ, ಕೈಬಿಟ್ಟು ಹೋಗಲ್ಲ" ಎಂದ.

"ಸೊಸೈಟಿಯ ಡೈರೆಕ್ಟರು ಆಂಜನಪ್ಪ ಇದ್ದಾರಲ್ಲ, ಅವರು ಈ ಊರಿಗೇ ದೊಡ್ಡ ಮನುಷ್ಯರು. ಆದರೆ ಶುದ್ಧ ಹಲ್ಕಾಜನ. ಅವರಿಗೆ ಕಳ್ಳಭಟ್ಟಿ ಸಾರಾಯಿ ತಯಾರಿಸುವುದಕ್ಕೆ ನೀವು ನಿಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಬೆಲ್ಲ, ಅಮೋನಿಯಂ ಸಲ್ಫೇಟು ಸಪ್ಲೈ ಮಾಡಲೇ ಬೇಕು. ಇಲ್ಲದಿದ್ದರೆ ಕುಡಿದವರನ್ನು ನಿಮ್ಮ ಮೇಲೆ 'ಛೂ', ಬಿಡುವ ಪೈಕಿ ಅವರು. ನೀವು ಅವರು ಹೇಳಿದಂತೆ ಕೇಳಿಬಿಟ್ಟರೆ, ಅವರು ನಿಮ್ಮನ್ನು ತಮ್ಮ ಕಾರಿನಲ್ಲೇ ಕೂಡಿಸಿಕೊಂಡು ಓಡಾಡಿಸುತ್ತಾರೆ. ಮೊದಲು ಅವರನ್ನು ಸರಿಮಾಡಿ ಕೊಳ್ಳಿ." ಗರಗಪ್ಪ ತಮ್ಮೂರಿನ ಪ್ರಮುಖರ ಗುಣಗಾನ ಮಾಡಲು ಪೀಠಿಕೆ ಹಾಕಿ ಹೇಳತೊಡಗಿದ.

"ಇಷ್ಟು ದೊಡ್ಡ ಮನುಷ್ಯರು, ಇಂತಹ ಹೀನಕೆಲಸ ಮಾಡುತ್ತಾರೆಯೆ?"

"ಹಾಗಂದರೇನು? ಅವರ ವೃತ್ತಿಯೇ ಅದು, ಮಿ। ಆನಂದ. ಪ್ರಾಹಿಬಿಷನ್ ಜಾರಿಗೆ ಬರುವುದಕ್ಕೆ ಮೊದಲು ಅವರು ಭಾರೀ ಕಂಟ್ರಾಕ್ಟು ದಾರರು. ಒಂದು ಬಾನಿ ಹೆಂಡಕ್ಕೆ ಎರಡು ಬಾನಿ ನೀರು ಬೆರೆಸಿ ಸಂಪಾದನೆ ಮಾಡಿದ್ದಾರೆ ಈ ದೊಡ್ಡ ವ್ಯಕ್ತಿಕೇನ. ಇಲ್ಲದಿದ್ದರೆ ಊರಿಗೇ ಮಾದರಿಯಾದ ಅವರ ರಂಗಮಹಲು, ಎರಡೆರಡು ರೋಲ್ಸರಾಯ್ಸ ಕಾರುಗಳು ಬರಬೇಕೆಂದರೆ ಹೇಗೆ ಸಾಧ್ಯ! ಈಗ ಪ್ರಾಹಿಬಿಷನ್ ಇರುವುದರಿಂದ ಕಳ್ಳಭಟ್ಟಿಯ ವ್ಯಾಪಾರ ಕುದುರಿಸಿಕೊಂಡಿದ್ದಾರೆ. ನೀವು ಒಂದು ಸಲ ಒಂದು ಎಂಟು ಮಣ ಬೆಲ್ಲ

ಸಪ್ಲೈ ಮಾಡಿನೋಡಿ, ಆಗ ರುಚಿ ತಿಳಿಯುತ್ತೆ. ನೀವು ಕಂಟ್ರೋಲ್ ರೇಟಿಗೆ ಕೊಡಿ, ಅವರು ಅದರ ಒಂದೂವರೆಯಷ್ಟು ನಿಮಗೆ 'ಮರ್ಯಾದೆ' ಮಾಡುತ್ತಾರೆ.

"ನನಗೆ ಈ ವಿಷಯ ತಿಳಿದಿರಲಿಲ್ಲ!" ಆನಂದ ಆಶ್ಚರ್ಯದಿಂದ ಹೇಳಿದ.

"ಯಾಕೆ ಅವರು ನಿಮ್ಮ ಬಳಿ-ಒಂದು ದಿನವೂ ಬಂದೇ ಇಲ್ಲವೇ?" ಪಾಪಚ್ಚಿ ಕೇಳಿದ.

"ಅವರು ಯಾಕೆ ಬರುತ್ತಾರೋ ಪಾಪಚ್ಚಿ, ಆ ಬಿಡದಿ ಕರಿಯಣ್ಣ ಇಲ್ಲವೇ ಅವರ ಏಜೆಂಟ್, ಆತ ಬರಬಹುದು."

—ಲಕ್ಷ್ಮಣ ಆಂಜನಪ್ಪನ ಒಳ ವ್ಯವಹಾರವನ್ನೂ ಸೂಕ್ಷ್ಮವಾಗಿ ತಿಳಿಸಿದ.

"ನಿಮ್ಮ ಮಾವನ ಗುಟ್ಟು ನೀನೇ ಬಿಟ್ಟುಕೊಡುತ್ತೀಯಲ್ಲೋ ಈಡಿಗಾ. ಆಂಜನಪ್ಪನಿಗೆ ಹೋಗಿ ಹೇಳಿದರೆ ಆಗ ನಿನಗೆ ಗೊತ್ತಾಗತ್ತೆ ತಾಳು."

—ಶಾಂತವೀರಯ್ಯ ಲಕ್ಷ್ಮಣನನ್ನೂ ಹಾಸ್ಯಮಾಡಿದ, ಬೆದರಿಕೆಯ ದನಿಯಲ್ಲಿ.

"ನನ್ನ ಮಾವ ಆದಾಕ್ಷಣ ನಾನು ಹೆದರಿಕೊಂಡು ಇರಬೇಕಾದ್ದೇನಿಲ್ಲ. ಮುಲಾಜಿಲ್ಲದೆ ಅನ್ನುವುದೇ, ಯಾಕೆ ಬಿಡಬೇಕು? ಕರಿಯಣ್ಣ ನಿಮ್ಮ ಬಳಿ ಬರುವುದಿಲ್ಲವೇ ಮಿ। ಆನಂದ" ಲಕ್ಷ್ಮಣ ಕೇಳಿದ.

"ಎಲ್ಲೋ ಒಂದೆರಡು ಬಾರಿ ಬಂದಿದ್ದ. ನಾನು ಆತ ಕೇಳಿದಷ್ಟು ಕೊಡಲೊಪ್ಪಲಿಲ್ಲ. ಜಗಳ ಕಾದುಕೊಂಡು ಹೋದ. ಶುದ್ಧ ಒರಟು ಆಸಾಮಿ. ಆಂಜನಪ್ಪನವರ ಶಿಷ್ಯ ಆತ ಎಂಬುದು ನನಗೆ ಗೊತ್ತೇ ಇರಲಿಲ್ಲ. ನೀವು ಹೇಳುವುದು ನೋಡಿದರೆ ಇನ್ನೂ ಯಾರ ಯಾರ ಬಳಿ ಇಂತಹ ಶಿಷ್ಯರು ಇದ್ದಾರೋ! ಎಂಬ ಸಂದೇಹವಾಗುತ್ತೆ."

"ಶಾನುಭೋಗರು, ಪಟೇಲರು, ಛೇರ್‌ಮನ್ನರು, ಮೆಂಬರುಗಳು ಎಲ್ಲರೂ ಏಕಭಾವದಿಂದ ಗ್ರಾಮದ ಪ್ರಗತಿಗೆ ಶ್ರಮಿಸುತ್ತಾರೆ. ಊರಿನ ಪ್ರಗತಿಗೆ ಇದುವರೆಗೆ ಆದ ಸುಧಾರಣೆಗಳು ಬಹಳವಿವೆ. ಆದ ಉಪಯೋಗ ವೆಲ್ಲಾ ಸುಧಾರಕರಿಗೇ ಹೆಚ್ಚು! ಆ ಸುಧಾರಕರಿಗೆಲ್ಲಾ ನೀವು ಒಳ್ಳೆಯವ ರಾಗಿಬಿಡಿ. ನೀವು ಸುಧಾರಿಸುತ್ತೀರಿ, ಸೊಸೈಟಿಯೂ ಸುಧಾರಿಸುತ್ತೆ ಆಗ."

ಆನಂದ ಸುಮ್ಮನೆ ಕತೆಕೇಳುತ್ತ ಮೂಕನ ಹಾಗೆ ಕುಳಿತುಬಿಟ್ಟಿದ್ದ. ಗರಗಪ್ಪ ಮುಂದೆ ಹೇಳತೊಡಗಿದ.

"ವಾಮನರಾಯರು ಗೊತ್ತಲ್ಲ, ಅವರು ಮೂರಾಣೆ ಬಡ್ಡಿ ಸಾಹುಕಾರರು. ಪಠಾಣನಾಗಿ ಹುಟ್ಟಬೇಕಿತ್ತು. ತಪ್ಪಿ ಬ್ರಾಹ್ಮಣರಾಗಿ ಹುಟ್ಟಿದ್ದಾರೆ! ಸೊಸೈಟಿಯ ಹಣವನ್ನು ಆಗಾಗ್ಗೆ ಅವರಿಗೆ ನೂರು, ನೂರೈವತ್ತು ರೂಪಾಯಿ ಕೊಡುತ್ತಿರಬೇಕು. ಅವರು ನಿಮ್ಮ ಸಮಯಕ್ಕೆ ಬೇಕಾದರೆ ಒಂದಕ್ಕೆರಡರಷ್ಟು ಜೋಡಿಸಿ ಕೊಡುತ್ತಾರೆ. ನೀವು ಕೊಟ್ಟ ಹಣದಲ್ಲಿ ಅವರು ಬಡ್ಡಿ ದುಡೀತಾರೆ. ಸೂಗಣ್ಣ, ಜೀರಣ್ಣ, ತೆಂಗಿನಕಾಯಿ ಅಪ್ಪಣ್ಣ ಇವರೆಲ್ಲಾ ಅದೇ ಜಾತಿ. ಆದರೆ ಇವರೆಲ್ಲ ಬಡ್ಡಿ ದುಡಿಯೊಲ್ಲ. ಉಳ್ಳಾಗಡ್ಡೆ, ತೆಂಗಿನಕಾಯಿ ವ್ಯವಹಾರ ನಡೆಸುತ್ತಾರೆ. ಇವರಿಗೆಲ್ಲಾ ನೂರು, ನೂರೈವತ್ತು ಹಣ ಸಾಲದು. ಸಾವಿರದ ಮೇಲೆ ಏನಿದ್ದರೂ!"

ಸೊಸೈಟಿಯ ಹಣ ಹೀಗೆ ದುರುಪಯೋಗ ಪಡಿಸುವುದು ನ್ಯಾಯವೆ?"

"ಅದನ್ನು ಕೇಳುವುದು ನಿಮಗೂ ನ್ಯಾಯವಿಲ್ಲ. ಹಿಂದೆ ಬಸಲಿಂಗಯ್ಯ ಹಾಕಿಕೊಟ್ಟ ಪದ್ಧತಿ ಅದು. ನಿಮ್ಮ ತನಕ ಇನ್ನೂ ಬಂದಿಲ್ಲ. ಉಳ್ಳಾಗಡ್ಡೆಯ ಸೀಜನ್ ಬಂದಾಗ ನಿಮಗೇ ಗೊತ್ತಾಗತ್ತೆ." ಶಾಂತವೀರಯ್ಯ ಹೇಳಿದ, ಬಹಳ ಹತ್ತಿರವಿರುವ ಉಳ್ಳಾಗಡ್ಡೆಯ ಸೀಜನ್ನಿನ ನೆನಪು ಮಾಡುತ್ತ.

"ನಮ್ಮೂರು ಅಭಿವೃದ್ಧಿ ತರೋದಕ್ಕೆ ಎಷ್ಟು ಅನುಕೂಲವಿದೆ! ಆದರೆ ಅಭಿವೃದ್ಧಿಗೆ ತರೋಮಾತಂತೂ ಇರಲಿ. ಅಲ್ಪ ಸ್ವಲ್ಪ ಆ ದಾರೀಲಿ ಮುಂದೆ ನುಗ್ಗುವವರಿಗೂ ಆಸ್ಪದ ಕೊಡುವುದಿಲ್ಲ ನಮ್ಮೂರ ಜನ. Dogin the manger ಅಂದ ಹಾಗೆ. ಇದಕ್ಕೆ ಮೊದಲು ನಾವು ಹುಡುಗರೆಲ್ಲಾ ಸೇರಿ ರಜಾ ದಿನದಲ್ಲಿ ನಾಟಕ ಆಡಿ ಸ್ಕೂಲಿಗೆ ಕ್ಯಾಂಟೀನ್ ಫಂಡು ಕೊಡುತ್ತಿದ್ದೆವು. ಅಷ್ಟೇ ಅಲ್ಲ ಒಂದೆರಡು ಸಲ ಬೇಗಾರರಿಗೆ ಕಷ್ಟವಾಗಿದ್ದಾಗ ನಾಟಕ ಆಡಿ ಒದಗಿಸಿಕೊಟ್ಟೆವು. ನಾವೆಲ್ಲಾ ನ್ಯಾಯವಾಗಿ ನಡೆದದ್ದು ನಮ್ಮೂರವರಿಗೆ ಕಣ್ಣು ಕಿಸಿರಾಯಿತು. ನಾಟಕದ ಹಣದಲ್ಲಿ ಅವರಿಗೆ ಯಾರಿಗೂ ಒಂದು ಕಿಲುಬು ಕಾಸೂ ಕೊಡಲಿಲ್ಲ. ಫ್ರೀಪಾಸುಗಳೂ ಕೊಡಲಿಲ್ಲ ನಾವುಗಳು. ಇಷ್ಟು ಕಷ್ಟಪಟ್ಟು ನಾವು ಇತರರಿಗೆ ಸಹಾಯ ಮಾಡಿದರೂ ನಮಗೇ ಕೆಟ್ಟ

ಹೆಸರು. ನಮ್ಮೂರ ಹಿರಿಯರು, ನಾಟಕದಲ್ಲಿ ಬಂದ ಹಣವೆಲ್ಲ ನವೇ ತಿಂದು ಹಾಕಿದೆವು ಅಂತ ಸುಳ್ಳು ಹುಟ್ಟಿಸುತ್ತಿದ್ದರು ನಮಗೆಲ್ಲಾ ಆಗ ಹುಡುಗ ಪ್ರಾಯ. ಈಗಿನಷ್ಟು ತಿಳುವಳಿಕೆಯಿರಲಿಲ್ಲ. ಒಳ್ಳೆಯ ಧ್ಯೇಯ ನಮಗೆ ಬೇಕು ಅನ್ನುತ್ತಿದ್ದೆವು. ನಮ್ಮದು ಧ್ಯೇಯದ ಕೊನೆಯ ಪರಿಣಾಮ ಕೆಟ್ಟ ಹೆಸರು; ನಮ್ಮ ತಂದೆ ತಾಯಿಗಳಿಂದ ಬೈಗಳು!"

ಶಾಂತವೀರಯ್ಯ ತಾವು ವಿದ್ಯಾರ್ಥಿಗಳೆಲ್ಲಾ ಸೇರಿ ಮಾಡುತ್ತಿದ್ದ ಸಹಾಯ ಹಾಗೂ ಅವಕ್ಕೆ ಅಡ್ಡಿಯಾಗುತ್ತಿದ್ದ ಮಹಾಜನಗಳ ಅಸೂಯೆಯನ್ನು ಅಸಹನೆ ಹಾಗೂ ನೋವಿನಿಂದ ಹೇಳಿದ. ನಮ್ಮ ಆಸಕ್ತಿ, ಶ್ರಮಗಳಿಗೆ ತಕ್ಕ ಸಾಫಲ್ಯ ದೊರೆಯಲಿಲ್ಲವೆಂಬ ವೇದನೆ ತುಳುಕುತ್ತಿತ್ತು ಅವನ ಮಾತಿನಲ್ಲಿ. ಶಾಂತವೀರಯ್ಯನ ಮಾತನ್ನು ಮುಂದುವರಿಸಿ ಗೌಸಾನಿ ತಿಪ್ಪಣ್ಣ ಹೇಳಿದ—

"ಹೋದ ವರ್ಷ ಬೇಗಾರರಿಗೋಸ್ಕರವೇ ನಾಟಕ ಏರ್ಪಡಿಸಿದ್ದೆವು. ಆ ಒಕ್ಕಣ್ಣ ವಾಮನರಾಯ ಕಲ್ಲುಹಾಕಿದ. ಹೋದವರ್ಷ "ದೇವದಾಸಿ" ಆಡುವ ಏರ್ಪಾಡಿತ್ತು ಒಳ್ಳೆಯ ಜಾತ್ರೆಯ ವೇಳೆಯಲ್ಲೇ ಏರ್ಪಾಡು ಇಟ್ಟಿದ್ದೆವು. ನರಸಿಂಗಭಟ್ಟ ನಾಜೂಕಯ್ಯನ ಪಾರ್ಟು ತೆಗೆದುಕೊಂಡಿದ್ದ. ವಾಮನರಾಯ, ನರಸಿಂಗಭಟ್ಟನ ಭಾವ ಶ್ರೀಪತಿಗೆ ಇಲ್ಲದ್ದೇ ಹೇಳಿ, ಹುಡುಗ ಹಾಳಾಗ್ತಾನೆ ಅಂತ ಚಾಡಿ ಮಾತು ತುಂಬಿದ. ಶ್ರೀಪತಿ ನರಸಿಂಗ ಭಟ್ಟನ ಮೇಲೆ ರೇಗಿಬಿಟ್ಟರು ನರಸಿಂಗಭಟ್ಟ ಬರಲಾಗುವುದಿಲ್ಲ ಅಂದು ಬಿಟ್ಟ. ನಾಟಕದಲ್ಲಿ ಪಾರ್ಟು ಮಾಡಲು ಬರದಿದ್ದ ತಪ್ಪಿಗೆ ಇಪ್ಪತ್ತೈದು ರೂಪಾಯಿ ದಂಡಕೊಟ್ಟ. ಮೊದಲಾದರೂ ನರಸಿಂಗಭಟ್ಟ ಹೇಳಿದ್ದರೆ ಅನುಕೂಲವಾಗ್ತಿತ್ತು. ನಾಟಕ ನಾಳೆ ಎನ್ನುವಾಗ ವಾಮನರಾಯರ ಕಿರಿಕೂತಿನಿಂದ ನರಸಿಂಗಭಟ್ಟ ಹೆದರಿ ದೂರವಾದ. ಎಲ್ಲರಿಗೂ ತುಂಬಾ ನಷ್ಟವಾಯಿತು. ಇನ್ನು ಮುಂದೆ ಯಾವುದೂ ಬೇಡ ಎನ್ನಿಸಿತು. ಈಚೆಗೆ ಆ ಸುದ್ದಿಯೇ ಬಿಟ್ಟೆವು."

"ನರಸಿಂಗಭಟ್ಟ ಅನ್ನುವವರು ಎಲ್ಲಿದ್ದಾರೆ?"

"ಅವನ ಭಾವನ ಮನೆಯಲ್ಲಿ ಚಿತ್ರದುರ್ಗದಲ್ಲಿದ್ದಾನೆ."

"ಅಂತೂ ನೀವೆಲ್ಲಾ ಧೈರ್ಯಸ್ಥರು. ನಿಮಗೆ ಒಳ್ಳೆಯ ಕೆಲಸ ಮಾಡುವ ಉತ್ಸಾಹವಿದೆ. ನಿಮಗೆ ಮಾರ್ಗದರ್ಶಕರಿಲ್ಲ" ಆನಂದ ಸಹಾನು

ಭೂತಿಯನ್ನು ತೋರುತ್ತ ಹೇಳಿದ. ಆನಂದನ ಮಾತಿಗೆ ನೀಲಕಂಠಪ್ಪ ಸ್ವಲ್ಪ ಎತ್ತರದ ದನಿಯಲ್ಲಿ ಹೇಳಿದ—

"ಇದ್ದರು. ಈ ಊರ ಮಿಡಲ್ ಸ್ಕೂಲಿನಲ್ಲಿ ನಾರಾಯಣ ಶೆಟ್ಟಿ ಅಂತ ಟೀಚರ್ ಇದ್ದರು. ಅವರು ಇಲ್ಲಿ ನೂರು ವರ್ಷ ಇದ್ದರು. ಅವರ ಕಾಲದಲ್ಲೇ ನಮ್ಮ ಸ್ಕೂಲು ಒಂದು ರೂಪ ತಂಡಿದ್ದು. ನಿಜವಾದ ಮಾರ್ಗ ದರ್ಶಕರೆಂದರೆ ಅವರೇ ನೋಡಿ ಮಿ। ಆನಂದ. ಅವರ ಕಾಲದಲ್ಲಿ ಓದಿದ ಹುಡುಗರು ಒಳ್ಳೆಯ ಮಾರ್ಗದಲ್ಲಿಯೇ ಹೋಗುತ್ತಿದ್ದಾರೆ. ಶಾಲೆಯ ಹುಡುಗರಿಗೆ ಒಳ್ಳೆಯ ಆಸಕ್ತಿ. ಒಳ್ಳೆಯ ಮನುಷ್ಯ. ಉದಾತ್ತ ಧ್ಯೇಯ ವಾದಿ. ಅಂತಹವರನ್ನೂ ನಮ್ಮವರು ಇಲ್ಲಿಂದ ಎತ್ತಿ ಹಾಕಿದರು. ಇನ್ನೂ ಎರಡು ಮೂರು ವರ್ಷ ಇಲ್ಲೇ ಇರುತ್ತಿದ್ದರು."

"ನಿಮ್ಮಲ್ಲಿ ಒಳ್ಳೆಯ ಉತ್ಸಾಹವಿದೆ. ಏನನ್ನಾದರೂ ಸಾಧಿಸಬಲ್ಲ ಚೈತನ್ಯವಿದೆ. ಆದರೆ ಸ್ವಯಂ ಪರಿಪೂರ್ಣತೆ ಬಂದಿಲ್ಲ. ಇಂದಲ್ಲ ನಾಳೆ ನಿಮ್ಮ ವಿದ್ಯಾಭ್ಯಾಸ ಮುಗಿಸಿಕೊಂಡು ಬಂದ ಮೇಲೆ ನೀವೆಲ್ಲಾ ಒಟ್ಟುಗೂಡಿ ನಿಮ್ಮೂರಿಗೋಸ್ಕರ, ನಿಮ್ಮ ಜನತೆಗೋಸ್ಕರ ಶ್ರಮಿಸಬಹುದಲ್ಲಾ." ಆನಂದ ಇದು ವರೆಗೂ ಮಂತ್ರಮುಗ್ಧನಂತೆ ಕತೆಯನ್ನು ಕೇಳುತ್ತಿದ್ದವನು, ಅವರ ಉತ್ಸಾಹ ಹಾಳಾಗಲು ಕಾರಣವಿಲ್ಲವೆಂಬಂತೆ ಪ್ರೋತ್ಸಾಹದ ನುಡಿಯನ್ನು ನುಡಿದ.

"ನಿಮ್ಮ ಮಾತು ನ್ಯಾಯ ಮಿ। ಆನಂದ. ನಮ್ಮೆಲ್ಲರ ಆಸೆಯೂ ಅದೇ. ನಾವು ಯಾರೂ ನೌಕರಿಗಾಗಿ ಅಲೆಯಬೇಕಾದ ಕಾರಣವಿಲ್ಲ. ನಮಗೆ ದೇವರು ಕೊರತೆ ಮಾಡಿಲ್ಲ. ನಾವುಗಳೆಲ್ಲಾ ಉತ್ತಮ ವ್ಯವಸಾಯಗಾರರ ಮಕ್ಕಳು. ಎಲ್ಲರೂ ಸೇರಿ ಗ್ರಾಮಾಭ್ಯುದಯ ಕಾರ್ಯದಲ್ಲಿ ತೊಡಗಿ ನಮ್ಮೂರು ಮಾದರಿಯ ಊರಾಗುವಂತೆ ಮಾಡಬೇಕೆಂದು ನಮ್ಮ ಆಸೆ. ಅದು ನಮ್ಮ ಕರ್ತವ್ಯ. ಆದರೆ ಈ ವಿಷಯದಲ್ಲಿ ನಮ್ಮ ಡೋಮಿಂಗೋ, ಪಾಪಚ್ಚಿ ಇಬ್ಬರು ಮಾತ್ರ ದೂರ. ಅವರಿಗೆ ನೌಕರಿಯೇ ಆಧಾರ, ಅಲ್ಲ ವೇನೋ ಪಾಪಚ್ಚಿ" ಎಂದು ಪಕ್ಕದಲ್ಲೇ ಕುಳಿತಿದ್ದ ಪಾಪಚ್ಚಿಯ ಕಿವಿಯನ್ನು ಹಿಂಡಿದ ಲಕ್ಷ್ಮಣ.

ಕಿವಿಯ ನೋವು ತಡೆಯಲಾರದೆ,

"ಹೌದು ಕಣೋ ಈಡಿಗಾ!" ಎಂದು ಬೊಬ್ಬೆಹಾಕಿದ ಪಾಪಚ್ಚಿ.

"ನನ್ನ, ಈಡಿಗ ಅಂತ ಕರಿಯಬೇಡ ಅಂತ ಎಷ್ಟುಸಲ ಹೇಳಬೇಕೋ ನಿನಗೆ" ಎಂದು ಇನ್ನೊಮ್ಮೆ ಪಾಪಚ್ಚಿಯು ಕಿವಿ ಹಿಂಡಿದ ಲಕ್ಷ್ಮಣ.

"ಇವನ ಮರ್ಯಾದೆ ಮುಕ್ಕಾಯಿತೇನೋ, 'ಈಡಿಗಾ' ಅಂದಾಕ್ಷಣಕ್ಕೆ ಏನೋ ಮಹಾ!" ಶಾಂತವೀರಯ್ಯ ಕೆಣಕಿನಕ್ಕ.

"ನಿನ್ನ, ಜಂಗಮ ಅಂದರೆ ಸುಮ್ಮನಿರ್ತೀಯಾ?"

"ಓ, ಭೇಷಕ್ಕಾಗಿ!"

"ಸುಮ್ಮನಿರದೇ ಏನು? ಪುಗಸಟ್ಟೆ ಕೂಳು, ಕೋರಿ ಭಿಕ್ಷದ ಸೇವೆ ನಡೆದರೆ ಆಯಿತು. ನೀನು ಏನಾದರೂ ಅಂದುಕೋ. ಲಾಭ ಇದ್ದರೆ ಆಯಿತು. ಅಲ್ಲೇನೋ ಜಂಗಮಯ್ಯ!" ಗೌಸಾನಿ ತಿಪ್ಪಣ್ಣ ಶಾಂತವೀರಯ್ಯ ನನ್ನು ಅಣಕಿಸಿದ.

"ಹೌದೇಳೋ ಪಿಡ್ಡ. ಮೊನ್ನೆ ಆ ಗೊರಗೊಂಡದ ಜಗದ್ಗುರುಗಳು ಬಂದಿದ್ದರಲ್ಲಾ, ಅವರಿಗೆ ನಮ್ಮೂರವರು ಎಷ್ಟು ಸೇವೆ ನಡೆಸಿದರು! ಆ, ಅಯ್ಯ ಭಾರೀ ಚಕರಾಲೀ! ಹೈಸ್ಕೂಲು ತರಿಸಿ ಕೊಡತ್ತೀನಿ ಅಂತ ಹೊಡ ಕೊಂಡು ಹೋಗಲಿಲ್ಲವೇ ಎಂಟು ಹತ್ತು ಸಾವಿರ ರೂಪಾಯಿಯನ್ನ? ಈಗ ಎದುರಿಗೆ ಬೈದರೂ, ಆ ಜಗದ್ಗುರು ಜಂಗಮಯ್ಯ ನಗುತ್ತಾ ಹೋಗುತ್ತಾರೆ ಪಾಪ! ತುಂಬಾ ಸಾಧು ಸ್ವಭಾವ ಅವರದು!!" ಗೌಸಾನಿ ತಿಪ್ಪಣ್ಣನ ರಾಗಕ್ಕೆ ತಾಳಹಾಕಿ ನಕ್ಕ ರಾಜಣ್ಣ.

"ಸಾಬಣ್ಣಾ, ಸುಮ್ಮನಿರು. ನಮ್ಮೆಲ್ಲರಿಗಿಂತ ನಿಂದು ಹೊಲಸಲ್ಲೋ. ಎಲ್ಲಾದರೂ ಕುರಿಯೋ ಮೇಕೆಯೊ ನೇತು ಹಾಕಿಕೊಂಡು ಕೂತಿದ್ದರೆ, ಅಲ್ಲೇ ಹೋಗಿ 'ಕ್ಯಾ ಮಾಮೂ', ಅಂದುಕೊಂಡು ಕೂತುಬಿಡುವುದು. "ಏನೇನೋ ಮಾತಾಡಿಕೊಂಡಿದ್ದು, 'ತೂ, ಜರಲೇಕ್ಜಾತ ಕ್ಯಾ' ಅಂತಲೋ 'ತೋಷಾ ಭೇಜಾಂ ಕ್ಯಾ' ಅಂತಲೋ ಅನ್ನಿಸಿಕೊಂಡು, ಮೆಲ್ಲಗೆ ಒಂದೆರಡು ಪೌಂಡು 'ಚರಕ್' ಗಿಟ್ಟಿಸ್ತೀರಲ್ಲಾ ಅದಕ್ಕಿಂತ ಕೇಡೇ?" ಹಾಸ್ಯಮಾಡುತ್ತಲೇ ಗದರಿಸಿದ ನೀಲಕಂಠಯ್ಯ.

"ಎಲ್ಲಾ ಸ್ವಲ್ಪ ಹೆಚ್ಚೂಕಡಿಮೆ ಒಂದೇ. ಕತ್ತಲಾಯಿತು ಇನ್ನು ಹೋಗೋಣ" ಎಂದು ಎಚ್ಚರಿಸಿದ ಆನಂದ. ಅವನ ಗಮನವೆಲ್ಲಾ ಸೊಸೈಟಿಯ ಲೆಕ್ಕನೂಡಿ ಮುಗಿಸುವ ಕಡೆಗಿತ್ತು.

ಎಲ್ಲರೂ ಎದ್ದು ಹೊರಟರು. ಊರು ಸೇರುತ್ತಲೂ ಗೆಳೆಯರೆಲ್ಲಾ ಆನಂದನಿಗೆ ವಂದಿಸಿ ಒಬ್ಬೊಬ್ಬರೇ ಮನೆಗೆ ತೆರಳಿದರು. ದಾರಿಯಲ್ಲಿ ಆನಂದ ರಾಜಣ್ಣನೊಡನೆ ಹೇಳಿದ—

"ನಿನ್ನ ಗೆಳೆಯರು ಖಂಡಿತವಾದಿಗಳು ಹಾಗೂ ಒಳ್ಳೆಯ ಜನ. ದಕ್ಷತೆಯಿದೆ. ಭೇದಭಾವವಿಲ್ಲದ ನಿರ್ಮಲ ಹೃದಯರು. ಹೀಗಿರುವುದು ಅಪರೂಪ. ನಿನ್ನ ಗೆಳೆಯರ ಉತ್ಸಾಹ ನಿಜವಾದದ್ದೇ ಆಗಿದ್ದರೆ, ಮುಂದೆ ನಿಮ್ಮೂರಿಗೆ ಉತ್ತಮ ಭವಿಷ್ಯವಿದೆ ರಾಜೂ!

"ಇಷ್ಟಕ್ಕೂ ಕಾರಣ ಆ ನೀಲಕಂಠಪ್ಪ. ನೀಲಕಂಠಪ್ಪ ಅವರಣ್ಣನ ಹಾಗೆಯೇ ದೊಡ್ಡ ಗುಣವುಳ್ಳವನು. ಲಕ್ಷ್ಮಣ, ಶಾಂತವೀರರ ಹಾಗೆ ಹರಟೆಯ ಮಲ್ಲನಲ್ಲ. ಮಾತಾಡುವುದು ಅಪರೂಪ; ಆಡಿದರೆ ಬೆಲೆಯುಳ್ಳ ಮಾತು ಆಡುತ್ತಾನೆ. ಅದನ್ನು ಕಾರ್ಯತಃ ತೋರಿಸಿಕೊಡುತ್ತಾನೆ. ತನ್ನ ದಾರಿಯಲ್ಲಿ ಇನ್ನೊಬ್ಬರನ್ನೂ ಎಳೆದುಕೊಂಡು ಒಳ್ಳೆಯ ದಾರಿಯಲ್ಲಿ ನಡೆಯುವ ಮನುಷ್ಯ. ಅಂತೂ ನನ್ನ ಗೆಳೆಯರನ್ನು ನೀನೂ ಒಪ್ಪಿದೆ ಅನ್ನು."

"ನಿಜವಾಗಿಯೂ!"

ಇಬ್ಬರೂ ಮನೆಯನ್ನು ಸೇರಿದರು. ಕೊಠಡಿ ಸೇರುತ್ತಲೇ ಆನಂದ ಲೆಕ್ಕದ ಪುಸ್ತಕ ಹುಡುಕಾಡಿದ. ಅದೇ ವೇಳೆಗೆ ಪ್ರಮೀಳ ಮಾರಾಟದ ಪುಸ್ತಕವನ್ನು ತಂದು ರಾಜಣ್ಣನಿಗೆ ಕೊಟ್ಟು ಹೊರಗೆ ನಡೆದಳು. ರಾಜಣ್ಣ, 'ಲೆಕ್ಕ ಮುಗಿದಿದೆ' ಎಂದು ಆನಂದನಿಗೆ ಪುಸ್ತಕವನ್ನು ಕೊಟ್ಟ.

"ಲೆಕ್ಕವನ್ನು ಸಂಜೆಯೇ ಮಾಡಿ ಮುಗಿಸಿದ್ದೆಯಾ ರಾಜು? ನಿನಗೆ ತುಂಬಾ ಥ್ಯಾಂಕ್ಸ್!" ಎಂದ ಆನಂದ, ಸಂತೋಷದಿಂದ.

"ನಿನ್ನ ಥ್ಯಾಂಕ್ಸ್ ನನಗಲ್ಲ, ಪ್ರಮೀಳೆಗೆ. ಈ ದಿನ ಅವಳೇ ಲೆಕ್ಕ ಮಾಡಿಕೊಟ್ಟಳು."

ಆನಂದ, ಪ್ರಮೀಳ ಬಂದುದನ್ನು ನೋಡಿದ್ದರೂ ಬೇರೆ ಯಾವ ಕೆಲಸಕ್ಕೋ ಬಂದಿರಬಹುದೆಂದುಕೊಂಡಿದ್ದ. ನಿಜ ತಿಳಿದಾಗ ಅವನ ಮನಸ್ಸು ಪ್ರಮೀಳಳಿಗೆ ವಂದಿಸಿತು. ಅಷ್ಟರಲ್ಲೇ ಪ್ರಮೀಳ ಒಳಗೆ ಬಂದು, "ರಾಜು ಊಟಕ್ಕೆ ಏಳಬೇಕಂತೆ" ಎಂದು ಆನಂದನ ಕಡೆ ನೋಡಿದಳು. ಆನಂದ ಅವಳ ಕಡೆ ಕೃತಜ್ಞತೆಯ ನೋಟ ಬೀರಿ ನಸುನಕ್ಕ. ಮನಸ್ಸು

ಅವಳ ಹೊಳಪಿನ ಕಣ್ಣುಗಳಿಗೆ ಮಾರುಹೋಗಿತ್ತು. ಮತ್ತೊಮ್ಮೆ ನಕ್ಕು, 'ಏಳು ರಾಜು', ಎಂದು ತಾನೂ ಎದ್ದು ಪಟ ಬಿಚ್ಚತೊಡಗಿದ. ಪ್ರಮೀಲ ಆನಂದನ ಕಡೆ ಸೂಕ್ಷ್ಮ ನಗೆಯ ನೋಟ ಬೀರಿ ಕೆಳಗೆ ನಡೆದಳು!

೭

ತನ್ನ ಗೆಳೆಯರಿದುರು ಆನಂದ, ಕಳ್ಳಪೇಟೆಯ ವ್ಯವಹಾರ ಮಾಡಲಾರ, ತಾನದಕ್ಕೆ ವಿರೋಧ ಎಂಬಂತೆ ಮಾತಾಡಿದಾಗಿನಿಂದಲೂ ರಾಜಣ್ಣನಿಗೆ ಆನಂದನನ್ನು ಪರೀಕ್ಷಿಸುವ ಮನಸ್ಸಾಯಿತು. ಎರಡು ಮೂರು ದಿನ ಸುಮ್ಮನಿದ್ದು, ಒಂದು ದಿನ ಮಾರಾಟದ ಹಣದಲ್ಲಿ ಅರುವತ್ತೈದು ರೂಪಾಯಿಗಳನ್ನು ತೆಗೆದು ಮುಚ್ಚಿಟ್ಟುಕೊಂಡ.

ಸಂಜೆ ಬಂದ ಕೂಡಲೇ ರಾಜಣ್ಣ ಮಾರಾಟದ ಪುಸ್ತಕವನ್ನು ಪ್ರಮೀಲೆಯ ಕೈಗೆ ಕೊಟ್ಟು, ಆನಂದನೊಡನೆ ಸೋಮಾರಿಕಟ್ಟೆಯ ಕಡೆಗೆ ನಡೆದ.

ರಾತ್ರಿ ಮಾರಾಟದಲ್ಲಿ ಬಂದ ಹಣವನ್ನು ಎಣಿಸಿ ಲೆಕ್ಕದ ಪ್ರಕಾರ ತಾಳೆ ನೋಡಿದಾಗ ಆನಂದನ ಎದೆ ಒಡೆಯಿತು. ತಾನು ಒಂದು ವರ್ಷವಾಗಿದ್ದರೂ, ಒಂದು ದಿನವಾದರೂ ಇಷ್ಟು ದೊಡ್ಡ ನಷ್ಟ ಸಂಭವಿಸಿರಲಿಲ್ಲ. ಇದುಮೊದಲು ವ್ಯಾಪಾರದಲ್ಲಿ ಒಂದೊಂದು ದಿನ ಎರಡು ಮೂರು ರೂಪಾಯಿಗಳ ನಷ್ಟ ಕಂಡುಬಂದರೂ ಮಾರನೆಯ ದಿನ ನಷ್ಟವೂ ತುಂಬಿ ಬಂದು ಮೇಲೆ ಎರಡು ಮೂರು ರೂಪಾಯಿಗಳ ಲಾಭವೂ ಬರುತ್ತಿತ್ತು. ಆದ್ದರಿಂದ ಆನಂದ ಈ ಸಣ್ಣಪುಟ್ಟ ನಷ್ಟಕ್ಕೆ ಚಿಂತಿಸುತ್ತ ಕೂಡುತ್ತಿರಲಿಲ್ಲ. ಈ ದಿನ ಮಾರಾಟ ಒಹಳವಿದ್ದುದರಿಂದ ಕನಿಷ್ಟ ಐದಾರು ರೂಪಾಯಿಗಳು ಲಾಭ ಬರಬಹುದೆಂದು ಆನಂದ ಯೋಚಿಸಿದ್ದ. ಆದರೆ ಈ ನಷ್ಟ!

ಪ್ರಮೀಲೆಯ ಕೈವಾಡದಿಂದ ಲೆಕ್ಕವೆಲ್ಲಾದರೂ ತಪ್ಪಿರಬಹುದೆಂದು ಯೋಚಿಸಿ, ಮತ್ತೊಮ್ಮೆ ತಾನೇ ಲೆಕ್ಕವನ್ನು ಪರಿಶೀಲಿಸಿದ. ರಾಜಣ್ಣನೊಡನೆ ಸೊಸೈಟಿಗೆ ಹೋಗಿ ಆ ದಿನ ಉಳಿದಿದ್ದ ದಾಸ್ತಾನು ಪರೀಕ್ಷಿಸಿದ. ಹಿಂದಿನ ದಿನದ ದಾಸ್ತಾನಿನೊಡನೆ ಈ ದಿನ ದಾಸ್ತಾನು ಹೋಲಿಸಿದಾಗ ಆ ದಿನದ ಮಾರಾಟ ಸಮರ್ಪಕವಾಗಿಯೇ ಇತ್ತು. ಹಣ ಕಳೆದುಕೊಂಡ

ಆನಂದನ ಮುಖ ಹರಳೆಣ್ಣೆ ಕುಡಿದವನ ಮುಖದ ಹಾಗಾಯಿತು ಈ ಹಣ ವನ್ನು ಭರಿಸುವುದಾದರೂ ಹೇಗೆ ಎಂಬ ವಿಚಾರ ಗುಂಗೆಯ ಹುಳುವಿನಂತೆ ಅವನ ತಲೆಯಲ್ಲಿ ಕೊರೆಯಲಾರಂಭಿಸಿತು.

ಆನಂದನ ಸಂಕಟವನ್ನು ಈ ಮೊದಲೇ ಗುರುತಿಸಿದ್ದ ರಾಜಣ್ಣ, ಒಳ ಗೊಳಗೇ ನಗುತ್ತ ಕೇಳಿದ—

"ಏನು ಆನಂದ ಬಹಳ ಯೋಚನೆ ಮಾಡುತ್ತಿದ್ದೀ? ಯಾಕೆ ಸಪ್ಪಗಿದ್ದೀ?"

"ಏನ ಹೇಳಲಿ ರಾಜು? ಈ ದಿನ ಎದ್ದ ಘಳಿಗೆ ಚೆನ್ನಾಗಿ" ಆನಂದ ನಿಟ್ಟುಸಿರಿಟ್ಟ

"ಯಾಕೆ? ಏನಾಯಿತು ಹೇಳಬಾರದೆ?"

"ಅರುವತ್ತೈದು ಎಪ್ಪತ್ತು ರೂಪಾಯಿಯಷ್ಟು ನಷ್ಟವಾಗಿದೆ ರಾಜು, ಇವತ್ತಿನ ವ್ಯಾಪಾರದಲ್ಲಿ! ಹೇಗೆ ತುಂಬಬೇಕೋ ದೇವರೇ ಬಲ್ಲ!!" ದುಃಖದ ಮಡುವಿನಲ್ಲಿ ಮುಳುಗಿದವನಂತೆ ಸೊರಗಿದ ದನಿಯಲ್ಲಿ ಹೇಳುತ್ತ ಆನಂದ ನಿಟ್ಟುಸಿರಿಟ್ಟ.

"ಅಹಾ! ಅರುವತ್ತೈದು ಎಪ್ಪತ್ತು ರೂಪಾಯಿಗಳ ನಷ್ಟವೇ! ಲೆಕ್ಕ ವೇನಾದರೂ ತಪ್ಪಾಗಿರಬಹುದು ಇನ್ನೊಮ್ಮೆ ನೋಡು ಆನಂದ. ನಾನಾ ದರೂ ಪ್ರವೀಣನಿಗೆ ಲೆಕ್ಕ ಮಾಡಲು ಯಾಕೆ ಕೊಟ್ಟೆನೋ......" ರಾಜಣ್ಣ ಚೆಟ್ಟಿವೇ ಮೇಲೆ ಕವುಚಿಕೊಂಡವನಂತೆ ನಟಿಸುತ್ತ ಹೇಳಿದ.

"ಎಲ್ಲಾ ಆಯಿತು, ಲೆಕ್ಕ ಸರಿಯಾಗಿದೆ; ಸೊಸೈಟಿಯಲ್ಲಿ ಸಿಲ್ಕು ಸರಿ ಯಾಗಿದೆ. ಹಣ ಮಾತ್ರ ಇಲ್ಲಾ......!"

"ಯಾರಿಗಾದರೂ ಕೊಟ್ಟು ಮರೆತಿದ್ದೀಯೇನೋ ಜ್ಞಾಪಿಸಿಕೋ ಆನಂದ. ಎಲ್ಲಿ ಹೋಗುತ್ತೆ? ಎಂದೂ ಇಲ್ಲದ್ದು ಅಷ್ಟೊಂದು ದೊಡ್ಡ ಮೊತ್ತ ಹೋಗಬೇಕಾದರೆ ಹುಡುಗಾಟವೆ? ಇನ್ನೂ ಒಂದು ಸಲ ಹಣ ಎಣಿಸಿ ನೋಡು" ಸಹಾನುಭೂತಿಯ ರಾಗವೆಳೆದ ರಾಜಣ್ಣ, ಒಳಗೇ ನಗುತ್ತ,

ಮುಳುಗುತ್ತಿದ್ದವನು ಹುಲ್ಲುಕಡ್ಡಿಯ ಆಶ್ರಯ ಹೊಗುವಂತೆ, ಆನಂದ ಇನ್ನೊಮ್ಮೆ ಹಣವನ್ನೆಣಿಸಲು ಕುಳಿತ, ಮೊದಲಬಾರಿ ತಪ್ಪೆಣಿಸಿದ್ದರೂ ಇರ ಬಹುದೆಂಬ ಶಂಕೆಯಿಂದ. ಹೇಗಾದರೂ ಕಳೆದ ಹಣ ದೊರೆತರೆ ಸಾಕೆನ್ನುವ

ಹಾಗಿತ್ತು ಅವನ ಸ್ಥಿತಿ. ಹಣ ಎಣಿಸಿದ ಮೇಲೂ ಏನೂ ಪ್ರಯೋಜನ ವಿರಲಿಲ್ಲ. ಬೇಕೆಂದೇ ತೆಗೆದಿಟ್ಟಿದ್ದ ಹಣ ಮತ್ತೆ ತುಂಬುವುದಾದರೂ ಹೇಗೆ?

"ಈಗೇನು ಮಾಡುತೀ ಆನಂದ!" ಆತಂಕದಿಂದ ಕೇಳಿದ ರಾಜಣ್ಣ, ತಾನೇ ನಷ್ಟ ಹೊತ್ತು ಪರಿತಪಿಸುತ್ತಿರುವವನ ಹಾಗೆ.

"ಏನು ಮಾಡಬೇಕೋ ತಿಳಿಯದು ರಾಜು. ಎಂದೂ ಇಷ್ಟು ದೊಡ್ಡ ನಷ್ಟವಾಗಿರಲಿಲ್ಲ ನನ್ನ ಸಂಬಳ ಕೂಡ ಇವತ್ತಿನ ನಷ್ಟದಷ್ಟು ಇಲ್ಲ. ಹೀಗಾದರೆ ನಾನು ಪೂರೈಸುವುದು ಕಷ್ಟ!"

"ಈ ದಿನ ನಾನೇ ಹಣ ತೆಗೆದುಕೊಳ್ಳಲು ಕುಳಿತಿದ್ದೆ. ಜನಗಳ ಗುಜು ಗುಂಪಲಿನಲ್ಲಿ ಎಲ್ಲಿ ಚಿಲ್ಲರೆ ಕೊಡುವುದು ತೆಗೆದುಕೊಳ್ಳುವುದರಲ್ಲಿ ವ್ಯತ್ಯಾಸ ಮಾಡಿದೆನೋ ಏನೋ!" ತನ್ನಿಂದ ಅನ್ಯಾಯವಾಗಿ ನಷ್ಟ ಹೊರಬೇಕಾಗಿ ಬಂತೆಂಬಂತೆ ಕೈ ಕೈ ಹಿಸುಗಿಕೊಳ್ಳ ತೊಡಗಿದ ರಾಜಣ್ಣ.

"ಛಿ......ಛಿ......, ನೀನು ಇಲ್ಲದ ಸಂಶಯ ಹಚ್ಚಿಕೊಳ್ಳ ಬೇಡ ರಾಜು. ಇದು ವರೆಗೆ ನೀನು ಎಷ್ಟು ದಿನ ನನ್ನೊಡನೆ ವ್ಯಾಪಾರಕ್ಕೆ ಕುಳಿತಿಲ್ಲ. ಎಂದೂ ಇಲ್ಲದ ಏರುಪೇರು ಈ ದಿನವೇ ಆಗುತ್ತದೆಯೋ ಹೇಳು?"

"ನಾಳೆ ಅಪ್ಪನ ಕೈಗೆ ಕ್ಯಾಷ್ ಕೊಟ್ಟು, ರಿಪೀಟಿಸ್ ಬುಕ್ಕಿಗೆ ರುಜು ತಗೊಳ್ಳ ಬೇಕಲ್ಲ ಆನಂದ?"

"ಇದ್ದ ವಿಷಯ ಹೇಳಿ, ತಿಂಗಳ ಸಂಬಳ ಬಂದಕೂಡಲೇ ಅಡ್ಜಸ್ಟು ಮಾಡುತ್ತೀನಿ ಅಂತ ಹೇಳುತ್ತೀನಿ ರಾಜು. ಅದು ಬಿಟ್ಟು ಬೇರೆ ಉಪಾಯವೇ ಇಲ್ಲ."

"ನಾನು ಒಂದು ಮಾತು ಹೇಳುತ್ತೀನಿ ಕೇಳುತ್ತೀಯಾ ಆನಂದ?"

"ಏನು?"

"ನಿನಗೆ ಎಷ್ಟು ರೂಪಾಯಿ ಬೇಕು ಈಗ?"

"ಅರವತ್ತೈದು ಬೇಕು."

"ಹಾಗಾದರೆ ತಡಿ. ಅಪ್ಪ ಕಳಿಸುತ್ತಿದ್ದ ದುಡ್ಡಿನಲ್ಲಿ, ತಿಂಗಳು ತಿಂಗಳು ಉಳಿಸಿಟ್ಟಿರುವುದು ಸ್ವಲ್ಪ ಇದೆ ನನ ಹತ್ತಿರ, ಎಷ್ಟಿದೆಯೋ ನೋಡುತ್ತೇನೆ."

"ಏನೂ ಬೇಡ ರಾಜು. ನಿನಗೆ ತೊಂದರೆಯಾಗತ್ತೆ ಆ ಮೇಲೆ."

"ಈಗ ಸದ್ಯಕ್ಕೆ ತಗೊಂಡಿರು. ನಾನು ತುಮಕೂರಿಗೆ ಹೋಗೋ ವೇಳೆಗೆ ಕೊಡುವೆಯಂತೆ" ಎಂದು ರಾಜಣ್ಣ ಹಣ ತರಲು ಕೆಳಗೆ ಹೋದ. ಸ್ವಲ್ಪ ಹೊತ್ತಿನ ಮೇಲೆ ಮತ್ತೆ ಬಂದು,

"ಎಂಭತ್ತು ರೂಪಾಯಿ ಇದೆ ಆನಂದ. ನಿನಗೆಷ್ಟು ಬೇಕು ಹೇಳು" ಎಂದು ಆನಂದನನ್ನು ಕೇಳಿದ.

"ಅರವತ್ತೈದೇ ಸಾಕು."

ರಾಜಣ್ಣ ಒಳಗೊಳಗೇ ನಗುತ್ತ ರೂಪಾಯಿಗಳನ್ನು ತೆಗೆದುಕೊಟ್ಟ. ತನ್ನ ಖರ್ಚಿಗೆಂದು ಇಟ್ಟುಕೊಂಡಿದ್ದ ಐದು ರೂಪಾಯಿಯನ್ನು ಬಿಟ್ಟರೆ ಒಂದು ಚಿಕ್ಕಕಾಸೂ ಅವನ ಬಳಿಯಿರಲಿಲ್ಲ.

ರೂಪಾಯಿಗಳನ್ನು ಎಣಿಸಿ ತೆಗೆದುಕೊಂಡ ಆನಂದ ರಾಜಣ್ಣನ ಕಡೆ ತಿರುಗಿ,

"ನಿನಗೆ ತುಂಬಾ ಥ್ಯಾಂಕ್ಸ್ ರಾಜು, ಒಳ್ಳೆಯ ಸಮಯದಲ್ಲಿ ಸಹಾಯ ಮಾಡಿದೆ. ನಿನ್ನ ಉಪಕಾರ ಎಂದೆಂದಿಗೂ ಮರೆಯಲಾರೆ!" ಎಂದ ಕೃತಜ್ಞತೆಯ ದನಿಯಲ್ಲಿ, ಮರಳುಕಾಡಿನಲ್ಲಿ ನೀರು ಕಂಡಂತಾಗಿತ್ತು ಅವನ ಪರಿಸ್ಥಿತಿ. ರಾಜಣ್ಣ ಮಾಡಿದ ಸಮಯವರಿತ ಸಹಾಯಕ್ಕೆ ಆನಂದ 'ನೀನು ಸ್ನೇಹಿತನಲ್ಲ, ಆಪ್ತ ಬಂಧು,' ಎಂದು ಮನದಲ್ಲೇ ವಂದಿಸಿದ, ರಾಜಣ್ಣನಿಗೆ.

"ನನ್ನ ಉಪಕಾರ ಅಷ್ಟರಲ್ಲೇ ಇದೆ, ನಾಳೆ ಹಣ ಭರ್ತಿಮಾಡುವ ಯೋಚನೆ ಮಾಡು ಆನಂದ" ರಾಜಣ್ಣ ಆನಂದನನ್ನು ಎಚ್ಚರಿಸಿದ.

"ಸಂಬಳದ ಹಣದಲ್ಲಿ ಭರ್ತಿಮಾಡುವೆ; ವಿನಃ ಯಾವ ದಾರಿಯೂ ಇಲ್ಲ ರಾಜು. ಬರುವ ಐವತ್ತೈದು ರೂಪಾಯಿ ಈ ಬಾರಿ ನೀರಿಗೆ ಹಾಕಿದ ಹಾಗೆ ಆಯಿತು. ಅಷ್ಟನ್ನು ನಿನ್ನ ಹಣಕ್ಕೆ ಅಡ್ಜಸ್ಟ್ ಮಾಡುತ್ತೇನೆ. ಉಳಿದ ಹತ್ತು ರೂಪಾಯಿಗಳು ದಿನದ ವ್ಯಾಪಾರದಲ್ಲಿ ಹೇಗಾದರೂ ಕೂಡಿಸಬೇಕು."

"ಒಂದು ಕೆಲಸ ಮಾಡಲಾರೆಯಾ?"

"ಏನು?"

"ಈಗ ಜೋಳ ಒಂದು ಪಲ್ಲಕ್ಕೆ ಮೂವತ್ತೈದು ರೂಪಾಯಿ ಧಾರಣೆ ಇದೆಯಂತೆ ಹೊರಗೆ. ಕಂಟ್ರೋಲ್ ರೇಟು ಇಪ್ಪತ್ತಿದೆ. ಒಂದೈದು, ಆರು ಚೀಲ ಹೊರಗೆ ಹೊಡೆದುಬಿಡೋಣ ಏನಂತಿ?"

ರಾಜಣ್ಣ ತನ್ನ ಉಪಾಯ ತಿಳಿಸಿದ, ಕೃತ್ರಿಮ ನಗೆ ನಗುತ್ತ. ಅವನ ಮಾತಿನಲ್ಲಿ ಗುಪ್ತ ಪೋಲೀಸನ ಕೃತ್ರಿಮ ಸಹಾನುಭೂತಿಯಿತ್ತು. ಅಂತೆಯೇ ರಾಜಣ್ಣ, ಆನಂದನ ವ್ಯಕ್ತಿತ್ವವನ್ನೇ ಒರೆಹಚ್ಚಲು ಹೊರಟಿದ್ದ.

ರಾಜಣ್ಣನ ಮಾತಿಗೆ ಬೆರಗಾದ ಆನಂದ. ರಾಜಣ್ಣನೂ ಇಂತಹ ಸಲಹೆ ಕೊಟ್ಟನೆ? ಎಂದು ಅವನ ಮನಸ್ಸು ಕೌತುಕದಿಂದ ಪ್ರಶ್ನಿಸಿತು. ಪಾಪಕೃತ್ಯದ ಸುದ್ದಿ ಕೇಳಿ ಮೈಲಿಗೆಗೊಂಡವನಂತೆ ಕುಮುಟಿ ಬಿದ್ದು ಹೇಳಿದ—

"ಏನು ಹೇಳಿದೆ ರಾಜೂ! ನಿಜಕ್ಕೂ ನೀನು ಈ ಸಲಹೆ ಕೊಡುವವನೆಂದು ಕನಸಿನಲ್ಲೂ ನಂಬಿರಲಿಲ್ಲ. ದಯಮಾಡಿ ಈ ವಿಷಯದಲ್ಲಿ ಮಾತ್ರ ನನ್ನನ್ನು ಪ್ರೋತ್ಸಾಹಿಸಬೇಡ. ಆಗುವುದು ಆಗಿದೆ. ಇನ್ನದರ ಚಿಂತೆ ಬೇಡ."

"ಆಗುವುದು ಆಗಿದೆ, ಎಂದು ಸುಮ್ಮನೆ ಕೂಡುತ್ತೀಯಾ ಹುಚ್ಚಪ್ಪ! ಹಣ ಉಳಿಸಿಕೊಳ್ಳುವ ಉಪಾಯ ಮಾಡಬೇಕೋ, ಇದ್ದುದನ್ನು ಕೊಟ್ಟು ಕೈಮುಗಿದು ಕೂಡಬೇಕೋ?"

"ಈ ಸಲ ಹೀಗಾಯಿತಲ್ಲ, ಮುಂದಿನ ಸಲದಿಂದ ಎಚ್ಚರವಾಗಿದ್ದರಾಯಿತು."

"ಮುಂದೂ ಹೀಗೆ ನಷ್ಟವಾದರೆ ಅಥವಾ ಇವತ್ತಿಗಿಂತ ಹೆಚ್ಚು ನಷ್ಟವಾದರೆ, ಆಗಲೂ ಸಂಬಳದಲ್ಲೇ ಭರ್ತಿಮಾಡಲು ಹೋಗುತ್ತಿಯೇನು? ಉದ್ದಕ್ಕೂ ಹೀಗೇ ಆದರೆ ನೀನು ಕಷ್ಟಪಟ್ಟು ದುಡಿದುದಕ್ಕೆ ಸಾರ್ಥಕವೇನು ಬಂತು?"

"ಹಾಗಂತ ಕಳ್ಳಪೇಟೆ ಆಶ್ರಯಿಸ ಹೇಳುತ್ತೀಯೇನು?"

"ಯಾಕೆ? ತಪ್ಪೇನೂ ಅಲ್ಲವಲ್ಲ. ಹಣದಾಸೆಗಂತೂ ಅಲ್ಲ, ನಿನ್ನನ್ನು ನೀನು ರಕ್ಷಿಸಿಕೊಳ್ಳಲಾರದಾದರೂ ಆಶ್ರಯಿಸಬಾರದೇ?"

"ರಕ್ಷಣೆಗೆ ಆಶ್ರಯವೇನೋ ನಿಜ, ಆದರೆ ಅದಕ್ಕೂ ಮಿಗಿಲಾಗಿ ಆಸೆಯ ಉಗಮ ಇಲ್ಲಿಂದಲೇ ಅಲ್ಲವೆ ರಾಜು?"

"ಆಸೆಯಿಲ್ಲದ ಮನುಷ್ಯ ಯಾರು ಹೇಳು. ಆಸೆಯಿಲ್ಲದ ಮೇಲೆ ನೀನಾದರೂ ಯಾಕೆ ಈ ನೌಕರಿಗೆ ಸೇರಿದೆ?"

"ಜೀವನಕ್ಕೊಂದು ಆಧಾರ ಬೇಕಷ್ಟೆ. ಅದಕ್ಕಾಗಿಯೇ ಈ ಕೆಲಸದ ಅವಲಂಬನೆ."

"ಜೀವನವನ್ನು ಬಯಸುವವನು ಪ್ರಗತಿಯ ಕಡೆಗೂ ಲಕ್ಷ್ಯ ಕೊಡಬೇಕು ಆನಂದ. ನೀನು ನಿನ್ನ ಪ್ರಗತಿಗೋಸ್ಕರವಾದರೂ ಸ್ವಭಾವವನ್ನು ಪರಿವರ್ತಿಸಿಕೊಳ್ಳಬೇಕು. ಆ ಪರಿವರ್ತನೆ ನಿನ್ನ ಜೀವನವನ್ನು ಉಜ್ವಲಗೊಳಿಸಬಲ್ಲುದು. ಬಿಸಿಲು ತಿರುಗಿದತ್ತ ಕೊಡೆ ಹಿಡಿಯುವುದರಲ್ಲಿ ಜಾಣತನವಿದೆ ಆನಂದ."

"ಪರಿವರ್ತನೆ ಉನ್ನತಿಯ ಮಾರ್ಗ ತೋರುವುದಾದರೆ, ನನಗೀ ಉನ್ನತಿ ಬೇಡವೇ ಬೇಡ ರಾಜೂ. ನೂರಾರು ಜನದ ಹೊಟ್ಟೆಯ ಮೇಲೆ ಬಡಿದು, ನನ್ನ ಉನ್ನತಿಯನ್ನು ಸಾಧಿಸಿಕೊಳ್ಳಲು ನನಗೆ ಇಷ್ಟವಿಲ್ಲ."

"ಹಾಗಾದರೆ ಉಪವಾಸವಿರುತ್ತೀಯಾ? ಘೋಡಾ ಹೈ ಮೈದಾನ್ ಹೈ ಎಂಬಂತೆ ಹಣ ಸಂಪಾದಿಸುವುದಕ್ಕೆ ಬೇಕಾದಷ್ಟು ಸೌಲಭ್ಯವಿದ್ದರೂ ದೂರ ಮಾಡಿಕೊಳ್ಳುತ್ತೀಯಾ? ಇದರಿಂದ ನಿನಗೆ ಆಗುವ ನಷ್ಟವನ್ನು ಆಲೋಚಿಸಿದ್ದೀಯಾ?"

"ಕೆರೆಯ ನೀರು ಕೆರೆಗೆ ಚೆಲ್ಲಿದರೆ ನಷ್ಟವೇನು? ಲಾಭವೇನು ರಾಜು?"

"ಕೆರೆಯ ನೀರು ನಮಗಾಗಿಯೇ ಇರುವಾಗ ಯಾಕೆ ಬಳಸಬಾರದು?"

"ಹಾಗಂತ ಮಿತಿಮೀರಿ ಕುಡಿದರೆ ರೋಗಬರುವುದಿಲ್ಲವೇ ಹೇಳು?"

"ರೋಗಕ್ಕೆ ಹೆದರಿ ನೀರು ಕುಡಿಯುವುದು ಯಾರು ಬಿಡುತ್ತಾರೆ?"

"ನೀರು ಕುಡಿಯದೆ ಯಾರಿದ್ದಾರೀಗ?"

"ನೀನೇ......!"

"ನಿನ್ನದು ಅರ್ಥವಿಲ್ಲದ ಮಾತು. ನನ್ನ ಜೀವನಕ್ಕೆ ಸಾಕಷ್ಟು ನನಗಿದ್ದೇ ಇದೆ ರಾಜು. ನನ್ನ ಸಂಬಳ ನನ್ನ ದುಡಿತದ ಫಲ. ಅದಕ್ಕೂ ಮೀರಿ ಅಪೇಕ್ಷಿಸುವುದು ತಪ್ಪು."

"ಹಾಗಾದರೆ ನಿನ್ನಂತೆಯೇ ಕೆಲಸ ಮಾಡುವ ಉಳಿದವರೆಲ್ಲಾ ದಡ್ಡರೆನ್ನುತ್ತೀಯ?"

"ಉಳಿದವರ ವಿಷಯದಲ್ಲಿ ಕೈಹಾಕಲು ನಾವು ಯಾರು? ನಮ್ಮದೆಷ್ಟೋ ಅಷ್ಟರಲ್ಲೇ ನಾವಿರಬೇಕು."

"ಹಾಗಾದರೆ ಇನ್ನು ಮುಂದೆ ಎಂದೂ ನಷ್ಟವೇ ಆಗಲಾರದೆಂದು ನಂಬಿಕೆಯೇನು ನಿನಗೆ?"

"ಅದು ನಮ್ಮ ಜಾಗರೂಕತೆಯ ಮಾತು. ಎಚ್ಚರದಿಂದ, ಜವಾಬ್ದಾರಿಯಿಂದ ಕೆಲಸ ನಿರ್ವಹಿಸುತ್ತಿದ್ದರೆ ಯಾಕೆ ನಷ್ಟವಾಗುತ್ತೆ?"

ಮಾತು ತನ್ನ ಬಳಿಗೇ ಬಂದುದರಿಂದ ರಾಜಣ್ಣ ಕೆರಳಿದ. ಆದರೆ ಕಳ್ಳ ಮನಸ್ಸು ಒಳಗೇ ತವಕಾಪಷೆ ನೋಡುತ್ತಿತ್ತು. ಸ್ವಲ್ಪ ಅಸಮಾಧಾನಗೊಂಡವನಂತೆ ಮುಖ ಸಿಂಡರಿಸಿಕೊಂಡು ರಾಜಣ್ಣ ಹೇಳಿದ—

"ಅಂದರೆ ನಾನು ಬೇಜವಾಬ್ದಾರಿಯಿಂದ ವರ್ತಿಸಿದೆ ಅನ್ನು? ಅದೂ ನಿಜವೇ ಆನಂದ. ನಿನ್ನೊಡನೆ ವ್ಯಾಪಾರಕ್ಕೆ ಕೂಡಲು ನಾನು ಬರಬಾರದು; ಇನ್ನು ಮುಂದೆ ಖಂಡಿತ ಬರುವುದಿಲ್ಲ ಆನಂದ."

ರಾಜಣ್ಣನ ಮಾತಿನಲ್ಲಿ ವಿರಸದ ಛಾಯೆ ಕಂಡುಬಂದು, ಆನಂದ ಬೆಚ್ಚಿ ಹೇಳಿದ—

"ರಾಜು ನೀನು ತಪ್ಪು ತಿಳಿದುಕೊಂಡೆ. ನನ್ನ ಮನಸ್ಸಿನಲ್ಲಿ ನಿನ್ನನ್ನು ದೂಷಿಸಬೇಕೆಂಬ ಭಾವನೆ ಎಳ್ಳಷ್ಟೂ ಇಲ್ಲ. ನನ್ನ ಮಾತಿನಲ್ಲಿ ತಪ್ಪೇನಾದರೂ ಇದ್ದರೆ ಕ್ಷಮಿಸಿಬಿಡು ರಾಜು!"

ರಾಜಣ್ಣ ಮೊದಲಿನ ಅಸಮಾಧಾನವನ್ನೇ ಮುಂದುವರಿಸಿ ಕೊನೆಯ ಬಾರಿ ಅವನನ್ನು ಪರೀಕ್ಷಿಸತೊಡಗಿ ಹೇಳಿದ—

"ನಾಳೆಯ ದಿನ ರಿಮಿರ್ಟೆನ್ಸ್ ಕೊಡುವುದಾದರೆ ಕೊಟ್ಟುಕೋ. ಆದರೆ ನಾಳೆಯ ಸಂಜೆಗೇ ನನ್ನ ಹಣ ಕೊಟ್ಟುಬಿಡಬೇಕು ಆನಂದ."

ಈ ಬಾರಿ ಆನಂದನಿಗೂ ಸಿಟ್ಟುಬಂತು. ಬಿರುಸಾಗಿ ಕಡ್ಡಿ ಎರಡು ತುಂಡಾಗುವಂತೆ,

"ನಿನ್ನನ್ನು ಹಣ ಕೊಡು ಎಂದು ನಾನೇನೂ ಕೇಳಿರಲಿಲ್ಲ ರಾಜಣ್ಣ, ನೀನೇ ಕೊಟ್ಟೆ. ನಿನ್ನ ಹಣ ತೆಗೆದುಕೊಂಡು, ನಿನಗೆ ತೊಂದರೆಕೊಡುವ ಅಭಿಲಾಷೆ ಖಂಡಿತ ನನಗಿಲ್ಲ. ಈಗಲೇ ತೆಗೆದುಕೋ, ನಾಳೆಯ ವರೆಗೂ ಯಾಕಾದರೂ ಕಾಯಬೇಕು?" ಎಂದವನೇ ಕೈಯಲ್ಲಿ ಹಿಡಿದಿದ್ದ, ಅದೇ ತಾನೇ ರಾಜಣ್ಣ ಕೊಟ್ಟಿದ್ದ ರೂಪಾಯಿ ನೋಟುಗಳನು ಮೇಜಿನ ಮೇಲೆ ರಭಸದಿಂದ ಒಗೆದ.

ಆನಂದನ ಸಿಟ್ಟು ನೋಡಿ, ರಾಜಣ್ಣನಿಗೆ ಜೋರಾಗಿ ನಗು ಬರಹತ್ತಿತು. ನಗೆಯನ್ನು ಬಿಗಿಹಿಡಿದು ಗತ್ತಿನ ಧ್ವನಿಯಲ್ಲಿಯೇ ಹೇಳಿದ.

"ನನ್ನ ಮೇಲಿನ ಸಿಟ್ಟಿಗೆ ರೂಪಾಯಿಗಳು ಏನು ಮಾಡಿದವು? ಏನೋ ನಿನಗೆ ನಷ್ಟವಾಯಿತಲ್ಲಾ, ಯಾವ ರೀತಿಯಲ್ಲಾದರೂ ನಷ್ಟವನ್ನು ತುಂಬಿ ಕೊಳ್ಳೋಣಾ ಎಂದು ನನಗೆ ತಿಳಿದ ಉಪಾಯ ಹೇಳಿದೆ ಅಷ್ಟೆ. ನಿನಗೆ ಇಷ್ಟವಿಲ್ಲದಿದ್ದರೆ ಬಿಡು. ನೀನು ಆದರ್ಶಕ್ಕೆ ಬೆಲೆ ಕೊಟ್ಟು ಅದರಂತೆ ನಡೆಯುವವನು ಅನ್ನುವುದು ನನಗೇನು ಗೊತ್ತು?"

"ನಾನು ಆದರ್ಶವಾದಿಯೆಂದು ಹೇಳಿಕೊಳ್ಳಲಿಲ್ಲ ರಾಜಣ್ಣ."

"ಇನ್ನೊಂದು ಸಲ ಹೇಳಿಕೊಳ್ಳಬೇಕೇನು? ಆದರೂ ಈ ಆದರ್ಶ ಗಳು, ಧ್ಯೇಯಗಳು ಬಹಳ ದಿನ ನಡೆಯಲಾರವು, ಈ ಕೆಲಸದಲ್ಲಿ. ನಾನು ನೋಡದೆ ಹೋಗುತ್ತೇನೆಯೆ? ಊರಿಗೆ ಬಂದೋಳು ನೀರಿಗೂ ಬಂದೇ ಬರ್ತಾಳೆ!"

"ನೀನು ಸುಮ್ಮನೇ ನಿಷ್ಠೂರ ಮಾಡತೊಡಗಿದ್ದೀ ರಾಜಣ್ಣ."

"ನಿಷ್ಠೂರ ಮಾಡಿ ನನಗೇನು ಲಾಭ ಬರುವುದಿದೆ ಹೇಳು."

"ನಿನ್ನ ಮಾತಿನ ಸರಣಿಯಲ್ಲಿ ತಿಳಿಯಬಹುದಲ್ಲಾ, ಇಷ್ಟೆಲ್ಲಾ ಏನೆಂದು."

ರಾಜಣ್ಣ ಮತ್ತೊಮ್ಮೆ ಕೆಣಕಿದ ಫಣಿಯಾಗಿ ಹೇಳಿದ—

"ನೀನು ಬೇಕೆಂದೇ ನನ್ನನ್ನು ಕೆಣಕಬೇಡ ಆನಂದ. ನಾನು ನಿನ್ನನ್ನು ನಿಷ್ಠೂರ ಮಾಡಲಿಲ್ಲ. ಹೀಗೇ ನಡೆಯುತ್ತ ಹೋದರೆ ಈ ಕೆಲಸದಲ್ಲಿ ಬಹಳ ದಿನವಿರಲಾರೆ ಎಂದೆ ಅಷ್ಟೆ."

ಆನಂದನೂ ಅಷ್ಟೇ ಸೆಡವಿನಲ್ಲಿ ಹೇಳಿದ—

"ಇದೇ ಕೆಲಸ ಶಾಶ್ವತವೆಂದು ನಾನೂ ನಂಬಿಲ್ಲ ರಾಜಣ್ಣ. ಕಷ್ಟ ಪಟ್ಟು ದುಡಿಯುವವನಿಗೆ ಎಲ್ಲಾದರೇನು? ಈ ದಿನ ಈ ಊರು; ನಾಳೆ ಇನ್ನೊಂದು ಕಡೆ."

ರಾಜಣ್ಣ ಈಗ ಸ್ವಲ್ಪ ಸಮಾಧಾನದ ದನಿಯಲ್ಲೇ ಹೇಳಿದ—

"ನಿನ್ನ ಮಾತು ಒಪ್ಪಿದೆ ಆನಂದ. ಕಷ್ಟಜೀವಿಗೆ ಎಲ್ಲಾದರೇನು? ಜೀವನಕ್ಕೊಂದು ಮಾರ್ಗ ದೊರೆತರಾಯಿತು. ಆದರೆ, ಮುಂದಾಲೋಚನೆ

ಬೇಡವೇ? ಬೇರೆಯ ಕಡೆ ಒಳ್ಳೆಯ ಕೆಲಸ ದೊರೆಯುವುದಾದರೂ ಹೇಗೆ ಅನ್ನುವುದು ಆಲೋಚಿಸಿದ್ದೀಯಾ?"

"ಯಾವುದು ಒಳ್ಳೆಯದು; ಯಾವುದು ಕೆಟ್ಟದು? ಜೀವನಕ್ಕಾಗಿ ಯಾವ ಕೆಲಸ ಮಾಡಿದರೂ ಏನೂ ತಪ್ಪಿಲ್ಲ. ಒಬ್ಬ ಚಮ್ಮಾರ, ಕಸಗುಡಿಸುವ ಭಂಗಿಯೂ ತನಗೆ ಬರುವಷ್ಟು ಆದಾಯದಿಂದಲೇ ಉತ್ತಮ ಜೀವನ ನಡೆಸಬಲ್ಲ. ಒಳ್ಳೆಯತನ ಹಣದಲ್ಲಿಲ್ಲ, ವಿಚಕ್ಷಣತೆಯಲ್ಲಿದೆ. ದೊಡ್ಡಸ್ಥಿಕೆಯಲ್ಲಿಲ್ಲ, ಉತ್ತಮ ನೀತಿಯಲ್ಲಿದೆ."

"ನಿನ್ನ ಮಾತಿನಂತೆಯೇ ಆಗಲಿ. ನೋಡುವವರಿಗಾದರೂ ತಾಳಿಕೆ ಬರುವಂತಿರಬೇಡವೇ?"

"ನೋಡುವವರಿಗೆ ಹೆದರಿ ಜೀವನ ನಡೆಸುವವನು ಎಷ್ಟು ದಿನ ನಡೆಸಬಲ್ಲ ರಾಜಣ್ಣ? ಯಾವ ರೀತಿ ಜೀವನ ನಡೆಸಿದರೂ ಜನಗಳ ದೃಷ್ಟಿಗೆ, ಮನಸ್ಸಿಗೆ ಒಪ್ಪುವಂತೆ ಜೀವನ ನಡೆಸುವುದು ಸಾಧ್ಯವಿದೆಯೇ? ಜನ ಮೆಚ್ಚಿಸಲು ಜನಾರ್ದನನಿಂದಲೂ ಸಾಧ್ಯವಿಲ್ಲ ಅಂದ ಹಾಗೆ—ಹಾಗೆ ಮಾಡ ಹೋದವನು ಮಂಗನಾಗುತ್ತಾನೆ ಅಷ್ಟೆ."

"ನಿನ್ನ ವಾದವೇ ನನಗೆ ಹಿಡಿಸಲಿಲ್ಲ, ಆನಂದ."

"ಹೋಗಲಿ ಬಿಡು. ಮಾತಾಡಿ ಬೇಸತ್ತಿದ್ದೀ, ಊಟಮಾಡಿ ಮಲಗು."

ಆನಂದ ನಗೆಯನ್ನು ಹರಿಸಿ, ರಾಜಣ್ಣನ ಅಸಮಾಧಾನವನ್ನು ದೂರ ಮಾಡುವ ಉದ್ದೇಶದಿಂದ ಮೆತ್ತೆ ಹೇಳಿದ—

"ಅಂತೂ ಬಹಳ ಕಷ್ಟಪಟ್ಟೆ ರಾಜು! ನೀನು ನನ್ನ ಒಳ್ಳೆಯದಕ್ಕಾಗಿ ಜಗಳವಾಡಿದರೂ ನಾನು ಮಾತ್ರ ನಿನ್ನ ಮಾತು ಕೇಳಲಿಲ್ಲ. ಶುದ್ಧ ಒರಟ ಅಲ್ಲವೇ?"

"ಶುದ್ಧ ಒರಟ ಅಲ್ಲ, ಹಯ ಒರಟ! ನಾನು ಬೇಕಾಗಿ ಕೆರಳಿಸಿ ಮಾತಾಡಿದೆ. ಏನೂ ತಿಳಿದುಕೊಳ್ಳಬೇಡ ಆನಂದ. ಈ ಹಣ ತೆಗೆದಿಟ್ಟುಕೋ; ಸಂಬಳ ಬಂದಾಗಲೇ ಕೊಡು. ಆಗಬಹುದಲ್ಲ?"—ರಾಜಣ್ಣ ಸಂತೋಷದಿಂದ ಹೇಳಿದ. ಅವನ ಮನಸ್ಸು ಆನಂದನ ಆದರ್ಶವಾದವನ್ನು ಮೆಚ್ಚಿಕೊಂಡಿತ್ತು. ಆದರೆ ಇನ್ನೂ ಪರೀಕ್ಷೆ ಪೂರ್ತಿಯಾಗಿರಲಿಲ್ಲ.

೮

ಪರೀಕ್ಷೆ ಮುಗಿಯಿತು. ಆನಂದ, ರಾಜಣ್ಣ ನಡೆಸಿದ ಪರೀಕ್ಷೆಯಲ್ಲಿ ಯಶಸ್ವಿಯಾಗಿ ಪಾಸಾದ. ಬೆನ್ನು ಹತ್ತಿದ ಭೇತಾಳನಂತೆ ರಾಜಣ್ಣ, ಆನಂದನ ಹಿಂದೆಯೇ ತಿರುಗುತ್ತಿದ್ದ, ತನಗೆ ತಿಳಿಯದಂತೆ ಆನಂದ ಹಣಭರಿಸುವುದಕ್ಕೋಸ್ಕರ ಕಳ್ಳಪೇಟೆಯಲ್ಲಿ ನಾಲು ಬರುವುದೆಂಬ ಶಂಕೆಯಿಂದ.

ಆದರೆ, ಆನಂದ ಮಾತ್ರ ರಾಜಣ್ಣನ ಬಗ್ಗೆ ಶಂಕಿಸಲೇ ಇಲ್ಲ. ಅಂದಿನ ವಿಷಯವನ್ನು ಅಂದಿಗೇ ಸಂಪೂರ್ಣ ಮರೆತು ಬಿಟ್ಟಿದ್ದ. ಆದರೆ ಹಣ ಹೋದದ್ದಾದರೂ ಹೇಗೆಂಬುದನ್ನು ಮಾತ್ರ ವ್ಯಗ್ರವಾಗಿಯೇ ಆಲೋಚಿಸ ತೊಡಗಿದ್ದ. ಅದಕ್ಕಾಗಿ ಮೂಲವನ್ನೇ ಶೋಧಿಸಲು ಹೊರಟಿದ್ದ. ಆದರೆ ಪ್ರಯೋಜನವಿರಲಿಲ್ಲ. ಒಂದನೇ ತಾರೀಖು ಬರುತ್ತಲೂ ಸಂಬಳದ ಹಣ ವನ್ನೆಲ್ಲಾ ರಾಜಣ್ಣನಿಗೆ ಕೊಟ್ಟು,

"ಇನ್ನೂ ಹತ್ತು ರೂಪಾಯಿ ಬಾಕಿ ಉಳಿದಿದೆ ರಾಜು, ಸದ್ಯದಲ್ಲೇ ಕೊಡುತ್ತೇನೆ" ಎಂದು ಒಪ್ಪಿಸಿಕೊಂಡ. ಆಗಲೂ ರಾಜಣ್ಣ 'ಕಮಕ್, ಕಿಮಕ್' ಎನ್ನಲಿಲ್ಲ. ಹಣವನ್ನು ವಾಪಾಸು ಮಾಡುವುದಕ್ಕೊಂದು ದಾರಿ ಹುಡುಕುತ್ತಿದ್ದ.

ಒಂದು ದಿನ ಭಾನುವಾರ; ವ್ಯವಸಾಯೋಪಕರಣಗಳ ಮಾರಟಕ್ಕೆಂದು ಹೊರಟ ಆನಂದ, ರಾಜಣ್ಣನ ಕಡೆ ತಿರುಗಿ,

"ಬರುತ್ತೀಯಾ ರಾಜು? ಬರುವುದಾದರೆ ಬಾ, ಈ ದಿನವೇನೂ ನಿತ್ಯದ ಹಾಗೆ ಗಲಾಟೆಯಿಲ್ಲ" ಎಂದ.

"ಬರುವುದಿಲ್ಲ ಮಹರಾಯ. ಆ ಗೊಬ್ಬರದ ಧೂಳು, ಮೂಳೆಯ ಪುಡಿ, ಸೂಫರ್ ಸಾಲ್ಫೇಟ್ ಗೆಮ್ಯಾಕ್ಸಿನ್‌ಗಳ ಗಬ್ಬು ನಾತ ಯಾರು ಕುಡಿದಾರು? ನೀನೇ ಹೋಗಿಬಾ" ಎಂದು ಹೇಳಿ ಉಳಿದುಕೊಂಡು ಬಿಟ್ಟ ರಾಜಣ್ಣ. ಆನಂದ ಒಬ್ಬನೇ ಸೊಸೈಟಿಗೆ ಹೋದ.

ಕೊಠಡಿಯಲ್ಲಿ ಕುಳಿತಿದ್ದ ರಾಜಣ್ಣ, ಹೊತ್ತು ಹೋಗದೆ ಆನಂದನ ಮೇಜಿನ 'ಡ್ರಾ'ನಲ್ಲಿದ್ದ ಪುಸ್ತಕಗಳನ್ನು ಒಂದೊಂದಾಗಿ ನೋಡತೊಡಗಿದ. ಕೊನೆಯಲ್ಲಿ ಅವನ ಕೈಗೆ 'ಹುಣ್ಣಿಮೆಯ ರಾತ್ರಿ' ಸಿಕ್ಕಿತು. ಉಳಿದ ಪುಸ್ತಕ ಗಳಂತೆಯೇ ಪುಟಗಳನ್ನು ತಿರುಗಿಸಿ ನೋಡಿದ. ಒಳಗೆ ಆನಂದನ ಭಾವ

ಚಿತ್ರ ಹಾಗೂ ಹಿಂದಿನ ಪುಟದಲ್ಲಿ ಆನಂದ ಬರೆದಿದ್ದ ಕವಿತೆಯಿದ್ದುದನ್ನೂ ನೋಡಿದ. ಆನಂದನ ಅಕ್ಷರದ ಜೊತೆಗೆ ತನ್ನ ತಂಗಿಯ ಅಕ್ಷರವೂ ಇದ್ದುದು ಕಂಡು ಕುತೂಹಲದಿಂದ ಓದಿದ. ಪದ್ಯಗಳು ಒಂದಕ್ಕೊಂದು ಹೊಂದಿದಂತಿದ್ದು ಪದ್ಯಗಳ ಕೆಳಗೆ ಪ್ರಮಿಲೆಯ ಹೆಸರೂ ಇತ್ತು.

ರಾಜಣ್ಣನಿಗೆ ಆನಂದ–ಪ್ರಮೀಲರ ಮಧ್ಯೆ ಪ್ರೇಮ ಸಮೀರಣ ಬೀಸು ತ್ತಿದೆಯೆಂದು ತಿಳಿಯಲು ಹೆಚ್ಚು ಹೊತ್ತು ಬೇಕಾಗಲಿಲ್ಲ. ಪುಸ್ತಕವನ್ನು ತನ್ನಲ್ಲಿಯೇ ಇಟ್ಟುಕೊಂಡು, ಉಳಿದ ಪುಸ್ತಕಗಳನ್ನು ಮೊದಲಿನಂತೆ ಜೋಡಿ ಸಿಟ್ಟು ಕೆಳಗೆ ಬಂದ. ಅವನ ಮುಖ ತುಸು ಗಂಭೀರವಾಗಿತ್ತು.

ಕೆಳಗೆ ಪಡಸಾಲೆಯಲ್ಲಿ ಪ್ರಮೀಲ, ಪ್ರಕಾಶನ ಹಿಂದಿಯ ಪುಸ್ತಕ ಹಿಡಿದು ವರ್ಣಮಾಲೆಯ ಅಕ್ಷರಗಳನ್ನು ನೋಡುತ್ತ ಅದರಂತೆಯೇ ಬರೆ ಯುವುದನ್ನು ಅಭ್ಯಾಸ ಮಾಡುತ್ತಿದ್ದಳು. ಅವಳ ಇನ್ನೊಂದು ಮಗ್ಗುಲಿಗೆ ಓದಲೆಂದು ಇಟ್ಟುಕೊಂಡಿದ್ದ ಆನಂದನ ಪುಸ್ತಕವಿತ್ತು.

ರಾಜಣ್ಣ ಅವಳ ಬಳಿ ಬಂದು,

"ಏನು ಮಾಡುತ್ತಿದ್ದಿಯೇ ಪ್ರಮೀ ?" ಎಂದು ಕೇಳಿದ. ಧ್ವನಿಯಲ್ಲಿ ಗಂಭೀರತೆಯ ಬದಲು ಸರಸವಿತ್ತು.

"ಏನೂ ಇಲ್ಲ, ಅಕ್ಷರ ಕಲಿತಿದ್ದೀನಿ."

ರಾಜಣ್ಣ, ಪ್ರಮೀಲೆಯ ಮಗ್ಗುಲಲ್ಲಿದ್ದ ಪುಸ್ತಕವನ್ನು ಕೈಗೆ ತೆಗೆದು ಕೊಂಡು ಕೇಳಿದ—

"ಪ್ರಮೀ ನಿನ್ನದೇನೇ ಪುಸ್ತಕ ?"

"ಊಂ. ಪ್ರಕಾಶ ತಂದುಕೊಟ್ಟಿದ್ದ, ಅವನ ಮಾಸ್ತರದ್ದಂತೆ."

"ಊ, ಹ್ಞಂ, ಈಚೆಗೆ ಪುಸ್ತಕ ಓದಬೇಕೂ ಅನ್ನಿಸಿತ್ತೇನೇ!" ರಾಜಣ್ಣನ ಮಾತಿನಲ್ಲಿ ಸಲುಗೆಯು ತುಂಬಿತ್ತು; ಅಷ್ಟೇ ವ್ಯಂಗ್ಯವೂ ಇತ್ತು.

ಅಣ್ಣನ ವ್ಯಂಗ್ಯವಾದ ಮಾತು ಕೇಳಿದ ಪ್ರಮೀಲ ಒಲಿಸಿಕೊಳ್ಳುವ ದನಿಯಲ್ಲಿ ಕೇಳಿದಳು—

"ಓದಿದರೆ ತಪ್ಪೇನೋ ರಾಜು ?"

"ತಪ್ಪು ಅನ್ನುವವರಾರು ? ಓದುವುದಕ್ಕೆ ನೀನು; ಪುಸ್ತಕ ಸಪ್ಲೈ ಮಾಡುವುದಕ್ಕೆ ಮಾಸ್ತರು. ಯಾರದೇನು ಅಡ್ಡಿ ಹೇಳು ?"

"ಏ ಹೋಗೋ ನೀನು ತಮಾಷೆ ಮಾಡ್ತಿ ನನ್ನ"

"ತಮಾಷೆ ಯಾಕೆ? ಪುಸ್ತಕ ತರಿಸಿಕೊಂಡು ಓದ್ತಾ ಇದ್ವೀ. ಅದರಲ್ಲೂ ಹಿಂದೀ ಬೇರೆ ಕಲಿಯೋಕ್ಕೆ ಹೊರಟಿದ್ವೀ. ನಡೀಲಿ ಏನೇನು ಮಾಡ್ತಿಯೋ ಮಾಡು!"

ಅಣ್ಣನ ಮಾತಿನಿಂದ ಉತ್ಸುಕಳಾಗಿ ಪ್ರಮೀಲ ಕೇಳಿದಳು—

"ನಾನೂ ಹಿಂದೀ ಕಲೀಲೇನಣ್ಣ?"

"ಕಲಿಯುವಂತೆ ಹೇಳಿಕೊಡೋರು ಯಾರು?"

"ಮಾಸ್ಟರೇ...!" ನಾಚಿಕೆಯಿಂದ ಹೇಳಿದಳು ತಲೆತಗ್ಗಿಸಿ.

ತಂಗಿಯ ಮಾತಿನ ಮೋಡಿಯನ್ನೇ ಅನುಸರಿಸಿ ಕೇಳಿದ ರಾಜಣ್ಣ

"ಅಮ್ಮ, ಅಪ್ಪ ಒಪ್ಪಬೇಕಲ್ಲೇ?"

"ಅಮ್ಮನ್ನ ಕೇಳಿದರೆ ಒಪ್ತಾಳೆ, ಅಪ್ಪನಿಗೆ ಹೇಳಿದರಾಯಿತು.

"ಈಗ ಕಲಿಯಲೇ ಬೇಕಾದ ಅಗತ್ಯವೇನೇ?"

"ಏನೂ ಇಲ್ಲ ಸುಮ್ಮನೆ!" ಎಂದು ತುಟಿಗಚ್ಚಿದಳು ಪ್ರಮೀಲ.

"ಆಗಲಿ, ಏನು ಮಾಡುತ್ತೀಯೋ ಮಾಡು, ನಿನ್ನ ವಿದ್ಯಮಾನವೆಲ್ಲಾ ನನಗೂ ಗೊತ್ತಿದೆ." ಎನ್ನುತ್ತ ರಾಜಣ್ಣ ಒಳಗೆ ನಡೆದ. ಅವನ ಕೊನೆಯ ಮಾತು ಗಡುಸಾಗಿತ್ತು. ಅಣ್ಣನ ಮಾತಿನಿಂದ ಪ್ರಮೀಲ ಹೆದರಿ, "ರಾಜೂ...!" ಎಂದು ಅವನ ಕಡೆ ತಿರುಗಿ ನೋಡಿದಳು.

ಒಳಗೆ ನಡೆದಿದ್ದ ರಾಜು, ಅವಳ ಮುಖದ ಮೇಲಿನ ಗಾಬರಿಯನ್ನು ಗುರುತಿಸದಿರಲಿಲ್ಲ. ಅವಳ ದನಿಯಲ್ಲಿ ಆತಂಕವಿತ್ತು. ಆಶ್ರಯ ಬೇಡುವವರ ಆರ್ತತೆಯಿತ್ತು. ಅಣ್ಣನಿಗೆ ತನ್ನ ಮತ್ತು ಆನಂದನ ಪ್ರೇಮ ವ್ಯವಹಾರ ತಿಳಿದಿರಬಹುದೆ? ಎಂದು ಪ್ರಮೀಲ ನಿಜಕ್ಕೂ ಹೆದರಿದ್ದಳು.

ಒಳಗೆ ಹೋದ ರಾಜಣ್ಣ, ಒಂದು ಲೋಟ ತಣ್ಣನೆಯ ನೀರು ಕುಡಿದು ಮತ್ತೆ ಮೇಲೆ ಬಂದ ಆನಂದ, ಪ್ರಮೀಲೆಯೊಡನೆ ತನ್ನಿಚ್ಛೆಯಂತೆ ವರ್ತಿಸ ಹೊರಟಿರುವುದು ಕಂಡು, ಅವನ ಮೈ ಕ್ರೋಧದಿಂದ ಉರಿಯ ತೊಡಗಿತು. ತಾನು ಇದುವರೆಗೆ ಗುಣವಂತ, ಸಭ್ಯ, ಆದರ್ಶವಾದಿ ಎಂದು ಮೆಚ್ಚಿದ್ದ ಆನಂದ ಇಂತಹ ವಂಚಕ, ಕೃತಘ್ನನೆಂದು ತಿಳಿದಾಗ ರಾಜಣ್ಣನಿಗೆ ಆನಂದ

ನನ್ನು ತೀರಿಸುವಷ್ಟು ಸಿಟ್ಟು ಬಂತು. ಆದರೆ ವಿವೇಕ ಅಡ್ಡ ಬಂದಿತು. ರಾಜಣ್ಣ ಸ್ವಲ್ಪ ಹೊತ್ತು ಹಾಗೆಯೇ ಕುಳಿತು ವಿಚಾರಮಾಡತೊಡಗಿದ. ಆಗ ತಪ್ಪು ತಮ್ಮದೇ ಎಂಬ ಭಾವನೆ ಬರತೊಡಗಿತು.

ಆನಂದನಿಗೆ ಆಶ್ರಯ ಕೊಟ್ಟವರು ಯಾರು? ನಾವೇ ತಾನೆ? ಕೊಟ್ಟ ಮೇಲೂ ಆನಂದ ತಾನು ಪ್ರತ್ಯೇಕವಿರುವುದಾಗಿ ಅಪೇಕ್ಷಿಸಿದರೂ ಅವನನ್ನು ಬಲಾತ್ಕಾರ ಮಾಡಿದ್ದಾದರೂ ಯಾಕೆ? ಅದು ಹೋಗಲಿ ಏರುಪ್ರಾಯದ ಹೆಣ್ಣಿಗೆ ಮನಸ್ಸೇ ಸಲುಗೆಯಿಂದ ನಡೆಯುವಂತೆ ಅವಕಾಶ ಕೊಟ್ಟದ್ದೂ ನಾವೇ ತಾನೆ? ಅದರ ಬದಲು ಆದಷ್ಟು ಮಟ್ಟಿಗೆ ಬೆದರಿಕೆಯಲ್ಲಿಟ್ಟು ಗರತಿಯರ ಗುಣನಡತೆ ಕಲಿಸಿದ್ದರೆ ಹೀಗಾಗುತ್ತಿತ್ತೆ? ಪ್ರಮೀಲಳದ್ದಾದರೂ ಏನು ತಪ್ಪು? ವಯಸ್ಸಿಗನುಗುಣವಾದ ಅಭಿಲಾಷೆ, ಕಾಮನೆಗಳು ಯಾರಿಗಿರುವುದಿಲ್ಲ? ಅದರಲ್ಲೂ ಮನೆಯ ನಿತ್ಯ ಜೀವನದಲ್ಲಿ ಜವ್ವನಿಗನೊಬ್ಬ ಬೆರೆತು ನಡೆಯುತ್ತಿರುವಾಗ! ಬೆಂಕಿಯೆದುರು ಬೆಣ್ಣೆ ಎಷ್ಟು ಹೊತ್ತು ಹಾಗೆಯೇ ಇರಲು ಸಾಧ್ಯ!! ಹಾಗೆ ನೋಡಿದರೆ ಆನಂದನದೂ ತಪ್ಪಿಲ್ಲ. ಆನಂದನ ಬಗ್ಗೆ ಅಸಮಾಧಾನಗೊಂಡಿರುವ ನಾನೇ ಆನಂದನಾಗಿದ್ದಿದ್ದರೆ!......... ಕೂಡಲೇ ರಾಜಣ್ಣನ ಮುಂದೆ ಪ್ರಮೀಲೆಯ ರೂಪು ಬಂದಿತು. ಸೂಜಿಗಲ್ಲಿನ ಆಕರ್ಷಣೆಯ ಸೌಂದರ್ಯ ಆನಂದನನ್ನೂ ಹತ್ತಿರ ಸೆಳೆದಿದ್ದರೆ ಏನಾಶ್ಚರ್ಯ! ಎಂದು ಹೇಳಿತು ರಾಜಣ್ಣನ ಮನಸ್ಸು. ಆದರೆ ಇದಕ್ಕೆ ಪ್ರತೀಕಾರ?

'ಪ್ರತೀಕಾರ?' ವಿವೇಕ ಪ್ರಶ್ನಿಸಿತು.

'ಯಾವುದಕ್ಕೆ ಪ್ರತೀಕಾರ? ಯಾರ ಮೇಲೆ ಪ್ರತೀಕಾರ, ಆನಂದನ ಮೇಲೆಯೇ?' ವಿಚಾರ ವಾಹಿನಿ ಇನ್ನೂ ಮುಂದೆ ಮುಂದೆ ಹರಿಯತೊಡಗಿತು. ಆನಂದನ ಮೇಲೇ ಪ್ರತೀಕಾರ—ಆದರೆ ಯಾವ ಕಾರಣಕ್ಕಾಗಿ? ಆನಂದ ಪ್ರಮೀಲೆಯನ್ನು ಬಯಸುತ್ತಿರುವನೆಂಬುದಕ್ಕಾಗಿಯೇ? ಅದಕ್ಕೆ ಕಾರಣ ವೆಲ್ಲಿದೆ?—'ಹುಣ್ಣಿಮೆಯ ರಾತ್ರಿ'ಗಿಂತ ಕಾರಣ ಬೇಕೆ?........'ಹುಣ್ಣಿಮೆಯ ರಾತ್ರಿ'ಯಲ್ಲಿ ಪ್ರಮೀಲಳೂ ಶಪ್ಪಿತಸ್ಥಳಾಗಿದ್ದಾಳಲ್ಲ!......ಅದು ಹೇಗೆ ಸಾಧ್ಯ? ಕವಿಹೃದಯವನ್ನು ಮೆಚ್ಚಿ ಬರೆದ ಮಾತುಗಳು ಅವಾಗಿರಬಾರದೇಕೆ?......ಹಾಗಾದರೆ ಆನಂದನ ಪದ್ಯಗಳೂ ಕವಿಹೃದಯದಿಂದ ಹೊರ ಹೊಮ್ಮಿದ ಭಾವನೆಗಳಿರಬಹುದು ತಾನೆ?......ಆದರೆ ಪುಸ್ತಕಗಳ ಓಡಾಟ,' ಪ್ರಮೀಲಳ ಹಿಂದಿಯನ್ನು ಕಲಿಯುವ ಆಕಾಂಕ್ಷೆ! ಇದರಿಂದಲಾದರೂ,

ಆನಂದ ಪ್ರಲೋಭನೆಯುನ್ನೊಡ್ಡುತ್ತಿರಬಹುದು!...... ಪ್ರಲೋಭನೆ? ಕತೆ, ಕಾದಂಬರಿಗಳನ್ನು ಓದುವ ಆಸೆ ಯಾರಿಗಿಲ್ಲ? ಹೊಸ ವಿಷಯದಲ್ಲಿ ಯಾರಿಗೆ ಆಸಕ್ತಿಯಿರುವುದಿಲ್ಲ?......ಅಂತೆಯೇ, ಪ್ರಮೀಲೆ ಯಾಕೆ ಪುಸ್ತಕಗಳನ್ನು ಆನಂದನ ಬಳಿ ಬೇಡಿರಬಾರದು? ಹಿಂದಿ ಕಲಿಯುವ ಅಭಿಲಾಷೆ ಅವಳಲ್ಲಿ ಯಾಕಿರಬಾರದು?—ಆದರೆ ಇದರ ಪರಿಣಾಮ? ಒಳ್ಳೆಯದೇ—ಗಾಳಿ ಒಂದು ದಿಕ್ಕಿನಿಂದ ಇನ್ನೊಂದು ದಿಕ್ಕಿಗೆ ತಿರುಗಿದಂತೆ, ರಾಜಣ್ಣನ ವಿಚಾರದ ಓಟ ಬೇರೆ ಹಾದಿ ಹಿಡಿಯಿತು—

ಪರಿಣಾಮ ಒಳ್ಳೆಯದೇ?—ಅಗತ್ಯವಾಗಿಯೂ! ಹೇಗೆ?......ಮನೆತನದ ಹೊಲಬಿನಿಂದ ಪ್ರಮೀಲ ಉಳಿಯಬಲ್ಲಳೇ?......ಪ್ರಮೀಲಳ ಕೈ ಹಿಡಿಯ ಬಯಸುವವರು ಮನೆತನದ ಕೀರ್ತಿ ಅಪಕೀರ್ತಿಗಳನ್ನು ಗಮನಿಸುವುದೇ ಇಲ್ಲವೆ?......ಅದನ್ನೆಲ್ಲಾ ಯಾರು ಗಮನಿಸುತ್ತಾರೆ?......ಒಂದು ವೇಳೆ ಗಮನಿಸಿದರೂ ಅಂದಿನ ಹೊಲಬು ಇಂದೂ ಇದೆಯೇ?...... ಹಾಗಾದರೆ ರಾಮಶೇಷನ ತಂಗಿ ಯಾವ ಕಾರಣದಿಂದ ಮದುವೆಯಾದರೂ ಗಂಡನ ಮನೆಯನ್ನು ಕಾಣದೆ ಹಾಗೇ ಇದ್ದಾಳೆ?

ರಾಜಣ್ಣನ ಹಾಸ್ಟೆಲಿನ ಸ್ನೇಹಿತ ರಾಮಶೇಷನ ತಂಗಿಗೆ ಮದುವೆಯಾಗಿದ್ದರೂ, ಗಂಡನ ಮನೆಯವರು ಅವಳನ್ನು ತಮ್ಮ ಮನೆಗೆ ಸೇರಿಸಿರಲಿಲ್ಲ. ರಾಮಶೇಷನ ಚಿಕ್ಕಮ್ಮ ವ್ಯಭಿಚಾರಿಣಿಯಾಗಿದ್ದಳು. ಅದಷ್ಟೇ ಕಾರಣಕ್ಕೆ ನಿರಪರಾಧಿಯಾದ ಹೆಣ್ಣಿನ ಜೀವನ ಮೂಲೆಗುಂಪಾಗಿತ್ತು. ಈ ವಿಷಯ ನೆನಪಿಗೆ ಬಂದಾಗ ರಾಜಣ್ಣನ ಎದೆ 'ಝುಲ್' ಎಂದಿತು, ತನ್ನ ಮನೆತನವನ್ನು ನೆನೆದು.

ಹೌದು, ಹಿಂದಿನ ಹಿರಿಯರುಗಳು ಅಂದರೆ ತನ್ನ ತಾತ, ದೊಡ್ಡಪ್ಪಂದಿರುಗಳ ಇತಿಹಾಸ ಕಮ್ಮಿಯಿದೆಯೇ? ಕಳ್ಳತನ, ದರೋಡೆ, ವ್ಯಭಿಚಾರ, ಹತ್ಯೆ-ಖೂನಿ ಇನ್ನೂ......ಇನ್ನೂ......! ಅಷ್ಟೇ ಅಲ್ಲ, ತನ್ನ ಸೋದರತ್ತೆ, ಸಿದ್ಧಲಕ್ಷ್ಮಿ!......ಸಿದ್ಧಲಕ್ಷ್ಮಿಯ ಚರಿತ್ರೆ ಊರಿಗೆ ಊರೇ ಬಲ್ಲುದು.

ಮನೆತನದ ಇತಿಹಾಸದ ಪುರಾವೆಗೆ ಇನ್ನೂ ಏನು ಬೇಕು? ಆದರೆ ಇದರಿಂದ ಇನ್ನೂ ಕೆಡುಕೇ ಆಯಿತು. ಪ್ರಮೀಲೆಯ ಜೀವನ ಎಂದಿಗೂ ಹಾಳೆ? ಹಾಗಾಗಲಾರದು. ಆನಂದ, ಪ್ರಮೀಲರಲ್ಲಿ ಪರಸ್ಪರ ಪ್ರೇಮವಿದ್ದರೆ, ಪರಸ್ಪರ ಎರಡೂ ಹೃದಯಗಳು ಒಂದನ್ನೊಂದು ಅರಿತುಕೊಂಡಿದ್ದರೆ

ಅವರಿಬ್ಬರ ಜೀವನ ಸುಗಮವೇ ತಾನೆ? ಆನಂದ ವಿದ್ಯಾವಂತ, ಬುದ್ಧಿವಂತ, ಲಕ್ಷಣವಂತ ಹಾಗೂ ಗುಣವಂತ. ಆನಂದನ ಕೈಹಿಡಿದ ಪ್ರಮೀಲಳ ಭವಿಷ್ಯ ಉಜ್ವಲವಾಗುವುದರಲ್ಲಿ ಸಂಶಯವೆ?—ಆದರೆ, ಇದು ವರೆಗೂ ಮನೆತನದ ಹೊಲಬು ಆನಂದನಿಗೆ ತಿಳಿಯದಿದ್ದು, ಮುಂದೆ ತಿಳಿದು ತೊಂದರೆಯಾದರೆ? ಆನಂದ ಆದರ್ಶವಾದಿ; ಅವನ ಬಳಿ ಈ ದುರಭಿಪ್ರಾಯವೇ ಸುಳಿಯು ಲಾರದು. ಒಂದು ವೇಳೆ ಹಾಗಿದ್ದರೆ ಆನಂದನನ್ನು ಆ ಬಗ್ಗೆ ಪರೀಕ್ಷಿಸಲೂ ಬಹುದಲ್ಲ.

ವಿಚಾರ ಕೊನೆಯ ಘಟ್ಟ ಮುಟ್ಟಿದಾಗ ರಾಜಣ್ಣನ ಮನಸ್ಸು ತಿಳಿಯಾಗಿತ್ತು. ಇದು ವರೆಗೆ ಮೂಡಿದ್ದ ಅಸಮಾಧಾನ ದೂರವಾಗಿ, ಅದರ ಬದಲು ಆನಂದನ ಉತ್ತಮ ಗುಣಗಳು ಎದುರು ನಿಂತುವು. ಅವನ ಮನಸ್ಸು ಆನಂದ ಪ್ರಮೀಲರಿಬ್ಬರನ್ನೂ ಮತ್ತೊಮ್ಮೆ ತಿಳಿಯಬಯಸುತ್ತಿತ್ತು. ಅಷ್ಟೇ ಅಲ್ಲ, ಆ ಬಗ್ಗೆ ತಾಯಿ-ತಂದೆಗಳ ಅಭಿಪ್ರಾಯವನ್ನೂ ತಿಳಿಯಲು ಚಡಪಡಿಸತೊಡಗಿತ್ತು.

ಆಲೋಚನೆಯಲ್ಲಿ ಮಗ್ನನಾಗಿದ್ದ ರಾಜಣ್ಣನಿಗೆ ಹೊತ್ತು ಎಷ್ಟಾಗಿದೆ ಎಂಬುದೂ ತಿಳಿದಿರಲಿಲ್ಲ. ಸೊಸೈಟಿಯ ಕೆಲಸ ಮುಗಿಸಿಕೊಂಡು ಬಂದ ಆನಂದ.

"ಏನು ರಾಜು, ಬಹಳ ಯೋಚಿಸುತ್ತಿದ್ದೀ" ಎಂದು ಪ್ರಶ್ನಿಸಿದಾಗಲೇ ಅರಿವಾದದ್ದು.

"ಏನೂ ಇಲ್ಲ" ಎಂದವನೇ ನಗುತ್ತ ಒಳಗೆ ನಡೆದು, ಅಡುಗೆ ಎಲ್ಲಿಯ ವರೆಗೆ ಬಂದಿದೆ ಎಂಬುದನ್ನು ವಿಚಾರಿಸಲು, ತಾಯಿಯ ಬಳಿ ನಡೆದ ರಾಜಣ್ಣ.

* * * *

ಚೌಕಿಯ ಮಠ ರಾಂಪುರಕ್ಕೆ ಒಂದು ಮೈಲು ದೂರದಲ್ಲಿ ಎಡಪಕ್ಕಕ್ಕೆ ಇದೆ. ಮಠದ ಹಿಂಭಾಗಕ್ಕೆ ಅತಿ ಸಮೀಪದಲ್ಲೇ ಸುತ್ತಲೂ ಗುಡ್ಡದ ಸಾಲು, ಎದುರಿಗೆ ವಿಶಾಲವಾದ ಕೆರೆ. ಮಠಕ್ಕೆ ಸುತ್ತಮುತ್ತಲಿನ ಹಳ್ಳಿಗಳಿಂದ ಭಕ್ತರು ಸೇವೆಗಾಗಿ ಬಂದು ಹೋಗುತ್ತಾರೆ.

ಸಂಜೆಯ ಸಮಯವಾಗಿದ್ದುದರಿಂದ ರಾಜಣ್ಣ, ಆನಂದರು ತಿರುಗಾಡಿಕೊಂಡು ಬರಲು ಹೊರಟಿದ್ದವರು, ಮಠದ ಕಡೆ ಬಂದರು. ರಾಜಣ್ಣ ಆನಂದನನ್ನು ಈ ದಿನ ಬೇಕೆಂದೇ ಇಷ್ಟು ದೂರ ಕರೆದುಕೊಂಡು ಬಂದಿದ್ದ.

ಪ್ರವೃತ್ತಿಯ ಬಗ್ಗೆ ಆನಂದನಿಗಿರುವ ಅಭಿಪ್ರಾಯ ತಿಳಿಯಲು ಹಾಗೆ ಮಾಡಿದ್ದ. ಇಬ್ಬರೂ ಗುಡ್ಡದ ಮೇಲೆ ಹತ್ತಿ ಒಂದು ವಿಶಾಲವಾದ ಬಂಡೆಯ ಮೇಲೆ ಕುಳಿತರು.

ಬಿಸಿಲು ಕಡಿಮೆಯಾಗಿತ್ತು. ಹೊತ್ತು ಮುಳುಗುವ ಸಮಯವಾಗಿದ್ದು ದರಿಂದ, ಸೂರ್ಯನ ಕೆಂಪು ಕಿರಣಗಳು ಕೆರೆಯ ನೀರಿನ ಮೇಲೆ ಬಿದ್ದು ಅದೊಂದು ವಿಶಾಲ ಕನ್ನಡಿಯ ಹಾಗೆ ಕಂಗೊಳಿಸುತ್ತಿತ್ತು. ದೂರದ ಮರ ಗಳು ಹೊಂಗಿರಣದುಡುಗೆಯುಟ್ಟು ಕಣ್ಣಿಗೆ ಅಂದವಾಗಿ ಕಾಣುತ್ತಿದ್ದುವು. ಗುಡ್ಡದ ಮೇಲಿನಿಂದ ರಾಂಪುರದ ಮನೆಗಳು, ಸ್ಕೂಲು, ಆಸ್ಪತ್ರೆ, ಬಂಗಲೆ ಎಲ್ಲವೂ ಚಿಕ್ಕದಾಗಿ ಚಿತ್ರದಂತೆ ಕಾಣುತ್ತಿದ್ದವು.

ರಾಜಣ್ಣನಿಗೆ, ತನ್ನ ಮನಸ್ಸಿನಲ್ಲಿರುವ ವಿಷಯವನ್ನು ಆನಂದನ ಮುಂದೆ ಇಡುವುದು ಹೇಗೆಂಬ ಸಮಸ್ಯೆ ಎದುರಾಗಿ ಅವನು ಸ್ವಲ್ಪ ಹೊತ್ತು ಒಳ ಗೊಳಗೇ ಯೋಚಿಸತೊಡಗಿದ. ಸ್ವಲ್ಪ ಹೊತ್ತಿನ ಮೇಲೆ ಹೇಳಿದ—

"ತುಮಕೂರಿಗೆ ಹೊರಡುವ ದಿನಗಳು ಹತ್ತಿರವಾದವು ಆನಂದ. ಅಲ್ಲಿಗೆ ಹೋದ ಮೇಲೆ ನೀನಿಲ್ಲದೆ ನನಗೆ ಬಹಳ ಬೇಜಾರೆನಿಸುತ್ತದೆ. ಈಗಿನಿಂದಲೇ ಹೋಗಬೇಕಲ್ಲಾ ಎಂದು ಯೋಚನೆಯಾಗಿದೆ."

ರಾಜಣ್ಣನ ಮಾತಿಗೆ ನಕ್ಕು ಆನಂದ ಹೇಳಿದ—

"ನೀನೊಬ್ಬ ಹುಚ್ಚ, ನಿನ್ನ ಗೆಳೆಯರು ಲಕ್ಷ್ಮಣ, ಪಾಪಚ್ಚಿ, ಧಣಿ ಎಲ್ಲಾ ಇರುತ್ತಾರೆ. ನೀನು ಹೇಗಾದರೂ ಇರಬಲ್ಲೆ. ನನ್ನ ಸ್ಥಿತಿ ಹೇಳು!"

"ಹಾಗಲ್ಲ ಆನಂದ, ಆ ಸ್ನೇಹಿತರುಗಳಿಗೂ ನಿನಗೂ ವ್ಯತ್ಯಾಸವಿದೆ. ತೋರಿಕೆಯ ಪ್ರವೃತ್ತಿ ಅವರದು. ಆದರೆ ನಿನ್ನಲ್ಲಿ ನಾನು ಕಂಡಿರುವ ಸ್ನೇಹ, ಅವರುಗಳ ಸ್ನೇಹಕ್ಕಿಂತಲೂ ಮಿಗಿಲಾದುದು; ಸರ್ವೋತ್ತಮವಾದುದು. ಈ ನವ್ಯ ಸ್ನೇಹವನ್ನು ಕಳೆದುಕೊಳ್ಳುವದು ನನ್ನಿಂದ ಸಾಧ್ಯವಿಲ್ಲ ಆನಂದ." ಮಾತಿನ ಮೋಡಿಯನ್ನು ತಿರುಗಿಸಿ ವಿಚಾರದ ಸ್ಪಷ್ಟತೆಯಲ್ಲಿ ತನ್ನತ್ತ ಕಡೆಗೆ ಆನಂದನನ್ನು ಸೆಳೆಯುತ್ತ ಹೇಳಿದ ರಾಜಣ್ಣ.

"ನೀನು ನನ್ನನ್ನು ಹೊಗಳಬೇಡ ರಾಜು."

"ಹೊಗಳುವುದಲ್ಲ ಆನಂದ, ನೀನು ನನ್ನ ಮನಸ್ಸನ್ನು ಅರಿತರೆ ಗೊತ್ತಾ ಗೀತು. ನಿಜಕ್ಕೂ ನಿನ್ನ ಸ್ನೇಹದಲ್ಲಿ ನಾನು ಹೊಸ ರೂಪು ಕಾಣುತ್ತಿದ್ದೇನೆ."

ರಾಜಣ್ಣನ ಮಾತಿನ ಧೋರಣೆ ಅರ್ಥವಾಗದೆ ಆನಂದ ಹೇಳಿದ—

"ಅದು ಹಾಗೇ ರಾಜು. ಮನಸ್ಸು, ಮನಸ್ಸು ಹತ್ತಿರವಾದಾಗ ಹೀಗಾಗುವುದು ಸ್ವಾಭಾವಿಕ. ಮೊದಲು ಸ್ವಲ್ಪ ವ್ಯಸನವಿರುತ್ತದೆ; ಕ್ರಮೇಣ ತಾನಾಗಿಯೇ ಸರಿಹೋಗುತ್ತದೆ."

ರಾಜಣ್ಣ ಆನಂದನ ಮುಖವನ್ನೇ ನೋಡುತ್ತ ಕುಳಿತ, ಆನಂದ ಹೇಳಿದ ಮಾತು ಅರ್ಥವಾಗದವನಂತೆ. ಅವನ ಅರ್ಥವಿಲ್ಲದ ಮೌನ ಅರ್ಥಕ್ಕಾಗಿ ಕೆಣಕುತ್ತಿತ್ತು. ಆನಂದ ಮುಂದುವರಿಸಿ ಹೇಳಿದ—

"ಇದು ಪ್ರಕೃತಿಯ ನಿಯಮ. ಯಾರೋ, ಎಲ್ಲಿಯವರೋ ಪರಸ್ಪರ ಸಂಧಿಸುತ್ತೇವೆ. ಆಗಲೇ ಗೆಳೆತನ ಪ್ರಾರಂಭವಾಗುತ್ತದೆ. ಮತ್ತೆ ಒಬ್ಬರೊಬ್ಬರು ದೂರಾಗುವಾಗ ತೀವ್ರ ವ್ಯಥೆಯಾಗುತ್ತದೆ. ನಂತರ ಹೊಸ ಸನ್ನಿವೇಶಕ್ಕೆ ಹೊಂದಿಕೊಂಡಾಗ, ಹೊಸ ಬಟ್ಟೆಯುಟ್ಟು ಹಳೆಯದನ್ನು ಮರೆತುಬಿಡುವ ಹಾಗೆ, ಹಿಂದಿನ ವ್ಯಥೆಯೂ ದೂರವಾಗುತ್ತದೆ. ಆದರೆ ಕೆಲವು ಮಾತ್ರ ಹಾಗಾಗುವುದಿಲ್ಲ. ಹೃದಯದ ಮೇಲೆ ತನ್ನ ಸಂಪೂರ್ಣ ಅಧಿಕಾರ ವಹಿಸಿ ಅಚ್ಚಳಿಯದ ಗುರುತು ಮಾಡುತ್ತದೆ. ಇದು ಮಮತೆಯ ಗುರುತು. ಸಂಘಜೀವಿಯಾದ ಮಾನವ, ಸ್ನೇಹ ಹಾಗೂ ಮಮತೆಗಳ ಬಂಧನದಲ್ಲಿ ಸುಖ ಕಾಣಲಪೇಕ್ಷಿಸುತ್ತಾನೆ. ಆ ಮಮತೆ ಪರಸ್ಪರ ಹೃದಯಗಳನ್ನು ಕೂಡಿಸುವ ಶಕ್ತಿ. ಪ್ರತಿಯೊಂದು ಜೀವರಾಶಿಗೂ ಈ ಮಮತೆಯ ಅವಶ್ಯಕತೆಯಿದೆ. ಅದರಲ್ಲೂ, ಮಾನವನು ತನ್ನ ಜೀವನ ಸುಗಮವಾಗಿ ಸಾಗಬೇಕೆಂಬ ಅಭಿಲಾಷೆಯಿಂದ, ಮಮತೆ, ಸೌಹಾರ್ದಗಳ ಪಾಠವನ್ನು ಚೆನ್ನಾಗಿ ಮನನ ಮಾಡುತ್ತಾನೆ. ಪ್ರತಿಯೊಬ್ಬನೂ ಮತ್ತೊಬ್ಬನ ಸಂಗಡ ಸೌಹಾರ್ದತೆಯ ಸೂತ್ರದಿಂದ ತನಗೆ ತಾನೇ ಬಿಗಿದುಕೊಳ್ಳುತ್ತಾನೆ. ಒಂದು ವೇಳೆ ಹಾಗಿಲ್ಲದಿದ್ದರೆ ಅಂತಹನ ಜೀವನ ಶುಷ್ಕ! ಇದನ್ನರಿತೇ ಪ್ರತಿಯೊಬ್ಬನೂ ತನ್ನ ಕ್ಷೇಮಚಿಂತನೆಯೊಡನೆ ಇನ್ನೊಬ್ಬರ ಕಡೆಗೂ ಲಕ್ಷ್ಯವಿಡುತ್ತಾನೆ. ಹೆಣ್ಣಾಗಲೀ, ಗಂಡಾಗಲೀ ತನ್ನ ಕರ್ತವ್ಯ ಪಥದಲ್ಲಿ ನಡೆಯುವಾಗ ಪರಸ್ಪರ ಹಿತರಕ್ಷಣೆಯ ಕಡೆಗೆ ದೃಷ್ಟಿಯಿಡಬೇಕಾದುದು ಪ್ರತಿಯೊಬ್ಬರ ಕರ್ತವ್ಯ."

ಆನಂದನ ಮಾತಿನ ಕಡೆ ಲಕ್ಷ್ಯವಿಟ್ಟಿದ್ದ ರಾಜಣ್ಣ, ತನ್ನ ಮಾತು ಮುಂದುವರಿಸಲು ಅವಕಾಶ ದೊರೆತುದು ಕಂಡು ಹಿಗ್ಗಿದ. ಜೇಬಿನಿಂದ

ಸಿಗರೇಟು ಬೆಂಕಿಪೊಟ್ಟಣಗಳನ್ನು ತೆಗೆದುಕೊಂಡು ಸಿಗರೇಟು ಹತ್ತಿಸಿಕೊಂಡು ನಿಧಾನವಾಗಿ ಹೇಳತೊಡಗಿದ.

"ನಾನೂ ಅದನ್ನೇ ಯೋಚಿಸುತ್ತಿದ್ದೇನೆ ಆನಂದ. ನೀನು ಹೇಳುವುದಕ್ಕೂ, ನನ್ನ ವಿಷಯಕ್ಕೂ ಸಂಬಂಧವಿದೆಯೋ ಇಲ್ಲವೋ ಗೊತ್ತಿಲ್ಲ; ಆದರೂ ನಾನು ಹೇಳುವುದು ನಿಜ ನನ್ನ ತಂದೆಯವರ ಬಗ್ಗೆ ನನಗೆ ಸ್ವಲ್ಪ ಕೋಪವೇ ಈ ವಿಷಯದಲ್ಲಿ......"

ರಾಜಣ್ಣ ಏನು ಹೇಳುತ್ತಿದ್ದಾನೆಂದು ತಿಳಿಯದ ಆನಂದ ಕೌತುಕದಿಂದ ಪ್ರಶ್ನಿಸಿದ—

"ನಿನ್ನ ತಂದೆಯ ವಿಷಯಕ್ಕೂ ನಮ್ಮ ಮಾತಿಗೂ ಏನು ಸಂಬಂಧ ರಾಜು!"

"ಇದೆ ಆನಂದ. ಅವರಿಗೆ ತಿಳಿಯದೆ ಯಾವುದೂ ಇಲ್ಲ. ಆದರೂ ತಿಳಿಯದವರಂತೆ ಇರುತ್ತಾರೆ. ನೀನು ಹಿತರಕ್ಷಣೆಯ ವಿಷಯ ಮಾತಾಡಿದುದರಿಂದ ನನಗೆ ಈ ವಿಷಯ ಜ್ಞಾಪಕಕ್ಕೆ ಬಂತು. ಪ್ರಮೀಲೆಯ ವಿಷಯಕ್ಕೆ ಹೇಳುತ್ತೇನೆ. ಹುಡುಗಿ ಬೆಳೆದುನಿಂತಿದ್ದಾಳೆ. ಅಪ್ಪ ಈ ವಿಷಯವನ್ನು ಹಚ್ಚಿಕೊಂಡೇ ಇಲ್ಲ ಮನಸ್ಸಿಗೆ. ಹೋದಷ್ಟು ದಿನ ಹೀಗೇ ಇದ್ದರೆ ಫಲಿತಾಂಶ ಒಳ್ಳೆಯದಾಗಲಾರದು."

"ಅದಕ್ಕೂ ಸಮಯವಿದೆ ರಾಜು. ತಾಯಿತಂದೆಗಳಿಗೆ ಜವಾಬ್ದಾರಿ ವಿಷಯ ಹೇಳಿಕೊಡಬೇಕೆ? ಅವರುಗಳಿಗಿಂತ ನಾನು, ನೀನು ಅನುಭವಸ್ಥರೇ ಹೇಳು. ನಿನ್ನ ತಂದೆತಾಯಿಗಳೇನೂ ಕಣ್ಣು ಮುಚ್ಚಿಕೊಂಡು ಕುಳಿತಿಲ್ಲ."

"ಆ ವಿಷಯ ನನಗೂ ಗೊತ್ತಿದೆ. ಆದರೆ ಆಲಸ್ಯ ಮಾಡುವುದು ಒಳ್ಳೆಯದಲ್ಲ. ನಮ್ಮೂರು ಪಟ್ಟಣವಲ್ಲ, ಹಳ್ಳಿ; ವಯಸ್ಸಿಗೆ ಬಂದ ಹೆಣ್ಣಿಗೆ ಬೇಗ ಮದುವೆ ಮಾಡದಿದ್ದರೆ ನೋಡಿದವರೆಲ್ಲಾ ಮೂಗು ಮುರಿಯುತ್ತಾರೆ. ಒಂದು ವೇಳೆ ಯಾವುದಾದರೂ ಗಂಡು ದೊರೆತು ಅನುಕೂಲವಾದರೂ, 'ಇಷ್ಟು ದಿನ ಇನ್ನೂ ಯಾಕೆ ಮದುವೆಯಾಗಿಲ್ಲ!' ಎಂಬ ಕುತೂಹಲದ, ಸಂಶಯದ ಪ್ರಶ್ನೆಗಳು—ಸರಿ ಮುಂದೆ, ಜನಗಳ ಬಾಯಿಗೆ ಅಡೆತಡೆಯೂ ಇಲ್ಲದೆ ಇರುವಾಗ ವಿಷಯ ಯಾವ ಪರಿಣಾಮವನ್ನು ಹೊಂದುಬಹುದು ಊಹಿಸು."

“ನಮ್ಮ ಮನೆಯ ಮಕ್ಕಳು ನಮಗಿಂತ ಹೆರವರಿಗೇ ಭಾರವಾಗಿ ಕಾಣು ವುದು ಸಹಜ ರಾಜೂ, ಆದರೆ ಕಾಲ ಹಣ್ಣಾಗುವ ವರೆಗೂ ಸುಮ್ಮನಂತೂ ಇರಲೇ ಬೇಕಲ್ಲ!”

“ನಮ್ಮ ವಿಷಯದಲ್ಲಿ ಮಾತ್ರ ಕಾಲ ಹಣ್ಣಾಗುವುದು ಸ್ವಲ್ಪ ದೂರವೇ ಅನ್ನಿಸುತ್ತದೆ ಆನಂದ”

“ನಿನ್ನ ಮಾತು ಅರ್ಥವಾಗಲಿಲ್ಲ ರಾಜು.”

“ಹೆಣ್ಣು ಕೇಳಬರುವವರು ಮೊದಲು ಕೇಳುವುದು ಕುಲ, ಆಚಾರ ಅಲ್ಲವೆ ಆನಂದ?”

“ಹೌದು.”

“ನಮ್ಮ ಮನೆತನದ ಇತಿಹಾಸ, ಕುಲಗೌರವ ಪ್ರವೀಲೆಯ ಭವಿಷ್ಯ ಕ್ಕೊಂದು ದೊಡ್ಡ ತೊಡಕು. ಪಟ್ಟಣದ ಜೀವನವಾಗಿದ್ದಿದ್ದರೆ ನಿಜಕ್ಕೂ ಆಲೋಚಿಸಬೇಕಾದ್ದಿರಲಿಲ್ಲ. ಇದು ಹಳ್ಳಿಯ ಜೀವನ. ಇಲ್ಲಿ ಒಂದು ಹೆಣ್ಣು ಹೊರಗೆ ಹೋಗಬೇಕಾದರೆ, ಅವಳ ಅಪ್ಪನ, ತಾತನ, ಮುತ್ತಾತನ ಕಾಲದ ಇತಿಹಾಸವನ್ನೆಲ್ಲಾ ಕನ್ನಡಿಯ ಹಾಗೆ ಶುಭ್ರವಾಗಿಟ್ಟುಕೊಂಡಿದ್ದರೆ ಸಾಧ್ಯ. ಇಲ್ಲದಿದ್ದರೆ ಅವಳ ಬಾಳಿಗೆ ತಾನು ಬಯಸಿದ ಭವಿಷ್ಯ ದೂರದ ನಕ್ಷತ್ರ! ಒಂದು ವೇಳೆಗೆ, ಸಾವಿರ ಸುಳ್ಳು ಹೇಳಿ ಮದುವೆ ಮಾಡಿದರೂ ಜನರ ಬಾಯಿ ಜಾಗಟೆ ಬಾರಿಸಿದಾಗ ಮುಗಿಯಿತು ಆ ಹೆಣ್ಣಿನ ಚರಿತ್ರೆ. ಗಂಡನ ಮನೆ ಪ್ರತ್ಯಕ್ಷ ನರಕ ಅವಳ ಪಾಲಿಗೆ!”

“ನಿನ್ನ ತಂಗಿಯ ಮದುವೆಗೂ ಮನೆತನದ ವಿಚಾರಕ್ಕೂ ಏನು ಸಂಬಂಧ ರಾಜು. ಕೆಟ್ಟ ಮನೆತನವಾದರೆ ಯೋಚಿಸಬೇಕಾದ್ದು ನ್ಯಾಯ.”

“ಅದಕ್ಕೇ ಆನಂದ ಯೋಚಿಸಬೇಕಾಗಿರುವುದು. ನಮ್ಮ ಮನೆತನದ ವಿಷಯ ಒಂದು ದೊಡ್ಡ ಕಥೆ......ನಿನಗೆ ತಿಳಿದಿರಬಹುದೆಂದುಕೊಂಡಿದ್ದೆ. ನಿನಗೆ ತಿಳಿದಿಲ್ಲ ಅಲ್ಲವೆ?”

ಗುರುರಾಜರಾಯರ ವಂಶ ಚರಿತ್ರೆಯ ಬಗ್ಗೆ ಆನಂದನಿಗೆ ಏನೂ ಗೊತ್ತಿರಲಿಲ್ಲ. ರಾಜಣ್ಣನ ಮಾತು ಅವನಲ್ಲಿ ಕೌತುಕ ಮೂಡಿಸಿತ್ತು. ಅವನು ಏನು ಹೇಳುವನೆಂಬುದನ್ನೇ ಗಮನಿಸುತ್ತ ಕುಳಿತ ಆನಂದ.

ರಾಜಣ್ಣ ಹೇಳತೊಡಗಿದ—

"ನಮ್ಮ ಸ್ಥಳ ಈ ಊರಲ್ಲ ಆನಂದ. ನಿಡಗುತ್ತಿ ಹೆಸರು ಕೇಳಿದ್ದೀಯಲ್ಲ, ಅದೇ ನಮ್ಮ ಊರು ಮೊದಲಿಗೆ. ನಾವು ಈ ಊರಿಗೆ ಬಂದು ಸೇರಿದ್ದೇ ಒಂದು ಚರಿತ್ರೆ.

ನಮ್ಮ ಮುತ್ತಾತ ಭೀಮರಾಯರು ನಿಡಗುತ್ತಿಗೇ ಏಕೆ ಸುತ್ತ ಏಳು ನಿಟ್ಟಿಗೂ ದೊಡ್ಡ ಆಸ್ತಿವಂತರಂತೆ. ಆಗಿನ ಕಾಲಕ್ಕೆ ಎಂಟು ಹತ್ತು ಸಾವಿರ ರೂಪಾಯಿ ಬೆಲೆಯ ಆಸ್ತಿ ಇದ್ದವರು. ಒಳ್ಳೆಯ ದೌಲತ್ ನಡೆಸಿದವರಂತೆ ತಮ್ಮ ಕಾಲದಲ್ಲಿ. ಆದರೆ, ಎಷ್ಟು ಹಣವಿದ್ದರೆ ಏನು ಪ್ರಯೋಜನ ಹೇಳು ಗುಣವಿಲ್ಲದ ಮೇಲೆ.

ಭೀಮರಾಯರಿಗೆ ಆಸ್ತಿಯಿದೆ ಎಂಬ ಗರ್ವದ ಜೊತೆಗೆ ಪೌರುಷ, ಶಕ್ತಿ ಎಲ್ಲಾ ಇತ್ತು. ತನಗೆ ಸಮಾನ ಯಾರೂ ಇಲ್ಲ ಅನ್ನುವ ಅಭಿಮಾನದ ಜೊತೆಗೆ 'ನನ್ನೆದುರು ಯಾವೋನು ನಿಲ್ತಾನೋ ನಿಲ್ಲಲಿ' ಅನ್ನೋ ಕೆಚ್ಚು ಇತ್ತು. ಊರಿನವರೂ, ಸುತ್ತಮುತ್ತಲವರೂ ಭೀಮರಾಯರನ್ನು ಕಂಡರೆ ನಡುಗುತ್ತಿದ್ದರು ಎದುರು ಬಿದ್ದವರ ಗತಿ ಒಂದೇ ಸಲಕ್ಕೆ ತೀರಿಹೋಗುತ್ತಿತ್ತು. ಎದುರು ಬಿದ್ದವರನ್ನು ಎದುರಿನಲ್ಲೇ ನಿಲ್ಲಿಸಿಕೊಂಡು ಚಿತ್ರಹಿಂಸೆ ಮಾಡಿ ಖೂನಿ ಮಾಡಿ ಬಿಡುವುದಷ್ಟೇ ಅಲ್ಲ, ಸತ್ತವನ ಹೆಂಡತಿ, ಮಕ್ಕಳ ಮಾರಣ ಹೋಮ ಆಗುತ್ತಿತ್ತು. ಕುಡಿಯುವುದು, ತಿನ್ನುವುದಂತೂ ಮಿತಿಯಿಲ್ಲದ ಮಾತು. ತನ್ನಿಚ್ಛೆ ಬಂದ ಮನೆಗೆ ಹೋಗುವುದು, ಜನಗಳನ್ನು ನುಗ್ಗಿಸುವುದು ಕೈಗೆ ಸಿಕ್ಕಿದ್ದೇ ದೋಚುವುದು, ದನ ಕುರಿ, ಮೇಕೆ, ಕೋಳಿಗಳನ್ನೂ ಹೊಡೆದುಕೊಂಡು ಹೋಗಿಬಿಡುವುದು. ಇದರ ಮೇಲೆ ಜೂಜು, ಹೆಂಗಳ ಸಹವಾಸ ಬೇರೆ. ಅಷ್ಟೂ ಆಸ್ತಿ ಸೂಳೆಯರಿಗೆ, ಜೂಜಿಗೆ, ಕುಡಿಯುವುದಕ್ಕೇ ಹಾಳು ಮಾಡಿ ಮಕ್ಕಳ ಕೈಗೆ ಚಿಪ್ಪು ಕೊಟ್ಟ, ಮಹಾನುಭಾವ. ಇಷ್ಟೆಲ್ಲಾ ಆದ ಮೇಲೆ ಸತ್ತದ್ದು ಹೇಗೆ ಗೊತ್ತೆ? 'ತನ್ನೆದುರು ಯಾವೋನು ನಿಲ್ತಾನೆ?' ಅನ್ನುವ ಸೊಕ್ಕು ಬೇರೆ ಇತ್ತಲ್ಲ. ಪೂನಾಕ್ಕೆ ಜೂಜಿಗೆ ಹೋದೋನು ಒಂದು ಸಲ ದಂಡಿನ ದೊರೆಯ ಕುದುರೆ ಹಾರಿಸಿಕೊಂಡು ಬಂದ. ಹೇಗೋ ಸುದ್ದಿ ಗೊತ್ತಾಯಿತು. ಕುದುರೆ ಹುಡುಕಿಕೊಂಡು ಬಂದವರು ಆಸಾಮಿ ಸಿಕ್ಕಿದ ಕೂಡಲೇ ಕುದುರೆ ಜೊತೇಲೇ ಅವನನ್ನೂ ದೊರೆಯ ಹತ್ತಿರ ಕರಕೊಂಡು ಹೋದರು. ಅಲ್ಲಿ ಸಾಯುವವರೆಗೆ ಹೊಡೆತ ತಿಂದ ತಾನೂ ಬಿಟ್ಟನೆ? ತೋಳಿನಲ್ಲಿ ಎಷ್ಟು ಬಲವಿತ್ತೋ, ಅಷ್ಟನ್ನೂ ತೋರಿಸಿಯೇ ಬಿಟ್ಟ. ನೌಕರರುಗಳ ಮೂಳೆಗಳನ್ನು ಮುರಿದು

ಮುಟ್ಟಿಕಟ್ಟಿದ. ದೊರಿಗೆ ಸಿಟ್ಟುಬಂತು. ಒಂದೇ ಸಲಕ್ಕೆ ಗುಂಡಿಟ್ಟು ಸುಟ್ಟುಬಿಟ್ಟ.

ಸಾಯುವಾಗ, ವಯಸ್ಸಿಗೆ ಬಂದ ಇಬ್ಬರು ಮಕ್ಕಳು ಇದ್ದರು. ನಾಗರಾಜ, ನರಸಿಂಹಯ್ಯ ಅಂತ. ದೊಡ್ಡವನಾದ ನಾಗರಾಜ ಅಪ್ಪನಿಗೇನು ಕಡಿಮೆಯಿರಲಿಲ್ಲ. 'ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆಲ್ಲ' ಅನ್ನೋ ಹಾಗೆ ಅಪ್ಪನ ಹಾಗೇ ಅನುಸರಿಸಿಕೊಂಡು ಬಂದ. ಮೊದಲಿನಿಂದಲೂ ಪುಂಡನಾಗಿಯೇ ಬೆಳೆದುಬಂದ. ಭೀಮರಾಯ ಕೋಳಿ-ಕುರಿಗಳು, ದವಸ-ಧಾನ್ಯಗಳನ್ನು ಲೂಟಿಮಾಡಿದರೆ, ಇವನು ಊರಿನಲ್ಲಿ ಯಾವ ಮನೆಯವರೇ ಆಗಲಿ, ಹೋಗಿ ಆ ಮನೆಯ ಹೆಂಗಸರು ಮಕ್ಕಳನ್ನು ಹಾಳು ಮಾಡುತ್ತಿದ್ದ. ಇವನ ಕಾಲದಲ್ಲಿ ಅವರವರ ಮನೆ ಹೆಂಡತಿಯವರನ್ನು ತೌರಿನಿಂದ ಕರೆಸಿಕೊಳ್ಳಲು ಹೆದರುತ್ತಿದ್ದರು ಜನ. ಯಾವುದಾದರೂ ಹೊಸ ಹೆಣ್ಣು ಕಣ್ಣಿಗೆ ಬಿತ್ತೆಂದರೆ ಆಯಿತು, ಅಲ್ಲೇ ಆಗಲೇ ಅತ್ಯಾಚಾರವೆಸಗುತ್ತಿದ್ದ. ಊರಿನವರಿಗೆ ಇವನನ್ನು ಮುಟ್ಟಹಾಕಬೇಕು ಅನ್ನುವ ರೊಚ್ಚಿದ್ದರೂ ಕೈಯಲ್ಲಿ ಸಾಗುತ್ತಿರಲಿಲ್ಲ. ನಾಗರಾಜನಿಗೆ ತನ್ನಂತಹ ಪುಂಡರನೇಕರ ಬಲವಿತ್ತು. ಯಾರಾದರೂ ಎದುರಾಡಿದರೆ, ತಮ್ಮ ಗುಂಪನ್ನೇ ಊರಿಗೆ ನುಗ್ಗಿಸಿಬಿಡುತ್ತಿದ್ದ. ತನ್ನ ಪುಂಡಾಟಿಕೆಯಲ್ಲಿ ಅಳಿದು ಉಳಿದ ಆಸ್ತಿಯನ್ನೂ ಹಾಳುಮಾಡಿದ. ಕೊನೆಗೆ ತಿನ್ನಲಿಕ್ಕೆ ಹಿಟ್ಟಿಲ್ಲದೆ ನಾಯಿ ಹಾಗೆ ಅಲೆದಲೆದು ಸತ್ತ.

ನಾಗರಾಜನ ತಮ್ಮ ನರಸಿಂಹಯ್ಯ ಅಂದೆ ಅಲ್ಲವೆ? ಆ ನರಸಿಂಹಯ್ಯ, ನಮಗೆ ತಾತ ಆಗಬೇಕು. ಇದ್ದುದರಲ್ಲಿ ನಮ್ಮ ತಾತನೇ ಸಭ್ಯಸ್ಥರು ಅನ್ನಬೇಕು. ಅದಕ್ಕೂ ಪರಿಸ್ಥಿತಿ ಕಾರಣ ಅನ್ನು. ನಾಗರಾಜ ಸಾಯೋಕಾಲಕ್ಕೆ ನಮ್ಮ ತಾತನಿಗೆ ಇನ್ನೂ ಹದಿನಾರು ವರ್ಷ. ತನ್ನವರು ಯಾರೂ ಇಲ್ಲದ ಆ ಊರಿನಲ್ಲಿ ಏನು ಮಾಡಬೇಕು?

ರಾಂಪುರದಲ್ಲಿ ದೂರದ ನೆಂಟರು, ಬಾಧ್ಯಸ್ಥರು ಇದ್ದಾರೆ ಅಂತ ಯಾರೋ ಹೇಳಿ ಇಲ್ಲಿಗೆ ಕಳಿಸಿದರಂತೆ. ಇಲ್ಲಿ ನಮ್ಮ ಮುತ್ತಾತ ಅಂದರೆ, ಭೀಮರಾಯರ ತಂಗಿ ಬಳಗದವರು ಒಬ್ಬರಿದ್ದರಂತೆ. ಅವರೇ ಪಾಪ ತಬ್ಬಲಿ ಹುಡುಗ ಅಂತ ಕನಿಕರ ತೋರಿಸಿ ಸಾಕಿದರಂತೆ. ಅವರಿಗೂ ವಂಶದ ಹೆಸರು ಹೇಳಲಿಕ್ಕೆ ಒಬ್ಬ ಮಗ ಇರಲಿಲ್ಲ. ನಮ್ಮ ತಾತನೇ ಮಗ. ಅಂದುಕೊಂಡು, ಸಾಕಿ ಸಲಹಿ, ಮದುವೆ ಮಾಡಿ, ಇದ್ದ ಚೂರು ಚೂರು

ಆಸ್ತಿಯನ್ನೂ ಕೊಟ್ಟು, ತಮ್ಮ ಪಾಲಿಗೆ ಇಲ್ಲದೇ ಹೋಗಿದ್ದ ಸ್ವರ್ಗಕ್ಕೆ ಅನುಕೂಲ ಮಾಡಿಕೊಂಡರು. ನಮ್ಮ ತಾತ ಒಳ್ಳೆಯ ವಾತಾವರಣದಲ್ಲಿ ಬೆಳೆದರು, ಒಳ್ಳೆಯವರು ಅನ್ನಿಸಿಕೊಂಡರು. ಆದರೆ ಅದೃಷ್ಟ ಅವರಿಗೂ ಕೈಕೊಟ್ಟಿತು. ಕೆಟ್ಟ ಹೆಸರು ತಪ್ಪಲಿಲ್ಲ.

ರಾಜಣ್ಣ ಹೇಳುತ್ತಿದ್ದ ಕತೆಯನ್ನೇ ಕೇಳುತ್ತಿದ್ದ ಆನಂದನಿಗೆ ಕತೆ ಇಲ್ಲಿಗೆ ಮುಗಿಯಿತೇನೋ ಎನ್ನಿಸಿತು. ಆದರೆ ಕತೆ ಇನ್ನೂ ಮುಗಿಯದೆ ಇದೆ ಎಂಬುದನ್ನು ತಿಳಿದು ರಾಜಣ್ಣನ ಕಡೆ ನೋಡಿದ. ಒಳ್ಳೆಯ ಜನ-ಅನ್ನಿಸಿಕೊಂಡ ನರಸಿಂಹಯ್ಯನವರಿಗೆ ಮತ್ತೇನಾಯಿತೋ ಎಂಬ ಕುತೂಹಲ ಕೆರಳಿತು. ತನ್ನ ಕುತೂಹಲವನ್ನೇ ಮುಂದಿಟ್ಟು ಕೇಳಿದ.

"ಅವರೂ ದುಷ್ಟ ಸಹವಾಸಕ್ಕೆ ಬಿದ್ದರೇ?"

"ಇಲ್ಲ. 'ದುಷ್ಟ ಪಿಂಡದಲ್ಲಿ ಹುಟ್ಟಿದರೂ ಒಳ್ಳೆಯ ದೇವರಂಥ ಮನುಷ್ಯ'. ಅಂತ ಜನಗಳ ಕೈಲಿ ಜಯ ಜಯ ಅನ್ನಿಸಿಕೊಂಡರು. ಆದರೆ, 'ಆನೆ ಹೊಟ್ಟೆಯಲ್ಲಿ ಸೂಲಂಗಿ ಹುಟ್ಟಿದ ಹಾಗೆ' ಅಂತಾರಲ್ಲಾ ಹಾಗೆ, ತಾತನ ಹೆಸರು ಹಾಳು ಮಾಡೋದಕ್ಕೆ ಹುಟ್ಟಿದಳು, ನಮ್ಮ ಅತ್ತೆ. ನಮ್ಮತ್ತೆ ಅಪ್ಪನಿಗಿಂತ ಚಿಕ್ಕೋಳು. ಅವಳ ಹೆಸರು ಸಿದ್ಧಲಕ್ಷ್ಮಿ. ಅಪ್ಪ ಹುಟ್ಟಿದ ಮೇಲೆ ಎಷ್ಟೋ ದಿನಕ್ಕೆ ಹುಟ್ಟಿದ ಮಮತೆಯ ಮಗಳಿಗೆ, ಸಲುಗೆ ಕೊಟ್ಟು ಬೆಳೆಸಿದರು. ಆ ಸಲುಗೆಯೇ ಮೂಲವಾಯ್ತು. ಹುಡುಗಿ ವಯಸ್ಸಿಗೆ ಬರೋದರೊಳಗೆ ಮದುವೆ ಮಾಡಿ ಬಿಡಬೇಕು ಅನ್ನುವ ಸಂಪ್ರದಾಯಕ್ಕೆ ಕಟ್ಟು ಬಿದ್ದ ತಾತ, ಹನ್ನೊಂದನೇ ವರ್ಷಕ್ಕೆ ಪುಟ್ಟ ಮುತ್ತೈದೆಯಾಗಿ ಅತ್ತೆ ಓಡಾಡಿದ್ದನ್ನು ನೋಡಿದರು. ಮುಂದಿನ ವರ್ಷದಿಂದ ಅತ್ತೆಯ ರಂಡೆತನವನ್ನೂ ನೋಡತೊಡಗಿದರು. ಪುಟ್ಟ ವಿಧವೆ ಅತ್ತೆಗೆ ಜೀವನದ ಗಂಧವಾದರೂ ಹೇಗೆ ತಿಳಿಯುತ್ತಿತ್ತು ಹೇಳು ಆ ವಯಸ್ಸಿಗೆ? ಮದುವೆ ಎಂದರೇನೂ ಎನ್ನುವುದೂ ತಿಳಿಯದ ಅತ್ತೆ ವಿಧವೆಯಾದಳು. ಆ ಮೇಲೆ ವಯಸ್ಸು ಬಂದ ಮೇಲೆ ಎಲ್ಲಾ ಗೊತ್ತಾಯಿತು. ಮುಂದೆ ಅತ್ತೆಯನ್ನು ಕಾಯುವುದೇ ಮನೆಯಲ್ಲಿ ಎಲ್ಲರಿಗೂ ಪ್ರಯಾಸದ ಕೆಲಸವಾಯಿತು. ವಯಸ್ಸಿಗನುಗುಣವಾದ ಆಕಾಂಕ್ಷೆ, ಲಾಲಸೆಗಳನ್ನು ಮೆಟ್ಟಲಾರದ ಅತ್ತೆ ವ್ಯಭಿಚಾರಿಣಿಯಾದಳು! ಇದು ಗುಟ್ಟಾಗಿದ್ದಿದ್ದರೆ ಹೇಗೋ ನಡೆದು ಹೋಗುತ್ತಿತ್ತು. ಆದರೆ ಅತ್ತೆಯ ಕಿವಿಗೆ ಯಾರ ಬೆದರಿಕೆಯೂ ಕೇಳುತ್ತಿರಲಿಲ್ಲ. ತಂದೆಯ

ಹಿತನುಡಿ ಮನಸ್ಸಿಗೆ ಹಿಡಿಸಲಿಲ್ಲ. ಅವಳು ಬಯಸುತ್ತಿದ್ದುದೊಂದೇ— ಪುರುಷ ಸಾನ್ನಿಧ್ಯ!

ಕೊಂಡಾಪುರದ ತಳವಾರ ಮಲ್ಲನನ್ನು ನೀನೂ ನೋಡಿದ್ದೀ ಅಲ್ಲವೆ? ಅವನ ಹತ್ತಿರಕ್ಕೆ ಬೇಕಾದಾಗ ಹಗಲೇ ಆಗಲೀ ರಾತ್ರಿಯೇ ಆಗಲಿ ಲೆಕ್ಕಿಸದೆ ಹೋಗಿಬಿಡುತ್ತಿದ್ದಳು. ಒಂದು ಮೈಲಿಯ ಕೊಂಡಾಪುರ ಅತ್ತೆಗೆ ಮಗ್ಗುಲು ಮನೆಯಾಗಿತ್ತು. ಆ ಮೇಲೆ ತನಗೆ ಅಗತ್ಯಕ್ಕೆ ಯಾರು ದೊರೆಯುತ್ತಿದ್ದರೊ ಅವರೊಡನೆ ಇರತೊಡಗಿದಳು. ಬಹಿರಂಗವಾಗಿ ಎಲ್ಲೆಂದರಲ್ಲಿ ಅವರ ಕೇಳಿ ನಡೆಯುತ್ತಿತ್ತು. ದೇವಸ್ಥಾನದ ಹಿಂದಿನ ಪಾಳು, ಮೋಬು ಗೊಡೆಯ ಮರೆ, ಬಾವಿಯ ಕಟ್ಟೆಯ ಸಂದಿ, ಊರಾಚೆಯ ಬಹಿಃ ಪ್ರದೇಶ, ಕಳ್ಳಿಯ ಸಾಲು ಇನ್ನೂ ಎಷ್ಟೋ ಜಾಗ ಅವಳ ಲೀಲಾಸ್ಥಳ! ಬಯಲಿನಲ್ಲಂತೂ ಅವಳು ಪರೆಬಿಟ್ಟ ಹಾವಾಗಿದ್ದಳು. ಈ ಚೌಕಿಮಠದ ಸುತ್ತಲೂ ಯಾವುದೊಂದು ಮರೆಯಿದ್ದರೂ ಅದು ಅವಳಿಗೆ ಗೊತ್ತಿತ್ತೆನ್ನಬೇಕು ಗುಡ್ಡದ ಮೇಲಿನ ಒಂದೊಂದು ಬಂಡೆಗೂ ಅವಳ ಪರಿಚಯವಿದೆ! ಇದು ತಾತನ ಒಳ್ಳೆಯ ಹೆಸರಿಗೆ ಎಂತಹ ಕಲಂಕ! ಆದರೆ ಅವರೇನು ಮಾಡುತ್ತಾರೆ? ಅಪ್ಪ, ಅತ್ತೆಯನ್ನು ಸಿಕ್ಕಾಪಟ್ಟೆ ಬೈದು ಹೊಡೆದು ಬುದ್ಧಿ ಹೇಳುತ್ತಿದ್ದರಂತೆ. ಅಂಥ ಸಮಯದಲ್ಲೆಲ್ಲಾ ಅಮ್ಮನೇ ಬಿಡಿಸುತ್ತಿದ್ದಳು. 'ಯಾಕೆ ಹೀಗೆ ಹೊಡೀತೀರಾ? ಸಿದ್ಧಲಕ್ಷ್ಮಿ ತಂಗೀ ಅಲ್ಲವೆ? ಅವಳು ಕೆಟ್ಟೋಳೋ ಒಳ್ಳೇಳೋ ಏನಾದರೂ ಆಗಲಿ ಮನೆಯ ಹೆಣ್ಣು ಮಗಳು. ಅವಳು ಕಣ್ಣೀರು ಹಾಕಿದರೆ ನಮ್ಮ ವಂಶ ಉದ್ಧಾರಾ ಆಗಲ್ಲ. ಕೊನೇ ಪಕ್ಷ ಎಡಗಣ್ಣ ದೃಷ್ಟಿಯಿಂದ ಲಾದರೂ ನಾವು ಅವಳನ್ನ ನೋಡದೇ ಹೋದರೆ ಆ ಪಾಪ ನಮಗೆ ಸುತ್ತಿಕೊಳ್ಳುತ್ತೆ" ಎಂದು ಅಡ್ಡ ಬರುತ್ತಿದ್ದಳು.

ಬದುಕಿರೋ ವರೆಗೂ ತಾತ ಹೇಳುತ್ತಿದ್ದರು ಅಮ್ಮನಿಗೆ. ನಾನೂ ಕೇಳಿದ್ದೇನೆ ಒಂದೆರಡು ಸಲ, "ಅನಸೂಯಮ್ಮ ನೀನು ನನ್ನ ಸೊಸೆ ಅಲ್ಲ ಕಣೇತಾಯಿ, ನನ್ನ ಮನೆ ಭಾಗ್ಯಲಕ್ಷ್ಮಿ ಇದುವರೆಗೆ ಏನೋ ಎಲ್ಲಾ ಒಂದು ಥರಾ ನಡೆದು ಹೋಯ್ತು. ಇನ್ನು ಮೇಲೆ, ನೀನು ನಿನ್ನ ಮನೆ ಮಕ್ಕಳು ಎಲ್ಲರನ್ನೂ ಸರಿಯಾಗಿ ನೋಡಿಕೋತಾಯಿ. ನಿನ್ನ ಒಳ್ಳೆಯ ಗುಣದಿಂದ ಲಾದರೂ ನಮ್ಮ ವಂಶದ ಅಪಕೀರ್ತಿ ದೂರ ಆದರೆ ನನಗೆ ಅಷ್ಟೇ ತೃಪ್ತಿ."

ಅತ್ತೆ ಸತ್ತು ಮೂರು ನಾಲ್ಕು ವರ್ಷದ ವರೆಗೆ ಮೊನ್ನೆಮೊನ್ನೆ ವರೆಗೆ ನಮ್ಮ ಮನೆಯಲ್ಲಿ ಯಾರೂ ಒಂದು ಲೋಟ ಗಂಗಾಮೃತ ಕುಡಿಯುತ್ತಿರ

ಲಿಲ್ಲ ಆನಂದ. ಅಮ್ಮ ಮುಸಿಮುಸುಕಿದ ಮನೆಗೆ ಬೆಳಕುಮಾಡಿದಳು. ನಮ್ಮ ವಿಷಯದಲ್ಲಿ ಇವಕ್ಕು ಒಂದು ಗೌರವ ಅಂತ ಹೇಳಿದರೆ, ಅದು ಅಮ್ಮನ ತಪಸ್ಸಿನ ಫಲ.

ಈಗ ಹೇಳು, ಪ್ರಮೀಲೆಯ ಮದುವೆಗೆ ಮನೆತನಬಾಧಕ ಹೌದೋ ಅಲ್ಲವೊ?— ಮನೆತನದ ಪಾಪದ ಕತೆಯನ್ನು ಮುಗಿಸಿದ ರಾಜಣ್ಣ, ಮತ್ತೆ ಹಿಂದಿನ ವಿಷಯದತ್ತ ಬಂದ.

"ನಾನು ನನ್ನ ತಂಗಿಗೆ ಹುಡುಕಿರುವ ಪಾತ್ರ ಎಂತಹನೆಂಬುದು ಹೇಳಲೇ ಆನಂದ? ಅವನೊಬ್ಬ ಮೇಧಾವಿ, ವಿಚಾರವಂತ, ಸಭ್ಯ ತರುಣ. ಅವನ ನಡತೆ ಸಭ್ಯ ಕುಲೀನನಂತೆ, ಅವನ ಸರಳತೆ, ಮಮಕಾರವರಿಯದ ಮುದ್ದು ಮಗುಲಿನಂತೆ!"

ರಾಜಣ್ಣ ತನ್ನನ್ನೇ ಉದ್ದೇಶಿಸಿ ಹೇಳುತ್ತಿದ್ದಂತೆ ಭಾಸವಾಯಿತು ಆನಂದನಿಗೆ. ಕ್ಷಣಕಾಲ ಪ್ರಮೀಲೆಯ ನಗುಮುಖ ಅವನ ಮುಂದೆ ನಿಂತು ಮರೆಯಾಯಿತು. ಆದರೆ ಮರುಕ್ಷಣದಲ್ಲೇ ರಾಜಣ್ಣ, ತನ್ನನ್ನಲ್ಲದೇ ಬೇರೆ ಇನ್ನಾರನ್ನಾದರೂ ಉದ್ದೇಶಿಸಿ ಹೇಳಿರಬಹುದೇ, ಎಂಬ ಸಂಶಯ ಕಾಡಹತ್ತಿ ಅವನ ತಲೆ ಸಿಡಿಯುವಂತಾಯಿತು.

ಆದರೆ ಹಿಂದೆಯೇ ವಿವೇಕವು ಎಚ್ಚರಿಸಿತು, ಪ್ರಮೀಲ ಯಾರವಳಾದರೆ ನನಗೇನು? ನಾನು ಅವಳನ್ನು ಅಪೇಕ್ಷಿಸುವುದೂ ತಪ್ಪು ಎಂದಿತು ಮನಸ್ಸು

ಆನಂದ ರಾಜಣ್ಣನ ಮಾತಿಗೆ ಉತ್ತರಕೊಡುತ್ತಾ ಮೆಲುದನಿಯಲ್ಲಿ ಹೇಳಿದ—

"ಒಳ್ಳೆಯದು ರಾಜು, ನಿನ್ನ ತಂಗಿಗೆ ನೀನು ಹುಡುಕುವ ಪಾತ್ರ ನಿಜಕ್ಕೂ ಯೋಗ್ಯವಾದುದು. ನಿನ್ನ ತಂಗಿಯೂ ಅಷ್ಟೇ. ಗುಣವಂತೆ, ಸುಂದರಿ, ಸರಳಸ್ವಭಾವದ ಹುಡುಗಿ. ಅವಳ ಕೈಹಿಡಿಯುವವನು ನಿಜಕ್ಕೂ ಪುಣ್ಯಶಾಲಿ."

"ಪ್ರಮೀಲೆಯ ಕೈಹಿಡಿಯುವವನು ಪುಣ್ಯಶಾಲಿ ಎಂದೆ ಅಲ್ಲವೆ. ಅದು ನೀನು ನಿನ್ನ ಮನಃಪೂರ್ವಕ ಹೇಳಿದ್ದರೂ, ನನಗೆ ಆ ಪುಣ್ಯ ಇದೆಯೋ ಇಲ್ಲವೋ ಎಂಬ ಶಂಕೆಯ ಜೊತೆಗೆ ಪ್ರಮೀಲೆ ಪರಗೃಹಿಣಿಯಾಗದಿರಲಿ,

ಎಂಬ ಅಸೂಯೆಯೂ ನಿನಗಿದೆ ಅಲ್ಲವೆ ಆನಂದ?"—ರಾಜಣ್ಣ, ಆನಂದನನ್ನು ಇರಿಯುವಂತೆ ನೋಡುತ್ತ ಕೇಳಿದ.

ರಾಜಣ್ಣನ ನೇರವಾದ ಪ್ರಶ್ನೆಗೆ ಆನಂದ ಬೆಚ್ಚಿದ.

"ಏನು ಹೇಳುತ್ತಿದ್ದಿ ರಾಜಣ್ಣ, ನಿನ್ನ ತಂಗಿಯ ಮದುವೆಗೆ ನಾನು ಅಡ್ಡಿಯಾಗಿದ್ದೇನೆಯೆ?— ಮಾತಿನಲ್ಲಿ ಆತಂಕ ಅಸಹನೆಗಳೆರಡೂ ಮೈವೆತ್ತಿದ್ದವು.

"ಹೌದು. ನಿನ್ನದೇ ಅಡ್ಡಿ ಹೆಚ್ಚಾಗಿದೆ. ನಿನ್ನ ಕಳ್ಳತನ ನನಗೂ ಗೊತ್ತಿದೆ."

"ನಿನ್ನದು ವಿಚಿತ್ರ ಪ್ರಶ್ನೆ ರಾಜಣ್ಣ.......ನೀನು......"

— ಆನಂದನಿಗೆ ಮಾತು ಹೊರಡಲಿಲ್ಲ. ತನ್ನ ಮೇಲೆ ಈ ದಿನ ದೊಡ್ಡ ಅಪವಾದವೊಂದು ಕವಿಯುವುದಿದೆ ಎಂದು ನಡುಗಿನ ಆನಂದ ರಾಜಣ್ಣನ ಕಡೆ ದೈನ್ಯದಿಂದ ನೋಡಿದ.

"ವಿಚಿತ್ರ ಪ್ರಶ್ನೆಯಲ್ಲ, ಸತ್ಯ ಪ್ರಶ್ನೆ. ಬೆಳಗ್ಗಿನ ವೇಳೆಯಲ್ಲಿ, ಹುಣ್ಣಿಮೆಯ ರಾತ್ರಿಯಲ್ಲಿ ನಿಮ್ಮ ಗುಟ್ಟನ್ನು ಅರಿತೆ" ರಾಜಣ್ಣ ಷರಟಿನ ಒಳಭಾಗದಿಂದ ತಾನು ಮುಚ್ಚಿಟ್ಟುಕೊಂಡಿದ್ದ 'ಹುಣ್ಣಿಮೆಯ ರಾತ್ರಿ'ಯನ್ನು ಹೊರತೆಗೆದ ಪುಸ್ತಕವನ್ನು ನೋಡಿ ಆನಂದ ತಣ್ಣಗಾಗಿಬಿಟ್ಟ.

"ಈ ಪುಸ್ತಕದಲ್ಲಿ ಬರೆದಿರುವ ಪದ್ಯ, ಎಂದೋ ತಮಾಷೆಗೆಂದು ಬರೆದೆ. ಉದ್ದೇಶ ಪೂರ್ವಕವಾಗಿ ಅಲ್ಲ. ಆದರೆ ನಿನ್ನ ತಂಗಿ ಅದಕ್ಕೆ ಸರಿಯಾದ ಉತ್ತರ ಬರೆದಿರುವುದು ಈ ದಿನ ನನ್ನನ್ನು ದೋಷಿಯೆಂದು ಸಮರ್ಥಿಸಲು ಸಾಕಾಗಿದೆ.

"ಹಾಗೆಯೋ .. ..—"ರಾಜಣ್ಣ ಮಾತು ಮುಂದುವರಿಸುವುದರೊಳಗೆ ಆನಂದ ತಡೆದು ಹೇಳಿದ ಆತಂಕದಿಂದ—

"ಮುಂದೆ ಮಾತಾಡಬೇಡ ರಾಜಣ್ಣ. ನನ್ನದು ತಪ್ಪಿದ್ದರೆ ಕ್ಷಮಿಸು. ನಾನು ಈಗ ಹೇಳಿದ್ದಷ್ಟು ನಿಜ. ಅದಕ್ಕೂ ಮುಂದೆ ನಿನ್ನ ಕಲ್ಪನೆಯಿದ್ದರೆ ನಾನು ಖಂಡಿತವಾಗಿಯೂ ಅಸಹಾಯಕ. ನಿನ್ನ ನಿರ್ಣಯವಿದ್ದಂತೆ ಮಾಡು."

"ಕ್ಷಮಿಸಬೇಕಾದುದು ನಾನಲ್ಲ, ನೀನೇ. ನಿನ್ನನ್ನು ವೃಥಾ ನೋಯಿಸಿದೆ ನನ್ನ ತಂಗಿ ಪ್ರಮೀಲ ನಿನ್ನನ್ನು ನಿಜಕ್ಕೂ ಪ್ರೀತಿಸುತ್ತಿದ್ದರೆ, ನನ

ತಂಗಿಯ ಬಗ್ಗೆ ನಿನಗೂ ಪ್ರೀತಿಯಿದ್ದರೆ ಅದು ಸಂತೋಷದ ಸುದ್ದಿ, ನನ್ನ ತಂಗಿ ನಿನ್ನ ಕೈಹಿಡಿದು ಬಾಳಲಿ ಎಂಬುದು ನನ್ನ ಆಸೆ. 'ಹುಣ್ಣಿಮೆಯರಾತ್ರಿ' ಯಲ್ಲಿ ನಿನ್ನ ಕರೆಗೆ 'ಓ' ಕೊಟ್ಟಿದ್ದಾಳೆ ಪ್ರಮೀಲ. ನಿನ್ನ ಬಳಿ ಸಾರುವವ ಳಿದ್ದಾಳೆ. ಸ್ವಾಗತಿಸಿ ರಕ್ಷಿಸುವುದು ನಿನ್ನ ಭಾರ ಆನಂದ." ರಾಜಣ್ಣ ಆನಂದನ ಅಸಮಾಧಾನ ಆತಂಕಗಳನ್ನು ದೂರಮಾಡುತ್ತ ತನ್ನ ಮನದ ಅಭಿಲಾಷೆಯನ್ನು ವ್ಯಕ್ತಪಡಿಸಿ ಹೇಳಿದ. ಅವನ ಮುಖದಲ್ಲಿ ನಗೆಯು ಲಾಸ್ಯವಾಡುತ್ತಿತ್ತು. ಆನಂದನ ಒಪ್ಪಿಗೆಯನ್ನಪೇಕ್ಷಿಸುತ್ತ ಯಾಚನೆಯ ದನಿಯಲ್ಲಿ ಹೇಳಿದ—

"ನನ್ನ ನಿನ್ನ ಸ್ನೇಹ, ಬಾಂಧವ್ಯದಲ್ಲಿ ರೂಪುಗೊಳ್ಳಲೆಂಬುದು ನನ್ನ ಆಸೆ. ಈ ಬಗ್ಗೆ ನಾನು ಅಪ್ಪ, ಅಮ್ಮ ಇವರನ್ನು ಒಪ್ಪಿಸಿಕೊಳ್ಳುತ್ತೇನೆ ಆಗದೇನು ?"

ಆನಂದ ಮಾತಾಡಲಿಲ್ಲ. ಸುಮ್ಮನೆ ಅವನ ಮುಖವನ್ನೇ ನೋಡುತ್ತ ಕುಳಿತ. ಒಪ್ಪಿಗೆಯೆಂಬಂತೆ ತಲೆಯಾಡಿಸಿ ಏನೋ ಹೇಳುವವನಿದ್ದ. ಕೆಳಗೆ ಮಠದ ಗಂಟೆ ಬಾರಿಸುವ ಶಬ್ದ ಕೇಳಿಸಿತು. ಮಾತು ತುಟಿಯಿಂದ ಹೊರ ಬರಲಿಲ್ಲ. ಆದರೆ ಒಪ್ಪಿಗೆಯೇನೋ ಬಂದುಹೋಗಿತ್ತು. ರಾಜಣ್ಣನಿಗೆ ಆನಂದನಿಂದ ವಚನ ಸಂದಷ್ಟು ಸಂತಸವಾಗಿತ್ತು. ಆನಂದನನ್ನು ಬಾಚಿ ತಬ್ಬಿಕೊಂಡ, ಉಕ್ಕಿದ ಹೃದಯದಿಂದ.

ನಸುಕತ್ತಲಾಗಿತ್ತು. ಇಬ್ಬರೂ ಕೆಳಗಿಳಿದು ಹೊರಟು ಚಾಕಿಯ ಮಠಕ್ಕೆ ಬಂದು ದೇವರಿಗೆ ವಂದಿಸಿ, ಊರಿನ ಕಡೆ ಹೊರಟರು. ಆನಂದನು ಕಳೆದುಕೊಂಡ ಹಣದ ಬಗ್ಗೆ ನಿಜಾಂಶ ತಿಳಿಸಲು ಇದೇ ಸಮಯವೆಂದು ರಾಜಣ್ಣ, ಅವನ ಬಳಿ ಮಾರ್ಮಿಕವಾಗಿ ಹೇಳಿದ—

"ಅಂತೂ ಪರೀಕ್ಷೆಯಲ್ಲಿ ನೀನೇ ಗೆದ್ದೆ ಆನಂದ!"

"ಯಾವ ಪರೀಕ್ಷೆಯಲ್ಲಿ ?" ಆನಂದ ಆಶ್ಚರ್ಯದಿಂದ ಕೇಳಿದ.

"ನಿನ್ನದು ಹಣ ನಷ್ಟವಾಯಿತಲ್ಲ, ಅದು ನನ್ನ ತಂತ್ರ. ನಾನೇ ಬೇಕಾಗಿ ಹಣ ಮುಚ್ಚಿಟ್ಟಿದ್ದೆ, ನಿನ್ನಲ್ಲಿ ಬ್ಲಾಕ್ ವ್ಯವಹಾರದ ಬಗ್ಗೆ ಇರುವ ಅಭಿ ಪ್ರಾಯ ತಿಳಿಯಲಿಕ್ಕೆ. ನಾನು ಕೊಟ್ಟ ಸಾಲದ ಹಣ, ನಿನಗೆ ಕಾಣದ ಹಾಗೆ ಹಣದ ಚೀಲದಿಂದ ತೆಗೆದು ಮುಚ್ಚಿಟ್ಟದ್ದು. ಆ ಹಣ ನಿನ್ನದೇ."

"ನಿಜವಾಗಿಯೂ!" ಆನಂದ ಕಣ್ಣರಳಿಸಿ ಕೇಳಿದ. "ಹ್ಞೂಂ!
ಎಂಬಂತೆ ಅವನ ಕಡೆ ತಿರುಗಿ ನೋಡಿದ ರಾಜಣ್ಣ ಆ ನಸುಗತ್ತಲಿನಲ್ಲಿ
ಆನಂದನ ಮುಖದಲ್ಲಿ ಸಂತೋಷ ಆಶ್ಚರ್ಯಗಳ ಸಂದಿಗ್ಧವುಂಟಾಗಿತ್ತು

"ನೀನು ತುಂಬಾ ಘಾಟಿ!"—ಆನಂದ ರಾಜಣ್ಣನ ಬೆನ್ನಿನ ಮೇಲೆ
ಹೊಡೆದ ನಗುತ್ತ.

"ಉಹುಂ, ಶುದ್ಧ ಪೆದ್ದು. ನಿನಗೆ ಹೇಳದೆ ಇದ್ದಿದ್ದರೆ ಅರವತ್ತೈದು
ರೂಪಾಯಿ ಉಳಿಸಿಕೊಳ್ಳಬಹುದಾಗಿತ್ತು!"

"ಈಗಲೂ ಹಣ ನಿನ್ನ ಬಳಿಯೇ ಇದೆ. ಅದು ನಿನ್ನಲ್ಲೇ ಇರಲಿ."
—ಆನಂದ ನಿರ್ವಿಕಾರನಾಗಿ ಹೇಳಿದ.

"ಬೇಡ ಮಹರಾಯ. ಇನ್ನೊಬ್ಬರ ಗಂಟು ಹೊಡೆದ ಅಂತ ಯಾಕೆ
ಅನ್ನಿಸಿಕೊಳ್ಳಲಿ? ನಿನ್ನ ಹಣ ನಿನಗೇ ಇರಲಿ."

ಆನಂದ ಸುಮ್ಮನೆ ನಡೆಯುತ್ತಿದ್ದ. ಅವನ ಮನಸ್ಸು ಹಕ್ಕಿಯ ಗರಿ
ಗಿಂತಲೂ ಹಗುರಾಗಿತ್ತು. ರಾಜಣ್ಣ ಆನಂದನ ಕಡೆ ತಿರುಗಿ—

"ನಿನ್ನ ಧೈರ್ಯಕ್ಕೆ, ಒಳ್ಳೆಯ ಗುಣಕ್ಕೆ ಕಂಗ್ರ್ಯಾಜುಲೇಷನ್ಸ್ ಆನಂದ!"

ಎಂದು ಅವನ ಕೈಗೆ ಸಿಗರೇಟು ಕೊಟ್ಟ. ಆನಂದ ರಾಜಣ್ಣನ ಕಡೆ
ಪ್ರಶ್ನಾರ್ಥಕದೃಷ್ಟಿ ಬೀರಿ, "ನನಗೆ?" ಎಂದ.

"ಇರಲಿ ತಗೊ!" ಎಂದು ರಾಜಣ್ಣ ಕಡ್ಡಿ ಗೀರಿಯೇಬಿಟ್ಟ. ಆನಂದ
'ನಿನ್ನ ಸಂತೋಷ' ಎಂದು ಸಿಗರೇಟು ಹತ್ತಿಸಿಕೊಂಡು,

"ಇವತ್ತು ಸಿಗರೇಟು ಸೇದಿಸಿದೆ, ನಾಳೆ ಹೆಂಡ ಕುಡಿಸಿಬಿಡು!"
ಎಂದು ನಕ್ಕ. ಅವನ ಮಾತಿಗೆ ರಾಜಣ್ಣನೂ ನಗದಿರಲಿಲ್ಲ!

೯

ಮಠದಿಂದ ಬಂದಮೇಲೆ ರಾಜಣ್ಣ ನೇರವಾಗಿ ಅಡುಗೆ ಮನೆಗೆ ನುಗ್ಗಿ,
ತಾಯಿಯ ಬಳಿ ಹೋಗಿ ಕುಳಿತ. ಮಗ ಬಂದು ಕುಳಿತದ್ದು ಕಂಡು
ಅನಸೂಯಮ್ಮ,

"ಕಾಫಿಗಿಡಲೇನೋ ರಾಜೂ ಒಂದು ಲೋಟ?" ಎಂದರು.

"ಇನ್ನೂ ಸ್ವಲ್ಪ ಹೊತ್ತಿಗೆ ಊಟಾನೇ ಆಗತ್ತಲ್ಲಮ್ಮ; ಇಡೋ
ದಾದರೆ ಇಡು. ಆದರೆ ಇನ್ನೂ ಒಂದೆರಡು ಲೋಟ ಜಾಸ್ತಿಯಿಟ್ಟರೆ ಎಲ್ಲ
ರಿಗೂ ಆಗತ್ತೆ."

ಅನಸೂಯಮ್ಮ ಕಾಫಿಗೆ ನೀರಿಡುತ್ತಾ,

"ಮಗೂ ಕುಮಕೂರಿನಲ್ಲಿ ನಿನಗೆಲ್ಲಾ ಅನುಕೂಲವಾಗಿದೆಯೇನೋ. ಊಟ ತಿಂಡಿ ಎಲ್ಲಾ ಸರಿಯಾಗಿರತ್ತೇನೋ?" ಎಂದು ಕೇಳಿದರು.

ಅನಸೂಯಮ್ಮ ಈ ಪ್ರಶ್ನೆಯನ್ನು ಅನೇಕಸಲ ಕೇಳಿದ್ದರು ಇದು ವರೆಗೆ. ಆದಗೆ ರಾಜಣ್ಣ ತಾಯಿಯ ಪ್ರಶ್ನೆಗೆ ಎಷ್ಟು ತೃಪ್ತಿಕರವಾದ ಉತ್ತರ ಕೊಟ್ಟಿದ್ದರೂ ತಾಯ ಹೃದಯ ಮತ್ತೆ ಮತ್ತೆ ಕೇಳ ಬಯಸುತ್ತಿತ್ತು. ರಾಜಣ್ಣನಿಗೂ ತಾಯಿಯ ಮನಸ್ಸು ತಿಳಿದಿತ್ತು. ನಗುತ್ತ ಹೇಳಿದ—

"ಪರವಾಗಿಲ್ಲ. ಆದರೂ ಊಟ, ಮನೆಯ ಊಟದಷ್ಟು ಚೆನ್ನಾಗಿರಲ್ಲ. ಎಷ್ಟೋ ಚೆನ್ನಾಗಿವೆ ಅಂದರೂ ಇಲ್ಲಿನ ರುಚಿ ಅಲ್ಲಿ ಬರೊಲ್ಲ."

"ಹೇಗೆ ಬಂದೀತು, ಹಾಸ್ಟಲೂಟ ಚೆನ್ನವೇ ಹೇಳು. ಎಲ್ಲಾ ಶುದ್ಧ ಗಂಡು ಬೀಡು. ಏನೋ ಬೇಸಿ ಹಾಕಬೇಕು ಹಾಕ್ತಾರೆ."

"ಹೌದಮ್ಮ. ನಿಜವಾಗಲೂ, ಊರಿಗೆ ಹೋಗಿ ಯಾವಾಗ ನಿನ್ನ ಕೈ ಅಡಿಗೆ ತಿಂದೆನೂ ಅನ್ನಿಸಿರತ್ತೆ ಹಾಗೇ."

—ನಿಜನಾದ ವಿಷಯ ಹೇಳಿದ್ದರೂ ರಾಜಣ್ಣ ಕೀಟಲೆ ನಡೆಸಿದ್ದ ತಾಯಿಯೊಡನೆ.

"ಥೂ ಹೋಗೋ, ಹಾಸ್ಯ ಮಾಡಕ್ಕೆ ಬಂದ ನನ್ನ!"

"ಹಾಸ್ಯ ಅಲ್ಲ. ನಿಜವಾಗಲೂ ನಿನ್ನ ಕೈ ಅಡುಗೆ ಅಮೃತ ಇದ್ದ ಹಾಗೆ ಕಣೇ ಅಮ್ಮ."

"ಹೌದಪ್ಪ. ಈಗ ಹೀಗಂತಿ ಅಷ್ಟೆ. ನಾಳೆ, ನಿನ್ನ ಹೆಂಡತಿ ಬರುತ್ತಾಳಲ್ಲಾ ಆಗ ನನ್ನ ಮಾತಾಡಿಸ್ತೀಯಾ ಹೇಳು."

"ಯಾರಮ್ಮಾ ಅವಳು, ಹೆಂಡತಿಯಂತೆ ಹೆಂಡತಿ. ಮೊದಲಿನಿಂದ ಅವಳೇ ಬಂದಿರ್ತಾಳೇನು? ನೀನು ಹೆಚ್ಚೋ, ಅವಳು ಹೆಚ್ಚೋ!"

"ಈಗೇನು ಗೊತ್ತೋ ಹುಡುಗಾ, ನಾಳೆ ಮದುವೆ ಆದ ಮೇಲೆ ತಾನೆ ಗೊತ್ತು."

"ಇರಲಿ, ಪ್ರಮೀ ಮದುವೆ ಯಾವಾಗ್ಲಮ್ಮಾ?"

ರಾಜಣ್ಣ ತಾಯಿಯ ಮನಸ್ಸನ್ನು ಪ್ರಮೀಲೆಯ ಮದುವೆಯ ಕಡೆಗೆ ಎಳೆದ. ರಾಜಣ್ಣನ ಮಾತಿಗೆ ಉತ್ತರಕೊಡುತ್ತಾ,

"ಆಗತ್ತಪ್ಪ, ಯಾವುದಕ್ಕೂ ಕಾಲ ಹಣ್ಣಾಗಬೇಕು. ನಮ್ಮ ಕೈಲೇನಿದೆ ಹೇಳು?" ಎನ್ನುತ್ತಾ ಡಿಕಾಕ್ಷನ್ ಇಳಿಸಿ ಒಲೆಯ ಮೇಲೆ ಹಾಲಿನ ಪಾತ್ರೆ ಇಟ್ಟರು ಅನಸೂಯಮ್ಮ. "ಕಾಲ ಹಣ್ಣಾಗಬೇಕೂ ಅಂತ ಪ್ರಯತ್ನ ನಡೆಸದೆ ಕುಳಿತರೆ ಆಗತ್ತೇನಮ್ಮ?"

"ಪ್ರಯತ್ನ ಮಾಡ್ತಾ ಇದೆಯಲ್ಲಾ. ಒಂದೆರಡು ಜಾತಕ ನೋಡಿದ್ದಾಯಿತು, ಸರಿ ಬರಲಿಲ್ಲ. ನೋಡ್ಬೇಕು ಯಾರ ಕೊರಳಿಗೆ ಹಾರ ಹಿಡಿದಿದಾಳೋ ಪ್ರಮೀ."

ನಾನೂ ಒಂದು ಗಂಡು ನೋಡಿದ್ದೀನಿ. ನಿನಗೆ ಒಪ್ಪಿಗೆಯೇನಮ್ಮ?"

ಮಗನ ಮಾತಿಗೆ ಅಚ್ಚರಿಗೊಂಡ ಅನಸೂಯಮ್ಮ,

"ಎಲ್ಲಿದೋ......?" ಎಂದರು.

"ಇಲ್ಲೀದೇ......"

"ಇಲ್ಲಿ ಯಾವವರ ಇದೆಯೋ? ಈ ಕೊಂಪೇಲಿ ಇರೋದೇ ನಾಲ್ಕು ಬ್ರಾಹ್ಮಣ್ರು. ಎಲ್ಲರ ಮನೇಲೂ ಚಿಳ್ಳೆಪಿಳ್ಳೆಗಳೇ ಇರೋದು. ನಿನ್ನ ಸೂಕ್ಷ್ಮದ ಕಣ್ಣಿಗೆ ಯಾವ ವರ ಕಂಡನೋ?"

"ಅಲ್ಲಮ್ಮ, 'ಕೈಲಿ ಕಡಗ ಇಟ್ಟುಕೊಂಡು ಕಣಿ ಕೇಳಲಿಕ್ಕೆಹೋದರೂ' ಅಂದ ಹಾಗೆ ಮನೆಯಲ್ಲೇ ಇಟ್ಟುಕೊಂಡು ಹೊರಗೆ ಹುಡುಕಬೇಕೆ?"

"ಆನಂದನೇನೋ?"

"ಹೌದಮ್ಮಾ. ಯಾಕೆ ಸಾಮ್ಯ ಕೂಡಲ್ಲವೆ?"

"ಆದರೆ ಪ್ರಯೋಜನವಿಲ್ಲ ಕಣೋ ಮಗೂ. ಅವನೂ ಅವನೇ. ಇನ್ನೊಬ್ಬರಿಲ್ಲ, ಚೂರು ಆಸ್ತಿಯಿಲ್ಲ."

ರಾಜಣ್ಣ, ತನಗೆ ಸ್ವಲ್ಪ ನಿರಾಶೆಯಾದರೂ, ಅಷ್ಟಕ್ಕೇ ಬಿಡದೆ ಹೇಳಿದ,

"ಆಸ್ತಿನೇ ಮುಖ್ಯವೇನು? ದುಡಿಯೋ ಚೈತನ್ಯವಿದೆ ಅಂದ ಮೇಲೆ ಇನ್ನೇನಾಗಬೇಕು? ಹುಡಗ ಲಕ್ಷಣವಂತ, ಬುದ್ಧಿವಂತ."

"ಹೌದೂನ್ನು, ಒಂದೆರಡು ಸಲ ನಾನೂ ಹಾಗೇ ಅಂದುಕೊಂಡೆ. ಆದರೆ ನಿಮ್ಮ ಅಪ್ಪ ಒಪ್ಪಬೇಕಲ್ಲಾ."

ರಾಜಣ್ಣನ ಮುಖ ಗೆಲುವಾಯಿತು. ಸಂಧಾನವನ್ನು ಮಾಡುವವನಂತೆ ನಗುತ್ತಲೇ ಕೇಳಿದ—

"ನಿನಗೆ ಒಪ್ಪಿಗೆ ಇದೇ ಅನ್ನು ಹಾಗಾದರೆ?"

"ನನಗೇನೋ ಒಂದು ರೀತಿ ಒಪ್ಪಿಗೇನೇ......"

"ಸರಿ ಬಿಡು ಹಾಗಾದರೆ, ಅಪ್ಪ ಒಪ್ಪೋದು ಕಷ್ಟವೇನಲ್ಲ. ಹಾಗಾದರೆ ಮದುವೆ ಯಾವಾಗ?"

"ಹೋಗೋ ನೀನೊಬ್ಬ ನಕಲಿಯ ಶಾಮು! ಕಂಕಣ ಕೂಡಿ ಬಂದಾಗ ಮದುವೆ!"—ಎಂದು ಅನಸೂಯಮ್ಮ ಕಾಫಿ ಶೋಧಿಸತೊಡಗಿದರು. ರಾಜಣ್ಣ ತಂಗಿಯು ಹಿಂದಿಕಲಿಯುವ ಬಗ್ಗೆಯೂ ಒಂದು ಮಾತು ತಾಯಿಯ ಒಪ್ಪಿಗೆ ಪಡೆಯಲು,

"ಹೋಗಲಮ್ಮಾ, ನಿನ್ನ ಮಗಳು ಹಿಂದಿ ಕಲೀತಾಳಂತೆ ಆಗ ಬಹುದುತಾನೇ?"—ಎಂದು ನಗುತ್ತಾ ಕೇಳಿದ.

ಅನಸೂಯಮ್ಮ ಅನುಮಾನಿಸುತ್ತ,

"ಯಾಕೋ ಮಗೂ ಅವೆಲ್ಲ........?" ಎಂದರು.

"ಕಲಿತರೆ ತಪ್ಪೇನಮ್ಮ?"

ತಪ್ಪಲ್ಲ. ವಿದ್ಯೆ ಕಲಿಯೋದು ತಪ್ಪು ಅಂತ ಯಾರು ಹೇಳ್ತಾರೆ? ಆದರೆ......."

"ನಿನ್ನ ಅನುಮಾನ ಗೊತ್ತಾಯ್ತು. ಪ್ರಮೀ ಒಬ್ಬಳೇ ಪಾಠ ಹೇಳಿಸಿ ಕೋತಾಳೆಯೆ? ಪ್ರಕಾಶನೂ ಇರುತ್ತಾನಲ್ಲ. ಬೇಕಾದರೆ ಕೆಳಗೇ ಪಾಠ ಹೇಳುವ ಹಾಗೆ ಆನಂದನಿಗೆ ಹೇಳಿದರಾಯಿತು"

"ಹ್ಞೂ ಕಲೀಲೇಳು." ಎಂದು ಅನಸೂಯಮ್ಮ ಕಾಫಿಯನ್ನು ಲೋಟಗಳಿಗೆ ಬಗ್ಗಿಸಿ, ಎರಡು ಲೋಟಗಳನ್ನು ಮುಂದಿಟ್ಟು,

"ತಗೋ ಮೇಲೆ ಪಾಠ ಆಗ್ತಾಇದೆಯೇನೋ. ಆನಂದನಿಗೂ ಪ್ರಕಾಶನಿಗೂ ಕೊಟ್ಟು ಬಾ" ಎಂದರು.

ರಾಜಣ್ಣ ಲೋಟಗಳನ್ನು ತೆಗೆದುಕೊಂಡು ಬಾಗಿಲಿನವರೆಗೆ ಬಂದು 'ಪ್ರಮೀ ಕಾಫೀ ಕುಡಿಬಾ' ಎಂದು ಕರೆದು, ಅವಳು ಬರುತ್ತಲೇ ಲೋಟಗಳನ್ನು ಅವಳ ಕೈಗೆ ಕೊಟ್ಟು,

"ಇದನ್ನು ಮೇಲಿರುವ ಗುರುಶಿಷ್ಯರಿಗೆ ಕೊಟ್ಟುಬಾ" ಎಂದು ಒಳಗೆ ಬಂದ.

ಅನಸೂಯಮ್ಮ ಮಗನಕಡೆ ತಿರುಗಿ,

"ರಾಜೂ ನೀನು ತೀರಾ ಪೋಕರಿ ಹುಡುಗ ಕಣೋ" ಎಂದರು.

"ಯಾಕಮ್ಮಾ, ಕಾಫಿಕೊಟ್ಟರೇನೆ? ಇಷ್ಟಕ್ಕೂ ತನ್ನ ಗಂಡನಿಗೆ ತಾನು ಕಾಫಿಕೊಟ್ಟರೆ ಪೋಕರಿವೆಲ್ಲೀದಮ್ಮ?" ಎಂದು ರಾಜಣ್ಣ ನಕ್ಕ.

ಅನಸೂಯಮ್ಮ ರಾಜಣ್ಣ ಪ್ರಮೀಲೆಯ ಕೈಯಲ್ಲಿ ಕಾಫಿ ಕಳಿಸಿದ್ದ ರಿಂದ ಸಿಟ್ಟುಗೊಂಡಿರಲಿಲ್ಲ. ಇದಕ್ಕೆ ಮೊದಲು ಎಷ್ಟೋ ಬಾರಿ ಆನಂದ ನಿಗೆ ಪ್ರಮೀಲೆಯೇ ಕಾಫಿ ಕೊಡುತ್ತಿದ್ದುದು ಅವರಿಗೆ ಗೊತ್ತಿತ್ತು. ಆದರೂ ಹಾಗೆ ಹೇಳಿದ್ದರು. ಮಗನ ಮಾತು ಕೇಳಿದ ಅವರು,

"ಎಲಾ ಹುಡುಗ, ಈಗಿನಿಂದಲೇ ಇಷ್ಟು ಅವಾಂತರ, ಮುಂದೆ ಮದುವೆ ಆಗೋದಾದರೆ ಇನ್ನೇನು ಅವಾಂತರ ಮಾಡ್ತೀಯೋ ಕಾಣೆ" ಎಂದು ನಕ್ಕರು.

*   *   *   *

ಪ್ರಮೀ, ಒಂದು ಮಾತು......"

ರಾಜಣ್ಣ ನಗುಮುಖದಿಂದ ಹೇಳಿದ. ಪ್ರಮೀಲ 'ಏನು' ಎಂಬಂತೆ ಅಣ್ಣನಕಡೆ ನೋಡಿದಳು.

"ನೀನು ಪಕ್ಕಾ ಕಳ್ಳಿ ಕಣೇ"

"ಯಾಕೋ ರಾಜೂ......?"

"ಯಾಕೆ ಅಂದರೆ ಕಳ್ಳತನ ಮಾಡಿರೋದಕ್ಕೆ."

"ನಾನೇನು ಮಾಡಿದೆನೋ ಕಳ್ಳತನ?"

"ಏನು ಮಾಡಿದ್ದೀ ಹೇಳಲೋ!" ಎಂದು ರಾಜಣ್ಣ 'ಹುಣ್ಣಿಮೆಯ ರಾತ್ರಿ'ಯನ್ನು ತೋರಿಸಿ,

"ನೋಡಿಲ್ಲಿ, ಏನು ಮಾಡಿದ್ದೀ ಅನ್ನೋದು" ಎಂದು ಸ್ವಲ್ಪ ಗಂಭೀರ ವಾಗಿ ಹೇಳಿದ.

ರಾಜಣ್ಣ ತನ್ನೊಡನೆ ಸಲುಗೆಯಿಂದ ಮಾತು ಪ್ರಾರಂಭಿಸಿದ್ದರೂ, 'ಹುಣ್ಣಿಮೆಯ ರಾತ್ರಿ' ಅವನ ಕೈಗೆ ಸಿಕ್ಕಿರುವುದು ನೋಡಿ ಹೆದರಿದಳು. ರಾಜಣ್ಣ ಸುಳ್ಳು ಕೋಪ ನಟಿಸುತ್ತ,

"ಅಲ್ಲವೇ ಎಷ್ಟು ತಯಾರಾಗಿ ಬಿಟ್ಟಿದ್ದೀ ಆಗಲೇ, ಅಮ್ಮನಿಗೆ ಹೇಳು ತ್ತೀನಿ ತಾಳು" ಎಂದು ಬೆದರಿಸಿದ.

"ಅಣ್ಣಾ......!" ಪ್ರಮೀಲ ಗಾಬರಿಯಿಂದ ರಾಜಣ್ಣನ ಕೈಹಿಡಿದು ರಕ್ಷಣೆಯನ್ನು ಬೇಡುವವಳ ಹಾಗೆ ಕೂಗಿದಳು, ತನಗೊಬ್ಬಳಿಗೆ ಕೇಳುವಂತೆ.

"ಈಗಲ್ಲ, ನಾಳೆಯಿದೆ ನಿನಗೆ ಪ್ರಾಯಶ್ಚಿತ್ತ."

ಪ್ರಮೀಲೆಯ ಕಣ್ಣಲ್ಲಿ ನೀರು ತುಳುಕಿತು.

"ಅಷ್ಟು ಹೆದರಿಸ್ತೀಯೇನು? ನಿನಗೆ ಹೆದರೋರು ಯಾರೂ ಇಲ್ಲ. ಅಮ್ಮನಿಗೆ ಹೇಳ್ತೀನಿ ತಾಳು" ರಾಜಣ್ಣ ಎದ್ದ.

ಮುಳುಗುತ್ತಿದ್ದವನು ಕೊನೆಯ ಬಾರಿಗೆ ಕೈಕಾಲು ಬಡಿದುಕೊಂಡು ಮೇಲೆ ಬರಲೆತ್ನಿಸುವ ಹಾಗೆ ಪ್ರಮೀಲ.

"ರಾಜೂ, ಬೇಡ ಕಣೋ ಇನ್ನು ಮೇಲೆ ಹಾಗೆಮಾಡೊಲ್ಲ.......!" ಎಂದು ಗೋಗರೆದಳು ಅಳುವ ದನಿಯಲ್ಲಿ.

"ನಾನು ಹೇಳಿದ ಹಾಗೆ ಕೇಳ್ತಿಯೋ ಹಾಗಾದರೆ?"

"ಏನು.......?" ಬೇಟೆಗಾರನಿಗೆ ಹೆದರಿ ಓಡಿ ಓಡಿ ಸೋತ ಹರಿಣಿ ಹಿಂದಕ್ಕೆ ತಿರುಗಿ ನೋಡಿ ಸುಧಾರಿಸಿಕೊಳ್ಳಲು ನಿಂತಂತೆ ರಾಜಣ್ಣನ ಮಾತಿನಿಂದ ಹೆದರಿ ಅಳುತ್ತಿದ್ದವಳು, ಈಗ ಸಮಾಧಾನದ ಉಸಿರೆಳೆದಳು. ಏನಾದರಾಗಲೀ ತಾಯಿಯ ತನಕ ತನ್ನ ಪ್ರೇಮ ವ್ಯವಹಾರ ಹೋಗದಿದ್ದರಾಯಿತು ಎಂದು ಅವಳ ಚಿಂತೆ.

"ನಾನು ಹೇಳಿದ ಹಾಗೆ ಕೇಳ್ತೀಯೊ ಇಲ್ಲವೋ?"

"ಕೇಳ್ತೀನಿ."

"ನಾಳೆಯಿಂದ......ನಾಳೆಯಿಂದ, ಮಾಸ್ಟರ ಹತ್ತಿರ ಹಿಂದಿ ಪಾಠ ಕಲೀಬೇಕು!"

ಅಷ್ಟು ಜಬರದಸ್ತಿನಿಂದ ಮಾತಾಡಿ, ತನ್ನನ್ನು ಗೋಳಾಡಿಸಿದ್ದೂ ಇಷ್ಟಕ್ಕೇನೇ! ಎಂದು ಪ್ರಮೀಲೆಗೆ ನಗುಬಂತು. ಗಟ್ಟಿಯಾಗಿ ನಕ್ಕಳು. ರಾಜಣ್ಣನೂ ನಕ್ಕ.

"ಏನ್ರೋ ಅದು ನಿಮ್ಮ ಲಲ್ಲೆ!" ಒಳಗಿನಿಂದ ಅನಸೂಯಮ್ಮ ನಗೆಯನ್ನು ಕೇಳಿ ಕೂಗಿದರು. ನಗು ನಿಲ್ಲಿಸಿ ರಾಜಣ್ಣ ಕೇಳಿದ -

ಪ್ರಮೀ, ನಿನ್ನಿಷ್ಟದಂತೆ ಆಯಿತಲ್ಲ,ನಿನಗೆ ಒಪ್ಪಿಗೆ ತಾನೇ."

"ಹಿಂದೀಪಾಠ ಹೇಳಿಸಿಕೊಳ್ಳೋದೇನೊ ರಾಜು."

"ಅಲ್ಲ ಕಣೇ...."

"ಇನ್ನೇನೋ....!"

"ಮಾಸ್ಟರು! ಅಲ್ಲೇ...ಯಾರಿಗೂ ತಿಳಿಯದ ಹಾಗೆ..."

ಥೂ ಹೋಗೋ...!" ಎಂದು ನಾಚಿ ತಲೆತಗ್ಗಿಸಿ ಓಡುಗಚ್ಚಿದಳು ಪ್ರಮೀಲ. ಅವಳ ಮುಖ ಓಕಳಿಯಲ್ಲಿ ಅದ್ದಿದ ಹಾಗಿತ್ತು.

"ಪ್ರಮೀ ನಿನ್ನಿಷ್ಟ ನನಗೆ ಗೊತ್ತು. ನಿನ್ನಿಷ್ಟದಂತೆಯೇ ಆಗಲಿ. ನಿನ್ನ ಕ್ಷೇಮ ನೋಡುವ ಭಾರ ನನ್ನದೂ ಇದೆಯಮ್ಮ" ಎಂದು ತಂಗಿಯ ತಲೆ ನೇವರಿಸಿ ಮೇಲೆ ನಡೆದ ರಾಜಣ್ಣ.

ರಾತ್ರಿ ಎಲ್ಲರೂ ಮಲಗಿದ ಮೇಲೆ, ಅನಸೂಯಮ್ಮ ಪತಿಯ ಸಂಗಡ ಮಗಳ ಮದುವೆಯ ಸುದ್ದಿ ಪ್ರಸ್ತಾವಿಸಿದರು. ಹಾಗೆಯೇ ಆನಂದನ ಬಗ್ಗೆ ತಮ್ಮ ಅಭಿಪ್ರಾಯವನ್ನೂ ತಿಳಿಸಿದರು. ರಾಯರು ಅರ್ಧ ಸಮ್ಮತಿ ಇರುವವರ ಹಾಗೆ,

"ಇರಲಿ ನೋಡೋಣ ತಾಳು" ಎಂದರು ಅಷ್ಟೆ.

"ಹೌದೂನ್ನಿ, ನನಗೇಕೆ ಆ ಜವಾಬ್ದಾರಿ. ಮಗಳಿಗೆ ಗಂಡು ಹುಡುಕಿ ಮದುವೆ ಮಾಡೋರು ನೀವು. ನಾನು ಒಳಗೆ ಕೂತ್ಕೊಂಡು ಮಾತಾಡೋಳು. ನನಗೇನು ಗೊತ್ತು ಅವೆಲ್ಲ. ನೀವು ಪ್ರಯತ್ನ ಮಾಡ್ತಾಲೇ ಇದೀರಲ್ಲ."

"ನನ್ನೊಬ್ಬನಿಂದ ಆಗತ್ತೇನೇ, ನೀನೂ ಬಂದು, ಹಸೆಮಣೆಯ ಮೇಲೆ ಜೊತೇಲಿ ಕೂತರೆ ತಾನೆ ಆಗೋದು ?"

ರಾಯರು ಕೀಟಲೆಯ ನಗೆನಕ್ಕು ಹೇಳಿದರು.

"ನಿಮ್ಮ ತಮಾಷೆ ಸಾಕು. ಹೋಗಲಿ, ಹುಡುಗಿ ಹಿಂದಿ ಕಲೀಬೇಕು ಅನ್ತಾಳೆ. ಹೇಳಿಸಿಕೋಬಹುದು ತಾನೇ."

"ಎಲ್ಲಾ ಮೊದಲೇ ಪ್ಲಾನು ತಯಾರಿಸಿಕೊಂಡು ನನ್ನ ಕೇಳ್ತಾ ಇದ್ದೀ. ಆಗಲಿ, ನಿನ್ನ ದರ್ಬಾರೂ ನಡೀಲಿ" ಎಂದು ನಕ್ಕರು ರಾಯರು.

ಅನಸೂಯಮ್ಮನವರಿಗೆ ಸ್ವಲ್ಪ ಸಮಾಧಾನವಾಯಿತು.

ದಿನಗಳುರುಳಿದವು. ರಾಜಣ್ಣ ತುಮಕೂರಿಗೆ ಹೊರಡುವುದು ನಾಳೆ ಎನ್ನುವಾಗಲೇ ಅನಸೂಯಮ್ಮ ಮಗನಿಗೆ ತುಮಕೂರಿನಲ್ಲಿ ಇಟ್ಟುಕೊಂಡು ತಿನ್ನಲು, ಚಕ್ಕುಲಿ, ತೇಂಗೊಳಲು, ಪುಳ್ಳಂಗಾಯುಂಡೆ, ಅರಳುಹಿಟ್ಟು, ಅವಲಕ್ಕಿ ಎಲ್ಲ ಸಿದ್ಧಮಾಡಿ ಕಟ್ಟಿಕೊಟ್ಟರು. ಊಟಕ್ಕೆ ಅನುಕೂಲವಾಗು ವಂತೆ ಒಂದು ಸೀಸೆಯಲ್ಲಿ ನಿಂಬೆಯ ಕಾಯಿ ಉಪ್ಪಿನಕಾಯಿ ಹಾಕಿಟ್ಟರು. ಒಂದು ಕಟ್ಟು ಹಪ್ಪಳ ಕೂಡ ತೆಗೆದಿಟ್ಟರು. ಇದನ್ನೆಲ್ಲಾ ನೋಡಿದ ರಾಜಣ್ಣ,

"ಏನಮ್ಮ ಇದೆಲ್ಲಾ ಯಾಕೆ ಬಳುವಳಿ?" ಅಂದ.

"ಇರಲಿ ತಗೋ. ಹಾಸ್ಟಲೂಟ ಹೇಗಿರತ್ತೋ ಏನೋ ಅಂತ, ಸ್ವಲ್ಪ ಸ್ವಲ್ಪ ಇಟ್ಟಿದ್ದೀನಿ. ಜೋಪಾನವಾಗಿಟ್ಟುಕೋ" ಎಂದರು ಅನಸೂಯಮ್ಮ.

ರಾಜಣ್ಣ ತಂದೆತಾಯಿಗಳಿಗೆ ನಮಸ್ಕರಿಸಿ, ಪ್ರಮೀಲ, ಪ್ರಕಾಶರಿಗೆ ಹೇಳಿ ಆನಂದನೊಡನೆ ಹೊರಟ, ಬಸ್‌ಸ್ಟಾಂಡಿಗೆ.

ಗೆಳೆಯರೆಲ್ಲಾ ಅದೇ ದಿನವೇ ಹೊರಟಿದ್ದರು. ಎಲ್ಲರೂ ರಾಜಣ್ಣ ನನ್ನೇ ಎದುರುನೋಡುತ್ತಿದ್ದರು. ರಾಜಣ್ಣ ಅವರೊಡನೆ ಸೇರಿಕೊಂಡ.

ಬಸ್ಸು ಬಂದು ನಿಲ್ಲುತ್ತಲೇ ಎಲ್ಲರೂ ಹತ್ತಿ ಜಾಗನೋಡಿಕೊಂಡು ಕುಳಿತರು. ಎಲ್ಲರೂ ಆನಂದನ ಕಡೆ ತಿರುಗಿ,

"ಬರ್ತೀವಿ, ಮಿ। ಆನಂದ. ನಮ್ಮನ್ನೆಲ್ಲಾ ಮರೆತು ಬಿಡಬೇಡಿ" ಎಂದು 'ಬೈ' ಹೇಳಿದರು. ಆನಂದ ಅದಕ್ಕೆ ಪ್ರತಿಯಾಗಿ "ನಿಮಗೆ ಒಳ್ಳೆಯು ದಾಗಲಿ, ಎಲ್ಲರೂ ವಿಜಯಿಗಳಾಗಿ ಬನ್ನಿ" ಎಂದು ನಕ್ಕು ವಂದಿಸಿದ.

೧೦

ಬಸಲಿಂಗಯ್ಯನ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಲು ಮೈಸೂರಿ ನಿಂದ ಒಬ್ಬ ಸರ್ಟಿಫೈಡ್ ಆಡಿಟರ್ ಬಂದಿದ್ದರು. ಲೆಕ್ಕಪತ್ರಗಳ ಪರಿ ಶೀಲನೆ ನಡೆಯಿತು. ಕ್ರಮವಾದ ಲೆಕ್ಕಪತ್ರಗಳಾವುವೂ ಇರಲಿಲ್ಲ. ಅಲ್ಲಲ್ಲಿ ಸಿಕ್ಕಿದ ಲೆಕ್ಕ ವ್ಯತ್ಯಾಸಗಳಿಂದ ಸೊಸೈಟಿಗೆ ಬಸಲಿಂಗಯ್ಯನಿಂದ ನಾನ್ನೂರೈ ವತ್ತು ರೂಪಾಯಿಗಳು ಬರಬೇಕಾದುದು ತಿಳಿಯಿತು. ಆಡಿಟರು ತಮ್ಮ ರಿಪೋರ್ಟಿನಲ್ಲಿ ಸೊಸೈಟಿಯ ಆಯವ್ಯಯ, ಆಸ್ತಿಯ ಜವಾಬ್ದಾರಿ, ಬಂಡ ವಾಳಗಳ ಬಗ್ಗೆ ತೃಪ್ತಿಕರವಾದ ಸಮಾಧಾನ ಕೊಟ್ಟಿದ್ದರೂ, ಲೇವಾಲೇವಿ

ಹಾಗೂ ಸೊಸೈಟಿಯ ದಿನದಿನದ ವ್ಯವಹಾರಗಳ ಲೆಕ್ಕ ಪತ್ರಗಳ ಬಗ್ಗೆ ಎಲ್ಲವೂ ಅಸಮರ್ಪಕ ಎಂದಿದ್ದರು. ಅಲ್ಲದೆ ಹಿಂದಿನ ಗುಮಾಸ್ತೆ ಬಸಲಿಂಗಯ್ಯನಿಂದ ಸೊಸೈಟಿಗೆ ಬರಬೇಕಾಗಿರುವ ಶಾರ್ಟೇಜು ಹಣ ವಸೂಲು ಮಾಡಿ, ಆ ಬಗ್ಗೆ ಮೇಲಧಿಕಾರಿಗಳಿಗೆ ರಿಪೋರ್ಟು ಮಾಡಬೇಕೆಂದು ತಿಳಿಸಿ ಹೊರಟು ಹೋದರು.

ಸೊಸೈಟಿಯ ಆಡಿಟ್ ಆಗುವುದೇ ತಡ, ಕೃಷ್ಣಮೂರ್ತಿಗಳು ಜನರಲ್‌ಬಾಡಿ ಮೀಟಿಂಗಿಗೆ ಏರ್ಪಾಡು ಇಟ್ಟುಬಿಟ್ಟರು. ಇಷ್ಟು ಬೇಗ ಜನರಲ್‌ಬಾಡಿ ಮೀಟಿಂಗಿಗೆ ಏರ್ಪಾಟು ಮಾಡಲು ಎರಡು ಕಾರಣಗಳಿದ್ದುವು.

ಬಸಲಿಂಗಯ್ಯ ಸೊಸೈಟಿಯ ಕೆಲಸ ನಿರ್ವಹಿಸುತ್ತಿದ್ದಾಗ ಒಮ್ಮೆಗೂ ಜನರಲ್ ಬಾಡಿ ಮೀಟಿಂಗ್ ನಡೆಸಿಯೇ ಇರಲಿಲ್ಲ. ಸೊಸೈಟಿ ಪ್ರಾರಂಭವಾದಂದಿನಿಂದ ಇದೇ ಮೊದಲಬಾರಿಯಾಗಿತ್ತು. ಸೊಸೈಟಿಗೆ ಷೇರುಗಳನ್ನು ಹಾಕಿದ್ದ ಹಳ್ಳಿಗರೆಲ್ಲ ತಮ್ಮ ಹಣ ವಾಪಸಾಗುವುದೋ ಇಲ್ಲವೋ ಎಂಬ ಶಂಕೆಗೊಳಗಾಗಿದ್ದರು. ಆದ್ದರಿಂದ ಸೊಸೈಟಿಯ ನಿಲುವು ಮತ್ತು ಮುನ್ನಡೆಗಳನ್ನು ಆಡಳಿತದ ವರದಿಯ ಮುಖಾಂತರ ನಿರೂಪಿಸಲಿಕ್ಕಾದರೂ ಜನರಲ್ ಬಾಡಿ ಮೀಟಿಂಗ್ ನಡೆಸುವುದು ಮುಖ್ಯವಾಗಿತ್ತು.

ಕೃಷ್ಣಮೂರ್ತಿಗಳಿಗೆ ತಮ್ಮ ಕೆಲಸವೇ ಬೇಕಾದಷ್ಟಿತ್ತು. ತಮ್ಮ ಸರ್ಕಲಿಗೆ ಸಂಬಂಧಿಸಿದ ಹಳ್ಳಿಗಳ ಮೇಲೆ ಸರ್ಕೀಟುಹೋಗುವುದು; ಜಮೀನುಸಮೀನುಗಳ ವ್ಯವಹಾರ, ಕಂದಾಯ ವಸೂಲಿ— ಹೀಗೆ ಅನೇಕ ತಡೆಗಳು. ಇದರ ಜೊತೆಗೆ ಸೊಸೈಟಿಯ ಜವಾಬರ್ದಾರಿ ಬೇರೆ. ಸೊಸೈಟಿಯ ಆಡಳಿತದಲ್ಲಿ ಪ್ರತ್ಯೇಕ ಗುಮಾಸ್ತೆ, ಅಸಿಸ್ಟೆಂಟ್ ಸೆಕ್ರೆಟರಿಗಳಿದ್ದರೂ, ಸೊಸೈಟಿಯ ಪೂರ್ಣ ಜವಾಬ್ದಾರಿ ಸೆಕ್ರೆಟರಿಯಾದ ಕೃಷ್ಣಮೂರ್ತಿಗಳ ಮೇಲಿತ್ತು.

ಕೃಷ್ಣಮೂರ್ತಿಗಳು ಆದಾಯವಿದ್ದೆಡೆ ಹೆಚ್ಚು ಕೆಲಸ ಮಾಡುವ ಸ್ವಭಾವದವರು. ತಮ್ಮ ರೆವಿನ್ಯೂ ಬಾಬ್ತಿನಲ್ಲಿ ಬರುವಆದಾಯವನ್ನು ಕಳೆದುಕೊಳ್ಳುವುದು ಅವರಿಗೆ ಯಾವ ಮಾತ್ರಕ್ಕೂ ಸರಿಬೀಳದು. ಆದರೆ ಸರ್ಕಾರದ ಬಲವಂತಕ್ಕಾದರೂ ಸೊಸೈಟಿಯ ಕೆಲಸದಲ್ಲಿ ಪ್ರವೇಶಿಸಲೇ ಬೇಕಾಗಿತ್ತು. ಅವರಿಗೆ ಸೊಸೈಟಿಯಿಂದ ಯಾವ ವಿಧವಾದ ಲಾಭವೂ ಇರಲಿಲ್ಲ. ಬಸಲಿಂಗಯ್ಯನ ಕಾಲದಲ್ಲಿ ಕೃಷ್ಣಮೂರ್ತಿಗಳಿಗೆ ಸೊಸೈಟಿ ಸಂಪೂರ್ಣ ಇಲ್ಲಿನೇ ಇಲ್ಲವೆಂಬಂತೆ ಆಗಿತ್ತು. ಆನಂದ ಬಂದ ಮೇಲೂ,

ಲಾಭ ಹಿರಿಯುವ ಅವಕಾಶವೇ ದೊರೆಯಲಿಲ್ಲ. ಅಂದಮೇಲೆ ಸೊಸೈಟಿಯ ಬಗ್ಗೆ ಏಕಾದರೂ ಆಸಕ್ತಿವಹಿಸಬೇಕೆಂಬುದು ಅವರ ಧೋರಣೆ.

ಅಲ್ಲದೆ, ಈಚೆಗೆ ಸರ್ಕಾರದವರು ಒಂದು ಸರ್ಕ್ಯುಲರ್ ಹೊರಡಿಸಿ, ಸೊಸೈಟಿಯ ಸಮಸ್ತ ಜವಾಬ್ದಾರಿಯೂ ಅಸಿಸ್ಟೆಂಟ್ ಸೆಕ್ರೆಟರಿ ವಹಿಸಬೇಕು ಮತ್ತು ಸೆಕ್ರೆಟರಿಗಳು ಕೇವಲ ಮೇಲ್ವಿಚಾರಣೆ ನಡೆಸುವುದೆಂದು, ತಿಳಿಯಪಡಿಸಿದ್ದುದರಿಂದ ಕೃಷ್ಣಮೂರ್ತಿಗಳಿಗೆ ಸೊಸೈಟಿಯ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಅವಕಾಶ ತಾನಾಗಿಯೇ ದೊರೆತ ಹಾಗಾಗಿತ್ತು.

ಜನರಲ್‌ಬಾಡಿ ಮೀಟಿಂಗ್‌ನಲ್ಲಿ ಆಗಬಹುದಾಗಿದ್ದ ಸೊಸೈಟಿಯ ಕಾರ್ಯಕಾರಿ ಸಮಿತಿಯ ಡೈರೆಕ್ಟರುಗಳ ಚುನಾವಣೆಗೆ ಗುರುರಾಜರಾಯರೂ ನಿಲ್ಲಬೇಕೆಂದು ಆಂಜನಪ್ಪ ಹಾಗೂ ಇತರ ಬಳಗದ ಸದಸ್ಯರುಗಳೆಲ್ಲಾ ಗುರುರಾಜರಾಯರನ್ನು ಹುರಿದುಂಬಿಸತೊಡಗಿದರು ಸಾಧ್ಯವಾದರೆ ಪ್ರೆಸಿಡೆಂಟ್ ಸ್ಥಾನಕ್ಕೆ ಸ್ಪರ್ಧಿಸಿದರೂ ಸ್ಪರ್ಧಿಸಲಿ ಎಂಬ ತೀವ್ರ ಧೋರಣೆ ತೋರತೊಡಗಿದರು.

ಗುರುರಾಜರಾಯರು ಸೊಸೈಟಿಯ ಡೈರೆಕ್ಟರು ಅಥವಾ ಪ್ರೆಸಿಡೆಂಟರಾಗಿ ಬಂದರೆ ತಮ್ಮ ವ್ಯವಹಾರಗಳಿಗೆ ಬಹಳ ಅನುಕೂಲವಾಗಬಹುದೆಂಬ ಎಣಿಕೆ ಆಂಜನಪ್ಪ, ಧರಣಯ್ಯ ಮೊದಲಾದವರದು. ಆದರೆ ಅವರಾರೂ ತಾವೇ ಸ್ವತಃ ಪ್ರೆಸಿಡೆಂಟ್ ಶಿಪ್‌ಗೆ ಮುಂದುವರಿಯಲೂ ಇಲ್ಲ. ಏಕೆಂದರೆ ಆ ಸ್ಥಾನದಲ್ಲಿದ್ದುಕೊಂಡು ತಮ್ಮ ಕಳ್ಳ ವ್ಯವಹಾರ ನಡೆಸಿ ಅರಗಿಸಿಕೊಳ್ಳುವ ಬಗ್ಗೆ ಅವರಾರಿಗೂ ಧೈರ್ಯವಿರಲಿಲ್ಲ. ಇದು ವರೆಗೆ ಗುರುರಾಜರಾಯರು ಅಸಿಸ್ಟೆಂಟ್ ಸೆಕ್ರೆಟರಿಗಳಾಗಿದ್ದುದರಿಂದ ತಮ್ಮ ವ್ಯವಹಾರದಲ್ಲಿ ಸಹಾಯ ಮಾಡಲು ಹಿಂಜರಿಯಲೂಬಹುದೆಂಬ ಶಂಕೆಯಿಂದ ಗುರುರಾಜರಾಯರೊಡನೆ ಸೊಸೈಟಿಯ ವ್ಯವಹಾರದಲ್ಲಿ ನೇರವಾಗಿ ಪ್ರವೇಶಿಸಲಾಗಲಿಲ್ಲ. ಈಗ ಒಂದು ವೇಳೆ ಗುರುರಾಜರಾಯರು ಆಢಳಿತ ವರ್ಗದಲ್ಲಿ ಡೈರೆಕ್ಟರು ಅಥವಾ ಪ್ರೆಸಿಡೆಂಟರಾದರೆ ಸೊಸೈಟಿಯನ್ನೇ ತಮ್ಮದಾಗಿರಿಸಿಕೊಂಡು ಬಿಡಬಹುದೆಂಬ ಹಂಚಿಕೆ ಹಾಕಿದ್ದರು, ಆಂಜನಪ್ಪ ಧರಣಯ್ಯ ಇವರುಗಳು.

ಸಜ್ಜಿಗೆ ಬುಸ್ಸಣ್ಣನವರ ವಿರುದ್ಧ ನಿಲ್ಲಲು ರಾಯರಿಗೂ ಇಷ್ಟವಿಲ್ಲ. ಬುಸ್ಸಣ್ಣ ಎಲ್ಲರಿಗೂ ಬೇಕಾದವರು; ತಮಗೂ ಬೇಕಾದವರು. ಈ ಬಾರಿಯಲ್ಲ, ಇನ್ನು ಹತ್ತು ಸಲದ ಮೀಟಿಂಗ್ ಚುನಾವಣೆಯಲ್ಲೂ ಸಜ್ಜಿಗೆ

ಬುಸ್ಸಣ್ಣನವರೇ ಚುನಾಯಿತರಾಗಿ ಬರಬಲ್ಲರೆಂಬ ವಿಷಯ ರಾಯರಿಗೆ ತಿಳಿದಿತ್ತು. ಆದರೆ ಗೆಳೆಯರ ಪ್ರೋತ್ಸಾಹವಿರಬೇಕಾದರೆ ಪ್ರಯತ್ನ ಏಕೆ ಮಾಡಬಾರದೆಂಬ ಅಭಿಪ್ರಾಯ ಅವರದು. ಪ್ರೆಸಿಡೆಂಟ್ ಬುಸ್ಸಣ್ಣನವರೇ ಆಗಿರಲಿ, ಡೈರೆಕ್ಟರಾಗಿ ಆಡಳಿತ ವರ್ಗದಲ್ಲಿದ್ದುಕೊಂಡರೆ ಆಯಿತು ಎಂದುಕೊಂಡರು, ರಾಯರು ನಿರ್ವಿಕಾರರಾಗಿ.

ಮೀಟಿಂಗಿಗೆ ಆಗಬೇಕಾದ ಏರ್ಪಾಡುಗಳನ್ನೆಲ್ಲಾ ಮಾಡಲು ಕೃಷ್ಣಮೂರ್ತಿಗಳು ರಾಯರಿಗೇ ಒಪ್ಪಿಸಿದರು. ರಾಯರೂ ಕೂಡ ಇಲ್ಲವೆನ್ನದ ಒಪ್ಪಿ ದಕ್ಷತೆಯಿಂದ ವ್ಯವಸ್ಥೆ ಮಾಡತೊಡಗಿದರು. ಮುಖ್ಯವಾಗಿ ಮೀಟಿಂಗಿಗೆ ಆಹ್ವಾನಪತ್ರಿಕೆಗಳು, ಸೊಸೈಟಿಯ ಆಡಳಿತದ ವರದಿ ಮತ್ತು ಬ್ಯಾಲೆನ್ಸ್ ಶೀಟುಗಳನ್ನು ಪ್ರಿಂಟ್ ಮಾಡಿಸಬೇಕಾಗಿತ್ತು. ಅಲ್ಲದೆ ಹೊಸ ರಿಕಾರ್ಡ್ ಬುಕ್ಸ್‌ಗಳನ್ನು ತರಬೇಕಾಗಿತ್ತು. ರಾಯರು ಅದನ್ನೆಲ್ಲಾ ಸಮರ್ಪಕವಾಗಿ ಸಿದ್ಧಪಡಿಸಿದರು.

ಹೊರಗಿನ ಕೆಲಸಗಳನ್ನು ರಾಯರೇ ನಿರ್ವಹಿಸುತ್ತಿದ್ದರೂ ಬರಿವಣಿಗೆಯ ಕೆಲಸವೆಲ್ಲಾ ಆನಂದನ ಮೇಲೇ ಬಿದ್ದಿತ್ತು. ಮೀಟಿಂಗಿಗೆ ಮೂರೇ ದಿನ ಉಳಿದಾಗಿನಿಂದ ಆನಂದನಿಗೆ ಬಿಡುವೇ ಇಲ್ಲದ ಹಾಗಾಯಿತು. ಮೀಟಿಂಗಿನ ಗಲಾಟೆ ಮುಗಿಯುವ ವರೆಗೆ ಪ್ರಕಾಶ ಪ್ರಮೀಲೆಯರಿಗೆ ಪಾಠ ಹೇಳುವುದು, ವಿಶಾರದ ಪರೀಕ್ಷೆಗಿರುವ ತನ್ನ ಅಭ್ಯಾಸ, ಎಲ್ಲವನ್ನೂ ಒತ್ತಟ್ಟಿಗಿಟ್ಟುಬಿಟ್ಟ. ಪ್ರಮೀಲ ಅವಳಾಗಿ ಲೆಕ್ಕಗಳನ್ನೆಲ್ಲಾ ಮಾಡಿಕೊಡುತ್ತಿದ್ದರೂ, ಕ್ಯಾಶ್ ಬುಕ್, ರಿಮಿಟೆನ್ಸ್ ಬುಕ್‌ಗಳನ್ನು ಆನಂದ ತಾನೇ ಬರೆಯುತ್ತಿದ್ದ. ಮೀಟಿಂಗಿನ ಗಲಾಟೆಯಲ್ಲಿ ಆ ಕೆಲಸವನ್ನೂ ಪ್ರಮೀಲೆಗೆ ವಹಿಸಿಕೊಟ್ಟ ಆನಂದ. ಆಗ ಪ್ರಮೀಲೆ ಆನಂದನೊಡನೆ,

"ಅಸಿಸ್ಟೆಂಟ್ ಸೆಕ್ರಿಟರಿಗಳ ಸೈನು ನಾನೇ ಮಾಡಿಕೊಟ್ಟರೆ ಪೂರಾತೊಂದರೆಯೇ ತಪ್ಪುತ್ತದೆ!" ಎಂದು ತಮಾಷೆಮಾಡಿದಳು.

"ಓ, ಹಾಗೇ ಮಾಡಿರಲ್ಲ" ಆನಂದನೂ ನಕ್ಕ.

"ಸಂಬಳವಿಲ್ಲದೆ ದುಡಿಯುತ್ತೇನೆಂದರೆ ಚೆನ್ನಾಗಿ ದುಡಿಸಿಕೊಳ್ಳುತ್ತೀರಿ, ಪರವಾಗಿಲ್ಲ...!"

"ಹಾಗಾದರೆ ಮೀಟಿಂಗ್ ಕಳೆಯಲಿ, ನಿಮಗೆ ಸಂಬಳ ಗೊತ್ತು ಮಾಡುತ್ತೇನೆ" ಎಂದು ನಕ್ಕಿದ್ದ ಆನಂದ.

ಸೊಸೈಟಿಯ ಷೇರುದಾರರುಗಳು, ಸೊಸೈಟಿಗೆ ಸಂಬಂಧಿಸಿದ ಇನ್ಸ್ಪೆಕ್ಟರು, ಅಸಿಸ್ಟೆಂಟ್ ರಿಜಿಸ್ಟ್ರಾರರು, ಮತ್ತು ಕಮೀಷನರು ಮುಂತಾದ ಅಧಿಕಾರಿಗಳಿಗೆ ಆಹ್ವಾನ ಪತ್ರಿಕೆಗಳನ್ನು ಕಳಿಸುವುದು, ಮುಂದಿನ ವರ್ಷದ ಆಡಳಿತ ವರ್ಗದಲ್ಲಿ ಡೈರೆಕ್ಟರಾಗಲು ಸ್ಪರ್ಧಿಸಿರುವ ಉಮೇದ್ವಾರರ ಉಮೇದ್ವಾರಿಕೆ ಪತ್ರಗಳನ್ನು ನಕಲುಮಾಡುವುದು, ಆಡಿಟರೀ ರಿಪೋರ್ಟಿನ ಪ್ರಕಾರ ಸೊಸೈಟಿಯು ನಫೆಗೆ ಅನುಸಾರವಾಗಿ, ಡೈರೆಕ್ಟರುಗಳ ಸಲಹೆಗನುಗುಣವಾಗಿ ಮುಂದಿನ ವರ್ಷದ ಬಡ್ಜೆಟ್ಟಿನ ಕರಡು ಸಿದ್ಧಗೊಳಿಸುವುದು, ಷೇರುದಾರರುಗಳಿಗೆ ಹಂಚಬೇಕಾಗಿದ್ದ ಡಿವಿಡೆಂಡ್ ಸೂಚಿಸುವ ತಖ್ತೆ ತಯಾರಿಸುವುದು, ಇನ್ನೂ ಎಷ್ಟೋ ಕೆಲಸಗಳಿದ್ದುವು. ಆನಂದ ಎಲ್ಲವನ್ನೂ ಸಮರ್ಪಕವಾಗಿ ಮಾಡಿ ಮುಗಿಸಿದ.

ಮೀಟಿಂಗಿನ ದಿನ ಬಹಳ ಜಬರ್ಾಗಿತ್ತು ಮಧ್ಯಾಹ್ನ ಮೂರು ಗಂಟೆಗೆ ಉಪಹಾರವಾದ ಮೇಲೆ, ಮೀಟಿಂಗ್ ಪ್ರಾರಂಭವಾಯಿತು. ಜಿಲ್ಲಾ ಕಮಿಷನ್ನರೇ ಆ ದಿನದ ಕಾರ್ಯಕ್ರಮಕ್ಕೆ ಅಧ್ಯಕ್ಷರಾಗಿದ್ದರು. ಪ್ರಾರ್ಥನೆಯ ನಂತರ, ಅಧ್ಯಕ್ಷರ ಸ್ವಾಗತವಾದ ಮೇಲೆ ಕಾರ್ಯದರ್ಶಿ ಕೃಷ್ಣಮೂರ್ತಿಗಳು ಆಢಳಿತದ ವರದಿಯನ್ನು ಓದಿದರು ಲೆಕ್ಕಪತ್ರಗಳ ಬಗ್ಗೆ ಮೆಂಬರುಗಳ ಅಭಿಪ್ರಾಯ ಸಮಾಧಾನ ಪಡೆದ ಮೇಲೆ ಬಡ್ಜೆಟ್ಟಿನ ವಿವರವನ್ನು ಮುಂಡಿಸಿದರು ನಂತರ ಡೈರೆಕ್ಟರುಗಳ ಚುನಾವಣೆಯಾಯಿತು. ಸೆಕ್ರಿಟರಿ ಕೃಷ್ಣಮೂರ್ತಿಗಳನ್ನು ಬಿಟ್ಟು ಹದಿನೈದು ಜನ ಬಹುಮತದಿಂದ ಚುನಾಯಿತರಾದರು. ಚುನಾಯಿತರಾದವರಲ್ಲಿ ಆಂಜನಪ್ಪ, ಧರಣಯ್ಯ, ಗುರುರಾಜರಾಯರು ಮತ್ತು ಸಜ್ಜಿಗೆ ಬುಸ್ಸಣ್ಣನವರಿದ್ದರು.

ಪ್ರೆಸಿಡೆಂಟ್ ಸ್ಥಾನಕ್ಕೆ ಚುನಾಯಿಸುವಾಗ ಸ್ವಲ್ಪ ಚರ್ಚೆಯಾಯಿತು. ನೆರೆದ ಮೆಂಬರುಗಳಲ್ಲಿ ಕೆಲವರು ಸಜ್ಜಿಗೆ ಬುಸ್ಸಣ್ಣನವರ ಕಡೆ ಮಾತಾಡಿದರು, ಕೆಲವರು ಗುರುರಾಜರಾಯರೇ ಆಗಲಿ ಎಂದರು. ಗುರುರಾಜರಾಯ, ಸಜ್ಜಿಗೆ ಬುಸ್ಸಣ್ಣನವರೇ ಪ್ರೆಸಿಡೆಂಟಾಗಿರಲಿ ಎಂದರು. ಅದಕ್ಕೆ ಬುಸ್ಸಣ್ಣ 'ನನಗೆ ಬೇಡ', ಎಂದು ಖಂಡಿತವಾಗಿ ಹೇಳಿದರು. ಗುರುರಾಜರಾಯರೇ ಪ್ರೆಸಿಡೆಂಟ್ ಆದರು. ಅಸಿಸ್ಟೆಂಟ್ ಸೆಕ್ರಿಟರಿಯಾಗಿ ಆನಂದನಿರಬೇಕೆಂದು ತೀರ್ಮಾನಿಸಿದರು. ಕೊನೆಯಲ್ಲಿ ಅಧ್ಯಕ್ಷರು ಸಹಕಾರ ಸಂಘಗಳು ಮತ್ತು ಅದರಿಂದ ಆಗುವ ಪ್ರಯೋಜನದ ಬಗ್ಗೆ

ಮಾತನಾಡಿದರು. ವಂದನಾರ್ಪಣೆಯ ಆನಂತರ ಅಂದಿನ ಕಾರ್ಯಕ್ರಮ
ಮುಕ್ತಾಯವಾಯಿತು.

೧೧

ಅಸಿಸ್ಟೆಂಟ್ ಸೆಕ್ರೆಟರಿ ಎನಿಸಿಕೊಂಡ ಮೇಲೆ ಆನಂದನಿಗೆ ಸೊಸೈ
ಟಿಯ ವ್ಯವಹಾರದಲ್ಲಿ ನಡೆಯುತ್ತಿದ್ದ ಅನ್ಯಾಯಗಳನಗ್ನರೂಪ ಗೋಚರ
ವಾಗತೊಡಗಿತು. ಮೊಳಕಾಲ್ಮುರುವಿನಿಂದ ಆಹಾರದಿನಸಿ, ವ್ಯವಸಾ
ಯೋಪಕರಣಗಳು ಹಾಗೂ ಜವಳಿಯ ಕೋಟಗಳನ್ನು ಗುರುರಾಜರಾಯರೇ
ಇದು ಮೊದಲು ತರುತ್ತಿದ್ದುದರಿಂದ, ಮೊಳಕಾಲ್ಮುರುವಿನಲ್ಲಿ ನಡೆಯುತ್ತಿದ್ದ
ವಿದ್ಯಮಾನಗಳು ಅಷ್ಟಾಗಿ ಅವನಿಗೆ ಗೊತ್ತಾಗಿರಲಿಲ್ಲ. ಯಾವಾಗಲಾದರೂ
ಮಾಲು ತಂದ ಸಮಯದಲ್ಲಿ ಒಮ್ಮೊಮ್ಮೆ ಇನ್ವಾಯ್ಸ್ ಮತ್ತು ಕ್ಯಾಷ್
ಬಿಲ್‌ಗಳಲ್ಲಿ ಇರುತ್ತಿದ್ದುವು. ಆ ಬಗ್ಗೆ ಆನಂದ ಗುರುರಾಜರಾಯರನ್ನು
ಪ್ರಶ್ನಿಸಿದಾಗ,

"ಮಾಲುಗಳು ಷಾರ್ಟೇಜು ಬಂದಿವೆಯಂತೆ. ಅಡ್ಜಸ್ಟುಮಾಡಿ
ಕೊಳ್ಳಲು ಇನ್ವಾಯ್ಸ್‌ನಲ್ಲಿ ಆ ರೀತಿ ಮಾಡಿದ್ದಾರೆ. ಯಾವುದಾದರೂ
ಹಳ್ಳಿಯ ಹೆಸರುಗಳಿಗೆ ಖರ್ಚುಹಾಕಿಬಿಡು. ಅದರ ಹಣ ನಾನು ಅವರ
ಕೈಯಲ್ಲೇ ಅಡ್ಜಸ್ಟ್‌ಮಾಡಿಸಿದೀನಿ" ಎನ್ನುತ್ತಿದ್ದರು.

ಆನಂದ 'ಇದ್ದರೂ ಇರಬಹುದು' ಎಂದುಕೊಂಡು, ರಾಯರು
ಹೇಳಿದ ಹಾಗೆಯೇ ಮಾಡುತ್ತಿದ್ದ. ಈಗ ಅದರ ಬಗ್ಗೆ ಪೂರ್ಣ ಪರಿಚಯ
ದೊರೆತ ಹಾಗಾಯಿತು.

ಅಸಿಸ್ಟೆಂಟ್ ಸೆಕ್ರೆಟರಿಯ ಜವಾಬ್ದಾರಿಯನ್ನು ತಪ್ಪಿಸಿಕೊಂಡ ಮೇಲೆ
ಮೊದಲ ಬಾರಿ ಆನಂದನಿಗೆ ಸಹಾಯ ಮಾಡುವ–ಹಾಗೂ ಸ್ಥಳ ವಿದ್ಯಮಾನ
ಗಳನ್ನು ಪರಿಚಯ ಮಾಡಿಕೊಡುವ ಉದ್ದೇಶದಿಂದ ಆನಂದನೊಡನೆ ಮೊಳ
ಕಾಲ್ಮುರುವಿಗೆ ಹೋದರು, ಗುರುರಾಜರಾಯರು.

ರಿಸರ್ವ್ ಡಿಪೋ ಗುಮಾಸ್ತೆಯ ವ್ಯವಹಾರ ಆನಂದನಿಗೆ ಸ್ವಲ್ಪ
ವಿಚಿತ್ರವಾಗಿ ಕಾಣಿಸಿತು. ಮಾಲನ್ನೆಲ್ಲಾ ಲಾರಿಗಳಿಗೆ ಏರಿಸಿಕೊಟ್ಟ ಮೇಲೆ
ವೆಂಕಟಪತಯ್ಯ ಗುರುರಾಜ ರಾಯರ ಕಡೆ ತಿರುಗಿ,

"ಗುರುರಾಜರಾಯ ಇವತ್ತು ಒಂದು ಚೀಲ ಸಕ್ಕರೆ, ಎರಡು ಚೀಲ ಗೋಧಿ, ಒಟ್ಟು ಹೋಗಬೇಕಪ್ಪ." ಎಂದು ಕೇಳಿದ, ಕೃತ್ರಿಮ ನಗೆಯನ್ನು ಬೀರಿ.

"ಹೊಸ ಅಸಿಸ್ಟೆಂಟ್ ಸೆಕ್ರೆಟರಿ ಇನ್ನೂ 'ಸೋ' ಅಂತ ಕಾಲಿಡುತ್ತಿರುವಾಗಲೇ ನಿನ್ನ ಬಿಸಿನೆಸ್ ಪ್ರಾರಂಭಿಸಿಬಿಟ್ಟೆಯಲ್ಲ ವೆಂಕಟಪತಿ. ಮುಂದಿನ ಸಲದ ಕೋಟಾದಲ್ಲಿ ಬೇಕಾದರೆ ತಗೊ. ಈ ಸಲ ಬೇಡ" ಎಂದರು, ವೆಂಕಟಪತಯ್ಯನ ಸಂಧಾನವನ್ನು ಮುರಿಯುತ್ತ.

"ಮುಂದಿನ ಸಲ ಹೇಗೂ ನೀನು ಬರೋದಿಲ್ಲ. ಅದಕ್ಕೋಸ್ಕರ ಈ ಸಲ ಜಾರಿಕೊಳ್ತಿದ್ದೀ. ಎಲ್ಲಾ ನಿನ್ನ ಹಾಗೇ ಇರ್ತಾರೇನು ? ಹೇಗಾದರೂ ಇನ್ನು ಮೇಲೆ ನಮಗೆ ಕಷ್ಟ."

"ನಿನಗೇತರ ಕಷ್ಟವಯ್ಯಾ, ನಿನ್ನ ಭಕ್ತವೃಂದ ನೀನು ಹೇಳಿದ ಹಾಗೆ ಕೇಳುವಾಗ ?"

"ಏನು ಭಕ್ತರೋ, ಏನು ವೃಂದವೋ ! ಅದಿರಲಿ; ಈಗ ಮಾಲು ಬಿಟ್ಟು ಹೋಗೋ ವಿಷಯಕ್ಕೆ ಏನಂತೀ ?"

"ಆಗಲೇ ಹೇಳಿದೆನಲ್ಲ. ನಾಳೆಯ ಸಲದ ಕೋಟಾದಲ್ಲಿ ತಗೋ. ಬೇಕಾದರೆ ನಾನು ಆನಂದನಿಗೆ ಹೇಳಿರ್ತೀನಿ."

"ಮರೆಯಬೇಡಪ್ಪ. ನೀವೆಲ್ಲಾ ಸಹಾಯ ಮಾಡಿದರೆ ತಾನೇ ನಾನು ಉಳಕೊಳ್ಳೋದು !" ಆಪತ್ತಿನ ಪರ್ವತವೇ ಮೇಲೆ ಕವಿಚಿಕೊಂಡ ಹಾಗೆ ಹೇಳಿದ ವೆಂಕಟಪತಯ್ಯ.

"ನಿನ್ನ ವಿಷಯ ನನಗೆಲ್ಲಾ ಗೊತ್ತಿದೆ, ನೀನೇನು ಮತ್ತೆ ಮತ್ತೆ ಹೇಳಬೇಕಾಗಿಲ್ಲ." ಗುರುರಾಜರಾಯರು ನಕ್ಕು ಹೇಳಿದರು.

"ವೆಂಕಟಪತಯ್ಯ ಏನು ಹೇಳುತ್ತಿದ್ದಾರೆ?"— ವೆಂಕಟಪತಯ್ಯ ಮತ್ತು ರಾಯರಲ್ಲಿ ಆದ ಸಂಭಾಷಣೆ ಅರ್ಥವಾಗದೆ ಆನಂದ ಕೇಳಿದ. ವೆಂಕಟಪತಯ್ಯ ತಾನೇ ಮುಂದುವರಿದು,

"ಏನೂ ಇಲ್ರೀ ಆನಂದ, ನಮಗೆ ಬರೋ ಮಾಲಿನಲ್ಲಿ ಆಗಾಗ್ಗೆ ಷಾರ್ಟೇಜು ಬಂದುಬಿಡುತ್ತೆ. ಹೇಗಾದರೂ ಭರ್ತಿಮಾಡಬೇಕಲ್ಲ, ಅದ

ಕ್ಕೋಸ್ಕರ ಸೊಸೈಟಿಯವರೂ ಸರ್ಕಾರೀ ಡಿಪೋದವರೂ, ಸ್ವಲ್ಪ ಸಹಾಯ ಮಾಡಿದರೆ ಅನುಕೂಲವಾಗುತ್ತೆ. ಅದಕ್ಕೋಸ್ಕರ ಅಷ್ಟೆ."

ವೆಂಕಟಪತಯ್ಯನ ಮಾತಿನಿಂದ ಆನಂದನಿಗೆ ಸೋಜಿಗವಾಯಿತು. ಅವನ ಮಾತಿನಲ್ಲಿ ನೈಜತೆಗಿಂತ ಕೃತ್ರಿಮವೇ ಹೆಚ್ಚು ಕಾಣಿಸತೊಡಗಿತು ಆನಂದನಿಗೆ. ಷಾರ್ಟೇಜು ಏಕೆ ಬರುತ್ತದೆ? ಒಂದು ವೇಳೆ ಬಂದರೂ ಕೂಡ ಮಾಲನ್ನು ಪರೀಕ್ಷಿಸದೆ ವೆಂಕಟಪತಯ್ಯ ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆಯೇ? ಅಥವಾ ಷಾರ್ಟೇಜು ಕಂಡುಬಂದ ಮಾಲನ್ನು ವಾಪಾಸು ಮಾಡಲು ಆಗುವುದಿಲ್ಲವೋ? ಎಂದು ಅನೇಕ ಪ್ರಶ್ನೆಗಳು ತಲೆಹಾಕಿದುವು. ಆನಂದ ಕೇಳಿದ—

"ನೀವು ಮಾಲನ್ನು ಪರೀಕ್ಷಿಸಿ ತೆಗೆದುಕೊಂಡು, ಷಾರ್ಟೇಜು ಕಂಡು ಬಂದರೆ ಮೇಲಕ್ಕೆ ರಿಪೋರ್ಟು ಯಾಕೆ ಮಾಡಬಾರದು?"

"ರಿಪೋರ್ಟು ಮಾಡಿದರೂ ಏನೂ ಪ್ರಯೋಜನವಿಲ್ರೀ. ಇಂಥಾ ಸಣ್ಣ ವಿಷಯವೆಲ್ಲಾ ಬರೀಬಾರದು, ನೀವು ನೀವೇ ಅನುಸರಿಸಿಕೋಬೇಕು ಎಂದುಬಿಡುತ್ತಾರೆ ಮೇಲಿನವರು. ಏನು ಮಾಡೋದು ಹೇಳಿ. ಮಾಲು ಬಂದಾಗ ಅದರಲ್ಲಿ ಎಷ್ಟೋ ಡ್ಯಾಮೇಜ್ ಆದ ಚೀಲ ಇರುತ್ತೆ. ಸೋರಿ ಹೋದದ್ದು, ಅಳತೆ ಕಡಮೆ ಬಂದದ್ದು, ಎಲ್ಲಾ ನಾವೇ ಹೊತ್ತುಕೋಬೇಕು."

"ಇನ್ವಾಯ್ಸ್ ಪ್ರಕಾರ ಮಾಲು ಸರಿಯಿಲ್ಲದಿದ್ದರೆ ಅದರಂತೆ ಷರಾ ಬರೆದು ವಾಪಾಸು ಮಾಡಬಹುದಲ್ಲಾ ಮಾಲುಗಳನ್ನೆಲ್ಲಾ."

"ನೀವಿನ್ನೂ ಹೊಸಬರು. ಇವೆಲ್ಲಾ ನಿಮಗೆ ಬೇಗ ಗೊತ್ತಾಗೋದಿಲ್ಲ. ನಿಮಗೆ ರಾಯರೆಲ್ಲಾ ತಿಳಿಸ್ತಾರೆ. ನಾಳೆ ಸಲ ಮಾತ್ರ ನೀವು ಮರೆಯದ ಹಾಗೆ ಗೋಧಿ, ಸಕ್ಕರೆ ಚೀಲಗಳು ಕೊಟ್ಟು ಹೋಗಬೇಕು." ವೆಂಕಟಪತಯ್ಯ ಮಾತನ್ನು ಅಲ್ಲಿಗೇ ಮುಗಿಸಿದ. ಆನಂದನಿಗೆ ರಾಯರು ಆಗಾಗ್ಗೆ ಸುಳ್ಳು ಇನ್ವಾಯ್ಸ್‌ಗಳ ಬಗ್ಗೆ ಹೇಳುತ್ತಿದ್ದುದು ನೆನಪಾಗಿ, ನಿಜವಾದ ಕಾರಣ ತಿಳಿಯಲು ಮನಸ್ಸು ವಿಚಾರಕ್ಕೊಳಗಾಯಿತು.

ತಾಲ್ಲೂಕ್ ಮಲ್ಟಿ ಪರ್ಪಸ್ ಕೋ-ಆಪರೇಟಿವ್ ಸೊಸೈಟಿಗೆ ಹೋಗಿದ್ದಾಗಲೂ ಹೀಗೆಯೇ ಆಯಿತು. ಸೊಸೈಟಿ ಇನ್ಸ್‌ಪೆಕ್ಟರು ಹಾಗೂ ಕ್ಲಾರ್ಕುಗಳು ತೋರಿದ ಭಾವನೆ ಆನಂದನಿಗೆ ಹೇಯವೆಂದು ತೋರಿಬಂತು. ಇನ್ನೂ ಒಳಗೆ ಪ್ರವೇಶಿಸುತ್ತಿದ್ದಾಗಲೇ ಆ ಕ್ಲಾರ್ಕು,

"ಏನು ರಾಯರೇ, ಸೊಸೈಟಿಯನ್ನು ನೆನಸಿಕೊಂಡು ಬಂದಹಾಗಿದೆ. ಬಹಳ ಅಪರೂಪಕ್ಕೆ ಬಂದಿರಿ" ಎಂದ ಗುರುರಾಜರಾಯರನ್ನುದ್ದೇಶಿಸಿ.

"ಹೌದು, ಏನೋ ದಯೆ ಬಂದ ಹಾಗೆ ಕಾಣಿಸುತ್ತೆ, ನಮ್ಮ ಮೇಲೆ. ನಿಜವಾಗಿಯೂ ನಮ್ಮ ಮೇಲೆ ಅನುಗ್ರಹ ತೋರಿದ ಹಾಗಾಯಿತು ಇಲ್ಲಿಯ ವರೆಗೆ ಬಂದದ್ದು" ಸೊಸ್ಯಟಿ ಇನ್ಸ್‌ಪೆಕ್ಟರೂ ಕ್ಲಾರ್ಕನೊಡನೆ ತಾಳ ಹಾಕಿದರು.

"ಅಯ್ಯೋ! ಅಷ್ಟು ದೊಡ್ಡ ಮಾತು ನನಗೇಕೆ ಸ್ವಾಮೀ ಇನ್ಸ್‌ಪೆಕ್ಟರೇ" ರಾಯರು ಹೇಳಿದರು.

"ಮತ್ತಿನ್ನೇನು ಹೇಳಿ, ನಿಮ್ಮ ಕೆಲಸ ಏನಾದರೂ ಇದ್ದರೆ—ಇದ್ದರೆ ಅನ್ನುವುದೇನು ಪ್ರತಿಸಲವೂ ಬಂದೇ ಬರ್ತೀರಲ್ಲಾ; ಬಂದವರು ಕೆಲಸ ಮುಗಿಸಿಕೊಂಡು ಪತ್ತೆಯಿಲ್ಲದ ಹಾಗೆ ಹೋಗಿಬಿಡುತ್ತೀರಿ. ಈ ಕಡೆ ತಲೆ ಕೂಡ ಹಾಕೋದಿಲ್ಲ. ನಮ್ಮ ಸೊಸೈಟಿಗೆ ಸಂಬಂಧಿಸಿದವನು ಇನ್ಸ್‌ಪೆಕ್ಟರು ಅಂತ ಇದ್ದಾನೆ ಅನ್ನೋದು ಮರೆತುಬಿಡುತ್ತೀರಿ. ಯಾವಾಗಲಾದರೂ ಅಪರೂಪಕ್ಕೆ ಹೀಗೆ ಬರ್ತೀರಿ"—ಸೊಸೈಟಿ ಇನ್ಸ್‌ಪೆಕ್ಟರು ಸೆಟೆದುಕೊಂಡೇ ಹೇಳಿದರು.

"ನಾವಂತೂ ಹಾಗೆ ಮಾಡಿದೆವು ಸ್ವಾಮಿ. ಇನ್ನು ಮೇಲೆ ಅಸಿಸ್ಟೆಂಟ್ ಸೆಕ್ರೆಟರಿಗಳು ಹೊಸಬರಿದ್ದಾರಲ್ಲಾ. ಅವರು ನಿಮ್ಮ ಯೋಗಕ್ಷೇಮ ನೋಡಿಕೊಳ್ಳಬಹುದಲ್ಲಾ."

"ಎಲ್ಲಾ ಒಂದೇ ಕಣ್ರೀ ರಾಯರೇ. ಅಗಸ ಹೊಸದರಲ್ಲಿ ಗೋಣಿ ಎತ್ತಿ ಒಗೆದ ಅಂದ ಹಾಗೆ, ಈ ಹೊಸಬರುಗಳೂ ಕೂಡ. ಎಲ್ಲರೂ ಮೊದಲು ಮರ್ಯಾದೆ ತೋರಿಸಿಕೊಂಡು ತಿರುಗುತ್ತಾರೆ. ಆ ಮೇಲೆ 'ಕ್ಯಾರೇ' ಅನ್ನೋಲ್ಲ."—ಕ್ಲಾರ್ಕು ಸರ್ಕಲ್ ಸೊಸೈಟಿಗಳವರು ತಮ್ಮನ್ನು ಗೌರವಿಸುವುದಿಲ್ಲವೆಂದು ಅಸಮಾಧಾನದಿಂದ ಕಣ್ಣು ಬಿಡುತ್ತಾ ಹೇಳಿದ.

"ನೀವೇನು ಕಮ್ಮಿಯೇನು ಬಿಡ್ರೀ, ಕೈಲಿ ಪೆನ್ನಿದೇ ಅಂತ ಸಿಕ್ಕಾಪಟ್ಟೆ ಬರೀತೀರಿ, ಅದಕ್ಕೇ ಹಾಗೆ ಮಾಡ್ತಾರೆ. ನೀವು ಒಳ್ಳೇರಾಗಿದ್ದರೆ ಎಲ್ಲರೂ ಒಳ್ಳೇರಾಗಿರ್ತಾರೆ" ಗುರುರಾಜರಾಯರು ಹಂಗಿಸದೆ ಬಿಡಲಿಲ್ಲ.

"ಹೋಗಲೀಪ್ಪ ನಾಳೆ ಸಲ ಬಂದಾಗಲಾದರೂ ಏನಾದರೂ ಸ್ವಲ್ಪ...." ಎಂದು ದೇಶಾವರದ ನಗೆ ನಕ್ಕು ಆನಂದನ ಕಡೆ ನೋಡಿ,

"ನಾಳೆ ಸಲ ಬರುವಾಗ್ಗೆ ಸೊಸೈಟಿ ಅಕೌಂಟ್ಸ್ ಎಲ್ಲಾ ತೆಗೊಂಡು ಬನ್ನಿ ಇವರೇ—ಆನಂದ" ಎಂದರು.

ಲಾರಿಯಲ್ಲಿ ರಾಂಪುರಕ್ಕೆ ಬರುವಾಗ ಆನಂದ ವೆಂಕಟಪತಯ್ಯನ ವಿಷಯವಾಗಿ ಪ್ರಶ್ನಿಸಿದ—

"ವೆಂಕಟಪತಯ್ಯ 'ಲಾಸಿ'ನಲ್ಲಿ ಇದ್ದಾನೆಯೇ ?"

"ಅವನಿಗೆ ಲಾಸಾಗಲ್ಲಿಕ್ಕೇನು ಕೇಡು ! ಕಳ್ಳಗೊರವು ! ಹಾಗೆ ಹೊಸ ಬರ ಹತ್ತಿರ ಸೋಗು ಹಾಕ್ತಾನೆ."

"ಸಕ್ಕರೆ, ಗೋಧಿ ಚೀಲಗಳನ್ನು ಕೇಳಿದನಲ್ಲಾ ?"

"ಸಕ್ಕರೆ, ಗೋಧಿ ಅಷ್ಟೇ ಅಲ್ಲ, ರಾಗಿ, ನವಣೆ, ಜೋಳ, ಅಕ್ಕಿ— ಇನ್ನೂ ಯಾವ ಯಾವ ಮಾಲಿರತ್ತೋ ಎಲ್ಲಾನೂ ಕೇಳ್ತಾನೆ "

"ಇದರಿಂದ ಅವನಿಗೇನು ಲಾಭ ?"

"ಏನು ಲಾಭ ! ಕಂಟ್ರೋಲ್ ಬೆಲೆಗೆ ನಮಗೆ ಕೊಡುವ ಬದಲು ಅದರ ಎರಡರಷ್ಟು ಬೆಲೆಗೆ ಮಾರಿಕೊಂಡರೆ ಲಾಭ ಬರೋಲ್ಲವೇ ?"

"ನಮಗೆ ಅನ್ಯಾಯವಾಗುವುದಿಲ್ಲವೆ ? ಅವನಿಗೆ ಕೊಟ್ಟ ಮಾಲಿನ ಹಣ ಹೇಗೆ ಭರ್ತಿ ಮಾಡುವುದು ?"

"ಹಣ ಅವನೇ ಕೊಡ್ತಾನೆ, ಮಾಲು ಕೊಂಡುಕೋತಾನೆ. ಇನ್‌ವಾಯ್ಸ್ ಪ್ರಕಾರ ಮಾಲು ತೆಗೆದುಕೊಂಡ ಹಾಗೆ, ಮಾರಾಟದ ಪುಸ್ತಕದ ಲೆಕ್ಕದ ಪ್ರಕಾರ ಮಾಲು ಮಾರಿದ ಹಾಗೆ ನಾವು ಮಾಡಿಕೊಳ್ಳಬೇಕು. ಸ್ಟಾಕ್ ಲೆಡ್ಜರಿನಲ್ಲಿ ಸುಳ್ಳು ಲೆಕ್ಕ ತೋರಿಸಬೇಕು. ಮಾರಾಟದ ಪುಸ್ತಕದಲ್ಲೂ ಸುಳ್ಳು ಮಾರಾಟ ತೋರಿಸಬೇಕು."

"ಇದರಿಂದ ನಮಗೆ ತೊಂದರೆಯಾಗುವುದಿಲ್ಲವೇ ?"

"ಆಗತ್ತೆ. ಆದರೆ ಯತ್ನವಿಲ್ಲ, ಸುಮ್ಮನಿರಬೇಕು."

"ಈ ವಿಷಯ ಮೇಲಕ್ಕೆ ರಿಪೋರ್ಟು ಮಾಡಿದರೆ ಏನು ಮಾಡುತ್ತಾನೆ ಆಗ ?"

ಆನಂದನ ಸರಳತೆಗೆ ನಕ್ಕರು, ರಾಯರು.

"ಮೇಲಕ್ಕೆ ರಿಪೋರ್ಟ್ಮಾಡಿ ಯಾರು ಬದುಕುತ್ತಾರೆ ಅವನ ಹತ್ತಿರ ಪೆಟ್ಟು ತಿಂದ ಹಾವು ಮತ್ಸರ ಇಟ್ಟ ಹಾಗೆ ಮತ್ಸರ ಇಡ್ತಾನೆ. ಮೇಲಕ್ಕೆ ಏಳದ ಹಾಗೆ ತುಳೀತಾನೆ ಗೊತ್ತೇನು? ಒಂದು ಸಲದ ಕೋಟದಲ್ಲಿ ಒಂದು ಸ್ವಲ್ಪ ಮೋಸ ಮಾಡಿದರೂ ಮುಗೀತು, ರಿಪೋರ್ಟ್ ಮಾಡಿದವನ ಕಥೆ......"

"ರಿಸರ್ವ್ ಡಿಪೋದಲ್ಲಿ ಎರಡು ರೀತಿಯ ಮಾಲಿಟ್ಟಿದ್ದಾನೆ. ಸರಕಾರೀ ಗೋಡೌನಿಂದ ಬಂದದ್ದೆಲ್ಲಾ ಒಂದು ಕಡೆ; ಮೋಸದ ಮಾಲೆಲ್ಲಾ ಒಂದು ಕಡೆ. ಈ ಮೋಸದ ಮಾಲಿನಲ್ಲಿ ಒಂದೊಂದು ಚೀಲದಲ್ಲೂ ಎಂಟು ಹತ್ತು ಸೇರು ಅಳತೆ ಕಮ್ಮಿ ಮಾಡಿಸಿರ್ತಾನೆ ಅದೆಲ್ಲಾ ತನಗೆ ಎದುರು ಬಿದ್ದೋರಿಗೆ ಬೇಕಾಗಿಯೇ ಕೊಡುತ್ತಾನೆ."

"ಬೇರೆ ಚೀಲಗಳಲ್ಲಿ ಮೋಸ ಇರುವುದಿಲ್ಲವೆ?"

"ಇಲ್ಲ, ಸರಕಾರೀ ಗೋಡೌನಿಂದ ಬಂದ ಚೀಲಗಳಲ್ಲಿ ಮೋಸ ಇರೊಲ್ಲ. ಇನ್ನೂ ಚೀಲಕ್ಕೆ ಎಂಟಾಣೆ, ರೂಪಾಯಿ ಲಾಭ ಬರೋ ರೀತಿಯೇ ಇರುತ್ತೆ. ಆ ಮಾಲು ವೆಂಕಟಪತಿ ಕುಣಿಸಿದ ಹಾಗೆ ಕುಣಿಯೋರಿಗೆ ಮಾತ್ರ ಮೀಸಲು."

"ಅಮಲ್ದಾರರು,ಸಿರಸ್ತೇದಾರರು ಕಣ್ಣು ಮುಚ್ಚಿಕೊಂಡು ಇರ್ತಾರೆಯೆ?"

"ಅಮಲ್ದಾರರಿಂದ ಹಿಡಿದು ಜವಾನನ ವರೆಗೆ ತಾಲೂಕು ಆಫೀಸಿನ ಪ್ರತಿಯೊಬ್ಬರಿಗೂ ಊಟ ಮಾಡಿಸುವಾಗ ಯಾರು ಅವನಿಗೆ ತೊಂದರೆ ಮಾಡ್ತಾರೆ ಹೇಳು. ಪ್ರತಿಯೊಬ್ಬನಿಗೂ ವೆಂಕಟಪತಿ ಬೇಕು."

"ಇಂಥ ಇಕ್ಕಟ್ಟಿದ್ದರೆ ಕೆಲಸಮಾಡುವುದು ಬಹಳ ಕಷ್ಟ. ದೊಡ್ಡ ದೊಡ್ಡವರೇ ಹೀಗಾದರೆ ಹೇಗೆ?"

"ಆ ಸೊಸೈಟಿ ಇನ್ಸ್ಪೆಕ್ಟರು ಗೋಳಾಡಿದ್ದು ನೋಡಿದೆಯಲ್ಲ. ಅವನೊಬ್ಬ ಶುದ್ಧ ಮುಟ್ಠಾಳ! ಪ್ರತಿಸಲವೂ ಅವನಿಗೆ ಏನಾದರೂ ಮರ್ಯಾದೆ ಕೊಡಬೇಕು. ಪುಗಸಟ್ಟೆ, ಅಕ್ಕಿ, ಸಕ್ಕರೆ, ಇವೆಲ್ಲಾ ಕೊಡಲಿಕ್ಕೆ ಯಾರಿಂದ ಸಾಧ್ಯ? ಇದರ ಜೊತೆಗೆ ವೆಂಕಟಪತಿಗೆ ಕೊಟ್ಟ ಹಾಗೆ ಇವನಿಗೂ ಕಬ್ಬಿಣದ ಸಾಮಾನುಗಳು, ಬಟ್ಟೆ ಇನಾಮುಗಳು ಕೊಡಬೇಕು. ಇವನನ್ನು ಇನ್

ಸ್ಪೆಕ್ಟರು ಅನ್ನೋನಿಗೆ ಬುದ್ಧಿಯಿಲ್ಲ. ನೀನು ಬಂದು ಸುಮಾರು ವರ್ಷ ವಾಯಿತು; ಜನರಲ್ ಬಾಡಿ ಮೀಟಿಂಗಿಗೆ ಬಂದದ್ದು ಬಿಟ್ಟರೆ ಎಂದಾದರೂ ಇನ್ಸ್‌ಪೆಕ್ಟರ್‌ಗೆ ಬಂದಿದಾನೇನು ? ಎದುರಿಗೆ ಹೋದಾಗ ಸಿಕ್ಕಾಪಟ್ಟೆ ಹಾರಾಡ್ತಾನೆ. ಏನಾದರೂ ಎಂಜಲು ಸಿಕ್ಕೋದಾದರೆ ಕೂಡಲೇ 'ಅಕೌಂಟ್ಸೆಲ್ಲಾ ಇಲ್ಲೇ ತಂದು ಬಿಡ್ರಿ. ಚೆಕ್ ಮಾಡಿಬಿಡ್ತೀನಿ' ಅಂತಾನೆ. ಏನು ಚೆಕ್ಕು ಮಾಡ್ತಾನೊ ಇವನದೊಂದೇಗೋಳು !"

ಆನಂದನಿಗೆ ಹೊಸದಾಗಿ ಜವಾಬ್ದಾರಿ ಏಕೆ ತೆಗೆದುಕೊಂಡೆನೋ ಎನ್ನಿಸಿತು. ರಾಂಪುರದ ಪ್ರಮುಖರುಗಳನ್ನೂ ತೃಪ್ತಿಪಡಿಸಬೇಕು, ಈ ಮೇಲಧಿಕಾರಿ ಬಕಪಕ್ಷಿಗಳನ್ನೂ ತೃಪ್ತಿಪಡಿಸಬೇಕು. ಈ ಮಧ್ಯೆ ಬಡವರ ಗೋಳನ್ನು ದೇವರೇ ವಿಚಾರಿಸಬೇಕಷ್ಟೆ ಎನ್ನಿಸಿತು ಅವನಿಗೆ. ಹೊಸದಾಗಿ ಮೂಡಿ ಬಂದ ಕುತ್ತುಗಳಿಂದ ಪಾರಾಗುವುದು ಸಾಧ್ಯವೇ ಇರಲಿಲ್ಲ. ಅಧಿಕಾರಿಗಳನ್ನು ಎದುರು ಹಾಕಿಕೊಳ್ಳುವುದರಿಂದ ತೊಂದರೆ ಶತಃಸಿದ್ಧವೆಂದು ಹೇಳಬೇಕಾಗಿರಲಿಲ್ಲ. ಊರಿನವರನ್ನು ಎದುರು ಹಾಕಿಕೊಂಡು ಊರಿನಲ್ಲಿ ಬಾಳುವ ಹಾಗೂ ಇಲ್ಲ. ಹೀಗಾಗಿ ಆನಂದ ಎರಡೂ ಪಕ್ಷಗಳನ್ನು ಅನುಸರಿಸಿಕೊಂಡು ಇದ್ದು ಕ್ರಮೇಣ ಸರಿಯಾದ ಮಾರ್ಗಕ್ಕೆ ಬರುವುದೇ ಉತ್ತಮವೆಂದುಕೊಂಡ. ಅದರಂತೆ ಅನುಸರಿಸಲೂ ಯತ್ನಿಸತೊಡಗಿದ. ಆದರೆ ಅದೂ ಕೂಡ ನ್ಯಾಯವಲ್ಲವೆಂದು ತೋರಿ, ಆ ಅಭಿಪ್ರಾಯವನ್ನು ಮನಸಿನಿಂದ ತೊಡೆದುಹಾಕಿದ. ತಾನು ಆ ದಿನ ರಾಜಣ್ಣನೆದುರು ಹಾಗೂ ಅವನ ಗೆಳೆಯರೆದುರು ಆಡಿದ ಮಾತುಗಳನ್ನೇ ಕಾರ್ಯಗತಮಾಡಲು ನಿಶ್ಚಯಿಸಿದ.

ವೆಂಕಟಪತಯ್ಯನ ವಿಷಯದಲ್ಲಿ ತನ್ನ ನಿಶ್ಚಯದಂತೆ ಅನುಸರಿಸಲು ಸಾಧ್ಯವಾಗಲಿಲ್ಲ. ವೆಂಕಟಪತಯ್ಯನ ಇಚ್ಛೆಯಂತೆ ಆಹಾರದಿನಸಿಗಳನ್ನು ಕೊಟ್ಟು ಬರದಂತೆ ತಾನೊಬ್ಬ ಪ್ರತಿಭಟಿಸಿದರೆ ಏನೂ ನಡೆಯಲಾರದು. ಇಡೀ ತಾಲೂಕಿನ ಗುಮಾಸ್ತರುಗಳೆಲ್ಲಾ ಅವನಂತೆ ಇರಬೇಕಾದರೆ, ತಾನು ಪ್ರತಿಭಟಿಸುತ್ತ ಹೋದಲ್ಲಿ ಮೂರ್ಖನಾಗುವುದು ಖಂಡಿತವೆಂದು ಆನಂದನಿಗೆ ಅನ್ನಿಸಿತು. ಆದ್ದರಿಂದ ಬಾಕಿಯ ಗುಮಾಸ್ತೆಗಳಂತೆಯೇ ತಾನೂ ವೆಂಕಟಪತಯ್ಯನನ್ನು ಅನುಸರಿಸತೊಡಗಿದ.

ಆನಂದ ಊರಿನ ಸ್ವಾರ್ಥಿಮುಖಂಡರುಗಳನ್ನು ಮಾತ್ರ ಅನುಸರಿಸುವುದು ಪೂರ್ಣವಾಗಿಯೇ ಬಿಟ್ಟುಬಿಟ್ಟ. ಸ್ವಾರ್ಥಿಗಳೆಲ್ಲರ ಕಳ್ಳತನ ತಿಳಿದ

ಆನಂದ ಅದನ್ನು ಪತ್ತೆಹಚ್ಚಿ ಸರಿಯಾದ ವ್ಯವಸ್ಥೆಮಾಡುವುದಕ್ಕಾಗಿ ಉಪಾಯ ಹೂಡಿದ. ತಾಲೂಕು ಆಫೀಸಿಗೆ ಹೋಗಿ ಅಲ್ಲಿದ್ದ ಒರಿಜಿನಲ್ ರೇಷನ್ ಕಾರ್ಡುಗಳ ರಿಜಿಸ್ಟರು, ಅಸೈನ್‌ಮೆಂಟ್ ರಿಜಿಸ್ಟರುಗಳನ್ನು ನಕಲುಮಾಡಿ ಕೊಂಡು, ಅದರಂತೆ ಹೊಸ ರೇಷನ್‌ಕಾರ್ಡುಗಳನ್ನು ಬರೆದು ಅಮಲ್ದಾರ ರಿಂದ ಅವುಗಳಿಗೆ ರುಜುಹಾಕಿಸಿಕೊಂಡು ಬಂದು ಅವುಗಳನ್ನು ಎಲ್ಲರಿಗೂ ಹಂಚತೊಡಗಿದ. ಹೊಸ ರೇಷನ್‌ಕಾರ್ಡುಗಳಿಂದ, ಇದು ವರೆಗಿದ್ದ ರೇಷನ್ ಕಾರ್ಡುಗಳ ಮುಖಾಂತರ ನಡೆಯುತ್ತಿದ್ದ ಮೋಸ ಬಯಲಾಯಿತು. ಶಾನು ಭೋಗ ವಾಮನರಾಯರು, ರೇಷನ್‌ಕಾರ್ಡುಗಳಿಗೆ ಅಮಲ್ದಾರರ ರುಜು ವಿನ ಸೀಲು ಒತ್ತಿಕೊಂಡು ಸುಳ್ಳುಕಾರ್ಡುಗಳನ್ನು ಸೃಷ್ಟಿಸಿ ಮಾರುತ್ತಿದ್ದರು. ಕೃತ್ರಿಮ ರೇಷನ್‌ಕಾರ್ಡುಗಳಿಂದ ಲೆಕ್ಕವಿಲ್ಲದಷ್ಟು ಮಾಲು ಕಳ್ಳಪೇಟೆಗೆ ಸಾಗುತ್ತಿತ್ತು. ಆನಂದ ಅವುಗಳೆಲ್ಲವನ್ನೂ ತನ್ನ ಬಳಿ ಇಟ್ಟುಗೊಂಡು ಹೊಸ ಕಾರ್ಡುಗಳ ಪ್ರಕಾರ ದಿನಸಿ ಹಂಚತೊಡಗಿದ. ಇದರಿಂದ ಬಡಜನ ಹಾಗು ಹಳ್ಳಿಗರಿಗೆ ನ್ಯಾಯವಾದ ರೀತಿಯ ಹಂಚಿಕೆದೊರೆತು ಎಲ್ಲರಿಗೂ ಆನಂದನ ಬಗ್ಗೆ ಆದರ ಮೂಡಿತು. ಆದರೆ ಮೊಟ್ಟಮೊದಲ ಬಾರಿಗೆ ಆನಂದ ಮುಖಂಡರೆನಿಸಿದ ಕಳ್ಳಪೇಟೆಯ ಕದೀಮರಬಳಿ ವಿರೋಧಕಟ್ಟಿಕೊಂಡ.

ಧರಣಯ್ಯನ ಏಜೆಂಟ್ ಗುಕ್ಕ ಅಯ್ಯಣ್ಣ ಹಳೆಯ ರೇಷನ್‌ಕಾರ್ಡು ಹಿಡಿದು ಮಾಲು ತೆಗೆದುಕೊಂಡುಹೋಗಲು ಆಳುಗಳನ್ನು ಕರೆದುಕೊಂಡು ಸೊಸೈಟಿಗೆ ಬಂದ. ಆನಂದ ಅಯ್ಯಣ್ಣನಿಗೆ ಹೊಸ ಕಾರ್ಡುಕೊಟ್ಟು ಅದ ರಂತೆ ದಿನಸಿಯನ್ನು ಕೊಟ್ಟ. ಎಲ್ಲರಿಗೂ ಮಾಡಿದ ಹಾಗೆಯೇ ತನಗೂ ಮಾಡುತ್ತಾನಲ್ಲಾ ಎಂದು ಅಯ್ಯಣ್ಣನಿಗೆ ಒಳಗೊಳಗೆ ಸಿಟ್ಟು ಕುದಿಯ ಲಾರಂಭಿಸಿತು. ಆದರೂ ಸೌಮ್ಯವಾಗಿ, ತನಗೆ ಹೊಸ ಕಾರ್ಡಿನ ವಿಷ ಯವೇ ತಿಳಿಯದವನಂತೆ,

"ಇದೇನು ಸ್ವಾಮಿ, ಮೊ....ಮೊ...ಮೊ... ಮೊದಲು ಕೊ...ಕೊ.... ಕೊ...ಕೊಡುತಿದ್ದ ಹಾಗೆ ಕೊಡ್ರೀ. ಇಷ್ಟು ಸ್ವಲ್ಪ ನ....ನ...ನಮಗೆ ಸ್ಟ...ಸ್ಟ....ಸ್ಟಾಲದ್ರೀ" ಎಂದ ತನ್ನ ಒಕ್ಕಲು ಭಾಷೆಯಲ್ಲಿ.

"ಹಳೇಕಾರ್ಡುಪ್ರಕಾರ ಕಾಳು ಕೊಡಕೂಡದು ಅಂತ ಆರ್ಡರಾಗಿದೆ. ಹೊಸ ಕಾರ್ಡು ಪ್ರಕಾರವೇ ಇನ್ನುಮೇಲೆ ಕಾಳು ಹಂಚಿಕೆ."

"ಹ..ಹ..ಹ..ಹಾಗಂದರೆ ಏನು ಮಾಡೋದು ಸ್ವಾಮಿ. ಜ.. ಜ..ಜನ ನೋಡಿ ಕಾಳು ಕೊಡ್ರೀ. ಕ..ಕ..ಕಾರ್ಡಿನಲ್ಲಿ ಎಷ್ಟು ಜನ ಇದ್ದಿವಿ ನೋಡ್ರಿ. ಅದರಂತೆ ಕೊಡ್ರೀ ಕಾಳ್ನ."

"ಹಳೆಯ ಕಾರ್ಡಿನಲ್ಲಿ ಇಪ್ಪತ್ತೈದು ಜನದ ಲೆಕ್ಕ ಇದೆ. ಆದರೆ ಅದು ಸುಳ್ಳು ಲೆಕ್ಕ. ನ್ಯಾಯವಾಗಿರಬೇಕಾದ್ದು ಹತ್ತುಜನ. ಅದರಂತೆ ಹೊಸ ಕಾರ್ಡಿನಲ್ಲಿದೆ. ಹಳೇಕಾರ್ಡಿನಂತೆ ನಿಮಗೆ ಮೂಟೆಮೂಟೆ ಹೊರಿಸಿ ಕಳಿಸಿದರೆ ಬಡಜನ ಏನು ತಿನ್ನಬೇಕು? ನಿಮ್ಮಂತಹ ತಿಳಿದವರೇ ಹೀಗೆ ಮೋಸ ಮಾಡ್ತೀರಲ್ರೀ. ಇಷ್ಟು ಅನ್ಯಾಯ ಇರಬಾರದು ಮೇಷ್ಟ್ರೇ."

"ಸ್ಹು..ಸು..ಸುಳ್ಳು ಕಾರ್ಡಲ್ಲ ಸ್ವಾಮಿ. ನಾವೂ ಧ. ಧ..ಧ.. ಧರಣಯ್ಯನೋರ ಮನೆಲೆಕ್ಕಕ್ಕೆ ಸೇರಿದ್ದೀವಿ. ಎಲ್ಲಾ ಒಟ್ಟು ಇಪ್ಪತ್ತೈದು ಜ..ಜನ ಆಗತ್ತೆ."

"ಇನ್ನು ಚರ್ಚಿಸಬೇಡ್ರೀ ಅಯ್ಯಣ್ಣನವರೇ. ಸುಮ್ಮನೆ ಕೊಟ್ಟಷ್ಟು ತೆಗೆದುಕೊಂಡು ಹೋಗಿ."

ಒಳ್ಳೆಯ ಮಾತಿಗೆ ಆನಂದ ಬಗ್ಗುವುದಿಲ್ಲವೆಂದರಿತ ಅಯ್ಯಣ್ಣ ಬೆದರಿಕೆ ಹಾಕತೊಡಗಿ,

"ಒಳ್ಳೆಯ ಮಾತಿನಲ್ಲಿ ಮಾಲು ಕೊ...ಕೊ....ಕೊಡ್ರಿ. ಆ ಮೇಲೆ ಚ...ಚ...ಚ...ಚನ್ನಾಗಿರಲ್ಲ" ಎಂದು ಆನಂದನ ಕಡೆ ತರ್ಜನಿಯನ್ನು ತೋರಿಸುತ್ತ ಹೇಳಿದ, ಗಡಸು ದನಿಯಲ್ಲಿ.

"ನನಗೆ ಬೆದರಿಕೆ ಹಾಕಲು ಬರಬೇಡಿ ಮೇಷ್ಟ್ರೇ. ಒಳ್ಳೆಯ ಮಾತಿನಲ್ಲಿ ಹೇಳಿದರೂ ಕೇಳದಿದ್ದರೆ ನಾನೇ ನಿಮ್ಮನ್ನು ಆಚೆಗೆ ಕಳಿಸಬೇಕಾಗತ್ತೆ. ಮಾರಾಟಕ್ಕೆ ತೊಂದರೆಯಾಗುತ್ತಿದೆ. ಸುಮ್ಮನೆ ಹೊರಟು ಹೋಗಿ."

ತನ್ನನ್ನು 'ಆಚೆಗೆ ಕಳಿಸುತ್ತೇನೆ' ಎಂದನಲ್ಲಾ, ಎಂದು ಅಯ್ಯಣ್ಣನ ಮನಸ್ಸುಕೆಡವಿಕೊಂಡು ಎದ್ದಿತು. ಹೆಡೆಮೆಟ್ಟಿಸಿಕೊಂಡ ಸರ್ಪದತೆ ಸಿಡಿದೆದ್ದು,

"ಏನೋ ಒಳ್ಳೆ ಮಾತಿನಲ್ಲಿ ಕೆ...ಕೆ...ಕೆ...ಕೇಳಿದರೆ, ತ...ತ... ತಮಾಷೆ ಮಾಡ್ತೀಯಾ ನನ್ನ. ಆಚೆಗೆ ಕಳಿಸ್ತಾನಂತೆ. ಅದು ಹೆಂಗೆ ಕಳಿಸ್ತಾನೋ ನ...ನ....ನಾನೂ ನೋ....ನೋಡ್ತೀನಿ ಒಂದು ಕೈ. ನ... ನ...ನನಿಗೆ ಕಾ...ಕಾ...ಕಾ...ಕಾಳು ಕೊಡು, ಇಲ್ಲದಿದ್ದರೆ ಸ್ಹೊ...ಸ್ಹೊ... ಸ್ಹೊ...ಸ್ಹೊಸೈಟಿ ಬ್ಹಾ....ಬ್ಹಾಗಿಲು ಮುಚ್ಚು" ಎಂದ ಆನಂದನ ಮೇಲೆ ಹರಿಹಾಯ್ದು ಬಂದು.

"ಜೈಲರ್ ಇವನನ್ನ ಆಚೆಗೆ ಕಳಿಸೋ ತಲೆಯೆಲ್ಲಾ ಮಾತಾಡ್ತಾ ಇದ್ದಾನೆ" – ಎಂದು ಆನಂದ ಸಿಟ್ಟಿನಿಂದ ಕುಳಿತಿದ್ದ ಕುರ್ಚಿ ಬಿಟ್ಟು ಈಚೆಗೆ ಬಂದ.

"ಜ....ಜ...ಜ...ಜವಾನಂಗೆ ಹೇಳ್ತೀಯಾ ಹೊರಗೆ ಕ...ಕ...ಕಳಿ ಸೂಂತ. ನಿ...ನಿ...ನಿನ್ನ ಗತಿ ನೋಡ್ಕೋ ಮೊ...ಮೊ...ಮೊದ್ದು." ಎಂದವನೇ ಅಯ್ಯಣ್ಣ ತೋಳನ್ನು ಮೇಲಕ್ಕೆ ಮಡಚಿ, ತನ್ನ ಹಿಂದೆ ಬಂದಿದ್ದ ವರಿಗೆ "ಎಳಕೊಳ್ರಲೇ ಚ್ಚಿ...ಚ್ಚಿ...ಚ್ಚೀಲಗಳಾ...!" ಎಂದು ಬಾಗಿಲಿಗೆ ಅಡ್ಡವಾಗಿ ನಿಂತಿದ್ದ ಆನಂದನ ರಿಟ್ಟೆ ಹಿಡಿದು ಈಚೆಗೆ ಎಳೆದ, ತನ್ನ ಸರ್ವಾ ಧಿಕಾರವನ್ನು ತೋರಿಸುತ್ತ.

ಆನಂದನನ್ನು ಎಳೆಯುವುದೇ ತಡ, ಜೈಲರ್ ಅಯ್ಯಣ್ಣನ ಕುತ್ತಿಗೆಗೆ ಕೈಹಾಕಿ ಹಿಂದು ಹಿಂದಕ್ಕೆ ತಳ್ಳಿಕೊಂಡು ನಡೆದ. ಅಯ್ಯಣ್ಣ ಬಲಗೈಯಲ್ಲಿದ್ದ ರೇಷನ್ ಕಾರ್ಡನ್ನು ಕೆಳಗೇ ಬಿಟ್ಟು ಜೈಲಾನನ ಕೆನ್ನೆಗೆ ಬಲವಾಗಿ ಹೊಡೆದ. ಕಣ್ಣುಮುಚ್ಚಿ ಕಣ್ಣು ತೆರೆಯುವುದರಲ್ಲಿ ಸೊಸೈಟಿಯಲ್ಲಿ ದೊಡ್ಡ ಗಲಭೆ ಯಾಯಿತು. ಜನಗಳೆಲ್ಲಾ ಅಯ್ಯಣ್ಣನನ್ನೂ ಅವನ ಹಿಂದೆ ಬಂದಿದ್ದವರನ್ನೂ ಈಚೆಗೆ ಎಳೆದುಕೊಂಡು ಬಂದರು. ಅಯ್ಯಣ್ಣ ಸಿಟ್ಟಿನಿಂದ ಜನಗಳ ಹಿಡಿತ ದಿಂದ ಬಿಡಿಸಿಕೊಳ್ಳಲು ಹಿಗ್ಗಾ ಮುಗ್ಗಾ ಎಳೆದಾಡುತ್ತ

"ತ್ಥು...ತ್ಥು...ತ್ಥು...ತ್ಥುರಕ ಸ್ಥು...ಸ್ಥೂ...ಮಗನೆ, ಇವತ್ತು ನಿನ್ನ ಶ್ಥಿ...ಶ್ಥಿ...ಶ್ಥೀರಿಸ್ದಿದ್ರೆ ಅಯ್ಯಣ್ಣಲ್ಲ ನಾನು. ಏನ್ ಗು...ಗು...ಗು... ಗುಮಾಸ್ತಾ. ಈ ಊರ್ನಾಗೆ ಇಲ್ಲಾ, ನಿ...ನಿ...ನೀನಿರಬೇಕು, ಇಲ್ಲಾ ನ....ನ...ನಾನಿರಬೇಕು. ಕ...ಕ...ಕ...ಕತ್ತಿಹಿಡಿದು ನೂಕಿಸ್ತೀಯಾ ನನ್ನ. ಧ...ಧ...ಧ...ಧರಣಯ್ಯನೋರ ಕೈಲಿ ಹೇಳ್ತೀನಿ" ಎಂದು ಹಿಡಿತದಿಂದ ಕೊಡಲಿಕೊಂಡು ಧರಣಯ್ಯನನ್ನು ಕರೆತರಲು ಹೋದ.

ಸ್ವಲ್ಪ ಹೊತ್ತಿನೊಳಗೆ ಧರಣಯ್ಯ, ಆಂಜನಪ್ಪ, ವಾಮನರಾಯರು, ಗುರುರಾಜರಾಯರು, ಚಿನ್ನಪ್ಪ ಎಲ್ಲರೂ ಬಂದರು. ಸೊಸೈಟಿಯಲ್ಲಿ ಗಲಾಟೆ ಯಾಗುತ್ತಿದೆಯೆಂಬ ಸುದ್ದಿ ಕೇಳಿ ಸಬ್‌ಇನ್‌ಸ್ಪೆಕ್ಟರು ಓಡಿಬಂದರು.

ಧರಣಯ್ಯ ಎಲ್ಲರೆದುರಿನಲ್ಲಿ ಆನಂದನ ಕಡೆ ಧಾವಿಸಿ ಬಂದ,

"ನನ್ನ ಕಾರ್ಡಿಗೆ ಕಾಳು ಕೊಡೋಲ್ಲ ಅಂದೆಯಲ್ಲಾ ಯಾಕೆ ಕೊಡಲ್ಲ" ಎಂದು ಗೊಗ್ಗರು ದನಿಯಲ್ಲಿ ಪ್ರಶ್ನಿಸಿದ.

ಆನಂದ ಶಾಂತವಾಗಿಯೇ ಹೇಳಿದ—

"ಇಲ್ಲಿ ಇಷ್ಟು ಜನ ಕಾಳಿಗಾಗಿ ಬಂದು ನಿಂತಿದಾರೆ. ಅವರನ್ನು ಕೇಳಿ ಹೇಳ್ತಾರೆ, ನಾನು ಕಾಳು ಕೊಡೊಲ್ಲ ಅಂದೆನೆ ಹೇಗೆ? ಅಂತ. ನಾನು ಹಳೆಯ ಕಾರ್ಡಿಗೆ ಕಾಳು ಕೊಡೊಲ್ಲ ಎಂದೆ ಅಷ್ಟೆ."

"ಹಳೇ ಕಾರ್ಡಿನಲ್ಲಿರುವಂತೆ ಹೊಸ ಕಾರ್ಡೂ ಇರಬೇಕಲ್ಲ. ಇಷ್ಟಕ್ಕೂ ಹೊಸ ಕಾರ್ಡು ಕೊಡಬೇಕಾದೋನು ನಾನೇ ತಾನೆ. ನಿನಗೆ ಹೇಗಯ್ಯ ಸಿಕ್ಕಿದುವು ಈ ಕಾರ್ಡುಗಳು?" ವಾಮನರಾಯರು ಎದೆಸೆಟಿಸಿಕೊಂಡು ಕೇಳಿದರು ದರ್ಪದಿಂದ.

"ಕಾರ್ಡು ಕೊಡಲು ಅಮಲ್ದಾರರೇ ಆರ್ಡರು ಮಾಡಿದರು. ಇದು ವರೆಗೆ ಚಲಾವಣೆಯಲ್ಲಿರುವ ಕಾರ್ಡುಗಳು ಮೋಸದ ಕಾರ್ಡುಗಳು. ಈಗ ಬಂದಿರೋ ಕಾರ್ಡುಗಳು ತಾಲೂಕಾಫೀಸಿನಲ್ಲಿರುವ ಖಾನೇಷುಮಾರಿ ಲೆಕ್ಕದ ಪ್ರಕಾರ ಮಾಡಿದ್ದು."

"ಸುಳ್ಳು ಕಾರ್ಡಂತೆ. ಹೇಗೆ ಸಾಬೀತ್ ಮಾಡುತ್ತೀರ್ರಿ. ಅದರ ಮೇಲೆ ಅಮಲ್ದಾರರ ರುಜು ಇಲ್ಲವೆ? ಏನಯ್ಯ ವಾಮನರಾಯ ಸುಳ್ಳು ಕಾರ್ಡು ಬರೆದುಕೊಟ್ಟೆಯೇನಯ್ಯ ನೀನು? ಸುಳ್ಳು ಕಾರ್ಡಂತೆ ಸುಳ್ಳು ಕಾರ್ಡು! ಕಾರ್ಡಿಗೆ ಸರಿಯಾಗಿ ಮಾಲು ಕೊಟ್ಟರೆ ತನ್ನ ಎಂಜಲಿಗೆ ಎಲ್ಲಿ ಕಮ್ಮಿಯಾಗತ್ತೋ ಅಂತ ಮಾಡ್ತ ಇದೀರ. ರುಜುವಾತು ತೋರಿಸ್ರೀ" ಆಂಜನಪ್ಪ ನೆಗೆದಾಡಿದ.

"ಎಂಜಲು ತಿನ್ನುವ ಕೆಲಸ ಯಾರದ್ದು ಅನ್ನೋದು ಹೇಳುತೀನಿ ಸ್ವಲ್ಪ ತಾಳಿ."

ಆನಂದ ಒಳಗೆ ಹೋಗಿ ತಾನು ಇದುವರೆಗೆ ಸಂಗ್ರಹಿಸಿದ್ದ ಹಳೆಯ ಕಾರ್ಡುಗಳು, ತಾಲ್ಲೂಕಾಫೀಸಿನಿಂದ ತಂದಿದ್ದ ರಿಜಿಸ್ಟರುಗಳನ್ನು ಹೊರಗೆ ತಂದು,

"ಈ ಕಾರ್ಡುಗಳೆಲ್ಲಾ ಧರಣಯ್ಯನವರ ಕಾರ್ಡಿನ ಹಾಗೆಯೇ ಮೋಸದ ಕಾರ್ಡುಗಳು. ಇವು ಹೇಗೆ ಬಂದುವು. ಯಾರು ಕೊಟ್ಟರು ಅನ್ನೋದು ನನಗೆ ಗೊತ್ತಿಲ್ಲ. ನಾನು ತಪ್ಪುಮಾಡಿರುವುದು ಖಂಡಿತವೆಂದು ಸಾಧಿಸಿದರೆ ನಾನೂ ಸಾಧಿಸುತ್ತೇನೆ. ಈ ಕಾರ್ಡುಗಳನ್ನೆಲ್ಲಾ ಅಮಲ್ದಾರರಿಗೆ ಕಳಿಸು ತ್ತೇನೆ ಅವರೇ ನಿಜವನ್ನು ಹೊರಗೆಡವಲಿ" ಎಂದು ಹೇಳಿದ.

ತಾನು ಲಾಭಕ್ಕಾಗಿ ಬರೆದುಕೊಡುತ್ತಿದ್ದ ರೇಷನ್ ಕಾರ್ಡುಗಳನ್ನು ಅಮಲ್ದಾರರ ಬಳಿ ಕಳಿಸುತ್ತೇನೆಂದು ಆನಂದ ಹೇಳಿದಾಗ ವಾಮನರಾಯರು ತಣ್ಣಗೆ ಆದರು. ಹರಳೆಣ್ಣೆ ಕುಡಿದವನ ಮುಖದ ಹಾಗಾಗಿತ್ತು ಅವರ ಮುಖ.

ಬಂದಿದ್ದವರು ರಿಜಿಸ್ಟರನ್ನು ತೆಗೆದು ಕಾರ್ಡುಗಳೊಂದಿಗೆ ಹೋಲಿಸ ತೊಡಗಿದರು. ಎಷ್ಟೋ ಕಾರ್ಡುಗಳಲ್ಲಿ, ರಿಜಿಸ್ಟರಿನಲ್ಲಿಟ್ಟ ನಂಬರಿಗೂ ಕಾರ್ಡಿನ ನಂಬರಿಗೂ ವ್ಯತ್ಯಾಸವಿತ್ತು. ನಿಜವಾಗಿ ಇರಬೇಕಾಗಿದ್ದ ಜನ ಸಂಖ್ಯೆಗಿಂತಲೂ ದ್ವಿಗುಣ, ತ್ರಿಗುಣ ಸಂಖ್ಯೆಗಳಿದ್ದುವು. ವಾಮನರಾಯರ ಬಳಿ ದಾಖಲೆಗೆ ಇದ್ದ ರಿಜಿಸ್ಟರು ಕೇಳಿದರು. ವಾಮನರಾಯರು ಮಾತಾಡದೆ ಸುಮ್ಮನೆ ಕುಳಿತುಬಿಟ್ಟರು. ರೇಷನ್ ಕಾರ್ಡುಗಳನ್ನು ಕೊಟ್ಟಿದ್ದಕ್ಕೆ ಅವರ ಬಳಿ ದಾಖಲೆಯೇ ಇರಲಿಲ್ಲ.

ವಾಮನರಾಯರು ಮಾಡುತ್ತಿದ್ದ ಮೋಸ ಎಲ್ಲರಿಗೂ ತಿಳಿದು ಹೋಯಿತು. ಸಬ್‌ಇನ್ಸ್‌ಪೆಕ್ಟರು ವಾಮನರಾಯರ ಕಡೆ ತಿರುಗಿ,

"ಚೆನ್ನಾಗಿದೆ ವಾಮನರಾಯರೇ. ಮರ್ಯಾದಸ್ಥರಾಗಿ ಇಂಥಾ ಹಲ್ಕಾ ಕೆಲಸ ಮಾಡೋದೇ. ಆತನ್ನ ಎಂಜಲು ತಿನ್ನೋನು, ಹಾಗೆ-ಹೀಗೆ ಅಂದು ಎಲ್ಲರೂ ಮಾತಾಡಿದರಲ್ಲಾ, ಆತ ಈ ಕಾರ್ಡುಗಳನ್ನೆಲ್ಲಾ ಅಮಲ್ದಾರರ ಮುಂದಿಟ್ಟು ರಿಪೋರ್ಟು ಮಾಡಿದರೆ ನಿಮ್ಮನ್ನು ಸುಮ್ಮನೆ ಬಿಡ್ತಾರೆಯೆ. ಧರಣಯ್ಯನೋರು ಹೇಳಿದರು; ನೀವು ಕೇಳಿದಿರಿ. ಈಗ ಹೇಳಿ ನ್ಯಾಯ ವಾಗಿರೋರು ಯಾರು?—ನೀವೂ ಅಷ್ಟೇ ಧರಣಯ್ಯನೋರೆ ನಿಮ್ಮ ವ್ಯವ ಹಾರ ಎಷ್ಟು ಇದ್ದರೂ ಹೀಗೆ ಬಯಲಿಗೆ ಬರೋ ಹಾಗೆ ಮಾಡಿಕೊಳ್ಳೋದು ಚೆನ್ನಲ್ಲ—ನೀವಾದರೂನೂ ವಿಷಯ ಹೀಗೆ ಅನ್ನೋದು ತಿಳಿದು ಯಾಕೆ ಸುಮ್ಮನಿರಬಾರದಾಗಿತ್ತು ಆನಂದರಾಯರೆ" ಎಂದು ಮೂವರಿಗೂ ಒಂದೇ ಸಲ ಒಳ್ಳೆಯ ಮಾತಾಡಿದ ಶಾಸ್ತ್ರ ಮಾಡಿದರು.

ಎಲ್ಲರೂ ಹೊರಟು ಹೋದ ಮೇಲೆ ಆನಂದ ಮತ್ತೆ ವ್ಯಾಪಾರ ಮಾಡಲು ಕುಳಿತ.

ಸಂಜೆ ಆನಂದ ಮನೆಯಲ್ಲಿ ಕುಳಿತಿದ್ದಾಗ ಅಂಜನಪ್ಪನ ಕಾರು ಮನೆಯ ಮುಂದೆ ಬಂದು ನಿಂತಿತು. ಆಂಜನಪ್ಪನ ಜವಾನ ಆನಂದನನ್ನು ಕರೆಯಲು ಬಂದಿದ್ದ. ಅನಿರೀಕ್ಷಿತವಾಗಿ ಅಂಜನಪ್ಪ ತನಗೆ ಹೇಳಿ ಕಳು ಹಿಸಿರುವುದು ಕಂಡು ಆನಂದನಿಗೆ ಆಶ್ಚರ್ಯವಾಯಿತು. ಅದರಲ್ಲೂ ಕಾರು

ಕಳಿಸಬೇಕಾದರೆ! ಏನೋ ಮಹತ್ವವಿದೆಯೆಂದುಕೊಂಡ ಆನಂದ ಕಾರಿನಲ್ಲಿ ಕುಳಿತು ನಡೆದ.

ಆನಂದನ ಊಹೆ ಸರಿಯಾಗಿತ್ತು. ಆ ದಿನದ ಘಟನೆಯಿಂದ ಎಚ್ಚರಗೊಂಡಿದ್ದ. ತಾನು ರೂಢಿಸಿಕೊಂಡಿದ್ದ ಕಳ್ಳಭಟ್ಟಿಯ ತಯಾರಿಕೆಗೆ ಆನಂದನ ಸಹಾಯ ಅಗತ್ಯವಿತ್ತು. ಹಿಂದೆ ಒಂದೆರಡು ಸಲ ಆನಂದ ಕರಿಯಣ್ಣನನ್ನು ಸೊಸೈಟಿಯಿಂದ ಬರಿಗೈಯಲ್ಲಿ ಕಳಿಸಿದ್ದುದೂ ಅವನ ಮನಸಿನಲ್ಲಿತ್ತು. ದುಡ್ಡಿನ ಆಸೆ ತೋರಿಸಿ, ಒಳ್ಳೆಯ ಮಾತಿನಿಂದ ಆನಂದನನ್ನು ಒಲಿಸಿಕೊಳ್ಳುವ ಉದ್ದೇಶದಿಂದ ಕಾರು ಕಳುಹಿಸಿ ಕರೆಸಿಕೊಂಡಿದ್ದ, ಏಕಾಂತವಾಗಿ.

ಆನಂದ ಬರುತ್ತಲೂ, ಅಂಜನಪ್ಪ ಅವನನ್ನು ಸ್ವಾಗತಿಸಿ ಕುರ್ಚಿಯ ಮೇಲೆ ಕೂಡಲು ಹೇಳಿದ. ಜವಾನನಿಗೆ ಹೋಟಲಿನಿಂದ ಕಾಫಿ ತರಲು ಹೇಳಿ ಕಳುಹಿಸಿದ. ಆನಂದ ಏನೋ ತಂತ್ರವಿದೆಯೆಂದುಕೊಂಡನು.

"ಈ ಉಪಚಾರವೆಲ್ಲಾ ಯಾಕೆ ಅಂಜನಪ್ಪನವರೇ, ನಾನು ಇದೇ ಕಾಫಿ ಕುಡಿದುಬಂದಿದ್ದೇನೆ ಈಗ ಏನೂ ಬೇಡಿ" ಎಂದ.

"ಛೆ...ಛೆ...ಹಾಗಲ್ಲ" ಎಂದು ಅಂಜನಪ್ಪ, ತಾನೂ ಒಂದು ಕುರ್ಚಿಯ ಮೇಲೆ ಕುಳಿತು ಸಿಗರೇಟು ಹಚ್ಚುತ್ತಾ,

"ಅಂತೂ ಬಹಳ ಧೈರ್ಯ ಮಾಡಿಬಿಟ್ಟಿರಿ ಆನಂದ. ಇದುವರೆಗೆ ಇಷ್ಟು ಮುಂದುವರಿದು ಯಾವ ಗುಮಾಸ್ತರೂ ನಿಂತಿರಲಿಲ್ಲ" ಎಂದ.

"ಯಾವ ವಿಷಯ?" ಆನಂದ ತಿಳಿಯದವನ ಹಾಗೆ ಕೇಳಿದ.

"ಅದೇ ರೇಷನ್ ಕಾರ್ಡುಗಳ ವಿಷಯ. ವಾಮನರಾಯನ ಗುಟ್ಟು ಚೆನ್ನಾಗಿ ಗೊತ್ತುಹಚ್ಚಿದಿರಿ ಪರವಾಗಿಲ್ಲ. ಇವತ್ತಿನದಲ್ಲ ಈ ಬದುಕು, ವಾಮನರಾಯ ಬಹಳ ದಿನದಿಂದ ಹೀಗೆ ಮಾಡ್ತಾ ಬಂದಿದ್ದ. ಈಗ ಸಿಕ್ಕಿ ಬಿಟ್ಟ ನೋಡಿ."

"ನಾನು ಯಾರನ್ನೂ ದ್ವೇಷಿಸುವುದಿಲ್ಲ ಅಂಜನಪ್ಪನವರೇ. ಯಾವ ಮನುಷ್ಯನೂ ನ್ಯಾಯವಾಗಿರೋದು ನಾನು ಕಾಣೆ. ನಾನು ಕೂಡ ನ್ಯಾಯವಾಗಿದೀನಿ ಅಂತ ಹೇಳಿಕೊಳ್ಳುವುದಿಲ್ಲ. ಅನ್ಯಾಯಕ್ಕೂ ಒಂದು ಮಿತಿಯಿದೆ. ವಾಮನರಾಯರಂಥವರು ಹೀಗೆ ಮಾಡ್ತಾರೆ ಅಂತ ನನಗೆ ಖಂಡಿತ ತಿಳಿದಿರಲಿಲ್ಲ."

"ಈಗ ಆ ಕಾರ್ಡುಗಳೆಲ್ಲಾ ಏನು ಮಾಡಿದಿರಿ? ಅವುಗಳನ್ನು ಅಮಲ್ದಾರರ ಹತ್ತಿರ ಕಳಿಸ್ತೀರಾ?"

"ಇಲ್ಲ, ಕಳಿಸುವುದಿಲ್ಲ. ನನಗೆ ವಾಮನರಾಯರ ಮೇಲೆ ಕೋಪವಿಲ್ಲ. ಅವರು ಹಾಗೆ ಮಾಡಬಾರದಾಗಿತ್ತು ಎಂದು ಪಶ್ಚಾತ್ತಾಪ ಆಗುತ್ತಿದೆ ಅಷ್ಟೆ. ಒಂದು ವೇಳೆ ನಾನು ಕಾರ್ಡುಗಳನ್ನು ಕಳುಹಿಸದೆ ಹೋದರೂ ಅವರಿಗೆ ವಿಷಯ ತಿಳಿದೇ ಇದೆ. ಏನೋ ಹೋಗಲಿ ಎಂದು ಸುಮ್ಮನಾಗಿದ್ದಾರೆ ಅಮಲ್ದಾರರು. ಈಗ ಮತ್ತೆ ಕೋಪ ಬರುವ ಹಾಗೆ ಮಾಡುವುದು ಒಳ್ಳೆಯದಲ್ಲ."

"ಹೌದು, ಅದೂ ಸರಿ ಅನ್ನಿ. ಆದರೆ ಒಂದು ಸಲ ಬುದ್ಧಿ ಕಲಿಸದಿದ್ದರೆ ಹೇಗೆ? ಆ ಧರಣಯ್ಯನೂ ಅಷ್ಟೆ. ತಾನೇನು? ತನ್ನ ಅಂತಸ್ತೇನೂ ಅನ್ನುವ ಜ್ಞಾನವಿಲ್ಲದೆ ಇಷ್ಟಬಂದ ಹಾಗೆ ಮಾಡಲಿಕ್ಕೆ ಹೋಗ್ತಾನೆ ಆ ಶಾನುಭೋಗನ ಜೊತೆ ಸೇರಿಕೊಂಡು. ನನಗೆ ಇವರ ನಡವಳಿಕೆಯೇ ಸರಿ ಬೀಳೋದಿಲ್ಲ. ಏನಂದ್ರೆ ಎಲ್ಲರೂ ಒಂದು ರೀತಿ ಅನುಸರಿಸಿಕೊಂಡು ಹೋಗಬೇಕು ಅನ್ನೋದು ನನ್ನ ಭಾವನೆ."

ಹೋಟೇಲು ಮಾಣಿ ಕಾಫಿಯನ್ನು ತಂದ. ಇಬ್ಬರೂ ಕಾಫಿಯನ್ನು ಸವಿದರು. ಆನಂದ ಸಮಯವಾದುದನ್ನು ಕಂಡು,

"ನನಗೆ ಹೊತ್ತಾಯಿತು. ನೀವು ಕರೆಸಿದ ವಿಷಯ ಗೊತ್ತಾಗಲಿಲ್ಲ" ಎಂದ, ತ್ವರೆಯನ್ನು ಸೂಚಿಸುತ್ತ.

ಅಂಜನಪ್ಪ ದೇಶಾವರದ ನಗೆ ನಗುತ್ತ ಹೇಳಿದ—

"ನಿಮಗೆ ಒಂದು ಮಾತು ಹೇಳೋದಿತ್ತು ಅದಕ್ಕೇ ಕರೆಸಿದೆ. ನಮಗೆ ಸ್ವಲ್ಪ ಬೆಲ್ಲದ ಅವಶ್ಯಕತೆ ಜಾಸ್ತಿ. ಈಗಲೇ ಅಂತ ಅಲ್ಲ. ಯಾವಾಗಲೂ ಅಷ್ಟೆ. ಹಿಂದೆ ಒಂದೆರಡು ಸಲ ನಮ್ಮ ಕರಿಯಣ್ಣ ಬಂದಿದ್ದಾಗ ನೀವು ಹೆಚ್ಚಿಗೆ ಕೊಡಲಿಕ್ಕೆ ಆಗೊಲ್ಲ ಅಂದರಂತೆ. ಅದಕ್ಕೋಸ್ಕರ......"

"ನಿಮಗೆ ಎಷ್ಟು ಬೇಕು?"

"ನಿಮಗೆ ಎಷ್ಟು ಸಾಧ್ಯವೋ ಅಷ್ಟೇ ಕೊಡಿ. ನಾನು ಇಷ್ಟೇ ಕೊಡಬೇಕು ಅನ್ನೋಲ್ಲ. ಆ ಅಯ್ಯಣ್ಣ ಇವತ್ತು ತರಲೆ ಮಾಡಿದನಲ್ಲ ಹಾಗೆಲ್ಲಾ ಮಾಡೋದೂಂದ್ರೆ ನನಗೂ ಒಪ್ಪೊಲ್ಲ. ಎಲ್ಲಾ ಸೂಕ್ಷ್ಮವಾಗಿ ನಡೆದುಕೊಂಡು ಹೋಗಬೇಕು ಅನ್ನೋದು ನನ್ನ ಅಭಿಪ್ರಾಯ."

"ಎಷ್ಟು ಬೇಕು ಅನ್ನೋದು ತಿಳಿಸಿದರೆ, ನೋಡೋಣ ಆ ಮೇಲೆ."

"ನಾಲ್ಕೋ ಐದೋ ಮಣ ಅಷ್ಟೆ ಜಾಸ್ತಿ ಬೇಡಿ."

"ನಾಲ್ಕೈದು ಮಣ!" ಆನಂದ ಆಶ್ಚರ್ಯದಿಂದ ಕೇಳಿದ.

"ನಿಮಗೆ ಆಶ್ಚರ್ಯವಾಗಿತ್ತೇನೋ, ನಮ್ಮ ಮನೆಯಲ್ಲಿ ಖರ್ಚು ಜಾಸ್ತಿ. ಪದೇ ಪದೇ ತರಿಸೋದು ಯಾಕೆ ಅಂತ ಒಟ್ಟೊಟ್ಟಿಗೆ ತರಿಸಿಬಿಡುತ್ತೇವೆ ಅಷ್ಟೆ."

"ಅಷ್ಟೊಂದು ಕೊಡುವ ಅಧಿಕಾರ ನನಗಿಲ್ಲ. ನಿಮಗೆ ನ್ಯಾಯವಾಗಿ ಎಷ್ಟು ಕೊಡಬಹುದೋ ಅಷ್ಟು ಕೊಡಬಲ್ಲೆ" ಆನಂದ ನಿರ್ಧರವಾಣಿಯಲ್ಲಿ ಹೇಳಿದ.

"ನೀವು ಯಾವಾಗಲೂ 'ಕರೆಕ್ಟ್' ಅನ್ನೋದು ಗೊತ್ತು ನನಗೆ. ಹಾಗೇ ಇರಬೇಕು. ಇಲ್ಲದಿದ್ದರೆ ಜನ ತಲೇ ಮೇಲೆ ಏರಿಕೋತಾರೆ. ಆದರೆ ನಮ್ಮ ಮೇಲೂ ಬಾಕಿಯವರ ಮೇಲೆ ಸಿಟ್ಟು ಮಾಡಿದ ಹಾಗೆ ಮಾಡಿದರೆ ಹೇಗೆ ಹೇಳಿ! ಬೆಲ್ಲದ ಕಂಟ್ರೋಲ್ ಇಲ್ಲದಿದ್ದರೆ ಚಿಂತೆಯಿರಲಿಲ್ಲ. ಎಷ್ಟು ಬೇಕೋ ಅಷ್ಟು ತಂದು ಹಾಕ್ಕೊಬಹುದಾಗಿತ್ತು. ಹಾಳಾದ ಸರಕಾರದವರು ಅದಕ್ಕೂ ಕಂಟ್ರೋಲು ಹಾಕಿದಾರೆ" ಅಂಜನಪ್ಪ ಚುರುಕಾದ ಮಾತುಗಳಿಂದ ಆನಂದನನ್ನು ಒಲಿಸಿಕೊಳ್ಳಲು ಹೇಳಿದ. ಅದಕ್ಕೆ ಆನಂದ,

"ನಾನು ಕೊಡುವೆನೆಂದು ಗ್ಯಾರಂಟಿ ಹೇಳಲಾರೆ. ನನಗೆ ಹೇಗೆ ಸಾಧ್ಯವೊ ಹಾಗೆ ಮಾಡುತ್ತೇನೆ" ಎಂದು ಅಂಜನಪ್ಪನ ಕಡೆ ನೋಡಿದ.

"ನಿಮಗೆ, ಇಷ್ಟೊಂದು ಹೆಚ್ಚಿನ ಪ್ರಮಾಣದ ಮಾಲು ಸುಮ್ಮನೆ ಕೊಡಬೇಕಲ್ಲಾ ಅನ್ನುವ ಅಸಮಾಧಾನವೇನೋ. ನಿಮಗೆ ನಾನು ಅನ್ಯಾಯ ಮಾಡೊಲ್ಲ. ನೀವು ಮಾಲು ಕೊಡಿ. ನಾನೂ ನಿಮಗೆ ಒಪ್ಪಿಗೆ ಬರೋ ಹಾಗೆ ಮರ್ಯಾದೆ ಮಾಡ್ತೇನಿ. ಆಗಬಹುದಲ್ಲ! ಅಂದ ಹಾಗೆ ಮರೆತಿದ್ದೆ, ನಮ್ಮ ಕರಿಯಣ್ಣನಿಗೆ ಒಂದೆರಡು ಮಣ ಆಮೋನಿಯಂ ಸಲ್ಫೇಟ ಬೇಕಂತೆ ದಯವಿಟ್ಟು ಕೊಡಿ. ಅದನ್ನೂ ಕೊಡಲಿಕ್ಕೆ ನಿಮಗೆ ತೊಂದರೆಯಾದರೆ, ಕರಿಯಣ್ಣನ ಕೈಲೂ ಮರ್ಯಾದೆ ಕೊಡಿಸ್ತೇನಿ" ಸಂಧಾನದ ರಾಗವೆಳೆದ ಅಂಜನಪ್ಪ, ಆನಂದನ ಕಡೆ ಉತ್ತರಕ್ಕಾಗಿ ನೋಡಿದ.

ಅಂಜನಪ್ಪನ ಮಾತಿನಿಂದ ಆನಂದನ ಮೈಯೆಲ್ಲಾ ಉರಿಯತೊಡಗಿತು ಸಿಟ್ಟಿನಿಂದ ಕುರ್ಚಿ ಬಿಟ್ಟು ಎದ್ದವನೇ,

"ನನಗೆ ಅವೆಲ್ಲಾ ಏನೂ ಹೇಳಬೇಡಿ ಅಂಜನಪ್ಪನವರೇ. ರೂಲ್ಸಿನ ಪ್ರಕಾರ ನಿಮಗೆ ಯಾವ ಯಾವ ಪದಾರ್ಥ ಎಷ್ಟು ಕೊಡಬಹುದೋ ಅದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಕೊಡಲು ನನ್ನಿಂದ ಸಾಧ್ಯವಿಲ್ಲ. ಆವೋನಿಯಂ ಸಲ್ಫೇಟು ಬೇಕಾದರೆ ಕರಿಯಣ್ಣನನ್ನು ಕಳುಹಿಸಿ. ಒಂದು ಅಪ್ಲಿಕೇಷನ್ ಫಾರಂ ಕೊಡ್ತೀನಿ ಅದರಲ್ಲಿ, ಯಾವ ಬೆಳೆ, ಎಷ್ಟು ಎಕರೆ ಅನ್ನೋ ವಿವರಗಳೆಲ್ಲಾ ಬರೆದು ರೆವಿನ್ಯೂ ಇನ್‌ಸ್ಪೆಕ್ಟರಿಂದ ಸರ್ಟಿಫೈ ಮಾಡಿಸಿಕೊಳ್ಳಿ. ನಿಮ್ಮ ಅಪ್ಲಿಕೇಷನ್‌ಗೆ ಅಗ್ರಿಕಲ್ಚರ್ ಇನ್‌ಸ್ಪೆಕ್ಟರು ಅಮಲ್ದಾರರುಗಳ ಮಂಜೂರಾತಿ ಆದರೆ ಕೊಡೋಣವಂತೆ" ಎಂದು ಕಡ್ಡಿ ಎರಡು ತುಂಡಾಗುವಂತೆ ಮಾತಾಡಿ, "ನಾನು ಬರುತ್ತೇನೆ" ಎಂದು ಹೇಳಿ ಹೊರಟ.

"ಒಳ್ಳೆಯದು" ಎಂದು ಗತ್ತಿನಿಂದ ಹೇಳಿದ ಅಂಜನಪ್ಪ, ನಿಂತಲ್ಲೇ ಕಾಲು ಗಟ್ಟಿಸಿದ. ಮಾಂಸದ ಆಸೆ ತೋರಿಸಿ ಹುಲಿಯನ್ನು ಬೋನಿನಲ್ಲಿ ಕೆಡಹುವ ಹಾಗೆ, ಆನಂದನಿಗೆ ಹಣದ ಆಸೆ ತೋರಿಸಿ ತನ್ನ ಅನುವರ್ತಿಯನ್ನಾಗಿ ಮಾಡಿಕೊಳ್ಳಲು ಯತ್ನಿಸಿ ವಿಫಲನಾದ ಅಂಜನಪ್ಪ.

'ನಿನ್ನನ್ನು ದಾರಿಗೆ ತರುವುದು ನನ್ನ ಕೈಲಿದೆ' ಎಂದು ಮೀಸೆಯ ಮೇಲೆ ಬೆರಳಾಡಿಸಿದ ಕ್ರೋಧದಿಂದ.

ಹೊಸ ಕಾರ್ಡಿನ ಹಂಚಿಕೆಯ ಸಂದರ್ಭದಲ್ಲಿ ಮುಖಂಡರೆನಿಸಿದವರೆಲ್ಲರಿಗೂ ವಿರೋಧಿಯಾದ ಆನಂದ.

ಆನಂದನ ವರ್ತನೆ ಗುರುರಾಜರಾಯರಿಗೆ ಒಪ್ಪಿಗೆಯಾಗಿದ್ದರೂ, ಮುಂದೆ ತೊಂದರೆಯಾಗಬಹುದೆಂಬ ಶಂಕೆ ಹಾಗೂ ತನ್ನ ಗೆಳೆಯರು ತನ್ನಲ್ಲಿ ಸಂದೇಹ ಪಡಬಹುದು ಎಂಬ ಶಂಕೆಯಿಂದಲೂ ಗಾಬರಿಯಾಗಿದ್ದರು. ಆನಂದನಿಗೆ ಸೂಕ್ಷ್ಮವಾಗಿ ತಿಳಿಯ ಹೇಳಿದರು—

"ನೀನು ಮಾಡಿದುದು ಸರಿ. ಆದರೆ ಮುಖಂಡರೆನಿಸಿದವರೆಲ್ಲಾ ಸೊಸೈಟಿಯ ಡೈರೆಕ್ಟರುಗಳೇ ಆಗಿರುವುದರಿಂದ ಸ್ವಲ್ಪ ನಾವೇ ತಗ್ಗಿ ಬಗ್ಗಿ ನಡೆದುಕೊಳ್ಳಬೇಕು. ತೀರಾ ಹಚ್ಚಿಕೊಳ್ಳಲೂ ಬಾರದು, ಬಿಡಲೂ ಬಾರದು. ವೃಥಾ ದ್ವೇಷ ಸಾಧಿಸೋದು ಚೆನ್ನಲ್ಲ. ಮೊದಲು ನಮ್ಮ ಕ್ಷೇಮನೋಡಿಕೊಂಡು ಆ ಮೇಲೆ ಬೇಕಾದಷ್ಟು ಸುಧಾರಣೆ ಮಾಡಿದರೂ ಏನೂ ಪರವಾಗಿಲ್ಲ. ಪೂರ್ತಿಸುಧಾರಕರಾಗಿರೋದು ಕಷ್ಟವೇ. ನೀನೂ ಜನಗಳ ಕೈಲಿ ದ್ವೇಷಕಟ್ಟಿಕೊಂಡು ನನಗೂ ದ್ವೇಷತರೋದು ಯಾರಿಗೆ

ಪ್ರೀತಿ? ನೀನು ಹೀಗೆ ಸಾಧನೆಮಾಡತೊಡಗಿದರೆ ಧರಣಯ್ಯ, ಅಂಜನಪ್ಪ ಇವರೆಲ್ಲಾ ನನ್ನಮೇಲೆ ಸಂಶಯಪಡುವುದು ಖಂಡಿತ. ನಾನೇ ನಿನಗೆ ಎಲ್ಲಾ ಹೇಳಿಕೊಡ್ತಿದ್ದೀನಿ ಅಂತ ಪುಕಾರಾಗತ್ತೆ. ನಾನು ಹೀಗೆ ಹೇಳ್ತೀನಿ ಅಂತ ಏನೂ ತಿಳಕೋಬೇಡ. ನೀನೂ ಆಲೋಚನೆ ಮಾಡು" ಎಂದರು.

ಆನಂದನಿಗೆ ನಿಜಕ್ಕೂ ನಾಚಿಕೆಯೆನಿಸಿತು. ತಾನು ಕೈಕೊಂಡ ಕೆಲಸದ ಬಗ್ಗೆ ಗುರುರಾಜರಾಯರ ಸಲಹೆ ಕೇಳಿದ್ದರೆ ಚೆನ್ನಾಗಿತ್ತು ಎಂದುಕೊಂಡ. ತನ್ನಿಂದ ಅವರಿಗೂ ಕೆಟ್ಟ ಹೆಸರು, ಇಲ್ಲದ ಅಪವಾದ ಮನಸ್ತಾಪಗಳಾಗುವ ಬಗ್ಗೆ ಯೋಚಿಸಲೇ ಹೋದೆ, ಎಂದುಕೊಂಡು, ನಮ್ರತೆಯ ದನಿಯಲ್ಲಿ 'ನೀವು ಹೇಳಿದ್ದು ನ್ಯಾಯ, ನಾನು ದುಡುಕಿದೆ' ಎಂದ.

೧೨

ಅಂಜನಪ್ಪನ ಮನೆಯಲ್ಲಿ ಗೆಳೆಯರ ಮಾತುಕತೆ ನಡೆದಿತ್ತು. ಸೂಗಣ್ಣ, ಅಪ್ಪಣ್ಣ, ಬೀರಣ್ಣ ಇವರುಗಳು ಯಾರೂ ಇನ್ನೂ ಬಂದಿರಲಿಲ್ಲ. ಗುರುರಾಜರಾಯರಂತೂ ಮೂರು ದಿನದಿಂದಲೂ ಈ ಕಡೆ ಬಂದೇ ಇರಲಿಲ್ಲ. ಎಲ್ಲರೂ ಬಂದ ಮೇಲೆ ಆಟ ಪ್ರಾರಂಭಿಸೋಣವೆಂದು ಸುಮ್ಮನೆ ಮಾತಾಡುತ್ತ ಕುಳಿತಿದ್ದರು. ಮಾತು ಸೊಸೈಟಿಯ ವಿಷಯವೇ ಆಗಿತ್ತು."

"ಏನು ಚಿನ್ನಪ್ಪ ಇವತ್ತು ಸೊಸೈಟಿಯಲ್ಲಿ ನಿನ್ನದೂ ಏನೋ ಪುರಾಣ ನಡೆದಿತ್ತಲ್ಲಾ?" ಆನಂದ ಚಿನ್ನಪ್ಪನವರ ಕಾರ್ಡಿಗೂ ಕತ್ತರಿ ಹಾಕಿದ ವಿಷಯ ತಿಳಿದಿದ್ದ ವಾಮನರಾಯರು, ಪೂರ್ತಿಯಾಗಿ ವಿಷಯ ತಿಳಿದುಕೊಳ್ಳಲು ಕೇಳಿದರು. ಚಿನ್ನಪ್ಪ ಹೇಳಿದ—

"ಗೊತ್ತೆ ಇದೆಯಲ್ಲ. ಅವತ್ತು ಧರಣಯ್ಯನ ಕಾರ್ಡಿಗೆ ಗಲಾಟೆ ಮಾಡಲಿಲ್ಲವೆ? ಹಾಗೇ. ನನ್ನ ಕಾರ್ಡಿನ ಜೊತೆಗೆ ಆಸ್ಪತ್ರೆಗೋಸ್ಕರ ಸ್ಪೆಷಲ್ ಕಾರ್ಡು ಮಾಡಿಸಿರಲಿಲ್ಲವೆ ಅವರದ್ದು ತಕರಾರು."

"ಹಳೆಯ ಕಾರ್ಡಿಗಂತೂ ಬೇಡ, ಸ್ಪೆಷಲ್ ಕಾರ್ಡಿಗೆ ಕೊಡೋದಕ್ಕೆ ಇವನೇನು ಕಳಕೋತಾನಂತೆ? ಅಮಲ್ದಾರರಿಂದ ಆರ್ಡರು ಮಾಡಿಸಿದ್ದೀನಿ, ಹಾಗೆ ಅಂತ ಹೇಳಬೇಕಾಗಿತ್ತು."

"ನಾನು ಕಲಿತದ್ದೆಲ್ಲಾ ಖರ್ಚುಮಾಡಿದರೂ 'ಜಪ್ಪಯ್ಯ' ಅನ್ನಲಿಲ್ಲ. 'ಹೇಗೂ ಅಮಲ್ದಾರರೇ ಆರ್ಡರು ಮಾಡಿದಾರೆ ಅಂತೀರಲ್ಲ, ಇನ್ನೊಂದು

ಸಲ, ನಿಮಗೆ ತೊಂದರೆ ಆದರೂ ಚಿಂತೆಯಿಲ್ಲ, ಇದರ ಮೇಲೆ ಫ್ರೆಷ್ ಆರ್ಡರು ಮಾಡಿಸಿಕೊಂಡು ಬನ್ನಿ' ಅಂತ ಹೇಳಿ ಕಾರ್ಡು ವಾಪಸುಕೊಟ್ಟ. ಅಂತೂ ಇವನ ಹತ್ತಿರ ಏಗೋದು ಬಹಳ ಕಷ್ಟಕ್ಕೇ ಬಂತು."

"ಅಯ್ಯೋ ನಿನ್ನದು ಇಷ್ಟು ಹೇಳ್ತಿ. ಸೂಗಣ್ಣ ಬೀರಣ್ಣ ಇವರ ಕಥೆ ಏನು ಕೇಳ್ತಿ. ಅವರಿಗೆ ಹೊಸ ಕಾರ್ಡಿನಪ್ರಕಾರವೂ ಕಾಳಿಲ್ಲದ ಹಾಗಾಗಿದೆ. ಮೊದಲು ಕಾರ್ಡು ಮಾಡಿಸಬೇಕಾದರೆ 'A' ಕಾರ್ಡು ಮಾಡಿಸಿದ್ದರು ಇಬ್ಬರೂ. ಈಗ ಅದೇ ದಾಖಲೆ ಹಿಡಕೊಂಡು ನಿಮ್ಮದು 'B' ಕಾರ್ಡಲ್ಲ. ನಿಮಗೆ 'ಮಿಲ್ಲೆಟ್ಸ್' (Millets) ಬರೊಲ್ಲ. ಬೇಕಾದರೆ ಅಕ್ಕಿ ಗೋಧಿ ತಗೊಂಡು ಹೋಗಿ ಅಂತಾನಂತೆ. 'B' ಕಾರ್ಡಿನಂತೆ ಕೊಡಿ ಅಂತ ಕೇಳಿದ್ದಕ್ಕೆ, ಮೊದಲು 'B' ಕಾರ್ಡು ಮಾಡಿಸಿಕೊಳ್ಳಿ. ಆ ಮೇಲೆ ಕೊಡೋಣವಂತೆ, ಅಂತಾನಂತೆ. ಅವರು 'B' ಕಾರ್ಡು ಬೇಕು ಅಂತ ಅಪ್ಲಿಕೇಷನ್ ಹಾಕ್ಕೋಬೇಕು. ಇಂತಿಂಥ ಬೆಳೆ ಇಷ್ಟಿಷ್ಟು ಆಗತ್ತೆ ಅನ್ನೋದು ತಿಳಿಸಿ, ಬರೀ ಬೆಳೆಸಾಲದು ಅಂತ ಕೇಳಬೇಕು. ಇಷ್ಟೂ ಆದ ಮೇಲೆ ತಾನೇ ಅವರಿಗೆ ಕಾರ್ಡು ಸಿಕ್ಕಬೇಕಾದರೆ, ಸಿಕ್ಕತ್ತೆ ಅನ್ನೊಗ್ಯಾರಂಟಿ ತಾನೇ ಎಲ್ಲಿ? ಬೆಳೆ ಚೆನ್ನಾಗಿ ಬರ್‍ತಾ ಇದೆ. ಅನ್ನೋದು ಗೊತ್ತಾದರೋ, ಈಗ ಕೊಡೋ 'A' ಕಾರ್ಡಿನಲ್ಲೂ ಕೋಟ ಖೋತಮಾಡ್ತಾರೆ"—ವಾಮನ ರಾಯರು, ಸೂಗಣ್ಣ ಬೀರಣ್ಣ ಇವರ ವಿಷಯದಲ್ಲಿ ತಮಗೆ ತಿಳಿದುದರ ಜೊತೆಗೆ ಇನ್ನಷ್ಟು ಸೇರಿಸಿ ಬಣ್ಣಹಾಕಿ ಹೇಳಿದರು.

"ತಲೆಗೆಲ್ಲಾ ಒಂದೇ ಮಂತ್ರ ಅಂದ ಹಾಗೆ, ನಾನೇನು ಕೇಳದೆ ಇದ್ದರೂ ನನಗೂ ಕೈಕೊಟ್ಟ ಆನಂದ"—ಎಂದು ಅಂಜನಪ್ಪ ಆ ದಿನ ತಾನು ಕಾರು ಕಳುಹಿಸಿ ಕರೆಸಿಕೊಂಡಾಗ, ತನಗೂ ಆನಂದನಿಗೂ ನಡೆದ ಮಾತುಕತೆಗಳನ್ನು ತಿಳಿಸಿದ.

"ಇಷ್ಟಕ್ಕೂ ಕಾರಣ ಏನಿರಬಹುದೂ ಅಂತ? ಆ ಗುರುರಾಜರಾಯರೇನಾದರೂ ಕಿತಾಪತ್ತು ನಡೆಸಿದ್ದಾರೆಯೇ?"—ಚಿನ್ನಪ್ಪ ಕೇಳಿದ.

ಗುರುರಾಜರಾಯರ ಮೇಲೆ ಸಂಶಯವಿಟ್ಟು ಮಾತಾಡಿದುದು ವಾಮನರಾಯರಿಗೆ ಸರಿಬೀಳಲಿಲ್ಲ. ಗುರುರಾಜರಾಯರು ಒಬ್ಬರ ಮೇಲೆ ಎತ್ತಿಕಟ್ಟಿ ದ್ವೇಷ ಬೆಳೆಸುವ ವ್ಯಕ್ತಿ ಅಲ್ಲವೆಂಬುದು ಅವರಿಗೆ ಗೊತ್ತಿತ್ತು. ಹೇಳಿದರು—

"ಗುರುರಾಜ ಅಂಥ ಮನುಷ್ಯನಲ್ಲ. ಹುಡುಗನಾಗಿ ಇದ್ದಾಗಿನಿಂದ ಅವನ ಸ್ವಭಾವ ನೋಡ್ತಾ ಇಲ್ಲವೇ. ಅವನ ಹತ್ತಿರ ಇಂಥ ಕೆಟ್ಟ ಗುಣಕ್ಕೆ ಅವಕಾಶವೇ ಇಲ್ಲ."

"ಏನೋ ಹೇಗೆ ಹೇಳ್ತೀರಿ. ಈಗ ಪ್ರೆಸಿಡೆಂಟ್ ಬೇರೆ ಆಗಿದ್ದಾರಲ್ಲ. ಇದೇ ಸಮಯ ಅಂದುಕೊಂಡು ನಮಗೆಲ್ಲಾ ಚಕ್ಕರ್ ಹಾಕಿ ತಾವೇ ದುಡಿಯಲಿಕ್ಕೆ ಹೊರಟಿದ್ರೆ. ದುಡ್ಡಿನಾಸೆ ಅನ್ನೋದು ಏನುತಾನೇ ಮಾಡಿ ಸೊಲ್ಲ. ಗುರುರಾಜರಾಯರು ಆನಂದನಿಗೆ ಹೇಳಿಕೊಟ್ಟು ನಮ್ಮ ಮೇಲೆ ಸುಮ್ಮನೆ ತರಲೆ ಮಾಡಿಸಿದ್ದಾರೆ..."—ಚಿನ್ನಪ್ಪ ಸಂಶಯದ ಬೀಜಾರೋಪ ಮಾಡತೊಡಗಿದ.

"ಅದೆಲ್ಲಾ ಸುಳ್ಳು. ನಾನು ನಂಬೊಲ್ಲ. ಅಷ್ಟೇಕೆ? ಆನಂದ ಬರೋದಕ್ಕೂ ಮುಂಚೆ ತಾನೇ ಗುಮಾಸ್ತಿಕೆ ನೋಡಿದ್ದನಲ್ಲಾ, ಆಗ ಸೊಸೈಟಿಗೆ ಸೊಸೈಟೀನೇ ಸೂರೆ ಹೊಡೀಬಹುದಾಗಿತ್ತು. ಹಾಗೆಲ್ಲಾ ಅಂಥ ಸಂದರ್ಭಗಳನ್ನೆಲ್ಲಾ ಬಿಟ್ಟು, ಈಗ ನಮ್ಮ ಮೇಲೆ ವಿರೋಧ ಸಾಧಿಸಿ ಲಾಭ ಸಂಪಾದನೆ ಮಾಡ್ತಾನೇನು? ಹಾಗೆಲ್ಲ ಅವನ ವಿಷಯದಲ್ಲಿ ನಾವಾಡಲೇ ಬಾರದು. ಒಬ್ಬರಿಗೆ ಕೆಡಕುಮಾಡಿ ತಾನು ಬದುಕಬೇಕು ಅನ್ನೋಪ್ರಾಣಿ ಯಲ್ಲ ಗುರುರಾಜರಾಯ" —ಅಂಜನಪ್ಪ ವಾಮನರಾಯರ ಮಾತನ್ನೇ ಸಮರ್ಥಿಸಿದ.

"ನೀನು ಏನೇ ಹೇಳು, ಆನಂದ ಸ್ವತಃ ಬುದ್ಧಿ ಖರ್ಚುಮಾಡಿ ಹೀಗೆ ಮಾಡಿಲ್ಲ. ಯಾರೋ ಅವನಿಗೆ ಚೆನ್ನಾಗಿ ಊದಿದಾರೆ, ನಮಗೆ ಆಗದವರು." ಎಂದ ಧರಣಯ್ಯ.

"ಹಾಗೆ ಬೇಕಾದರೆ ಹೇಳು. ಆದರೆ ಗುರುರಾಜರಾಯ ಹೇಳಿಕೊಟ್ಟು ತರಲೆ ಮಾಡಿಸಿದ ಅಂತ ಅನ್ನೋದು ಚೆನ್ನಲ್ಲ. ಒಂದು ವೇಳೆ ಗುರುರಾಜ ರಾಯ ಹಾಗೇನಾದರೂ ತರಲೆ ಮಾಡಿದ್ದರೆ, ಅವನನ್ನು ನಮ್ಮಕಡೆ ತಿರುಗಿಸಿ ಕೊಳ್ಳೋದುತಾನೆ ಯಾವ ಮಹಾ ಕೆಲಸ!"—ವಾಮನರಾಯರು, ತನ್ನ ಕೈಗೊಂಬೆಯಂತೆ ಗುರುರಾಜರಾಯರು ಎಂಬುದನ್ನು ಸೂಚಿಸಿದರು.

"ಏನು ಮಾಡೋದು ಹೀಗಾದರೆ? ಯಾವ ರೀತಿಯಲ್ಲಾದರೂ ಆನಂದನ್ನ ಸರಿಮಾಡಿಕೊಳ್ಳೋಣಾ ಅಂದ್ರೆ, ಹಾಗೆಲ್ಲ ಸರಿಯಾಗೊಪ್ರಾಣಿ ಅಲ್ಲ. ಯಾವುದೂ ಬೇಡ ಅಂತ ಸುಮ್ಮನಾದರೆ ನಮ್ಮ ಕೈಕಾಲುಕಟ್ಟಿ

ಹಾಕಿದ ಹಾಗೆ ಆಗತ್ತೆ. ನನ್ನ ಹತ್ತಿರ ಇದುವರೆಗೂ ದಾಸ್ತಾನಿತ್ತು. ನಡೆದು ಹೋಯ್ತು ಮುಂವೆ?" — ಅಂಜನಪ್ಪ ಹೇಳಿದ ತನ್ನ ಸದ್ಯದ ಶೋಚನೀಯ ಪರಿಸ್ಥಿತಿಯನ್ನು ವಿವರಿಸುತ್ತ.

"ಸಮ್ಮನೆ ಫುಡ್ ಅಸಿಸ್ಟೆಂಟರಿಗೆ ಆನಂದ ಬ್ಲಾಕ್ ಮಾರ್ಕೆಟ್ ಮಾಡ್ತಾ ಇದ್ದಾನೆ, ಜನಗಳಿಗೆ ದಿನಾ ಸರಿಯಾಗಿ ಹಂಚೊಲ್ಲ ಅಂತ ಒಂದು ಅರ್ಜಿ ಗುಜರಾಯಿಸಿದರೊ?" — ಒಮ್ಮೆಗೇ ಪ್ರತೀಕಾರದ ಮಾರ್ಗ ಸೂಚಿಸುತ್ತ ಹೇಳಿದ ಚಿನ್ನಪ್ಪ.

"ಅರ್ಜೀನೇ......!" ಒಮ್ಮೆಗೇ ಕುಮುಟಿ ಬಿದ್ದರು. ವಾಮನ ರಾಯರು.

"ಅರ್ಜಿ ಹಾಕಿದರೆ ಅದು ನಮಗೇ ತಿರುಗಿಕೊಳ್ಳುತ್ತೆ. ಆನಂದನದು ಏನೂ ತಪ್ಪಿಲ್ಲ. ಅಲ್ಲದೆ ನಾವುಗಳು ಏನು ಮಾಡ್ತೀವೀ, ಏನಿಲ್ಲ ಅನ್ನೋದು ಊರಿಗೇ ಗೊತ್ತಿದೆ. ಫುಡ್ ಅಸಿಸ್ಟೆಂಟರು ಬಂದಾಗ, ಸುಳ್ಳು ಕಾರ್ಡು ಇಟ್ಟುಕೊಂಡು ಕಳ್ಳ ವ್ಯವಹಾರ ಮಾಡ್ತಿರೋದು ನಾವೇನೇ ಅನ್ನೋದು ರುಜುವಾತಾದರೆ ಮರ್ಯಾದೆ ಮೂರು ಕಾಸಿಗೂ ಬರೋಲ್ಲ ತಿಳೀತೇ......" ವಾಮನರಾಯರು ಅರ್ಜಿ ಹಾಕುವುದರಿಂದ ತಮ್ಮೆಲ್ಲರಿಗೆ ಆಗಬಹುದಾದ ತೊಂದರೆಯನ್ನು ಗಾಬರಿಯಿಂದಲೇ ಸೂಚಿಸಿದರು.

"ಅದೆಲ್ಲಾ ಚೆನ್ನಲ್ಲ ಕಣಯ್ಯ. ದಂಡೋಪಾಯದಿಂದ ಪ್ರಯೋಜನ ವಿಲ್ಲ. ಒಳ್ಳೆಯತನದಲ್ಲೇ ಬಗ್ಗಿಸಿಕೋಬೇಕು. ಇನ್ನೆಲ್ಲಾ ತಿಂಗಳು, ಹದಿನೈದು ದಿನ ಅನ್ನಬೇಕಾದರೆ ಉಳ್ಳಾಗಡ್ಡೆ ಬಂದುಬಿಡುತ್ತೆ. ದುಡ್ಡಿಲ್ಲದ ಕಾಲದಲ್ಲಿ ಎಲ್ಲಿಗೆ ಹೋಗ್ತೀರಿ. ಆನಂದ ಒಳ್ಳೇನಾದರೆ ಸೊಸೈಟಿ ದುಡ್ಡು ಇಟ್ಟುಕೊಂಡು ವ್ಯವಹಾರ ಕುದುರಿಸಬಹುದು. ಮುಂದಾಲೋಚನೆ ಇಲ್ಲದೆ ಏನು ಮಾಡಿದರೂ ವ್ಯರ್ಥವೆ ಆಗೋದು" ಧರಣಯ್ಯ ಬರಲಿರುವ ಉಳ್ಳಾ ಗಡ್ಡೆ ಸೀಸನ್ ಜ್ಞಾಪಿಸಿ ಹೇಳಿದ.

"ಗುರುರಾಜರಾಯನ ಮಾತು ಅಂದರೆ ಆನಂದನಿಗೆ ವೇದ ವಾಕ್ಯ. ಗುರುರಾಜರಾಯನ ಮುಖಾಂತರ ಒಂದು ಸ್ವಲ್ಪ ಮನಸ್ಸಿಗೆ ತಟ್ಟೋ ಹಾಗೆ ಹೇಳಿಸಿದರೆ ಅಷ್ಟಕ್ಕೆ ಅವನೇ ದಾರಿಗೆ ಬರ್ತಾನೆ, ನೋಡಿ ಬೇಕಾದರೆ."

"ಹೌದಯ್ಯ, ಇಷ್ಟು ಹೊತ್ತೂ ಹೊಳೆಯಲೇ ಇಲ್ಲ ನೋಡು. ಎಷ್ಟೇ ಆಗಲಿ ಶಾನುಭೋಗರಿಗೆ ಬಲು ಬುದ್ಧಿ ಇರತ್ತಂತೆ ಅನ್ನೋದು ಇದಕ್ಕೆ

ನೋಡು" ಎಂದ ಅಂಜನಪ್ಪ, ವಾಮನರಾಯರ ಉಪಾಯವನ್ನು ಮೆಚ್ಚಿ ಕೊಳ್ಳುತ್ತ.

"ಅಂದ ಹಾಗೆ ಗುರುರಾಜರಾಯರು ಮೂರು ನಾಲ್ಕು ದಿನಗಳಿಂದ ಕಾಣ್ತಿಲ್ಲವಲ್ಲ ಯಾಕೆ ?"

"ಏನು ಕೆಲಸ ಇದೆಯೋ ಏನೋ ಬಂದಿಲ್ಲ. ಬಿಡುವಿದ್ದರೆ ಒಂದು ಘಳಿಗೆಯಾದರೂ ಬಂದು ಹೋಗೋನು......

ಧರಣಯ್ಯ ಮಾತುಮುಗಿಸುವುದರೊಳಗೆ ಗುರುರಾಜರಾಯರು ಒಳಗೆ ಕಾಲಿಟ್ಟರು. ಗುರುರಾಜರಾಯರು ಬಂದದ್ದು ಕಂಡು ವಾಮನರಾಯರು,

"ನಿನಗೆ ನಿಜವಾಗಿಯೂ ನೂರು ವರ್ಷ ಆಯುಸ್ಸು ಕಣಯ್ಯ ಗುರುರಾಜ, ಯಾಕೋಬರಲಿಲ್ಲಾಂತ ನಿನ್ನ ವಿಷಯವೇ ಮಾತಾಡ್ತಾ ಇದ್ದೆವು. ಆದಕ್ಕೆ ಸರಿಯಾಗಿ ಹಾಜರು." ಎಂದು ಅರ್ಧಸೇದಿ ಮಸಿಗಿಟ್ಟುಕೊಂಡಿದ್ದ ಸಿಗರೇಟನ್ನು ಹತ್ತಿಸಿದರು.

"ನನ್ನ ವಿಷಯವೇ, ಏನಪ್ಪಾ ಅದು ?" ಎನ್ನುತ್ತಲೇ ಜಮಖಾನದ ಮೇಲೆ ಕುಳಿತ ರಾಯರು ಅಂಜನಪ್ಪನ ಕಡೆ ತಿರುಗಿ, "ಒಂದು ಸಿಗರೇಟು ಎಸಿ" ಎಂದರು.

ರಾಯರ ಕಡೆಗೆ ಸಿಗರೇಟು ಎಸೆದ ಅಂಜನಪ್ಪ, ಅದುವರೆಗೆ ತಾವು ಆಡಿದ ಮಾತುಕತೆಗಳನ್ನು ಫುಡ್ ಅಸಿಸ್ಟೆಂಟರಿಗೆ ರಿಪೋರ್ಟು ಮಾಡುವ ವಿಷಯವೊಂದನ್ನು ಬಿಟ್ಟು, ಎಲ್ಲವನ್ನೂ ತಿಳಿಸಿದ. ಅದಕ್ಕೆ ಗುರುರಾಜ ರಾಯರು,

"ಸದ್ಯಕ್ಕೆ ನನ್ನ ಮೇಲೆ ಅನುಮಾನ ಇಟ್ಟುಕೊಂಡಿಲ್ಲ ತಾನೆ ಯಾರೂನೂ ?" ಎಂದು ಕೇಳಿದರು ಅಳುಕುತ್ತಾ.

"ಯಾರಯ್ಯ ನಿನ್ನ ಮೇಲೆ ಅನುಮಾನ ಇಟ್ಟು ನೀನು ಆನಂದನನ್ನು ಎತ್ತಿಕಟ್ಟಿ ನಮ್ಮ ವಿರುದ್ಧ ಸಂಚು ಮಾಡ್ತೀ ಅಂತ ಅನ್ನೋನು ?" ಎಂದು ವಾಮನರಾಯರು ತಮ್ಮ ಒಂಟಿಕಣ್ಣನ್ನೇ ರೂಪಾಯಿ ಅಗಲಕ್ಕೆ ಅರಳಿಸಿ ಕೇಳಿದರು.

"ನಿನ್ನ ಮೇಲೆ ಅನುಮಾನ ಖಂಡಿತವಾಗಿಯೂ ಇಲ್ಲ ಮಹರಾಯ !" ಎಂದ ಧರಣಯ್ಯ ನಗುತ್ತ.

"ನನಗೆ ಧೈರ್ಯ ಬಂತು. ಆನಂದ ಮಾಡಿದ ತಪ್ಪಿಗೆ ನನ್ನ ಮೇಲೆ ಯಾವ ಅಪರಾಧ ಹೊರಿಸ್ತೀರೋ ಅಂದುಕೊಂಡಿದ್ದೆ. ಆನಂದನ ವಿಷಯಕ್ಕೆ ನೀವು ಯಾರೂ ಯೋಚನೆ ಮಾಡಬೇಡಿ. ನಾನೆಲ್ಲಾ ಸರಿಮಾಡ್ತೀನಿ. ಯಾರ ಮಾತು ಕೇಳಿದನೋ ಏನೋ, ಜನಗಳ ಕೈಲಿ ಒಳ್ಳೇನು ಅನ್ನಿಸಿಕೋಬೇಕು ಅನ್ನೋ ಆಸೆಯಿಂದ ಹೀಗಾಡ್ತಿದಾನೆ. ಆ ಮೇಲೆ ನಿಧಾನವಾಗಿ ಅವನೇ ದಾರಿಗೆ ಬರ್ತಾನೆ. ಸ್ವಲ್ಪ ನಾವೂ ಸುಧಾರಿಸಿಕೊಳ್ಳೋಣ" ಎಂದರು ಗುರುರಾಜರಾಯರು.

"ಸುಧಾರಿಸಿ ಕೊಳ್ಳೋಣ ಅಂದರೆ ಹೇಗಪ್ಪಾ?"

"ಹೇಗೋ ನಾನೆಲ್ಲಾ ನೋಡಿಕೋತೀನಿ. ನೀವು ಗಲಾಟೆ ಮಾಡದೆ ಸುಮ್ಮನಿರಿ" ಎಂದ ಗುರುರಾಜರಾಯರು.

"ಇವತ್ತೇನು ಬರಿಯ ಮಾತೇನೋ ಅಥವಾ ಆಟಗೀಟ ಆಡೋದು ಉಂಟೊ?" ಎಂದರು.

"ಸೂಗಣ್ಣ, ಬೀರಣ್ಣ ಯಾರೂ ಬರಲಿಲ್ಲವಲ್ಲಾ ಇನ್ನೂ......"

"ಇರಲಿ ಸಮ್ಮನೆ ಎಲೆ ಎಸೆದಾಡ್ತಿರೋಣ ಅಷ್ಟು ಹೊತ್ತಿಗೆ ಬಂದೇ ಬರ್ತಾರೆ" ಎಂದು ಗುರುರಾಜರಾಯರು ಇಸ್ಪೇಟು ಕಲಸ ತೊಡಗಿದರು.

ರಾಯರು ಆನಂದನೊಡನೆ 'ಊರಿನವರ ಹತ್ತಿರ ದ್ವೇಷ ಕಟ್ಟಿಕೊಳ್ಳಬೇಡ' ಎಂದು ಪದೇ ಪದೇ ಎಚ್ಚರ ಹೇಳುತ್ತಲೆ ಇದ್ದರು.

ರಾಯರ ಮಾತಿಗೆ 'ಆಗಲಿ' ಎನ್ನುತ್ತಿದ್ದನೇ ಹೊರತು, ತನ್ನ ನಡೆವಳಿಕೆಯಲ್ಲಿ ಯಾವ ಬದಲಾವಣೆಯನ್ನೂ ತೋರಲಿಲ್ಲ ಆನಂದ. ಎಂದಿನಂತೆ ಮೋಸದ ಕಾರ್ಡುಗಳ ಶೋಧನೆ ಮಾತ್ರ ನಡೆದೇ ಇತ್ತು. ಆದರೀಗ ಅವನಲ್ಲಿ ಒಂದೇ ಒಂದು ಬದಲಾವಣೆಯಾಗಿತ್ತು. ಅದು ಅವನ ಮೃದು ವ್ಯವಹಾರ.

ಇದು ಮೊದಲು ಯಾರನ್ನೇ ಆಗಲಿ ಲೆಕ್ಕಿಸದೆ ಗಟ್ಟಿಸಿ ಮಾತಾಡುತ್ತಿದ್ದ. ಒಂದೊಂದು ವೇಳೆ ಸೊಸೈಟಿಯಿಂದ ಜನಗಳನ್ನು ಆಚೆಗೆ ನೂಕಿಸುತ್ತಿದ್ದ ಸಿಟ್ಟಿನ ಭರದಲ್ಲಿ. ಆದರೆ ಹಿಂದಿನಿಂದ ವಿವೇಕ ತಂದುಕೊಂಡ, 'ತಾನು ಹಾಗೆ ಮಾಡಬಾರದಾಗಿತ್ತು' ಎಂದು ಪಶ್ಚಾತ್ತಾಪ ಪಟ್ಟುಕೊಳ್ಳುತ್ತಿದ್ದ. ಈ ಪಶ್ಚಾತ್ತಾಪ, ಜನರ ಬಗ್ಗೆ ಮೃದು ಸ್ವಭಾವದಿಂದ ಇರುವುದನ್ನು ಕಲಿಸಿತು. ಒಳ್ಳೆಯ ಮಾತಿನಿಂದಲೇ ಜನಗಳ ತಪ್ಪನ್ನೂ ಅವರಿಗೆ ತೋರಿಸಿ

ಕೊಟ್ಟು, ಗಲಾಟೆಯಿಲ್ಲದಂತೆ ಕೆಲಸ ನಡೆಸಿಕೊಂಡು ಹೋಗತೊಡಗಿದ. ಈ ನೂತನ ಪರಿವರ್ತನೆಯಿಂದ ಜನಗಳಲ್ಲಿ ಆನಂದನ ಬಗ್ಗೆ ಆದರ ಹೆಚ್ಚಿತು.

ರಾಂಪುರದ ಇತ್ತೀಚಿನ ಪರಿಸ್ಥಿತಿಗಳನ್ನೆಲ್ಲಾ ವಿವರಿಸಿ ಆನಂದ ರಾಜಣ್ಣನಿಗೆ ದೀರ್ಘ ಪತ್ರ ಬರೆದಿದ್ದ. ರಾಜಣ್ಣನಿಂದ ಉತ್ತರವೂ ಬಂದಿತ್ತು. ಪತ್ರದ ಒಕ್ಕಣೆಯಲ್ಲಿ ಹೆಚ್ಚಿನ ವಿಶೇಷವಿಲ್ಲದಿದ್ದರೂ, ರಾಜಣ್ಣ ಕೊನೆಯಲ್ಲಿ ಬರೆದಿದ್ದ ನಾಲ್ಕು ಮಾತುಗಳು ಅವನ ಮನಸ್ಸಿನಲ್ಲಿ ಪರಿಣಾಮ ಮಾಡಿಸಿದ್ದುವು.

"ನೀನು ಊರಿನ ಜನಗಳ ಹುಳುಕನ್ನು ಹೊರತೆಗೆದು, ಬಡಜನಗಳಿಗೆ ಉತ್ತಮವಾದ ನೆರವು ನೀಡುತ್ತಿರುವುದು ಸ್ತುತ್ಯವಾದುದು. ಆದರೆ ನೀನು ಹಿಡಿದಿರುವ ಮಾರ್ಗ ನೇರವಾಗಿರದೆ ಸ್ವಲ್ಪ ವಕ್ರವಾಗಿದೆ. ಆದರ್ಶದ ಹಾದಿಯಲ್ಲಿ ನಡೆಯ ಬಯಸಿರುವ ನೀನು ನಿನ್ನ ಕಾಲ್ಕೆಳಗೆ ಕಂದಕವನ್ನು ಅಗೆಯುತ್ತಿದ್ದಿ. ಕರ್ತವ್ಯಭರದಲ್ಲಿ ನಿನ್ನನ್ನು ನೀನು ವಂಚಿಸಿಕೊಂಡಿದ್ದೀ. ನಿಶ್ಚಯವಿಲ್ಲದ ನಿಲುಮೆಯಲ್ಲಿರುವ ನೀನು ಆದರ್ಶದ ಕನಸು ಕಂಡರೆ ಏನನ್ನಬೇಕೋ ನನಗೆ ತಿಳಿಯದು. ಮೊದಲು ನಿನ್ನ ಭವಿಷ್ಯದ ಕಡೆಗೆ ದೃಷ್ಟಿ ಹರಿಸು ಆನಂದ. ಭವಿತವ್ಯದ ಭದ್ರ ತಳಹದಿಯ ಮೇಲೆ ನಿಂತು ಆದರ್ಶದ ಅರಮನೆ ಕಟ್ಟುವುದರಲ್ಲಿ ಅರ್ಥವಿದೆ. ಅದು ಬಿಟ್ಟು ಉಫ್ ಎಂದರೆ ಊರಾಚೆ ಎನ್ನುವಂತೆ ಎಕ್ಕದ ಕಾಯಿ ಹೂವಿನಷ್ಟು ನಾಜೂಕು ಪರಿಸ್ಥಿತಿಯಲ್ಲಿದ್ದುಕೊಂಡು ಊರಿನವರಲ್ಲಿ ವಿರೋಧ ಕಟ್ಟಿಕೊಂಡು ಆದರ್ಶದ ಕನಸು ಕಾಣುವುದು ಒಳ್ಳೆಯದಲ್ಲ. ಸ್ವಲ್ಪ ಯೋಚಿಸು – ಪ್ರಮುಖರೆಲ್ಲಾ ನಿನ್ನ ಮೇಲೆ ಸಿಟ್ಟುಮಾಡಿ ಸೊಸೈಟಿಯ ಕೆಲಸದಿಂದ ನಿವೃತ್ತಿ ಮಾಡದರೆ ಏನು ಮಾಡುತ್ತಿ? ಎಲ್ಲಿ ಹೋಗುತ್ತಿ? ಇನ್ನೊಂದು ಉದ್ಯೋಗ ದೊರೆಯುವವರೆಗೆ ಜೀವನ ಹೇಗೆ ಸಾಗಿಸುತ್ತಿ? ನೀನು ಅಪೇಕ್ಷಿಸಿದ ಕೂಡಲೇ ಉದ್ಯೋಗ ದೊರೆಯುತ್ತದೆಯೆ? ಉದ್ಯೋಗಕ್ಕಾಗಿ ಹಿಂದೆಲ್ಲಾ ನೀನು ಕಷ್ಟಪಟ್ಟಿರುವ ವಿಷಯ ಜ್ಞಾಪಿಸಿಕೊ. ತೀ॥ ತಂದೆಯವರು ನಿನಗೆ ಸರಿಯಾಗಿ ಹೇಳಿದ್ದಾರೆ. ಕೊನೆಯ ಪಕ್ಷ ಇನ್ನೊಂದು ಸುಭದ್ರ ನೌಕರಿ ದೊರೆಯುವ ವರೆಗೆ ರಾಂಪುರದಲ್ಲಿ ನಿನ್ನ ನಿಲುಮೆಯನ್ನು ಕಾಯುವುದಕ್ಕಾದರೂ ಊರಿನವರೊಡನೆ ವಿಶ್ವಾಸದಿಂದಿರುವುದು ಒಳ್ಳಿತು. ಅಷ್ಟೇ ಅಲ್ಲ, ನನ್ನ ಅಂತರಂಗದ ವಿಷಯ ಹೇಳುವುದಾದರೆ – ನಮ್ಮ ಮನೆಯಿಂದ, ಮನಸ್ಸಿನಿಂದ ನೀನು ದೂರವಾಗುವುದು ನಮಗೆ ಇಷ್ಟವಿಲ್ಲ. ಅದನ್ನು ನೀನೂ ಆಲೋಚಿಸು."

ಎಂಬ ರಾಜಣ್ಣನ ಮಾತಿನಲ್ಲಿ ಸತ್ಯವಿತ್ತು. ರಾಂಪುರದ ಮನೆ, ಆ ಉತ್ತಮ ಆಶ್ರಯ, ಸ್ನೇಹ, ಆದರ ಮತ್ತು ಮಮತೆಗಳನ್ನು ಕಡಿದುಕೊಂಡು ದೂರವಾಗಲು ಆನಂದನಿಗೂ ಇಷ್ಟವಿರಲಿಲ್ಲ. ಬಹಳವಾಗಿ ಯೋಚಿಸಿದ ಆನಂದ, ಒಂದೇ ಒಂದು ನಿರ್ಧಾರಕ್ಕೆ ಬಂದ. ಕಷ್ಟವಾದರೂ ಚಿಂತೆಯಿಲ್ಲ; ಊರಿನ ಮುಖಂಡರನ್ನೂ ಒಲಿಸಿಕೊಂಡು, ತನ್ನ ಧ್ಯೇಯವನ್ನೂ ಕಾಪಾಡಿಕೊಂಡು ಮುಂದಿನ ಉತ್ತಮ ಭವಿಷ್ಯಕ್ಕೆ ಅಣಿ ಮಾಡಿಕೊಳ್ಳುವೆನೆಂಬುದು ಅವನ ನಿರ್ಧಾರವಾಗಿತ್ತು.

೧೩

ಸೊಸೈಟಿಯಿಂದ ಆನಂದನಿನ್ನೂ ಮನೆಗೆ ಬಂದಿರಲಿಲ್ಲ. ಪ್ರಮೀಲ ಅದೇ ತಾನೇ ಪೋಸ್ಟಿನಲ್ಲಿ ಬಂದಿದ್ದ ಮಾಸಪತ್ರಿಕೆಯನ್ನು ಓದಲು ಕುಳಿತಿದ್ದಳು.

ರಕ್ಷಾಪತ್ರ ತೆರೆಯುತ್ತಲೇ ಒಳಗೆ ಮೊದಲನೆ ಪುಟದಲ್ಲಿ ಇದ್ದ ಕವಿತೆ ಅವಳನ್ನು ಆಕರ್ಷಿಸಿತು. 'ಈ ಹೂವು ನಿನಗಿರಲಿ' ಎಂದು ಕವಿತೆಯ ಹೆಸರು. ಕವಿತೆಯನ್ನು ಬರೆದವರಾರೆಂದು ನೋಡಲು ಕಷ್ಟಪಡಬೇಕಾಗಿರಲಿಲ್ಲ. ಕವಿತೆಯ ಹೆಸರು 'ಈ ಹೂವು ನಿನಗಿರಲಿ' ಎಂಬುದರ ಕೆಳಗೆ, ಆನಂದ–ರಾಂಪುರ, ಎಂದಿತ್ತು. ಆನಂದ ಬರೆದ ಕವಿತೆಯೆಂದು ತಿಳಿದಾಗ ಪ್ರಮೀಲಳ ಉತ್ಸಾಹ ಹೆಚ್ಚಿತು.

ಎಂದೋ ಒಂದು ದಿನ ಮೇಲ್ಮನೆಯ ಕಿಟಕಿಯ ಬಳಿ ನಿಂತು ಯೋಚನೆಯಲ್ಲಿ ಮುಳುಗಿದ್ದಾಗ ಹಿತ್ತಲಿನಲ್ಲಿ ಪ್ರಮೀಲ ಹೂ ಕೊಯುತ್ತಿದ್ದುದನ್ನು ನೋಡಿದ ಆನಂದ, ಭಾವನೆಗಳು ಮೂಡಿಬಂದು ಕವಿತೆ ರಚಿಸಿದ್ದ. ಕವಿತೆ ಚೆನ್ನಾಗಿದೆಯೆಂದು ತಿಳಿದು ಅದನ್ನು ಪ್ರಕಟನೆಗೆಂದು ಮಾಸಪತ್ರಿಕೆಯೊಂದಕ್ಕೆ ಕಳುಹಿಸಿದ್ದ. ಅದೇ ಕವಿತೆ ಪ್ರಕಟವಾಗಿ ಬಂದಿತ್ತು.

ಕವಿತೆ ಒಂದು ಕತೆಯ ಹಾಗಿತ್ತು. ಪ್ರಮೀಲ ಉತ್ಸಾಹದಿಂದ ಓದತೊಡಗಿದಳು. ಓದುತ್ತ ಓದುತ್ತ ತನ್ಮಯಳಾದಳು. ಕವಿತೆಯ ಭಾವ ಈ ರೀತಿ ಇತ್ತು—

ಮಾಲಿಯೊಬ್ಬ ತನ್ನ ತೋಟದಲ್ಲಿ ವಿಧವಿಧವಾದ ಸುಂದರವಾದ ಹೂಗಿಡಗಳನ್ನು ಬೆಳೆಸಿದ್ದ. ತಾನು ಶ್ರಮವಹಿಸಿ ಬೆಳೆದ ಹೂಗಿಡಗಳಲ್ಲಿ

ಸುಂದರವಾದ ಹೂಗಳು ಅರಳಿದುದನ್ನು ಕಂಡಾಗ ಅವನಿಗೆ ಮಹದಾನಂ
ವಾಗುತ್ತಿತ್ತು.

ಆದರೆ ಅವನಿಗೆ ತಿಳಿಯದಂತೆ ನಿತ್ಯವೂ ಕೆಲವು ಗಿಡಗಳಲ್ಲಿ, ಅ
ರಲ್ಲೂ ತೋಟದ ಬಾಗಿಲಿನಲ್ಲಿ ನಗುತ್ತಿದ್ದು ತೋಟದ ಸೌಂದರ್ಯಕ್ಕೆ
ಮೆರುಗುಕೊಡುತ್ತಿದ್ದ ಮೆಚ್ಚಿನ ಗುಲಾಬಿಯ ಗಿಡಗಳಲ್ಲಿ ಹೂಗಳು ಕಾಣ
ಯಾಗುತ್ತಿದ್ದುವು. ಇದರಿಂದ ಮಾಲಿಗೆ ತುಂಬಾ ವ್ಯಥೆಯಾಗತೊಡಗಿತು.
ತನ್ನ ತೋಟದಲ್ಲಿ ಕಳ್ಳತನ ಮಾಡುವವರಾರು? ಎಂಬುದನ್ನು ಪತ್ತೆಹಚ್ಚಲು
ಮಾಲಿ ಎಚ್ಚರವಹಿಸತೊಡಗಿದ.

ಒಂದು ದಿನ ಅರುಣೋದಯದ ನಸುಗೆಂಪಿನಲ್ಲಿ ಯಾರೋ ತೋಟದ
ಬಾಗಿಲಿನ ಹೂಕುಯ್ಯುತ್ತಿದ್ದುದನ್ನು ಕಂಡ ಮಾಲಿ ಕಳ್ಳನನ್ನು ಹಿಡಿಯಲು
ಅಲ್ಲಿಗೆ ನಡೆದ.

ಅವಳೊಬ್ಬ ಸುಂದರಿ. ಮಾಲಿ ಅವಳನ್ನು ನೋಡಿದ. ಇನ್ನೊಮ್ಮೆ
ನೋಡಿದ. ತಾನು ಬಂದುದು ಏಕೆಂಬುದನ್ನು ಮರೆತು, ಹೂಕುಯ್ಯುತ್ತಿದ್ದ
ಸುಂದರಿಯನ್ನೇ ನೋಡತೊಡಗಿದ. ಅವಳ ಅನಂತರೂಪರಾಶಿ ಅವನನ್ನು
ಆಕರ್ಷಿಸಿತು. ಮಾಲಿಯು ಬಂದಿರುವುದು ತಿಳಿಯದೆ ಸುಂದರಿ ಇನ್ನೂ
ಹೂ ಕುಯ್ಯುವುದರಲ್ಲೇ ನಿರತಳಾಗಿದ್ದಳು.

ಇದ್ದಕ್ಕಿದ್ದಂತೆ ಎದುರಿನಲ್ಲೊಬ್ಬ ಪುರುಷ ಬಂದು ನಿಂತುದು ಕಂಡು
ಸುಂದರಿ ಬೆದರಿ ಹಿಂದೆ ಸರಿದಳು. ಅವಳ ಕಣ್ಣಿನಲ್ಲಿ ಭೀತಿಯ ಛಾಯೆ
ಸುಳಿಯಿತು. ಮಾಲಿ, ಬೆದರಿದ ಮನಸ್ಸಿಗೆ ಧೈರ್ಯ ನೀಡುವ ರೀತಿ ಅವ
ಳನ್ನೇ ನೋಡುತ್ತ ಮುಗುಳುನಗುತ್ತಿದ್ದ. ಸುಂದರಿಯೂ ಮಾಲಿಯನ್ನು
ನೋಡಿದಳು. ಕಣ್ಣುಗಳು ಸೋತು ಕೆಳಗಾದವು. ಮುಖದಲ್ಲಿ ನಗೆ
ಮಲ್ಲಿಗೆ ಅರಳಿತು. ಮಾಲಿ, ಚೆಲುವೆಯ ಮಡಿಲಿನಲ್ಲಿ ನಗುತ್ತಿದ್ದ ತನ್ನ
ಹೂಗಳನ್ನು ನೋಡಿದ; ಚೆಲುವೆಯ ಮುಖದಲ್ಲಿ ಅರಳಿದ್ದ ನಗೆಮಲ್ಲಿಗೆ
ಯನ್ನೂ ಅವನ ಹೃದಯ ಮಲ್ಲಿಗೆಯೂ ಅರಳಿತು.

"ತೋಟದಲ್ಲಿ ಹೇಳದೆ ಕೇಳದೆ ಬಂದು ಹೂ ಕುಯ್ಯಬಹುದೇ?"
— ಮಾಲಿಯಿಂದ ಬಂದ ಪ್ರಶ್ನೆಯಿದು.

ಮಾಲಿಯ ಪ್ರಶ್ನೆಗೆ ಸುಂದರಿ 'ಕ್ಷಮಿಸಿ' ಎನ್ನುವಂತೆ ಅವನ ಕಡೆ
ನೋಡಿದಳು. ಅವಳ ಕಣ್ಣಿನಲ್ಲಿ ಬೇಡಿಕೆಯಿತ್ತು.

"ಹೂವು ಯಾಕೆ ಬೇಕಾಗಿತ್ತು?" ಇದು ಕೀಟಲೆಯ ಪ್ರಶ್ನೆಯಾಗಿತ್ತು. ನಗುತ್ತಾ ಉತ್ತರಿಸಿದಳು ಬಂದಿದ್ದ ಚೆಲುವೆ—

"ದೇವರ ಪೂಜೆಗೆ."

"ಮನಸ್ಸಿನಲ್ಲಿರುವ ಇಷ್ಟಾರ್ಥ ಆದಷ್ಟು ಬೇಗ ಕೈಗೂಡಲೆಂದಿರ ಬೇಕು, ದೇವರಪೂಜೆ!"

"ಇಷ್ಟಾರ್ಥವೆಂದರೇನು ಎನ್ನುವುದೇ ಗೊತ್ತಿಲ್ಲ. ಅದಕ್ಕಾಗಿ ಪೂಜೆ ಮಾಡುವುದೆಂದರೇನೋ ಮೊದಲೇ ಗೊತ್ತಿಲ್ಲ."

"ಹರಕೆಯಿರಬೇಕು!"

"ಹರಕೆ!"

"'ಕಳ್ಳತನದಲ್ಲಿ ಹೂತಂದು ಒಪ್ಪಿಸುತ್ತೇನೆ' ಎಂಬ ಹರಕೆ."

"ಇದೆಂತಹ ಹರಕೆ?"

"ಮನಸ್ಸನ್ನು ಕದಿಯಲು ಮಾಡಿಕೊಂಡ ಹರಕೆ."

ಸುಂದರಿ ಮಾತಾಡಲಿಲ್ಲ. ಸುಮ್ಮನೆ ನಗುತ್ತ ನಿಂತುಕೊಂಡಳು. ಮಾಲಿ ಇನ್ನಷ್ಟು, ಹೂಗಳನ್ನು ಕುಯ್ದು ಸುಂದರಿಯ ಮಡಿಲನ್ನು ತಂಬಿದ. ಚೆನ್ನಾಗಿ ಅರಳಿದ ಗುಲಾಬಿಯೊಂದನ್ನು ಹಿಡಿದು,

> "ವನಮಾಲಿ ಈಯುವೀ ಹೂವಲಡಗಿಹುದವನ
> ಮನದಾಸೆ, ಸಂದೇಶ ನಿನಗರುಹಬೇಕೆಂದು,
> ಹೂವನಾಯುವ ಹುಡುಗಿ ಈ ಹೂವು ನಿನಗಿರಲಿ
> ಹರಕೆ ಫಲಿಸುತಬರಲಿ ಮನವ ನಗಿಸುತಿರಲಿ ॥"

ಎಂದು ಅವಳ ಬಳಿಸಾರಿ ಹೂವನ್ನು ಅವಳ ಕೈಯಲ್ಲಿಟ್ಟು, ಮಾಲಿ ತನ್ನನ್ನು ಹಿಡಿದಾಗ ಸುಂದರಿಗೆ ಏನೋ ಎಂದು ವಿಧವಾದ ಸಂತೋಷ ವುಂಟಾಗಿ ಹೃದಯ ಮಿಡಿಯಿತು. ನನ್ನ ಹರಕೆ, ಪೂಜೆಯ ಫಲ, ಇಷ್ಟಾರ್ಥ ಎಲ್ಲವೂ ನೀನೇ ಎಂದಿತು ಅವಳ ಮನಸ್ಸು. ಮಾಲಿಯ ಹಿಡಿತದಿಂದ ಕೈಕೂರಿಸಿಕೊಂಡು ನಗೆಯ ನೋಟ ಚೆಲ್ಲಿ ಸುಂದರಿ ಅಲ್ಲಿಂದ ಓಡಿದಳು.

ಕವಿತೆಯ ಭಾವಗಳಿನ್ನೂ ಪ್ರಮೀಲಳ ತಲೆಯಲ್ಲಿ ಗುಯ್‌ಗುಟ್ಟು ತ್ತಿದ್ದುವು ದುಂಬಿಯ ಹಾಗೆ. ಅವಳ ಮನಸ್ಸು ಕಲ್ಪನೆಯ ಹಿಂದೆ ಓಡಿ ಹೋಗಿತ್ತು. ಮಾಲಿಯ ಬಗ್ಗೆ ಅವಳಲ್ಲಿ ಆದರ ಮೂಡಿತ್ತು.

"ಮಾಲಿ ಎಷ್ಟು ಒಳ್ಳೆಯವನು! ಚೆಲುವೆ ಹೂ ಕದ್ದಿದ್ದರೂ ಅವಳನ್ನು ದಂಡಿಸಲಿಲ್ಲ. ಅದಕ್ಕೆ ಬದಲು ಇನ್ನಷ್ಟು ಹೂ ಕೊಟ್ಟು ಕಳುಹಿಸಿದ."

"ದಂಡಿಸುವುದಾದರೂ ಹೇಗೆ ದಂಡಸುತ್ತಾನೆ! ಚೆಲುವೆಯ ಒಲವಿನ ನೋಟದಲ್ಲಿ ಸೆರೆಯಾಳಾದ ಮಾಲಿಯ ಹೃದಯದಲ್ಲಿ ಕಠೋರತೆಗೆ ಸ್ಥಳವಿತ್ತೆ?"

"ಮಾಲಿಯ ಮನವನ್ನು ಸೂರೆಗೈಯ್ದ ಚೆಲುವೆ ಯಾರು? ಆ ಚೆಲುವೆ ಯಾರು?—ಮನಸ್ಸು ಮತ್ತೆ ಮತ್ತೆ ಪ್ರಶ್ನಿಸಿತು. ಆಸೆಯ ಮುಸುಕಿನೊಳಗೆ ಅಡಗಿದ್ದ ಹೆಣ್ಣು ಹೃದಯ ಕೌತುಕದಿಂದ ಹೇಳಿಕೊಂಡಿತು —

"ಚೆಲುವೆ ನಾನೇ ಆಗಿದ್ದರೆ!......

"ಮಾಲಿ......?"

"ನಾನು ಚೆಲುವೆ......ಮಾಲಿ?

"ಆನಂದ!" ಉದ್ವೇಗದಿಂದ ಹೇಳಿತು ಮನಸ್ಸು.

"ಹೌದು ಆನಂದನೇ ಮಾಲಿ."

ಮನಸ್ಸು ಮಾಲಿಯ ರೂಪವನ್ನು ಚಿತ್ರಿಸತೊಡಗಿತ್ತು. ಅದೇ ನಸುಗೆಂಪಿನ ಗುಂಡು ಮುಖ, ಹೊಳಪಿನ ಕಣ್ಣುಗಳು, ಕಣ್ಣಿನ ಹತ್ತಿರಕ್ಕೆ ಬಾಗಿದ್ದ ಕಪ್ಪಾದ ಅಲೆಗೂದಲು, ತುಂಟ ನಗೆಯಿಂದ ಲೇಪಿತವಾದ ತುಟಿಗಳು ಅಲ್ಲದೆ ನಗೆಯೊಡನೆಯೇ ಮೂಡಿಬಂದ ಕೆನ್ನೆ ಗುಳಿಗಳು —

"ಇದು ಆನಂದನ ರೂಪು ಹಾಗಾದರೆ ಮಾಲಿ?"

"ಮಾಲಿಯೇ ಆನಂದ."

"ಹೌದು ಮಾಲಿಯೇ ಆನಂದ......"

"ಮಾಲಿ ತನ್ನ ಮನಸ್ಸಿನ ಆಸೆಯೆಲ್ಲವನ್ನೂ ತುಂಬಿದ ಗುಲಾಬಿಯುನ್ನು ಚೆಲುವೆಗೆ ಕೊಟ್ಟ......

"ಹುಣ್ಣಿಮೆಯ ರಾತ್ರಿ! ಅದು ಆನಂದ ತನಗೆ ಕೊಟ್ಟ ಗುಲಾಬಿ! ಮಾಲಿ-ಚೆಲುವೆ-ಗುಲಾಬಿ!

"ಆನಂದ-ಪ್ರಮೀಲ-ಹುಣ್ಣಿಮೆಯ ರಾತ್ರಿ!

ಕಲ್ಪನೆಯ ಹಿಂದೆ ಓಡಿದ ಮನಸ್ಸು ಸುಖದ ಅನುಭವ ಉಂಡಂತಾಗಿ ಅರಳಿತು. ಮೈಯಲ್ಲಿ ಮಿಂಚು ಹರಿದಂತಾಗಿ 'ಝುಂ' ಮಿಡಿಯಿತು.

ಹುಚ್ಚು ಕಲ್ಪನೆಯಲ್ಲಿ ಮುಳುಗಿದ್ದವಳು ಎಚ್ಚೆತ್ತು ಒಳಗೇ ನಗುತ್ತಾ ತುಟಿ ಕಚ್ಚಿದಳು ಪ್ರಮೀಲ.

ಆನಂದ ಸೊಸೈಟಿಯಿಂದ ಬಂದವನೇ ಮೇಲೆ ನಡೆದ. ವಿಪರೀತ ಆಯಾಸವಾಗಿದ್ದುದರಿಂದ ಮಂಚದ ಮೇಲೆ ಒರಗಿ ಕ್ಷಣಕಾಲ ಕಣ್ಣು ಮುಚ್ಚಿದ.

"ಕಾಫಿ ತೆಗೆದುಕೊಳ್ಳಿ."

ಆನಂದ ಕಣ್ಣು ತೆರೆದ. ಮೇಜಿನ ಮೇಲೆ ಕಾಫಿಯ ಲೋಟವಿಟ್ಟು ಬಾಗಿಲೊರಗಿ ನಿಂತಿದ್ದಳು ಪ್ರಮೀಲ.

"ನಾನೇ ಈಗ ಕೆಳಗಿಳಿದು ಬರುತ್ತಿದ್ದೆ. ನೀವೇಕೆ ತಂದಿರಿ?"

ಆನಂದನ ಪ್ರಶ್ನೆಗೆ ಪ್ರಮೀಲ ನಕ್ಕಳು. ತಾನು ಮೇಲಕ್ಕೆ ಕಾಫಿ ತಂದ ದಿನವೆಲ್ಲಾ ಸಾಮಾನ್ಯವಾಗಿ ಆನಂದ ಹಾಗೇ ಹೇಳುತ್ತಿದ್ದುದನ್ನು ನೆನೆದು. ಆ ಮಾತಿನಲ್ಲಿ ಅರ್ಥವೇ ಇರಲಿಲ್ಲ. ಪ್ರಮೀಲ ಕಾಫಿ ತಂದು ಕೊಟ್ಟುದಕ್ಕೆ ಬದಲಾಗಿ ಹೇಳುತ್ತಿದ್ದ ಕೃತಜ್ಞತೆಯ ಮಾತು ಅದು. ಪ್ರಮೀಲೆಗೆ ಆ ಮಾತು ಕೇಳಲು ತುಂಬಾ ಇಷ್ಟ.

ಆನಂದ ಕಾಫಿಯ ಲೋಟವನ್ನು ತೆಗೆದುಕೊಂಡು ಕಾಫಿಯನ್ನು ಸವಿಯತೊಡಗಿದ.

"ಈ ದಿನ ಸೊಸೈಟಿಯಿಂದ ಬರುವುದು ಬಹಳ ಹೊತ್ತಾಯಿತು" ವೇಳೆಯನ್ನು ಗಮನಿಸಿದ ಪ್ರಮೀಲ ಹೇಳಿದಳು.

"ಇವತ್ತು ವ್ಯಾಪಾರವೇನೋ ಬೇಗ ಮುಗಿಯಿತು. ಆದರೆ ಕೊನೆಯಲ್ಲಿ ಆ ಅಯ್ಯಣ್ಣ ಮೇಷ್ಟ್ರು ತರಲೆ ಮಾಡಿಕೊಂಡು ನಿಂತುಕೊಂಡ. ಆವತ್ತಿನಿಂದೀಚೆಗೆ ಅವನದೇನೂ ತರಲೆ ಇರಲಿಲ್ಲ. ಇವತ್ತು ಮತ್ತೆ ಪ್ರಾರಂಭವಾಯಿತು!"

"ಅಂತೂ ನಿಮಗೂ ನಮ್ಮೂರವರಿಗೂ ಗುರುಬಲವಿಲ್ಲ." ಪ್ರಮೀಲ ನಕ್ಕಳು. ಆನಂದನೂ ನಕ್ಕ.

"ಅಯ್ಯಣ್ಣನ ಹತ್ತಿರ ಜಗಳಕಾದು ಬೇಜಾರಾಗಿದೆ ಅಲ್ಲ?" ಮಾತು ಮುಂದುವರಿಸಿ ಕೇಳಿದಳು.

"ಬೇಜಾರೂ ಇಲ್ಲ, ಏನೂ ಇಲ್ಲ."

"ಹಾಗಾದರೆ ಈಗ ಬೇಜಾರಾಗಬಹುದು."

"ಯಾಕೆ ?"

"ನಾನು ಹಾಗೆ ಮಾಡಿದ್ದೀನಿ. ನಿಮ್ಮ ಹೆಸರಿಗೆ ಬಂದಿದ್ದ ಟಪಾಲು ಗಳನ್ನು ತೆಗೆದು ನೋಡಿದ್ದೀನಿ."

"ಓ ಅಷ್ಟೇನೋ, ಹಾಗಾದರೆ ಇವತ್ತು ನನ್ನ ಹೆಸರಿಗೆ ಟಪಾಲು ಬಂದಿದೆಯೇನು ?"

"ಬಂದಿದೆ, ಒಂದು ಮ್ಯಾಗಜೀನು." ಪ್ರಮೀಲ ತಾನು ಹಿಡಿದಿದ್ದ ಮಾಸಪತ್ರಿಕೆಯನ್ನು ಮೇಜಿನ ಮೇಲಿಟ್ಟಳು.

ಆನಂದ ಪತ್ರಿಕೆಯನ್ನು ತೆಗೆದುಕೊಂಡು ನೋಡತೊಡಗಿದ. ತಾನು ಬರೆದಿದ್ದ ಕವಿತೆ ಪ್ರಕಟವಾಗಿದ್ದುದು ಕಂಡು ಮುಖ ಅರಳಿತು.

"ಈ ಕವಿತೆ ನೀವೂ ಓದಿದಿರಾ ?" ಆನಂದ ಕೇಳಿದ.

"ಹ್ಞೂಂ"

"ಹೇಗಿದೆ ?"

"ಬಹಳ ಚೆನ್ನಾಗಿದೆ. ನಿಮ್ಮ ಮಾಲಿ ತುಂಬಾ ಒಳ್ಳೆಯವನು, ಉದಾರಿ."

"ಚೆಲುವೆ ?" ಆನಂದ ಬೇಕೆಂದೇ ಪ್ರಶ್ನಿಸಿದ.

"ಮಾಲಿಗೆ ತಕ್ಕವಳಲ್ಲ. ಮಾಲಿಯು ಆದರ ತೋರಿಸಿದುದಕ್ಕೆ ತಕ್ಕ ಹಾಗೆ ಒಂದು ಕೃತಜ್ಞತೆಯ ನುಡಿಯೂ ಬರಲಿಲ್ಲ ಅವಳ ಬಾಯಿಯಿಂದ !"

"ಕೊನೆಯಲ್ಲಿ ತನ್ನ ಕೃತಜ್ಞತೆಯನ್ನು ತೋರಿದ್ದಾಳಲ್ಲ."

"ಅದು ಕೃತಜ್ಞತೆಯಲ್ಲ."

"ಹಾಗಾದರೆ ಚೆಲುವೆಯು ಮಾಲಿಗೆ ಯಾವ ರೀತಿ ಕೃತಜ್ಞತೆ ತೋರ ಬಹುದಾಗಿತ್ತು ?"

"ಅದು ಬರೆದವರಿಗೇ ಗೊತ್ತಿರಬೇಕು."

"ಅಂದರೆ......"

"ನಿಮಗೆ......"

"ನನಗಿಂತ 'ಹುಣ್ಣಿಮೆಯ ರಾತ್ರಿ'ಯಲ್ಲಿ ಹೃದಯದ ಹಕ್ಕಿಯ ಕರೆಗೆ 'ಓ', ಎಂದವರಿಗೆ ಇನ್ನೂ ಚೆನ್ನಾಗಿ ಗೊತ್ತಿರಬೇಕು!"

ಆನಂದ ಬೇಕೆಂದೇ ಪ್ರಮೀಲೆಯನ್ನು ಹಾಸ್ಯಮಾಡಿದ. ಆನಂದನ ಮಾತಿಗೆ ಪ್ರಮೀಲ ನಾಚಿ ತಲೆತಗ್ಗಿಸಿದಳು. ಅವಳ ಕೆನ್ನೆಗೆ ಗುಲಾಬಿಯ ರಂಗೇರಿತ್ತು. ಮಾತು ಬದಲಾಯಿಸುತ್ತ ಹೇಳಿದಳು—

"ಪ್ರಕಾಶ ಆಟಕ್ಕೆ ಹೋದವನು ಇನ್ನೂ ಬರಲೇ ಇಲ್ಲ. ಪಾಠಕ್ಕೆ ಹೊತ್ತಾಗುತ್ತೆ ಎನ್ನುವದೂ ಮರೆತುಬಿಡುತ್ತಾನೆ ಆಟದ ಭರದಲ್ಲಿ."

"ಇನ್ನೇನು ಬರಬಹುದು ಈಗ."

"ಪ್ರಕಾಶನನ್ನು ಪರೀಕ್ಷೆಗೆ ಕಟ್ಟಿಸಿದ್ದಾಯಿತೆ?"

"ಇನ್ನೂ ಇಲ್ಲ. ಯಾಕೆ?"

"ಯಾಕೂ ಇಲ್ಲ ಸುಮ್ಮನೆ......" ಪ್ರಮೀಲ ಅರ್ಧಕ್ಕೇ ಮಾತು ನಿಲ್ಲಿಸಿ ಸುಮ್ಮನಾದಳು.

"ಇನ್ನೂ ಹದಿನೈದು ದಿನ ಅವಕಾಶವಿದೆ. ಕಟ್ಟಿಸಿದರಾಯಿತು."

"ನಾನೂ ಪರೀಕ್ಷೆಗೆ ಕುಳಿತರೆ ಪಾಸಾಗುತ್ತೇನೆಯೆ?" ಪ್ರಮೀಲ ತನ್ನ ಮನಸ್ಸಿನಲ್ಲಿ ಅಡಗಿದ್ದ ವಿಷಯವನ್ನು ಹೊರಗೆಡಹಿದಳು. ಪ್ರಶ್ನೆಯಲ್ಲಿ ಆಸೆ ಮೂಡಿತ್ತು.

ರಾಜಣ್ಣನ ಹೇಳಿಕೆಯಂತೆ ಆನಂದ, ಪ್ರಮೀಲಳಿಗೆ ಮಧ್ಯಮ ಪರೀಕ್ಷೆಯ ಪಾಠ ಹೇಳುತ್ತಿದ್ದ. ಪ್ರಮೀಲಳು ಶ್ರದ್ಧೆಯಿಂದ ಕಲಿಯುತ್ತಿದ್ದಳು. ಆದರೆ ಅವಳಿಗಿದ್ದ ಅಪನಂಬಿಕೆ ಒಂದೇ—ಪರೀಕ್ಷೆಯಲ್ಲಿ ಬರೆದು ಬರಲು ಬಳ್ಳಾರಿಗೆ ಹೋಗುವುದಕ್ಕೆ ತಾಯಿ ತಂದೆ ಒಪ್ಪುವರೋ ಇಲ್ಲವೋ ಎಂದು.

ಪ್ರಮೀಲ ಕೇಳಿದ ಪ್ರಶ್ನೆಗೆ ಆಸೆಯ ಇಂಬು ಕೊಡುತ್ತಾ ಹೇಳಿದ ಆನಂದ—

"ಓಹೋ, ಖಂಡಿತವಾಗಿಯೂ ಪಾಸಾಗುತ್ತೀರಿ."

"ಹಾಗಾದರೆ ಪ್ರಕಾಶನ ಜೊತೆ ನಾನೂ ಪರೀಕ್ಷೆಗೆ ಕಟ್ಟಲಾ?

"ಇದು ವರೆಗೂ ಓದಿದುದು ಪರೀಕ್ಷೆಗೆ ಕಟ್ಟಲಾ ? ಎನ್ನುವುದಕ್ಕೇ ?
ಆನಂದ ನಕ್ಕು ಪ್ರಶ್ನಿಸಿದ. ಪ್ರಮೀಲಳ ಪ್ರಶ್ನೆಯ ಹಿಂದೆ ಅಡಗಿದ್ದ
ಅಭಿಪ್ರಾಯ ಅವನಿಗೆ ತಿಳಿದಿರಲಿಲ್ಲ.

ತಾನು ಕೇಳಿದ ಪ್ರಶ್ನೆಯಲ್ಲಿ ಅರ್ಥವೇ ಇಲ್ಲ ಎಂದುಕೊಂಡು ಪ್ರಮೀಲ
ತಾನೂ ನಕ್ಕಳು. ಮನಸ್ಸು ಮಾತ್ರ ತಾಯಿತಂದೆಯವರನ್ನು ಒಲಿಸಿಕೊಳ್ಳಲು
ಉಪಾಯ ಹುಡುಕುತ್ತಿತ್ತು.

"ಅಮ್ಮಾ ನಾನೂ ಪ್ರಕಾಶನ ಜೊತೇಲಿ ಪರೀಕ್ಷೆಗೆ ಕಟ್ಟಲೇ."
ಊಟ ಮಾಡುತ್ತ ಕುಳಿತಿದ್ದಾಗ ಪ್ರಮೀಲ ತನ್ನ ಮನಸ್ಸಿನಲ್ಲಿದ್ದ ಆಸೆಯನ್ನು
ತಾಯಿಯ ಮುಂದಿಟ್ಟಳು.

"ಹಿಂದೀ ಪರೀಕ್ಷೆಗೇನೇ......?"

"ಹ್ಞಾಂ."

"ಬಳ್ಳಾರಿಗೆ ಹೋಗಬೇಕೇನೋ ಪರೀಕ್ಷೇಗೆ."

"ಅದಕ್ಕೇ ಕೇಳಿದ್ದು ಮತ್ತೆ."

"ಯಾಕೆ ಬಿಡಮ್ಮ. ಈಗ ನೀನು ಪರೀಕ್ಷೆಲಿ ಪಾಸು ಮಾಡಿಕೊಂಡು
ಯಾವ ಕಲಶಹಾಕ್ಕೋಬೇಕಾಗಿದೆ ಇಷ್ಟಕ್ಕೊ."

ತಾಯಿಯ ಮಾತು ಕೇಳಿ ಪ್ರಮೀಲಳ ಮನಸ್ಸು ಮುದುಡಿಹೋಯಿತು.
ಆದರೂ ಪೂರ್ಣ ನಿರಾಸೆಯಾಗಿರಲಿಲ್ಲ.

"ಇದು ವರೆಗೆ ಓದಿದ್ದು ಹಾಳಾಗಬೇಕೇನೋ. ಹೇಗೂ ಪ್ರಕಾಶ
ಪರೀಕ್ಷೆಗೆ ಕಟ್ಟುತಾನೆ, ನಾನೂ ಯಾಕೆ ಕಟ್ಟಬಾರದು!"

"ನೀನು ಹುಚ್ಚು ಹುಡುಗಿ ಕಣೇ ಪ್ರಮೀ. ಪರೀಕ್ಷೆ ಎರಡು
ದಿನ ನಡೆಯುತ್ತೋ ಮೂರು ದಿನವೇ ನಡೆಯುತ್ತೋ. ಅಲ್ಲಿ ವರೆಗೆ
ಬಳ್ಳಾರೀಲಿ ಎಲ್ಲಿರ್ತಿ. ನಿನ್ನ ನೋಡಿಕೊಳ್ಳೋರು ಯಾರು ಅನ್ನೋದು
ಯೋಚನೆಯೇ ಮಾಡದೆ ಪರೀಕ್ಷೆಗೆ ಕಟ್ಟುತೀನಿ ಅಂತ ಗೆಜ್ಜೆ ಕಟ್ಟಿಕೊಂಡು
ಕುಣೀತಿ. ಪರೀಕ್ಷೆಗೆ ಅಂತ ಹೋಗೋದು, ನಿಲ್ಲಕ್ಕೆ ಜಾಗಾ ಇಲ್ಲದೆ
ಹೋಟಲೂ ಗೀಟಲೂ ಅಂತ ಹೋಗೋದು ನನಗಿಷ್ಟ ಇಲ್ಲಮ್ಮ."

"ಇದ್ಯಾಕಮ್ಮ ಹೀಗಂತೀ. ಪರೀಕ್ಷೆ ನಡೆಯೋದು ಒಂದೇ ದಿನ.
ಬೆಳಗ್ಗೆ ಹೋಗಿ ಸಂಜೆ ಬಂದುಬಿಡಬಹುದು. ಅಲ್ಲೇನಾದರೂ ಇಳಕೋ

ಬೇಕಾದರೆ ಹೋಟಲು ಹುಡುಕಿಕೊಂಡು ಯಾಕೆ ಹೋಗಬೇಕು? ವಾಮನ ರಾಯರ ಭಾವಮೈದ ಸುಬ್ಬಣ್ಣಾಚಾರ‍್ರು ಇದಾರಲ್ಲ. ಅವರ ಮನೆಗೆ ಹೋದರಾಯಿತು ಒಂದು ದಿನದ ಮಟ್ಟಿಗೆ. ಅಪ್ಪ ಬಳ್ಳಾರಿಗೆ ಹೋದಾಗೆಲ್ಲಾ ಅಲ್ಲೇ ಇಳಕೋತಾರಂತೆ."

ಸುಬ್ಬಣ್ಣಾಚಾರ್ಯರು ಆಗಾಗ್ಗೆ ರಾಂಪುರಕ್ಕೆ ಬಂದು ಹೋಗುತ್ತಿದ್ದರು. ತಮ್ಮ ಭಾವ ವಾಮನರಾಯರ ನೆರವಿನಿಂದ ಆಗಷ್ಟು ಈಗಷ್ಟು, ಆಹಾರ ದಿನಸಿಯನ್ನು ಕೊಂಡೊಯ್ಯುತ್ತಿದ್ದರು. ರೇಷನ್ ಕಾಲದಲ್ಲಿ ಗುರುರಾಜರಾಯರು ಸ್ವಲ್ಪವೇ ಸಹಾಯ ಮಾಡಿದ್ದರೂ ಸುಬ್ಬಣ್ಣಾಚಾರ್ಯರಿಗೆ ಬೆಟ್ಟದಷ್ಟು ಎನ್ನಿಸಿತ್ತು. ಪರಿಚಯ ಬೆಳೆದು, ಆತ್ಮೀಯತೆ ಮೂಡಿತ್ತು. ಬಳ್ಳಾರಿಗೆ ಬಂದಾಗ ತಮ್ಮ ಮನೆಗೇ ಬರಬೇಕೆಂದು ಸುಬ್ಬಣ್ಣಾಚಾರ್ಯರು ಬಲವಂತ ಮಾಡುತ್ತಿದ್ದರು. ಅಂತೆಯೇ ರಾಯರು ಆಚಾರ್ಯರ ಮನೆಯಲ್ಲೇ ತಂಗುತ್ತಿದ್ದರು, ಬಳ್ಳಾರಿಗೆ ಹೋದಾಗ.

ಅದೇ ವಿಷಯವನ್ನೇ ಪ್ರಮೀಲ ತಾಯಿಗೆ ತಿಳಿಸಿ, ಬಳ್ಳಾರಿಯಲ್ಲಿ ತಂಗಲು ಅನುಕೂಲವಿರುವುದನ್ನು ತೋರಿಸಿಕೊಟ್ಟಳು.

"ಯಾಕೋಮ್ಮ, ಸುಮ್ಮನೆ ಇರು ಅಂದರೆ ಆಗಲ್ಲವೇನೇ." ಅನಸೂಯಮ್ಮ ಬೆಳೆದ ಹುಡುಗಿಯನ್ನು ಊರಿಂದೂರಿಗೆ ಕಳುಹಿಸಲು ಕಳಕಳಿ ತೋರಿದರು. ಪರೀಕ್ಷೆಗೆ ಹೋಗಿ ಬಂದರೂ ತಪ್ಪೇನಲ್ಲ ಎಂದು ಅವರ ಮನಸ್ಸಿನಲ್ಲಿದ್ದರೂ ತೋರಗೊಡಲಿಲ್ಲ.

ಪ್ರಮೀಲ ಎಳೆಯ ಮಗುವಿನಂತೆ ಮೊಂಡುಗರೆಯುತ್ತಾ,

"ಏನಮ್ಮಾ......ಪರೀಕ್ಷೆಗೆ ಕಟ್ಟಲೇನೆ?" ಎಂದು ಗೋಗರೆದಳು.

"ನೋಡೋಣ ಸುಮ್ಮನಿರು, ಇವರನ್ನ ಕೇಳ್ತೀನಿ. ಏನಂತಾರೋ ಏನೋ. ಇವರು ಒಪ್ಪಿದರೆ ಕಟ್ಟೋವಂತೆ" ಅನಸೂಯಮ್ಮ ಅರ್ಧ ಸಮ್ಮತಿ ಕೊಟ್ಟರು.

ಪ್ರಮೀಲ ಪರೀಕ್ಷೆಗೆ ಕೂಡುವುದಕ್ಕೆ ರಾಯರು ಬೇಡವೆನ್ನಲಿಲ್ಲ. ತಂದೆ ಒಪ್ಪಿಗೆ ಕೊಟ್ಟುದು ಕೇಳಿ ಪ್ರಮೀಲಳಿಗೆ ಚತುರ್ಭುಜಗಳು ಬಂದ ಹಾಗಾಯಿತು. ಎಂದೋ ಹುಡುಗಿಯಿದ್ದಾಗ ಒಮ್ಮೆ ರಾಯರೊಡನೆ ಬಳ್ಳಾರಿಗೆ ಹೋಗಿದ್ದಳು. ಈಚೆಗಂತು ಆರೇಳು ವರ್ಷಗಳಿಂದ ರಾಂಪುರ

ವನ್ನು ಬಿಟ್ಟು ಇನ್ನೊಂದು ಕಡೆ ಹೋಗಿರಲಿಲ್ಲ ಪರೀಕ್ಷೆಯ ನೆಪದಲ್ಲಿ ಬಳ್ಳಾರಿಯನ್ನು ನೋಡಬಹುದೆಂಬ ಆಸೆ ಮೂಡಿತ್ತು. ಆದರೆ ಹಾಗೆ ಹೇಳಿಕೊಳ್ಳುವುದು ಚೆನ್ನಲ್ಲವೆಂದು ಅವಳ ಭಾವನೆ. ಅಂತೆಯೇ ತಾಯಿಯ ಬಳಿಯೂ ಆ ವಿಷಯ ಎತ್ತಲಿಲ್ಲ. ಕೇವಲ ಪರೀಕ್ಷೆಯ ಸಲುವಾಗಿ ತಾಯಿಯ ಬಳಿ ಮೊಂಡುತನ ಮಾಡಿದ್ದಳು.

ಆನಂದ ಈ ಮೊದಲೇ ವಿಶಾರದ ಪರೀಕ್ಷೆಗೆ ಹಣವನ್ನು ಕಳುಹಿಸಿದ್ದ. ಪ್ರಮೀಲ ಪ್ರಕಾಶರನ್ನೂ ಪರೀಕ್ಷೆಗೆ ಕೂಡಿಸುವ ಬಗ್ಗೆ ತಾನು ಮುಂದು ವರಿದು ಹೋಗುವುದು ಚೆನ್ನಲ್ಲವೆಂದು ಸುಮ್ಮನಾಗಿದ್ದ. ರಾಯರು ಒಪ್ಪಿಗೆ ಕೊಡುವುದನೇ ಕಾಯುತ್ತಿದ್ದ. ರಾಯರು ಒಪ್ಪಿಗೆ ಕೊಟ್ಟ ಮೇಲೆ ಒಂದು ದಿನ ಬಳ್ಳಾರಿಗೆ ಹೋಗಿ ಪರೀಕ್ಷೆಯ ಹಣ ಕಟ್ಟಿ ಬಂದ. ಪ್ರಕಾಶ ಪ್ರಥಮ ಪರೀಕ್ಷೆಗೆ; ಪ್ರಮೀಲ ಮಧ್ಯಮ ಪರೀಕ್ಷೆಗೆ.

ಪರೀಕ್ಷೆಗಾಗಿ ಅಭ್ಯಾಸ ಹುರುಪಿನಿಂದ ಸಾಗಿತ್ತು.

ಪರೀಕ್ಷೆ ಶನಿವಾರ, ಭಾನು, ಸೋಮವಾರ ನಡೆಯುವುದಿತ್ತು. ಆನಂದನ ಪರೀಕ್ಷೆ ಶನಿವಾರದಿಂದಲೇ ಇತ್ತು ಪ್ರಮೀಲ ಪ್ರಕಾಶರದು ಭಾನುವಾರ. ಆನಂದ ಶುಕ್ರವಾರವೇ ಬಳ್ಳಾರಿಗೆ ಹೊರಟ. ಪ್ರಮೀಲ, ಪ್ರಕಾಶರು ಶನಿವಾರ ಸಂಜೆಯ ಬಸ್ಸಿಗೆ ಹೊರಡುವುದೆಂದು ಗೊತ್ತಾಗಿತ್ತು.

ಗುರುರಾಜರಾಯರು ಆನಂದನಿಗೆ ಹೇಳಿದರು--

"ಸುಬ್ಬಣ್ಣಾಚಾರ್ಯರ ಮನೆ ಕಾಲುಬಜಾರದಲ್ಲಿ ಪಾಂಡುರಂಗ ಸ್ವಾಮಿ ದೇವಸ್ಥಾನದ ಬಲಗಡೆಗಿದೆ. ಅಲ್ಲಿಗೇ ಹೋಗು. ಪರವಾಗಿಲ್ಲ ಜನ ಒಳ್ಳೆಯವರು ಭಾವಿಸುತ್ತಾರೆ."

ಅನಸೂಯಮ್ಮ ಹೇಳಿದರು—

"ನಾಳೆ ಸಂಜೆ ಬಸ್ಸಿನ ಹತ್ತಿರ ಬಂದಿರಪ್ಪ."

"ಹಾಗೇ ಆಗಲಿ" ಎಂದು ಆನಂದ ಗುರುರಾಜರಾಯರಿಗೂ ಅನ ಸೂಯಮ್ಮನವರಿಗೂ ನಮಸ್ಕರಿಸಿದ. ಅನಸೂಯಮ್ಮ ಮನಸ್ಸಿನಲ್ಲೇ, 'ಎಷ್ಟು ವಿನಯ ಈ ಹುಡುಗಂದು' ಎಂದು ಕೊಂಡರು. ಹೃದಯಪೂರ್ವಕ ವಾಗಿ ಹರಸಿದರು. "ಫಸ್ಟ್ ಕ್ಲಾಸಿನಲ್ಲಿ ಬಾಪ್ಪ. ಜಯ ತಗೊಂಡು ಬಾ" ಗುರುರಾಜರಾಯರೂ "ಒಳ್ಳೆಯದಾಗಲಿ, ಚೆನ್ನಾಗಿ ಬರಿ ಪರೀಕ್ಷೇಲಿ" ಎಂದರು. ಅವರಿಗೂ ಆನಂದನ ನಡತೆ ಹಿಡಿಸಿತು.

ಬಸ್ಸಿನಿಂದಿಳಿದ ಆನಂದ ನೇರವಾಗಿ ಕಾಲುಬಜಾರಕ್ಕೆ ನಡೆದ. ಕಾಲು ಬಜಾರದಲ್ಲಿ ಸುಬ್ಬಣ್ಣಾಚಾರ್ಯರ ಮನೆ ಹುಡುಕುವುದೇನೂ ಕಷ್ಟವಾಗಲಿಲ್ಲಿ. ಸುಬ್ಬಣ್ಣಾಚಾರ್ಯರು ಬಾಗಿಲಿನಲ್ಲೇ ನಿಂತಿದ್ದರು. ಆನಂದನನ್ನು ಕಂಡವರೇ,

"ಓಹೋ ಯಾವಾಗ ಬಂದೆಯಪ್ಪ ಆನಂದ ಬಾ" ಎಂದು ಸ್ವಾಗತಿಸಿದರು. ಸುಬ್ಬಣ್ಣಾಚಾರ್ಯರ ಹಿಂದೆಯೇ ಆನಂದ ಒಳಗೆ ನಡೆದ. ಸುಬ್ಬಣ್ಣಾಚಾರ್ಯರು ಅಲ್ಲಿಯೇ ಓದುತ್ತ ಕುಳಿತಿದ್ದ ಹತ್ತು ವರ್ಷದ ಮಗ ಮಾಧುವಿಗೆ "ಚಾಪೆ ಹಾಸೋ" ಎಂದರು. ಆನಂದ "ಏನೂ ಪರವಾಗಿಲ್ಲ ಬಿಡಿ" ಎಂದ. ಅಷ್ಟು ಹೊತ್ತಿಗೆ ಮಾಧು ಚಾಪೆ ಹಾಸಿದ್ದ. ಇಬ್ಬರೂ ಕುಳಿತರು.

"ಬಹಳ ಅಪರೂಪಕ್ಕೆ ಬಂದ ಹಾಗಾಯಿತು. ಬಳ್ಳಾರಿಗೆ ಇದೇ ಮೊದಲೋ ಅಥವಾ......ಬರುತ್ತಿರೋದು."

"ಇದೇ ಮೊದಲು. ನಾಳೆ ಪರೀಕ್ಷೆಯಿದೆ. ಅದಕ್ಕೋಸ್ಕರವೇ ಬಂದಿದ್ದೆ." ಆನಂದ, ಬಂದಿದ್ದ ಕಾರಣ ತಿಳಿಸಿದ.

"ಓಹೋ ಹಿಂದೀ ಪರೀಕ್ಷೆಗೋ. ನಮ್ಮ ಮಾಧೂ ಓದೋ ಸ್ಕೂಲಿನಲ್ಲೇ ನಡೆಯುತ್ತೆ. ಇನ್ನೂ ಬೇಕಾದಷ್ಟು ಹೊತ್ತಿದೆ. ಬೇಕಾದರೆ ಇಬ್ಬರೂ ಹೋಗಿ ಸೀಟ್ ಅರೇಂಜ್‌ಮೆಂಟ್ಸ್ ನೋಡಿಕೊಂಡು ಬನ್ನಿ" ಎಂದರು ಸುಬ್ಬಣ್ಣಾಚಾರ್ಯರು.

ಪತಿಯೊಡನೆ ಯಾರೋ ಹೊಸಬರು ಮಾತಾಡುತ್ತಿರುವುದನ್ನು ಕೇಳಿ ಅಡುಗೆಯ ಮನೆಯಲ್ಲಿ ಕೆಲಸದಲ್ಲಿ ತೊಡಗಿದ್ದ ರಾಧಮ್ಮ ಹೊರಗೆ ತಲೆ ಹಣಿಕಿಹಾಕಿದರು. ಆನಂದ ಕುಳಿತಿರುವುದನ್ನು ಕಂಡು,

"ಈಗ ಬಂದಿರಾ? ಎಲ್ಲಾ ಆರೋಗ್ಯವಾಗಿದಾರೆತಾನೆ. ನಮ್ಮ ಮನೆಯಲ್ಲೂ ಎಲ್ಲಾ ಚೆನ್ನಾಗಿದಾರೆಯೆ?" ಎಂದು ಯೋಗಕ್ಷೇಮ ವಿಚಾರಿಸಿದರು.

"ಹ್ಞೂಂ, ಎಲ್ಲಾ ಚೆನ್ನಾಗಿದಾರೆ."

"ನಿಮ್ಮ ಪ್ರಕಾಶನ್ನೂ ಕರಕೊಂಡು ಬಂದಿದ್ದರೆ ಚೆನ್ನಾಗಿತ್ತು, ನಾನೂ ಬಳ್ಳಾರಿಗೆ ಬರ್ತೀನಿ ಅಂತ ಕೇಳ್ತಾ ಇದ್ದ." ರಾಧಾಬಾಯಮ್ಮ, ತಾವು ಹಿಂದೊಮ್ಮೆ ರಾಂಪುರಕ್ಕೆ ಹೋಗಿದ್ದಾಗ ತಾನೂ ಬಳ್ಳಾರಿಗೆ ಬರುತ್ತೇನೆಂದು ಪ್ರಕಾಶ ಹೊರಡುವ ಸಮಯದಲ್ಲಿ ಹಟ ಮಾಡಿದ್ದುದನ್ನು ನೆನೆದು ಹೇಳಿದರು.

"ಪ್ರಕಾಶ ಮತ್ತು ಅವನ ಅಕ್ಕ ನಾಳೆ ಸಂಜೆ ಬರ್‍ತಾರೆ. ಅವರೂ ಪರೀಕ್ಷೆಗೆ ಕಟ್ಟಿದ್ದಾರೆ. ನನಗೆ ನಾಳೆಯೇ ಪೇಪರ್ ಇದ್ದುದರಿಂದ ಇವತ್ತೇ ಬಂದೆ."

"ಒಳ್ಳೆಯದೇ ಆಯಿತು. ಅನಸೂಯಮ್ಮನೋರೇ ಆಗಲೀ ಹುಡುಗರೇ ಆಗಲೀ ಒಂದುಸಲಕ್ಕಾದರೂ ಬಂದಿರಲಿಲ್ಲ. ಅಂತೂ ಪರೀಕ್ಷೆ ನೆಪದಿಂದ ಲಾದರೂ ಬರೋಹಾಗಾಯಿತಲ್ಲ. ಅದೇ ಸಂತೋಷ ನಮಗೆ." ಎಂದು ರಾಧಾಬಾಯಮ್ಮ ಒಳಗೆ ನಡೆದರು. ಸ್ವಲ್ಪ ಹೊತ್ತಿನಲ್ಲೇ ಎರಡು ಲೋಟ ದಲ್ಲಿ ಕಾಫಿ ತಂದಿಟ್ಟರು.

ನೆಪಮಾತ್ರಕ್ಕೆ ಓದುತ್ತ ಕುಳಿತಿದ್ದ ಮಾಧು ಸುಬ್ಬಣ್ಣಾಚಾರ್ಯರು 'ಸ್ಕೂಲಿಗೆ ಹೋಗಿ ಸೀಟ್ ಅರೇಂಜ್‌ಮೆಂಟ್ಸ್ ನೋಡಿಕೊಂಡು ಬನ್ನಿ' ಎಂದಾಗಲೇ ಪುಸ್ತಕಗಳನ್ನು ಮುಚ್ಚಿಟ್ಟು ಹೊರಗೆ ಹೊರಡಲು ಸಿದ್ಧನಾಗಿದ್ದ.

ಕಾಫಿಯನ್ನು ಕುಡಿದ ಮೇಲೆ ಆನಂದ ಹೊರಗೆ ಹೊರಟ ಮಾಧುವಿ ನೊಡನೆ ರಾಧಾಬಾಯಮ್ಮ,

"ಮಾಧೂ ಸ್ಕೂಲು ತುಂಬಾ ದೂರ ಇದೆ. ಕತ್ತಲು ಮಾಡಿಕೋ ಬೇಡಿ. ಬೇಗ ಬಂದು ಬಿಡಿ" ಎಂದರು, ಇಬ್ಬರೂ ಬ್ರೂಸ್‌ಪೇಟೆಗೆ ಹೊರಟಿದ್ದಾರೆಂಬುದು ತಿಳಿದು.

ಇಬ್ಬರೂ ಬ್ರೂಸ್‌ಪೇಟೆಯ ಕಡೆಗೆ ಹೊರಟರು.

ಮಾಧು ನೇರವಾಗಿ ಮುನಿಸಿಪಲ್ ಹೈಸ್ಕೂಲಿಗೆ ಕರೆದುಕೊಂಡು ಹೋದ. ಎಲ್ಲ ತರಗತಿಗಳನ್ನೂ ಉತ್ಸಾಹದಿಂದ ತೋರಿಸಿಕೊಂಡು ಬಂದ ಮಾಧು ತನ್ನ ತರಗತಿಯ ಬಳಿ ನಿಂತು,

"ಇದು ನಮ್ಮ ಕ್ಲಾಸು ಪಸ್ಟ್‌ಫಾರಂ 'ಬಿ'" ಎಂದ.

ಆನಂದ ಸುತ್ತಲೂ ನೋಡಿಕೊಂಡು ಬಂದ ಮೇಲೆ ತನ್ನ ರಿಜಿಸ್ಟರು ನಂಬರು ನೋಡಿಕೊಂಡ. ಇಬ್ಬರೂ ತಿರುಗಾಡಿಕೊಂಡು ಮತ್ತೆ ಮನೆಯ ಕಡೆ ನಡೆದರು.

ಮಾರನೆಯ ದಿನ ಒಂಭತ್ತು ಗಂಟೆಗೇ ಹೊರಟ ಆನಂದ. ಮಧ್ಯಾಹ್ನ ಊಟಕ್ಕೆ ತೊಂದರೆಯಾಗದಂತೆ ಮಾಧುವಿನ ಕೈಯಲ್ಲಿ ಟಿಫನ್‌ಕ್ಯಾರಿಯರ್‌ ನಲ್ಲಿ ಊಟ ಕಳಿಸುವುದಾಗಿ ರಾಧಾಬಾಯಮ್ಮ ಹೇಳಿದರು.

ಬೆಳಿಗ್ಗೆ ಆನಂದ ಪರೀಕ್ಷಾಭವನದಲ್ಲಿ ನೆಮ್ಮದಿಯಿಂದ ಕುಳಿತು ಉತ್ತರ ಬರೆದ. ಪ್ರಶ್ನಪತ್ರಿಕೆಗಳು ಸುಲಭವಾಗಿದ್ದುವು. ಮಧ್ಯಾಹ್ನ ಮಾಧು ಊಟ ತಂದಿದ್ದ. ಮಧ್ಯಾಹ್ನದ ಪ್ರಶ್ನೆಪತ್ರಿಕೆಗೂ ಸಮಾಧಾನದಿಂದ ಉತ್ತರಿ ರಿಸ್ದಿ. ಸಂಜೆ ಪರೀಕ್ಷಾಭವನವನ್ನು ಬಿಡುವಾಗ ಆನಂದ ಪ್ರಮೀಲ ಪ್ರಕಾಶರುಗಳ ರಿಜಿಸ್ಟರು ನಂಬರುಗಳನ್ನೂ ಅವರ ಸ್ಥಳಗಳನ್ನು ನೋಡಿ ಕೊಂಡ. ಪ್ರಥಮ ಪರೀಕ್ಷೆಯ ವಿದ್ಯಾರ್ಥಿಗಳನ್ನು ಪಕ್ಕದ ತರಗತಿಗಳಲ್ಲಿ ಕೂಡಿಸಲು ಏರ್ಪಾಡಾಗಿತ್ತು. ಮಧ್ಯಮ ಪರೀಕ್ಷೆಯ ವಿದ್ಯಾರ್ಥಿನಿಯರನ್ನು ವಿಶಾರದ ಪರೀಕ್ಷೆಗೆ ಕುಳಿತಿದ್ದ ವಿದ್ಯಾರ್ಥಿನಿಯರ ಗುಂಪಿನಲ್ಲಿ ಸೇರಿಸಿದರು ಪ್ರಮೀಲಳ ಜಾಗವೂ ಅಲ್ಲೇ ಇತ್ತು. ಇದನ್ನು ಕಂಡು ಆನಂದನಿಗೆ ಸಂತೋಷ ವಾಯಿತು ತಾನು ಕೂಡುವ ಜಾಗದಿಂದ ಎಡಗಡೆಯ ಎದುರಿನ ಮೂಲೆ ಯಲ್ಲಿ ಪ್ರಮೀಲ!

ಬಸ್ಸಿನ ಬಳಿಗೆ ಹೋಗಬೇಕಾದುದರಿಂದ ಸರಸರ ಬಸ್‌ಸ್ಟಾಂಡ್ ಕಡೆ ಧಾವಿಸಿದ. ಬಸ್ಸಿನ್ನೂ ಬಂದಿಲ್ಲವಾದ್ದರಿಂದ ತನ್ನ ಜೇಬಿನಲ್ಲಿದ್ದ ಪ್ರಶ್ನ ಪತ್ರಿಕೆಯನ್ನು ನೋಡುತ್ತ ತಾನು ಬರೆದಿದ್ದ ಉತ್ತರಕ್ಕೆ ಹೋಲಿಸುತ್ತ ಸಮಾಧಾನ ಪಟ್ಟುಕೊಳ್ಳತೊಡಗಿದ. ಅಷ್ಟರಲ್ಲೇ ಬಸ್ಸೂ ಬಂದಿತು. ಆನಂದ ಪ್ರಶ್ನಪತ್ರಿಕೆಗಳನ್ನು ಜೇಬಿಗೆ ಸೇರಿಸಿ ಬಸ್ಸಿನತ್ತ ನಡೆದ.

ಪ್ರಮೀಲ ಪ್ರಕಾಶರು ಬಸ್ಸಿನಿಂದ ಇಳಿದು ಆನಂದನನ್ನು ನಿರೀಕ್ಷಿಸು ತ್ತಿದ್ದರು. ಆನಂದ ಅವರ ಬಳಿ ಹೋಗಿ ಅವರನ್ನು ಕರೆದುಕೊಂಡು ಮನೆಯತ್ತ ಹೊರಟ.

"ಸುಬ್ಬಣ್ಣಾಚಾರ್ರ ಮನೆ ಯಾವ ಕಡೆಗಿದೆ?" ಪ್ರಮೀಲ ಕೇಳಿದಳು.

"ಇಲ್ಲಿಂದ ತುಂಬಾ ದೂರವಿದೆ, ಕಾಲುಬಜಾರದಲ್ಲಿದೆ, ಯಾಕೆ?"

"ಯಾಕೂ ಇಲ್ಲ!"

"ಜಟಕಾದಲ್ಲಿ ಹೋಗೋಣವೆ?"

"ಉಹ್ಞು! ಏನೂ ಬೇಡಿ" ಪ್ರಮೀಲ ತಟಕ್ಕನೆ ಹೇಳಿದಳು.

ಹಾಗೆ ಹೇಳುವುದರಲ್ಲಿ ಉದ್ದೇಶವೂ ಇತ್ತು. ಯಾವಾಗಲೋ ಚಿಕ್ಕ ಹುಡುಗಿಯಾಗಿದ್ದಾಗ ಒಮ್ಮೆ ಬಳ್ಳಾರಿಯನ್ನು ಕಂಡದ್ದು. ಈಗ ಹೊಸ ದಾಗಿ ಬಂದಿರುವುದರಿಂದ ಪಟ್ಟಣದ ಬೆಡಗನ್ನು ಜಟಕಾದಿಂದ ನೋಡಲಾಗು

ವುದಿಲ್ಲವೆಂಬುದು ಅವಳ ಎಣಿಕೆ. ಅದೂ ಅಲ್ಲದೆ ಆನಂದನೂ ಇರುವುದರಿಂದ ಅವನ ಸಂಗಡ ನಗೆಯೊಡನೆ ನಗೆ ಬೆರೆಸಿ ಹರುಷಪಡಬೇಕೆಂಬ ಅಭಿಲಾಷೆ. ಜಟಕಾದಲ್ಲಿ ಕುಳಿತು ಆದಷ್ಟು ಬೇಗ ಮನೆಸೇರಿ ಪಂಜರದ ಹಕ್ಕಿಯಾಗುವುದು ಅವಳಿಗೆ ಖಂಡಿತ ಇಷ್ಟವಿರಲಿಲ್ಲ. ನಿಧಾನವಾಗಿ ಹೆಜ್ಜೆ ಹಾಕುತ್ತ ರಸ್ತೆಯ ಮೇಲೆ ಹೋಗುತ್ತಿದ್ದ ಬಸ್ಸು, ಲಾರಿ, ಕಾರುಗಳು ಹಾಗು ಜನರನ್ನು ನೋಡಿ ಆಶ್ಚರ್ಯದಿಂದ ಹೇಳಿದಳು—

"ಎಷ್ಟು ಧೈರ್ಯದಿಂದ ಓಡಾಡುತ್ತಾರೆ ಈ ಜನ! ಸ್ವಲ್ಪವೂ ಭಯವೇ ಇಲ್ಲ. ಜನಗಳೂ ಅಷ್ಟೆ ಅಷ್ಟೊಂದು ಮಂದಿ!"

"ನಮ್ಮೂರಿಗಿಂತ ಎಷ್ಟೊಂದು ದೊಡ್ಡ ಊರು!"

ಪ್ರಕಾಶನೂ ಆಶ್ಚರ್ಯದಿಂದ ಹೇಳಿದ.

"ಇದು ಬಳ್ಳಾರಿ, ರಾಂಪುರವಲ್ಲ. ಇದಕ್ಕೂ ದೊಡ್ಡದಾಗಿವೆ ಬೆಂಗಳೂರು ಮೈಸೂರುಗಳು." ಆನಂದ ಅವರಿಬ್ಬರ ಮುಗ್ಧತೆಗೆ ನಗುತ್ತ ಹೇಳಿದ, ನಿರಿಗಳನ್ನು ಚಿಮ್ಮುತ್ತ ನಡೆಯುತ್ತಿದ್ದ ಪ್ರಮೀಲಳ ಕಡೆ ನೋಡುತ್ತ.

"ಬೆಂಗಳೂರು ನೀವೂ ನೋಡಿದ್ದೀರಾ. ಈ ಊರಿಗೂ ದೊಡ್ಡದೆ?" ಕಣ್ಣರಳಿಸಿ ಕೇಳಿದ ಪ್ರಕಾಶ. ಬಳ್ಳಾರಿಯನ್ನಂತೂ ಅವನಿದು ವರೆಗೆ ನೋಡಿ ಇರಲಿಲ್ಲ. ಬೆಂಗಳೂರು ಬಳ್ಳಾರಿಗಿಂತಲೂ ದೊಡ್ಡದೆಂದ ಮೇಲೆ!—ಮಾಸ್ತರು ಬೆಂಗಳೂರು ನೋಡಿದ್ದರೆ ಮಾಸ್ತರಿಗಿಂತ ತಿಳಿದವರು ದೊಡ್ಡವರು ಯಾರಿದ್ದಾರೆ! ಎಂಬುದು ಪ್ರಕಾಶನ ಮುಗ್ಧ ತರ್ಕ.

"ಅಯ್ಯೋ ಬೆಪ್ಪ! ಅವರು ಬೆಂಗಳೂರಿಂದಲೇ ಅಲ್ಲವೇನೋ ರಾಂಪುರಕ್ಕೆ ಬಂದಿದ್ದು?" ಪ್ರಕಾಶನ ಪ್ರಶ್ನೆಗೆ ನಕ್ಕು ಕೇಳಿದಳು ಪ್ರಮೀಲ.

ಅವಳಿಗೂ ಆಶ್ಚರ್ಯವೇ. ಬೆಂಗಳೂರು ಇನ್ನು ಹೇಗಿರಬಹುದು! ಎನ್ನಿಸಿತ್ತು ಅವಳಿಗೂ.

ಆನಂದನಿಗೆ ಇದೊಂದೂ ಗಮನದಲ್ಲಿರಲಿಲ್ಲ. ಅವನ ದೃಷ್ಟಿಯೆಲ್ಲಾ ಪ್ರಮೀಲಳ ಮೇಲಿತ್ತು. ಪ್ರಮೀಲ ತೆಳುವಾದ ಹಳದಿಯ ವಾಯಿಲ್ ಸೀರೆ ಉಟ್ಟು ಬಿಳಿಯ ಜಾಕೆಟ್ ಧರಿಸಿದ್ದಳು. ನಿರಿಗಳನ್ನು ಚಿಮ್ಮುತ್ತ ನಿಧಾನವಾಗಿ ಬಳುಕಿ ನಡೆಯುತ್ತಿದ್ದ ಠೀವಿ ಆನಂದನನ್ನು ಆಕರ್ಷಿಸಿತ್ತು. ರಸ್ತೆಯ ಮೇಲೆ ಹಾದು ಹೋಗುತ್ತಿದ್ದ ಎಷ್ಟೋ ಮಂದಿಯನ್ನು ನೋಡಿದ.

ಅವರೂ ಸುಂದರಿಯರೇ. ಆದರೆ ಪ್ರಮೀಲಳಷ್ಟು ಸುಂದರಿಯರಲ್ಲ ಎಂದವನ ತರ್ಕ. ಕೃತಕ ಸಾಧನಗಳಿಂದ ಸೌಂದರ್ಯ ಬೆಳಗುವ ಈ ಪಟ್ಟಣದ ಹೆಣ್ಣುಗಳಿಗಿಂತ ಏನೂ ಇಲ್ಲದೆ ಇರುವ ಹಳ್ಳಿಯ ಹೆಣ್ಣು ಪ್ರಮೀಲಳೇ ಚೆನ್ನು ಎನಿಸಿತು. ಪ್ರಮೀಲ ಸುಂದರಿ ಹೌದೋ ಅಲ್ಲವೋ ಆ ಪ್ರಶ್ನೆ ಬೇಕಲ್ಲ. ಆದರೆ ಅವಳ ಕಣ್ಣುಗಳು! ಆ ಹೊಳಪು! ಅವಳ ಕಣ್ಣುಗಳಲ್ಲಿತ್ತು. ಕೇವಲ ಅವಳ ಸೌಂದರ್ಯವೇಕೆ? ವಿಶ್ವಸೌಂದರ್ಯವೇ ಅವಳ ಕಣ್ಣುಗಳಲ್ಲಿ ಅಡಗಿದ್ದಂತೆ ಆನಂದನ ಭಾವನೆ.

ಆನಂದ ಅವಳ ಸೌಂದರ್ಯವನ್ನೇ ಮೆಲುಕು ಹಾಕುತ್ತ ಬರುತ್ತಿದ್ದ. ಪ್ರಮೀಲೆಯೂ ಆನಂದನ ಕಡೆಯೇ ದೃಷ್ಟಿಸುತ್ತ ಆಗ್ಗಾಗ್ಗೆ ದೃಷ್ಟಿ ಹೊರಳಿಸುತ್ತ ನಡೆಯುತ್ತಿದ್ದಳು.

"ಪೇಪರು ಹೇಗಿತ್ತು?" ಇದು ಪ್ರಮೀಲೆಯ ಪ್ರಶ್ನೆ.

ಪ್ರಶ್ನೆಪತ್ರಿಕೆಯ ಹಳದಿಯನ್ನು ಜೇಬಿನಲ್ಲೇ ಕಂಡ ಆನಂದ ಪ್ರಮೀಲೆಯ ಸೀರೆಯನ್ನು ನೋಡುವ ನೆಪದಲ್ಲಿ ಅವಳ ನಿಲುವನ್ನು ದೃಷ್ಟಿಸುತ್ತಾ ಮಾತಿನಲ್ಲಿ ನಗೆಬೆರಸಿ ಅಣಕು ಧ್ವನಿಯಲ್ಲಿ ಹೇಳಿದ.

"ಹಳದಿ!......"

ತನ್ನ ಸೀರೆಯ ಮೇಲೆ ದೃಷ್ಟಿಯಿಟ್ಟು ಅಣಕವಾಡಿದ್ದು ಕಂಡು ಪ್ರಮೀಲೆಗೆ ತುಂಬಾ ನಾಚಿಕೆಯಾಯಿತು. ಸಂಜೆಗೆಂಪಿನಿಂದ ಲೇಪಿತವಾಗಿದ್ದ ಅವಳ ಕೆನ್ನೆಗಳು ಮತ್ತಷ್ಟು ಕೆಂಪೇರಿದುವು. ತಮ್ಮಿಬ್ಬರಿಗೇ ಕೇಳಿಸುವಂತೆ ಮೆಲ್ಲಗೆ-ಮೆಲ್ಲಗೆ ಹೇಳಿದಳು.

"ಸೀರೆಯ ಬಣ್ಣವಲ್ಲ ನಾನು ಕೇಳಿದ್ದು! ಪೇಪರು ಹೇಗಿತ್ತು ಅಂದೆ." ಮಾತಿನಷ್ಟೇ ಚುರುಕಾಗಿತ್ತು ಅವಳ ಆಗಿನ ಕುಡಿ ನೋಟ.

"ಅದೇ ಹೇಳಿದೆನಲ್ಲ ಹಳದಿ ಅಂತ" ಎಂದು ಆನಂದ ಜೇಬಿನಲ್ಲಿದ್ದ ಪ್ರಶ್ನೆಪತ್ರಿಕೆಯನ್ನು ತೆಗೆದು ತೋರಿಸುತ್ತ,

"ಇಲ್ಲಿ ನೋಡಿ ಈಗಲಾದರೂ ನನ್ನ ಮಾತು ನಂಬಿದಿರಾ?" ಎಂದ ನಗುತ್ತಾ.

"ಪೇಪರು ಯಾವ ಬಣ್ಣ ಅನ್ನಲಿಲ್ಲ. ಪ್ರಶ್ನೆಗಳು ಕಷ್ಟವಾಗಿದ್ದುವೋ ಸುಲಭವೋ? ಎಂದೆ."

"ಹಾಗೆ ಮೊದಲೇ ಕೇಳಿದ್ದರೆ ಇಷ್ಟೊಂದು ಫಜೀತಿ ಆಗುತ್ತಲೇ ಇ
ಲಿಲ್ಲ. ಒಗಟೊಗಟಾಗಿ ಕೇಳಿದರೆ ನನಗೆ ಹೇಗೆ ಗೊತ್ತಾಗಬೇಕು ಹೇಳು?

"ನೀವು ಬೇಕಾಗಿಯೇ ತಮಾಷೆ ಮಾಡ್ತಿದ್ದೀರಿ. ನಿಮಗೆ ಏನ
ಗೊತ್ತಾಗೊಲ್ಲ. ಬಾಯಿಗೆ ಬೆಟ್ಟಿಟ್ಟರೆ ಕಚ್ಚುವುದೂ ಬರತ್ತೋ ಇಲ್ಲವೋ?
ಮಾತಿನ ವ್ಯಂಗ್ಯಕ್ಕಿಂತ ಅವಳ ಕತ್ತು ಕೊಂಕಿಸುವ ರೀವಿ ಆನಂದನಿ
ಹಿತವಾಗಿತ್ತು.

"ಬೆಟ್ಟಿಟ್ಟರೆ ಗೊತ್ತಾಗುತ್ತೆ ಕಚ್ಚೋಕ್ಕೆ ಬರುತ್ತೋ ಇಲ್ಲವೋ ಅನ್ನೋ
ದು!" ಆನಂದ ಸ್ವಲ್ಪ ಹತ್ತಿರಬಂದು ಸೆರಗಿನ ಮರೆಯಲ್ಲಿದ್ದ ಕೈಯನ್ನು ಮೃದು
ವಾಗಿ ಅದುಮಿದ. ಪ್ರಮೀಲೆಯ ದೇಹ ಕಂಪಿಸಿತು. ಮೈಯೆಲ್ಲಾ ಬೆವೆತು
ಹೋಯಿತು. ಮುಖ ರಕ್ತದ ಹೊಂಡದಲ್ಲಿ ಅದ್ದಿದ ಹಾಗಿತ್ತು. ಆನಂದನ
ವರ್ತನೆ ಅವಳಿಗೆ ಹಿತವಾಗಿದ್ದರೂ ನೋಡಿದವರು ಏನೆಂದುಕೊಳ್ಳುತ್ತಾರೋ
ಎಂದು ಭಯವಾಯಿತು. ರಸ್ತೆಯ ಹಿಂದೆ ಮುಂದೆ ಅಕ್ಕಪಕ್ಕಗಳಲ್ಲಿ
ನೋಡಿದಳು. ಸದ್ಯ! ದೂರದಲ್ಲಿ ಹೋಗುತ್ತಿದ್ದ ಜನಗಳನ್ನು ಬಿಟ್ಟರೆ
ಅಲ್ಲಿ ಯಾರೂ ಇರಲಿಲ್ಲ. ಪ್ರಕಾಶನೂ ಇರಲಿಲ್ಲ. ಪ್ರಕಾಶ ದೂರದಲ್ಲಿ
ಮನೆಯ ಗೋಡೆಯ ಮೇಲೆ ಇದ್ದ ಸಿನಿಮಾ ಗೊಂಬೆಗಳನ್ನು ನೋಡುತ್ತಿದ್ದ.
ಪ್ರಮೀಲ ಮಾತು ಬದಲಾಯಿಸಿ,

"ಅಲ್ಲಿ ನೋಡಿ ಪ್ರಕಾಶ ಹೇಗೆ ನಿಂತಿದಾನೆ ಜೋಡಿ ಹಾಗೆ" ಎಂದಳು
ಪ್ರಕಾಶನ ಕಡೆ ತಿರುಗಿ. ಆನಂದ ಹಿಂದಕ್ಕೆ ತಿರುಗಿ ಪ್ರಕಾಶನನ್ನು ಕೈತಟ್ಟಿ
ಕರೆದ. ಪ್ರಕಾಶ ಬರುತ್ತಲೂ,

"ಸಿನಿಮಾ ನೋಡಬೇಕೇನು? ನಾಳೆ ಹೋಗೋಣವಂತೆ ಸುಮ್ಮನಿರು"
ಎಂದು ಪ್ರಮೀಲೆಯ ಕಡೆ ನೋಡಿದ ಚುಚ್ಚುವ ಹಾಗೆ. ಪ್ರಮೀಲ ಮಾತಾಡ
ಲಿಲ್ಲ ತುಟಿಕಚ್ಚಿದಳು ಅಷ್ಟೆ! ಆನಂದನ ಚುಚ್ಚು ನೋಟ ಅವಳ ಹೃದಯ
ದಲ್ಲಿ ಕೋಲಾಹಲವೆಬ್ಬಿಸಿತ್ತು.

ಬಸ್ಸಿನಿಂದ ಬರುವವರನ್ನು ನಿರೀಕ್ಷಿಸುತ್ತಾ ಬಾಗಿಲಲ್ಲೇ ನಿಂತಿದ್ದರು
ರಾಧಮ್ಮ. ಮೂವರೂ ನಡೆದೇ ಬಂದುದನ್ನು ಕಂಡ ಅವರು,

"ಜಟಕಾದಲ್ಲಿ ಬರಬಹುದಾಗಿತ್ತು; ತುಂಬಾ ದೂರ ನಡೆದೇ ಬಂದು
ಬಿಟ್ಟಿರಿ." ಎಂದು ಪ್ರಮೀಲೆಯನ್ನುದ್ದೇಶಿಸಿ,

"ಅಂತೂ ನಮ್ಮ ಮನೆಗೂ ಬಂದೆಯಲ್ಲ. ನಿಮ್ಮ ತಾಯೀನೂ ಬಂದಿದ್ದರೆ ಚೆನ್ನಾಗಿರುತ್ತಿತ್ತು" ಎಂದರು. ಮಾತಿನಲ್ಲಿ ವಿಶ್ವಾಸ ಬೆರೆತಿತ್ತು.

"ಅವರು ಯಾವಾಗಲಾದರೂ ಬರ್ತಾರೆ."

"ಸುಮ್ಮನೆ ಹಾಗನ್ನೋದು. ನಮ್ಮ ಮನೆಗೆ ಯಾಕಮ್ಮ ಬರತೀರಿ. ಏನೋ ಪರೀಕ್ಷೆಯಿತ್ತು ಬಂದಿರಿ. ಯಾವಾಗಲೂ ಬರ್ತಾ ಇರ್ತೀರಾ ಹೇಳಿ" ಎಂದು ಒಳಗೆ ಕರೆದುಕೊಂಡು ನಡೆದರು. ರಾಧಾಬಾಯಮ್ಮನವರ ಮಾತಿಗೆ ಪ್ರಮೀಲ ನಗುತ್ತ,

"ಅಲ್ರೀ ರಾಧಾಬಾಯಮ್ಮ, ಯಾಕೆ ಬರತೀರಿ ಅಂತೀರಲ್ಲ; ತಾಳಿ ಈ ಸಲ ಹೇಗೂ ಬಂದಿದೀನಲ್ಲ ಭದ್ರವಾಗಿ ತಿಂಗಳ ದಿನ ತಳವೂರಿ ಬಿಡ್ತೀನಿ. ಯಾಕೆ ಬಂದಳಪ್ಪಾ ಇವಳು ಅನ್ನಿಸ್ತೀನಿ" ಎಂದಳು.

"ಇನ್ನೂ ಒಳ್ಳೆಯದೇ ಆಯಿತು. ಮಹಾಲಕ್ಷ್ಮಿ ಮನೆಗೆ ಬಂದ ಹಾಗೆ ಬಂದು ಇರ್ತೀನಿ ಅಂದರೆ ನಾನು ಬೇಡಾ ಅಂತೀನೆ. ತಿಂಗಳಲ್ಲ ಎರಡು ತಿಂಗಳಿದ್ದರೂ ಬೇಡಾ ಅಂದರೆ ಕೇಳು. ಮನೆಮಗಳು ಅಂತ ಅಂದುಕೋ ತೀನಿ."

"ಹೋಗಲಿ ಬಿಡಿ ನೀವೇ ಗೆದ್ದಿರಿ" ಎಂದಳು ಪ್ರಮೀಲ.

ತನ್ನಷ್ಟೇ ವಯಸ್ಸಿನ ಮಾಧು ಪ್ರಕಾಶನಿಗೆ ಸ್ನೇಹಿತನಲ್ಲ; ಆತ್ಮೀಯನಾಗಿ ಬಿಟ್ಟಿದ್ದ. ಮಾಧು ತನಗೆ ತಿಳಿದುದೆಲ್ಲಾ, ತಿಳಿಯದುದು ಕೂಡಾ ಪ್ರಕಾಶನಿಗೆ ಬಣ್ಣಕಟ್ಟಿ ವರ್ಣಿಸುತ್ತಿದ್ದ. ಪ್ರಕಾಶ ಬಿಟ್ಟಬಾಯಿ ಬಿಟ್ಟುಕೊಂಡು ಕಣ್ಣರಳಿಸಿಕೊಂಡು ಕೇಳುತ್ತಿದ್ದ. ಅವರಿಬ್ಬರ ಮಾತುಕತೆ, ಕಲ್ಪನೆಗೆ ಆನಂದ ನಗುತ್ತಿದ್ದ ಅವರನ್ನೇ ಗಮನಿಸುತ್ತ.

ಮಾರನೆಯ ದಿನ ಮೂವರೂ ಸಮಯಕ್ಕೆ ಸರಿಯಾಗಿ ಪರೀಕ್ಷಾ ಭವನಕ್ಕೆ ಬಂದರು. ದಾರಿಯುದ್ದಕ್ಕೂ ಆನಂದ ಪ್ರಕಾಶನಿಗೆ,

"ಧೈರ್ಯವಾಗಿರು, ಕೊಶ್ಚನ್‌ಪೇಪರು ಕೊಟ್ಟ ಮೇಲೆ ಒಂದು ಸಲ ಚೆನ್ನಾಗಿ ಅರ್ಥವಾಗುವ ಹಾಗೆ ಓದಿಕೋ, ಆ ಮೇಲೆ ಆಲೋಚನೆ ಮಾಡಿ ಚನ್ನಾಗಿ ಬರಿ, ಅಕ್ಕಪಕ್ಕಕ್ಕೆ ತಿರುಗಿ ನೋಡಬೇಡ, ನಿನಗೇನಾದರೂ ಬೇಕಾದರೆ ಎದ್ದು ನಿಂತುಕೊಂಡರೆ ಸೂಪರ್‌ವೈಸರು ಬಂದು ಕೇಳ್ತಾರೆ ಹಾಗೆ-

ಹೀಗೆ" ಎಂದು ಪರೀಕ್ಷಾಭವನದಲ್ಲಿ ಅನುಸರಿಸಬೇಕಾದಶಿಸ್ತನ್ನು ತಿಳಿಯ ಹೇಳಿದ. ಹಾಗೆಯೇ ಪ್ರಮೀಲೆಯ ಕಡೆ ತಿರುಗಿ,

"ಪ್ರಕಾಶನಿಗೆ ಹೇಳಿದ್ದು ಅರ್ಥವಾಗಿದ್ದರೆ ಚಿಂತಿಲ್ಲ. ಇಲ್ಲದಿದ್ದರೆ ನಿಮಗೂ ಒಂದು ಸಲ ಮಗ್ಗಿ ಬಾಯಿಪಾಠ........"

ಆನಂದ ಪೂರ್ತಿ ಹೇಳುವುದರೊಳಗೆ ಪ್ರಮೀಲ ಹುಸಿಕೋಪ ತೋರಿಸಿ,

"ನನಗೆಲ್ಲಾ ಗೊತ್ತಿದೆ. ಎಲ್. ಎಸ್. ಪರೀಕ್ಷೆಗೆ ಮೊಳಕಾಲ್ಮುರುವಿಗೆ ಹೋಗಿದ್ದಾಗೆಲ್ಲಾ ತಿಳಿದುಕೊಂಡಿದ್ದೇನೆ. ಬೇಕಾದರೆ ನಿಮ್ಮ ಬಾಯಿಪಾಠ ಪ್ರಕಾಶನಿಗೇ ಒಪ್ಪಿಸಿ" ಎಂದಳು,

ಅಂತೂ ಪರೀಕ್ಷೆ ಮುಗಿಯಿತು. ಹೊರಡುವ ದಿನ ಇಬ್ಬರೂ "ಹೋಗಿ ಬರುತ್ತೇವೆ" ಎಂದರು. ರಾಧಾಬಾಯಮ್ಮ ಆನಂದ ಪ್ರಮೀಲ ರಿಬ್ಬರಿಗೂ ಕೇಳಿಸುವ ಹಾಗೆ—

"ಮುಂದಿನ ಸಲ ಬರಬೇಕಾದರೆ ಬೇಗ ಮದುವೆ ಜವಳಿ ತರುವು ದಕ್ಕೇ ಬಂದುಬಿಡಿ" ಎಂದರು ನಗುತ್ತ.

ಸುಬ್ಬಣ್ಣಾಚಾರ್ಯರೂ ನಗುತ್ತ "ತಪ್ಪೇನು ?" ಎಂದರು.

ರಾಧಾಬಾಯಮ್ಮನವರ ತಮಾಷೆಯಿಂದ ಪ್ರಮೀಲೆಗೆ ಕಚ್ಚಕುಳಿ ಯಿಟ್ಟಂತೆ ಆಗಿ ಅವಳು ತುಟಿ ಕಚ್ಚಿದಳು. ಆನಂದ ಒಳಗೇ ನಕ್ಕ.

ಸ್ವಲ್ಪ ದೂರದಲ್ಲಿ ಹೋಗುತ್ತಿದ್ದ ಅವರಿಬ್ಬರನ್ನೂ ನೋಡಿದ ರಾಧಾ ಬಾಯಮ್ಮ,

"ರತಿ ಮನ್ಮಥರ ಹಾಗಿದಾರೆ. ಒಳ್ಳೇ ಸಮನಾದ ಜೋಡಿ!" ಎಂದರು ಪ್ರಸನ್ನ ಮುದ್ರೆಯಿಂದ.

ಸುಬ್ಬಣ್ಣಾಚಾರ್ಯರೂ ತಲೆದೂಗಿ,

"ನನಗೂ ಹಾಗೇ ಅನ್ನಿಸುತ್ತೆ. ಋಣಾನುಬಂಧ ಮುಖ್ಯ" ಎಂದರು.

೧೪

ತಿಂಗಳುಗಳು ಸಂದವು ಹಿಂದೀ ಪರೀಕ್ಷೆಯಲ್ಲಿ ಮೂವರಿಗೂ ಯಶಸ್ವಿಯಾದ ಫಲಿತಾಂಶ ದೊರೆಯಿತೆಂದು ತಿಳಿಸಿದ ಆನಂದನಿಗೆ ರಾಜಣ್ಣ

ಹಿಂದೀ ಪರೀಕ್ಷೆಯಲ್ಲಿ ತೇರ್ಗಡೆಯಾದ ಬಗ್ಗೆ ಸಂತೋಷ ವ್ಯಕ್ತಪಡಿಸಿ, ತನ್ನ ಪರೀಕ್ಷೆ ಇದೀಗ ಪ್ರಾರಂಭವಾಗಿದೆ. ಮುಗಿಯುತ್ತಲೂ ಬರುವುದಾಗಿ ತಿಳಿಸಿದ್ದ.

ರಾಜಣ್ಣ ಸದ್ಯದಲ್ಲೇ ಬರುವ ವಿಷಯ ಆನಂದನಿಗೆ ಸಂತಸವನ್ನುಂಟು ಮಾಡಿತು. ಸೊಸೈಟಿಯ ವ್ಯವಹಾರದಲ್ಲಿ ಗುರುರಾಜರಾಯರು ಇತ್ತೀಚೆಗೆ ತೋರಿದ್ದ ನೀತಿಯಿಂದ ಆನಂದನ ಮನಸ್ಸು ಕಲಕಿದಂತಾಗಿ ಶಾಂತಿ ದೂರವಾಗಿತ್ತು. ವಿವಂಚನೆಗೊಳಗಾದ ಭಗ್ನ ಹೃದಯಕ್ಕೆ ರಾಜಣ್ಣನ ಪತ್ರ ಶಾಂತಿಯ ಅಮೃತ ಸೇಚನೆ ಮಾಡಿತ್ತು.

ಪರೀಕ್ಷೆ ಮುಗಿಯುತ್ತಿದ್ದಂತೆಯೇ ರಾಜಣ್ಣ ರಾಂಪುರಕ್ಕೆ ಬರುವ ತಾರೀಕನ್ನು ತಿಳಿಸಿ ಆನಂದನಿಗೆ ಪತ್ರಹಾಕಿದನು.

ಊರಿಗೆ ಬಂದಬಳಿಕ ಒಂದು ದಿನ ರಾಜಣ್ಣ ರಾಯರ ಜೊತೆ ಸಿದ್ದಾಪುರಕ್ಕೆ ಹೋಗಿದ್ದ. ಆನಂದ ನಿತ್ಯದಂತೆ ಸೊಸೈಟಿಯಲ್ಲಿ ಕುಳಿತು ತನ್ನ ಕೆಲಸದಲ್ಲಿ ಮಗ್ನನಾಗಿದ್ದ. ಇದ್ದಕ್ಕಿದ್ದಂತೆ ಸೊಸೈಟಿ ಇನ್‌ಸ್ಪೆಕ್ಟರರ ಸವಾರಿ ಚಿತ್ತೈಸಿತು. ಇನ್‌ಸ್ಪೆಕ್ಟರರ ಆಗಮನದಿಂದ ಗಾಬರಿಯಾದ. ಕಾರಣವಿಲ್ಲದಿರಲಿಲ್ಲ. ಹಿಂದಿನ ದಿನ ರಾತ್ರಿ ಒಂಭತ್ತು ಹೊಡೆದರೂ ಮಾರಾಟ ಮುಗಿಸಲು ಸಾಧ್ಯವಾಗಿರಲಿಲ್ಲ. ಹಳ್ಳಿಯ ಜನಗಳೆಲ್ಲರಿಗೂ ಕಾಳು ಹಂಚಿ ಸಾಗಿತ್ತು. ವಿಪರೀತ ಆಲಸ್ಯವಾಗಿದ್ದ ಕಾರಣ ಲೆಕ್ಕವನ್ನು ಪೂರ್ತಿಗೊಳಿಸಿರಲಿಲ್ಲ. ಆನಂದನಷ್ಟೇ ಆಯಾಸಗೊಂಡಿದ್ದ ರಾಜಣ್ಣ ಕೂಡ 'ನಾಳೆ ನೋಡಿಕೊಂಡರಾಯಿತು' ಎಂಬ ಧೋರಣೆಯಿಂದ ಸುಮ್ಮನಾಗಿದ್ದ. ಆದರೆ ಇದೇ ಸಂದರ್ಭದಲ್ಲಿಯೇ ಇನ್‌ಸ್ಪೆಕ್ಟರು ಬರಬಹುದೆಂದು ಆನಂದ ಎಣಿಸಿರಲಿಲ್ಲ.

ಇನ್‌ಸ್ಪೆಕ್ಟರು ಬಂದವರೇ ಕ್ಯಾಷ್‌ಬುಕ್ ಹಿಡಿದು ಕುಳಿತುದು ಕಂಡು ಆನಂದನ ಎದೆ ಹೊಯ್ದುಕೊಳ್ಳಲಾರಂಭಿಸಿತು. ಕ್ಯಾಷ್ ಚೆಕ್ ಮಾಡಿದರೇನು ಗತಿ ಎಂಬ ಭೀತಿಯಿಂದ ಗಂಟಲಾರಿತು.

"ಕ್ಯಾಷ್ ಎಲ್ಲಿ?" ನಿರೀಕ್ಷಿಸಿದ ಪ್ರಶ್ನೆ ಕೇಳಿ ಆನಂದ ನಡುಗಿದ. ಪ್ರಯತ್ನಪೂರ್ವಕವಾಗಿ ಆನಂದ ಬಾಯಿ ಬಿಟ್ಟ,

"ಮನೇಲಿದೆ ತರ್ತೀನಿಸಾರ್......!"

ಎಂದು ಮನೆಗೆ ಓಡಿ ಬಂದ. ತನ್ನ ಕಡೆ ತಿರುಗಿ ಪ್ರಶ್ನಾರ್ಥಕವಾಗಿ ನೋಡುತ್ತಿದ್ದ ಅನಸೂಯಮ್ಮನವರೊಡನೆ,

"ಇವತ್ತು ಎದ್ದ ಘಳಿಗೆ ಚೆನ್ನಾಗಿಲ್ಲ. ಎಂದೂ ಬಾರದ ಇನ್‌ಸ್ಪೆಕ್ಟರು ಇವತ್ತೇ ಯಾಕೆ ಬಂದರೋ! ರಾಯರೂ ಇಲ್ಲ, ನನ್ನ ಹತ್ತಿರ ಹಣವೂ ಸರಿಯಾಗಿಲ್ಲ. ಈ ತುರುತಿನಲ್ಲಿ ಬೇಕು ಅಂದರೆ ಯಾರುತಾನೇ ಹಣ ಒದಗಿಸುತ್ತಾರೆ? ಅಂತೂ ಏನಾಗುತ್ತೋ ಏನೋ ಅಂತ ನನಗೆ ಗಾಬರಿ ಯಾಗಿದೆ. ಸುಮಾರು ಮೂರು ಸಾವಿರಕ್ಕೂ ಜಾಸ್ತಿ ಹಣ ಶಾರ್ಟೇಜು ಕಂಡುಬರುತ್ತೆ ಕ್ಯಾಷ್ ಬುಕ್ಕಿಗೆ!" ಎಂದು ಕೈ ಕೈ ಹಿಸುಕಿಕೊಂಡ, ತೀರದ ಅಸಾಹಯಕತೆಯಿಂದ.

ಅನುಸೂಯಮ್ಮ ಆತಂಕದಿಂದ ಹೇಳಿದರು—

"ಏನು ಗ್ರಹಚಾರವೋ ಕಾಣೆನಲ್ಲಪ್ಪಾ, ಒಂದೇ ಎರಡೇ! ಮೂರು ಸಾವಿರ ರೂಪಾಯಿ ಎಲ್ಲಿ ಹುಟ್ಟುತ್ತೆ ಈಗ! ಅವರೂ ಇಲ್ಲ. ಹೇಗೆ ಮಾಡ ಬೇಕೋ ಕಾಣೆ. ಯಾಕೆ ಹೀಗೆ ಸಾಲ ಕೊಡಿಸುತ್ತಾರೋ ಕೇಡುಗಾಲಕ್ಕೆ. ಹೇಗೆ ಮಾಡ್ತೀಯಪ್ಪಾ ಮಗೂ, ನನಗಂತೂ ನೀನು ಬಂದು ಹೇಳಿದಾಗಿ ನಿಂದ ಕೈಕಾಲೇ ಕೂತುಹೋಗಿದೆ......!"

ಮಾತಿನ ಜೊತೆಯಲ್ಲೇ ಉಕ್ಕಿ ಬಂದ ದುಃಖ ಕಣ್ಣಿನಿಂದ ಕೋಡಿ ಯಾಗಿ ಹರಿಯಿತು. ಅನುಸೂಯಮ್ಮನವರ ಅಧೈರ್ಯ ಕಂಡ ಆನಂದ 'ಇವರಿಗೆ ನಾನು ಏನೂ ಹೇಳಬಾರದಿತ್ತು' ಎಂದು ಕೊಂಡು ಅವರಿಗೆ ಸಮಾಧಾನ ಹೇಳಿದ—

"ನೀವೇಕೆ ಹೀಗೆ ಕಂಗಾಲಾದಿರಿ. ಹೇಗೋ ಆಗುತ್ತೆ. ಇದನ್ನೆಲ್ಲಾ ಮನಸ್ಸಿಗೆ ಹಚ್ಚಿಕೋಬಾರದು. ನಾನು ಇರೋ ಹಣ ತಗೊಂಡು ಹೋಗಿ ರ್ತೀನಿ. ಪ್ರಕಾಶ ಅಂಜನಪ್ಪನ ಮನೆಗೆ ಹೋಗಿ ಬರ್ಲಿ. ದೇವರಿದ್ದಾನೆ."

ಅನುಸೂಯಮ್ಮ ಪ್ರಕಾಶನನ್ನು ಕಳುಹಿಸಿದರು. ಪ್ರಕಾಶ ವಾಪಸು ಬಂದು "ಅಂಜನಪ್ಪ, ಬಳ್ಳಾರಿಗೆ ಹೋಗಿದಾರಂತೆ" ಎಂದ.

"ಸರಿ ದೇವರೇ ಗತಿ!"

ಎಂದುಕೊಂಡು ಹಣ ತೆಗೆದುಕೊಂಡು ಹೋಗಲು ಮೇಲೆ ನಡೆದ. ಅವನ ಹಿಂದೆಯೇ ಅನಸೂಯಮ್ಮನೂ ಪ್ರಮೀಲೆಯೂ ಮೇಲೆ ಬಂದರು. ಪ್ರಮೀಲೆಯಂತೂ ಅರ್ಧವಾಗಿದ್ದಳು. ಆನಂದನಿಗೆ ಏನಾಗುವುದೋ ಎನ್ನುವ ಗಾಬರಿಯಿಂದ ಅವಳ ಮನಸ್ಸಿನಲ್ಲಿ ಏನೇನೋ ಅನಿಷ್ಟ ಶಂಕೆಗಳು ಮೂಡಿ ಕಾಡತೊಡಗಿದ್ದುವು. ಹಣದ ಲೆಕ್ಕಾಚಾರ ಸರಿಯಾಗಿಲ್ಲದಿದ್ದರೆ ಜೇಲು

ಖಂಡಿತ ಎಂಬುದನ್ನು ನೆನೆದಾಗ ಅವಳ ಕಣ್ಣಿನಲ್ಲಿ ಹನಿ ಚಿಮ್ಮಿತು. ಸದ್ಯಃ ಹಾಗಾಗದಿರಲಿ, ರಾಯರ ದಯದಿಂದ ಎಂದು ಅವಳು ಮನದಲ್ಲಿ ರಾಘವೇಂದ್ರ ಸ್ವಾಮಿಗಳನ್ನು ಬೇಡಿದಳು. ತಪ್ಪಿತಸ್ಥನಲ್ಲದ ತನ್ನ ಆನಂದನಿಗೆ ಅನಿರೀಕ್ಷಿತವಾಗಿ ನಿರ್ದಯ ಪ್ರಹಾರವಾಗಲಿದೆ ಎಂಬ ಅರಿವಾದಾಗ ಅವಳ ಹೃದಯ ಯಾವುದೋ ಅಜ್ಞಾತ ಭಯದಿಂದ ಕ್ಷತವಿಕ್ಷತವಾಗತೊಡಗಿತ್ತು.

ಇದ್ದಕ್ಕಿದ್ದಂತೆ ಪ್ರಮೀಲೆಗೆ ಏನೋ ಹೊಳೆಯಿತು. ಆನಂದನನ್ನುದ್ದೇಶಿಸಿ,

"ನಿನ್ನೆಯ ಅಕೌಂಟ್ಸ್ ಮುಗಿಸಿಲ್ಲ" ಎಂದಳು.

"ಹೌದು, ಅದು ಬೇರೆ ತಪ್ಪು ಕಾದು ಕೂತಿದೆ ಇನ್ನೂ!" ಆನಂದ ನಿರ್ವಿಣ್ಣನಾಗಿ ನುಡಿದ.

ತಾನು ಹೇಳುತ್ತಿದ್ದ ಸಲಹೆಗೆ ಎದಿರೇಟು ಬಿದ್ದ ಹಾಗಾಯಿತು, ಆನಂದನ ಮಾತಿನಿಂದ ಪ್ರಮೀಲೆಗೆ. ಆದರೂ 'ಪೂರ್ತಿ ಹೇಳಿಯೇ ಬಿಡೋಣ' ಎಂದುಕೊಂಡು ಮುಂದುವರಿಸಿದಳು. ಬೆದರಿದ ಮಗುವನ್ನು ಮೈದಡವಿ ಸಮಾಧಾನಪಡಿಸುವ ರೀತಿಯಲ್ಲಿ—

"ಅದಕ್ಕಲ್ಲ. ಈಗ ಹೇಗೂ ನಿನ್ನೆಯ ಲೆಕ್ಕ ಮುಗಿಸಿಲ್ಲ, ನಿನ್ನಿನ ಮಾರಾಟದ ಹಣವಿದೆ. ಆದನ್ನೇ ತಗೊಂಡು ಹೋಗಿರೋದು. ಒಂದು ವೇಳೆ ಲೆಕ್ಕ ಮುಗಿಸಿ ಹಣ ತೋರಿಸಿ ಅಂದರೆ ಅಷ್ಟು ಹೊತ್ತಿಗೆ ಹೇಗಾದರೂ ಅನುಕೂಲವಾದೀತು! ನೀವು ಸುಮ್ಮನೆ ಗಾಬರಿಯಾದಿರಿ."

"ಅಯ್ಯೋ ಅದೆಲ್ಲಾ ಭ್ರಾಂತಿ. ಅದು ಹೇಗೆ ಸಾಧ್ಯ!"

"ಬೀಸುವ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಆಯುಸ್ಸು ಅಂದ ಹಾಗೆ. ಹಾಗೆ ಮಾಡೋದೆ ಉತ್ತಮ ಅಂತ ಕಾಣುತ್ತೆ."

"ಹೂಂ......ಮಗೂ. ಅಷ್ಟು ಹೊತ್ತಿಗೆ ಇವರೂ ಬರಬಹುದು. ಇಲ್ಲದಿದ್ದರೆ ಪ್ರಕಾಶನ್ನ ಕಳಿಸಿ ಸೂಗಣ್ಣ, ಧರಣಯ್ಯ ಇವರಿಗೆ ಕರೆಸಿ ಹೇಳ್ತೀನಿ. ಯಾವುದಾದರೂ ಒಂದು ತೀರ ಹತ್ತಬೇಕುಕಣಪ್ಪ. ಹೊತ್ತಾಯ್ತು ಅಂತ ಗಲಾಟೆ ಮಾಡ್ತಾನೋ ಏನೋ ಆ ಇನ್‌ಸ್ಪೆಕ್ಟರು ಹೋಗಪ್ಪಾ!"

ಎಂದು ನುಡಿದರು ಅನುಸೂಯಮ್ಮ ಹೇಗಾದರು ಸರಿ, ತಲೆ ಉಳಿದ ಸಾಕು ಎಂಬ ದೈನ್ಯತೆಯಿಂದ.

"ನಿಮ್ಮ ಮಾತಿನಂತೆ ಇವತ್ತು ಬಚಾವಾದರೆ ಸಾಕು ಸದ್ಯಕ್ಕೆ!"

ಪ್ರಮೀಲ ಮತ್ತು ಅನಸೂಯಮ್ಮನವರ ಮಾತಿನಿಂದ ಯಾವುದೋ ಆಶಾಕಿರಣ ಮೂಡಿ, ಆನಂದ ಮುಖ ಗೆಲವು ಮಾಡಿಕೊಂಡು ಹಣ ತೆಗೆದು ಕೊಂಡು ಹೊರಟ ಅವಸರವಸರವಾಗಿ.

ಆನಂದನ ಗಾಬರಿಯನ್ನು ಕಂಡ ಪ್ರಮೀಲ,

"ಏನಾದರೂ ಸ್ವಲ್ಪ ಎಡವಟ್ಟಾದರೂ ಭಯ ಇಷ್ಟು ಗಾಬರಿ ಅಷ್ಟು ಹಚ್ಚಿಕೋಬಾರದು" ಎಂದಳು. ಆನಂದನಿಗೆಂದು ಆ ಮಾತಾಡಿದ್ದರೂ ಪ್ರಮೀಲ ಅದು ತನಗೂ ಅನ್ವಯಿಸುವಂತೆ ಆಡಿದ್ದಳು.

ಆನಂದನ ಬಗ್ಗೆ ಆಡಿದ ಮಾತಿನಲ್ಲಿ ಕಂಡುಬಂದ ಅನುಕಂಪ ಅದ ರೊಡನೆಯೇ ಅನುಸರಿಸಿಕೊಂಡಿದ್ದ ಪರವಶತೆಯ ಕಾರಣದಿಂದ ಮೂಡಿದ್ದ ಮಮತೆ-ನೋವನ್ನು ಗಮನಿಸಿದ ಅನಸೂಯಮ್ಮ ಮಗಳಿಗೆ ಹೇಳಿದರು ಮುಗುಳು ನಗುತ್ತಾ—

"ಅವನಿಗಂತೂ ಗಾಬರಿ ಅಂದರೆ ನೀನೂ ಹಾಗಿದ್ದೀ ಕಣೇ ಹುಡುಗಿ. ನಿನಗೇಕಿಷ್ಟು ಗಾಬರಿ?"

ತಾಯಿಯ ಮಾತಿನ ಅರ್ಥ ಬಹುಬೇಗ ಗೊತ್ತಾಯಿತು ಪ್ರಮೀಲೆಗೆ. ತನ್ನ ಮನಸ್ಸಿನ ದುರ್ಬಲತೆ ತಾಯಿಗೆ ಗೊತ್ತಾಯಿತೆಂದು ತಿಳಿದಿದ್ದರೂ ಅದನ್ನು ಪೂರ್ಣವಾಗಿ ತೋರಗೊಡದೆ,

"ಸೊಸೈಟಿ ಹಣದ ವಿಷಯಕ್ಕೂ ನನಗೂ ಏನು ಸಂಬಂಧ. ನಾನೇಕೆ ಗಾಬರಿ ಪಡಲಿ. ಒಳ್ಳೇ ಅಮ್ಮ ನೀನಂತೂ."

"ಒಳ್ಳೇಳೋ ಕೆಟ್ಟೋಳೋ, ಸದ್ಯ ಸೊಸೈಟಿಯಲ್ಲಿ ಯಾವ ಹಗರಣವೂ ಆಗದೆ ಇದ್ದರೆ ಸಾಕು......ಹುಚ್ಚು ಹುಡುಗಿ!"

ಎಂದುಕೊಳ್ಳುತ್ತಾ ಅನಸೂಯಮ್ಮ ಕೆಳಗೆ ನಡೆದರು.

ಆನಂದ ಬರುವುದು ತಡವಾದ್ದಕ್ಕೆ ಇನ್‌ಸ್ಪೆಕ್ಟರು ಕಣ್ಣು ಕೆಕ್ಕರಿಸಿ ಕೊಂಡು ಕುಳಿತಿದ್ದರು. ಆನಂದ ಬರುವುದೇ ತಡ—

"ಯಾಕ್ರೀ ಇಷ್ಟು ಹೊತ್ತು ಮಾಡಿದಿರಿ?" ಎಂದು ಗದರಿಸಿದರು.

"ಚಿಲ್ಲರೆ ಬಹಳವಿತ್ತು ಸಾರ್......"

ಉತ್ತರ ಸಮಂಜಸವಾಗಿಲ್ಲದಿದ್ದರೂ ಬಾಯಿಂದ ಹೊರಬಿದ್ದಿತು.

ಕ್ಯಾಷ್ ಬಾಕ್ಕಿನಲ್ಲಿ ಆರುಸಾವಿರಕ್ಕೂ ಮೀರಿ ಬ್ಯಾಲನ್ಸ್ ಇದ್ದದ್ದು ನೋಡಿ—

"ಇಷ್ಟೊಂದು ಹಣ ಯಾಕ್ರೀ ಇಟ್ಕೊಂಡ್ರೀ?" ಎಂದರು ಇನ್‌ಸ್ಪೆಕ್ಟರು.

"ವ್ಯಾಪಾರ ಜಾಸ್ತಿಯಿತ್ತು. ಟ್ರೆಜರಿಗೆ ಜಮಾ ಮಾಡಿಸಲು ಅವಕಾಶವಾಗಲಿಲ್ಲ ಸಾರ್."

"ಅಸಿಸ್ಟೆಂಟ್ ಸೆಕ್ರೆಟರಿ ಇನ್ನೂರಕ್ಕಿಂತ ಹೆಚ್ಚಿಗೆ ಹಣ ಹತ್ತಿರ ಇಟ್ಕೋ ಕೂಡದು ಅಂತ ಇದೆ ರೂಲ್ಸು. ನಿಮಗೆ ಗೊತ್ತಿದೆಯೇನು? 'ಬೈಲಾಸ್' ಓದಿದ್ದೀರಾ?"

"ಓದಿದ್ದೀನಿ ಸಾರ್......"

"ನೀವು ಹೀಗೆ ಮಾಡಿದ್ದಕ್ಕೆ ಏನು ಕೊಡ್ತೀರಿ?"

"ಅದೇ, ಆಗಲೇ ಹೇಳಿದೆನಲ್ಲಾ ಸಾರ್!"

"ಯಾವಾಗ ಹೇಳಿದರೋ, ಏನು ಹೇಳಿದರೋ ಸುಡುಗಾಡು...... ಇನ್ಮೇಲೆ ಹೀಗೆಲ್ಲಾ ಮಾಡಬೇಡಿ ಕಣ್ರೀ. ಹಣ ಎಷ್ಟಿದೆ ಎಣಿಸಿ ನೋಡೋಣ."

ಆನಂದ ಹಣವನ್ನೆಣಿಸಿದ. ನೂರೈವತ್ತು ರೂಪಾಯಿ ಜಾಸ್ತಿಯಿತ್ತು. ಇನ್‌ಸ್ಪೆಕ್ಟರು ಕೆರಳಿಹೋದರು. ಆನಂದನ ಕಣ್ಣಿನ ಕಾಂತಿ ಇಂಗಿಹೋಗಿತ್ತು. ಇನ್‌ಸ್ಪೆಕ್ಟರು ಗುಡುಗಿದರು—

"ಹಣ ಯಾಕ್ರೀ ಎಕ್ಸೆಸ್ (Exess) ಇದೆ?"

"ಪೇಮೆಂಟ್ ಮತ್ತು ಕಾರ್ಟ್ ಹೈರ್ (Payment and Cart hair) ಇದರಲ್ಲೇ ಸೇರಿಕೊಂಡಿದೆ ಸಾರ್. ತಗೊಂಡಿಲ್ಲಾ ಇನ್ನೂ......!"

ಇನ್‌ಸ್ಪೆಕ್ಟರು ಮೇಲಿಂದ ಮೇಲೆ ಪ್ರಶ್ನೆ ಹಾಕುತ್ತಿದ್ದುದರಿಂದ ಆನಂದನ ಧೈರ್ಯ ಉಡುಗಿಹೋಗಿತ್ತು. ಸಾಲದುದಕ್ಕೆ ಹಣ ಬೇರೆ ಹೆಚ್ಚಾಗಿತ್ತು, ಹೇಗೋ ತಪ್ಪಿಗೆ ಸಿಕ್ಕಿಕೊಂಡಿದ್ದೇನೆಂದುಕೊಂಡು ತನಗೆ ತೋಚಿದ್ದೊಂದು ಉತ್ತರ ಹೇಳಿದ.

"ನಿಮ್ಮ ಸಂಬಳದ ದುಡ್ಡು, ಗಾಡಿ ಬಾಡಿಗೆ, ಮನೇ ಬಾಡಿಗೆ, ಉಪ್ಪು ಮೆಣಸಿನಕಾಯಿ ಅಂತ, ಹಾಳುಮೂಳು ಇದರ ಜೊತೆಗೆ ಸೇರಿಸಬೇಡಿರಿ."

ಎಂದು ಇನ್‌ಸ್ಪೆಕ್ಟರು ಕ್ಯಾಷ್ ಬುಕ್ಕನ್ನು ತೆಗೆದುಕೊಂಡು—

"ಕ್ಯಾಷ್ ಬುಕ್ಕಿನ ಬ್ಯಾಲನ್ಸ್‌ಗೆ ಸರಿಯಾಗಿ ಹಣವಿರುವುದನ್ನು ಪರಿಶೀಲಿಸಿದೆ. ಸೊಸ್ಯಾಟಿಯ ಅಸಿಸ್ಟೆಂಟ್ ಸೆಕ್ರಟರಿ ತನ್ನ ಅಧಿಕಾರಕ್ಕಿಂತ ಹೆಚ್ಚು ಹಣವನ್ನು ಇಟ್ಟುಕೊಂಡಿರುತ್ತಾರೆ. ಹೆಚ್ಚಿನ ಹಣವನ್ನು S. B ಗೆ ಡಿಪಾಜಿಟ್ ಮಾಡಬೇಕು. ಲೆಕ್ಕಪತ್ರಗಳು ಸಮರ್ಪಕವಾಗಿಲ್ಲ. ಇನ್ನು ಮುಂದೆ ಇಂತಹ ಅಜಾಗರೂಕತೆಗೆ ಅವಕಾಶ ಕೊಡಕೂಡದೆಂದು ಈ ಮೂಲಕ ಎಚ್ಚರಿಸಲಾಗಿದೆ" ಎಂದು ತಮ್ಮ ಕಠಾರಿ ಎತ್ತಿಬಿಟ್ಟರು.

ಆ ಮೇಲೆ ಅವರ ಕಣ್ಣಿಗೆ ಹಿಂದಿನ ದಿನದ ವ್ಯಾಪಾರ ದಾಖಲಾಗದೆ ಇರುವುದು ಕಂಡುಬಂತು. ಸಿಟ್ಟಿನಿಂದ ಹುಚ್ಚೆದ್ದು ಕೇಳಿದರು—

"ನಿನ್ನಿನ ಲೆಕ್ಕ ಯಾಕ್ರೀ ಮುಗಿಸಿಲ್ಲ ಇನ್ನೂ......?"

'ಪೀಡೆ ಕಳೆಯಿತು!' ಎಂದು ಹಗುರವಾಗಿ ಉಸಿರು ಬಿಟ್ಟಿದ್ದ ಆನಂದನಿಗೆ ಇನ್‌ಸ್ಪೆಕ್ಟರ ಪ್ರಶ್ನೆ ಕೇಳಿ ಮುಖ ಕಪ್ಪಿಟ್ಟಿತು. ನಡುಗುವ ಧ್ವನಿಯಲ್ಲಿ ಹೇಳಿದ—

"ನಿನ್ನೆ ವ್ಯಾಪಾರ ಬಹಳ ಹೊತ್ತಿನ ವರೆಗೆ ಆಯಿತು ಸಾರ್. ರಾತ್ರೆ ಒಂಭತ್ತು ಗಂಟೆಯ ವರೆಗೆ. ಮೈಗೆ ಸ್ವಸ್ಥವಿರಲಿಲ್ಲ. ಮಾಡಲಾಗಲಿಲ್ಲ ಸಾರ್."

"ಹೀಗೆ ಸುಳ್ಳು ಕಾರಣ ಹೇಳೋದು ಚೆನ್ನಲ್ಲಾ ಕಣ್ರೀ."

"ಸುಳ್ಳಲ್ಲ ಸಾರ್, ನಿಜ ನಾನು ಹೇಳ್ತಾ ಇರೋದು."

"ಹೋಗಲಿ. ಸೇಲ್ಸ್ ಅಬ್‌ಸ್ಟ್ರಾಕ್ ಕ್ಲೋಸ್ ಮಾಡಿದೀರಿ?"

"ಇಲ್ಲ ಸಾರ್......"

"ಹಾಗಾದರೆ ಈಗ ಬಟ್ಟೆಬರೆ, ದಿನಸಿ—ಯಾವುದೂ ಸ್ಟಾಕ್ ಸರಿಯಾಗಿ ಇಲ್ಲ. ಒಂದು ವೇಳೆ ಡಿಟೈಲ್ ಇನ್‌ಸ್ಪೆಕ್ಷನ್ ನಡೆಸಿದರೆ...... ಈ ಸೊಸಾಯಿಟಿಗಳ ಹಣಬರಹವೇ ಇಷ್ಟು. ಈ ಸರ್ಕಾರದವರು ಯಾಕೆ ಮಾಡಿದರೋ ಈ ಸೊಸಾಯಿಟಿಗಳನ್ನ ಬುದ್ಧಿಯಿಲ್ಲದೆ......ಗ್ರಾಮಾಭಿವೃದ್ಧಿ ಸಹಕಾರ ಸಂಘ, ಗ್ರಾಮಸೇವಾ ಸಹಕಾರ ಸಂಘ, ವಿವಿಧೋದ್ದೇಶ ಸಹಕಾರ ಸಂಘ—ಅಂತಹ ಹೆಸರುಗಳು ಚೆನ್ನಾಗಿವೆ ಅಷ್ಟೆ! ಇವುಗಳಿಂದ

ಯಾವ ಉದ್ದೇಶ ನೆರವೇರದಿದ್ದರೂ ಹೆಗ್ಗಣಗಳ ಹಾಗೆ ತಿಂದುಕೊಂಡಿರೋ ಉದ್ದೇಶ ಮಾತ್ರ ನೆರವೇರಿದೆ. ಸೊಸ್ಯಾಟಿಗಳಲ್ಲಿ ತಿಂದೂ ತಿಂದೂ ಬಲಿತ ಹೆಗ್ಗಣಗಳಾಗಬೇಕು— ಅನ್ನೋದು ಒಂದು ಉದ್ದೇಶವೋ ಏನೋ ವಿವಿಧೋದ್ದೇಶಗಳಲ್ಲಿ!......ಏನೋ ಹೋಗ್ರೀ ನಿಮ್ಮ ಅಕೌಂಟ್ಸ್ ಒಂದಾದರೂ ಸರಿಯಾಗಿಲ್ಲ. ಹೀಗಿದ್ದರೆ ಹೇಗೆ ಹೇಳಿ ಇನಸ್ಪೆಕ್ಷನ್ ಮಾಡೋದು? ನಾವೇನಾದರೂ ಸುಮ್ಮನೆ ಕೂತುಕೊಂಡೆವೋ ಬಂತೂ ವಕ್ರ ನಮಗೆ— ಇನ್‌ಸ್ಪೆಕ್ಷನ್ ಮಾಡಲ್ವೋ ಅಂತ ಬಡಕೋತಾರೆ ಮೇಲ್ನಿಂದ!......ಈ ಸಲಕ್ಕೆ ಮೊನ್ನಿನ ತಾರೀಖಿಗೇ ಚಕ್ ಮಾಡಿದ ಹಾಗೇ ಬರೀತೀನಿ. ಇನ್ಮೇಲೆ ಹೀಗೇನಾದರೂ ಮಾಡಿದರೆ ಎಕ್ಸ್‌ಪ್ಲನೇಷನ್ ಕಾಲ್‌ಫಾರ್ ಮಾಡ್ತೀನಿ ಜೋಕೆ!" ಎಂದು ಎಚ್ಚರಿಸಿದ ಇನ್‌ಸ್ಪೆಕ್ಟರು ಸ್ವಲ್ಪ ಹೊತ್ತು ತಡೆದು— ತಾವು ಬರೆದಿದ್ದ ಷರಾದ ಕೆಳಗೆ ಹಿಂದಿನ ದಿನದ ತಾರೀಕು ಹಾಕುತ್ತ,

"ಗುರುರಾಜಾರಾಯರು ಇದಾರೇನ್ರೀ ?" ಎಂದರು.

"ಇಲ್ಲಾ ಸಾರ್......, ಸಿದ್ಧಾಪುರಕ್ಕೆ ಹೋಗಿದಾರೆ."

"ಸರಿ, ಸರಿ........ಆತನಿಗೆ ಜಮೀನ್ ಖರೀದಿ ಮಾಡೋ ಹುಚ್ಚು ಹಿಡಿದಿದೆ ಅಂತ ಕಾಣುತ್ತೆ. ನಾನು ಬರ್ತೀನ್ರೀ......ಮಿಸ್ಟರ್ ಆನಂದ; ಗುರುರಾಜಾರಾಯರು ಬಂದರೆ ನಾನು ಕೇಳಿದೆ ಅಂತ ಹೇಳಿ ಅಷ್ಟೆ."

ಎಂದು ಇನ್‌ಸ್ಪೆಕ್ಟರರು ಸೊಸ್ಯಾಟಿಯ ಮೆಟ್ಟಲು ಇಳಿಯುತ್ತಿರುವಾಗಲೇ ಗುರುರಾಯರೂ ಅಲ್ಲಿಗೆ ಬಂದರು.

"ಓಹೋ.... ...! ನಮಸ್ಕಾರ ರಾಯರೆ. ಸಿದ್ಧಾಪುರಕ್ಕೆ ಹೋಗಿದ್ದಿರಂತೆ ?"

"ಹೌದು ಸ್ವಾಮಿ, ಸ್ವಲ್ಪ ಜಮೀನಿನ ಕೆಲಸವಿತ್ತು ಅಲ್ಲಿ. ಇನ್‌ಸ್ಪೆಕ್ಷನ್ ಮುಗೀತೋ ನಿಮ್ಮದು ?"

"ಹ್ಞಾ......ಆದಹಾಗಾಯಿತು. ಅದಿರಲಿ—ನಿಮ್ಮ ವಿಚಾರವೇ ಗೊತ್ತಾಗಲ್ಲಾ ಕಣ್ರೀ ನಿಮಗೆ ಏನೋ ಹೊಸ ಜಮೀನ್ ತಗೋಬೇಕಂತ ಇದೀರಂತೆ. ನಮಗೂ ಹೇಳ್ರಪ್ಪಾ ಸ್ವಲ್ಪ! ನಿಮ್ಮ ಜಮೀನು ನಾನೇನೂ ಅಪಹರಿಸೋಲ್ಲಾ!"

"ಹೌದು ತಗೊಂಡೆ. ಸಿದ್ಧಾಪುರದಲ್ಲಿ ಮೊದಲೇ ನಮ್ಮದು ಒಂದೆರಡು ಎಕರೆ ಇತ್ತು. ಅದರ ಮಗ್ಗುಲ ಜಮೀನೇ ತಗೊಂಡೆ. ಅಮಕುಂದಿ ಕೆರೆ

ಬಯಲಲ್ಲೋ, ಪಕ್ಕುರ್ತಿ ಕೆಗೆಯ ಬಯಲಲ್ಲೋ ತಗೋ ಬೇಕೂಂತಿದ್ದೆ. ಎರಡು ಮೂರು ಕಡೆ ನಿಗಾ ನೋಡಲಿಕ್ಕಾಗಲ್ಲ ಅಂತ ಇಲ್ಲೇ ತಗೊಂಡೆ ಅಂತೂ ಈಗಲೇ ಯಾರಿಗೂ ಹೇಳಬಾರದು, ತಾನಾಗೇ ಹೊರಗೆ ಬರುವ ತನಕ ಅಂದುಕೊಂಡಿದ್ದೆ. ಹೊರಡಿಸಿ ಬಿಟ್ರಲ್ಲಾ ಮಾತನ್ನ ನೀವು!"

"ಎಷ್ಟು ಎಕರೆ ತಗೊಂಡಿರಿ?"

"ಐದು ಎಕರೆ......"

"ಹ್ಞೂ......ಹ್ಞೂ! ಪರವಾಗಿಲ್ಲ. ಒಟ್ಟು ಏನು ಬಿತ್ತು?"

"ನಾಲ್ಕು ಸಾವಿರ."

"ತುಂಬಾ ಖಾರಿ (ಅಗ್ಗ)ಯಾಗಿ ಸಿಕ್ಕಿದೆಯಲ್ಲಾ. ಇತ್ತಕಡೆ ತರೀ ಜಮೀನಿಗೆ ಧಾರಣೆವಾಸಿ ಜಾಸ್ತಿ ಅಂತ ಕೇಳಿದ್ದೆ ನಾನು."

--ಎಂದು ಮೂಗಿನ ಮೇಲೆ ಬೆರಳಿಟ್ಟರು. ಮತ್ತೆ,

"ಹೋಗಲಿ ಕಾಫೀಗಾದ್ರೂ ಆರ್ಡರ್ ಮಾಡ್ರೀ" ಎಂದು ಇನ್‌ಸ್ಪೆಕ್ಟರು ಗುರುರಾಜರಾಯರ ಭುಜ ಜಗ್ಗಿಕೊಂಡು ಬಸ್‌ಸ್ಟ್ಯಾಂಡ್ ಹೋಟೆಲಿಗೆ ನುಗ್ಗಿಯೇ ಬಿಟ್ಟರು.

ಮನೆಗೆ ಬಂದಾಗ ರಾಜಣ್ಣ ಆನಂದನಿಗಾಗಿ ಕಾದು ಕುಳಿತಿದ್ದ. ಮಧ್ಯಾಹ್ನ ಊಟಕ್ಕೆ ಕುಳಿತಿದ್ದಾಗ ಆನಂದ, ರಾಯರಿಗೆ ಬೆಳಗ್ಗೆ ನಡೆದ ಘಟನೆಯನ್ನೆಲ್ಲಾ ವಿವರಿಸಿ,

"ಇವತ್ತು ನರಿ ಮುಖ ನೋಡಿದೆ ಅಂತ ಕಾಣುತ್ತೆ ಬೆಳಗ್ಗೆ ಎದ್ದು. ಆ ಇನಸ್ಪೆಕ್ಟರು ಪಟ್ಟುಹಿಡಿದು ಕುಳಿತು ನಿನ್ನೆಯ ದಿನದ ಲೆಕ್ಕ ಮುಗಿಸಿ ಕ್ಯಾಷ್ ಪ್ರೊಡ್ಯೂಸ್ ಮಾಡು ಅಂದಿದ್ದರೆ ಏನು ಮಾಡಬೇಕಿತ್ತೋ ದೇವರೇ ಬಲ್ಲ" ಎಂದ.

"ಸರಿ. ಏನು ಮಾಡ್ತಾ ಇದ್ದ ಮಹಾ ಆ ಇನ್‌ಸ್ಪೆಕ್ಟರು? ಈ ಎಂಜಲಿಗೆ ಕೈಯೊಡ್ಡೋಜನವೆಲ್ಲಾ ಕಡ್ಡಿ ಎರಡು ತುಂಡು ಮಾಡಿದ ಹಾಗೆ ಅಧಿಕಾರ ಚಲಾಯಿಸಿದರೆ ಪ್ರಪಂಚ ಮುಳಗೀತು ಮತ್ತೆ......!"

—ರಾಯರು ಆತಂಕವೇ ಇಲ್ಲದೆ ಮಾತು ಹಾರಿಸಿದರು. ಇಷ್ಟಕ್ಕೇಕೆ ಹೆದರಿ ಕತ್ತಿಹಾಕಬೇಕು ಅನ್ನುವ ಧೋರಣೆಯಲ್ಲಿ ಸತ್ಯವಿಲ್ಲದೇ ಇರಲಿಲ್ಲ. ಇನಸ್ಪೆಕ್ಟರೊಡನೆ ಹೋಟೆಲಿಗೆ ಹೋದಾಗ ಸೊಸೈಟಿಯಲ್ಲಿ ನಡೆದ ವಿದ್ಯಮಾನ

ವೆಲ್ಲ ತಿಳಿದುಕೊಂಡಿದ್ದರು. ಅಷ್ಟೇ ಅಲ್ಲದೆ ಇನಸ್ಪೆಕ್ಟರಿಗೆ ಎಚ್ಚರಿಕೆಯನ್ನೂ ಕೊಟ್ಟಿದ್ದರು.

"ನೋಡಿ ಹೇಳಿದ್ದೀನಿ. ನಾವು ನಾವು ವಿಶ್ವಾಸದಲ್ಲಿದ್ದರೆ ಚೆನ್ನ ಯಾವಾಗಲೂ. ಆ ಹುಡುಗ ಏನೋ ಒಂದು ರೀತಿ ನಡೆಸಿಕೊಂಡು ಹೂಗ್ತಾ ಇದಾನೆ ಸೊಸೈಟೀನ. ನೀವು ನಿಮ್ಮ ಅಧಿಕಾರದ ಬಾಲ ಬಿಚ್ಚಿದರೆ, ನಾನು ಸುಮ್ಮನಿರೊಲ್ಲ. ನೀವು ನಾವು ಹೇಳಿದ ಹಾಗೆ ಕೇಳಿಕೊಂಡಿರ ಬೇಕು" ಎಂದು.

ರಾಯರಿಂದ ಬಂದ ಉತ್ತರದಿಂದ ಆನಂದ ನೊಂದುಕೊಂಡ.

"ಸಿಕ್ಕಾಪಟ್ಟೆ ರಿಮಾರ್ಕ್ಸ್ (Remarks) ಬರೆದಿದಾರೆ. ಮುಂದಿನ ಬಾರಿ ಬಂದರೆ ಬೇಕಾಗಿಯೇ ಡಿಟೈಲ್ ಚಕ್ ಮಾಡಲು ಕೂಡುತ್ತಾರೆ. ಅದಕ್ಕೋಸ್ಕರ......ಆದಷ್ಟು ಜಾಗ್ರತೆ ಹಣ ವಸೂಲ್ಮಾಡಿಕೊಳ್ಳುವ ಪ್ರಯತ್ನ ಮಾಡಬೇಕು. ಸ್ವಲ್ಪ ಸ್ವಲ್ಪವಿದ್ದಾಗ ವಸೂಲ್ಮಾಡಿಕೊಳ್ಳುವುದು ಒಳ್ಳೇದು. ಮೊತ್ತ ಜಾಸ್ತಿಯಾದರೆ ವಸೂಲು ಮಾಡುವುದೂ ದೊಡ್ಡ ತಲೇನೋವಾಗುತ್ತೆ."

—ರಾಜಣ್ಣ ಆನಂದನ ಪರವಾಗಿ ನುಡಿದ.

"ಹಾಗೇ ಆಗಲಿ......ಈಗ ನಾನೆಷ್ಟು ಕೊಡಬೇಕು ಆನಂದ?"

"ಎಲ್ಲಾ ಒಟ್ಟು ಮೂರು ಸಾವಿರದ ಎಂಟುನೂರು ಚಿಲ್ಲರೆ!"

"ಆ್ಞ...! ಹಾದೇ...!!"

ರಾಯರು ಕೇಳಿದರು. ಆಶ್ಚರ್ಯದೊಡನೆ ಭಯವೂ ಮಿಳಿತವಾಗಿತ್ತು ಮಾತಿನಲ್ಲಿ ಸುಮಾರು ನಾಲ್ಕು ಸಾವಿರ! ಅದೂ ಸಾಲದ ರೂಪಾಯ —ತನ್ನ ಮೇಲೆ ಎಂದರೆ ಭಯವಾಗಬೇಡವೆ?

ಮಜ್ಜಿಗೆಗೆ ಅನ್ನಕೇಳಲು ಬಂದಿದ್ದ ಅನಸೂಯಮ್ಮ ಬಡಿಸಲು ನೀಡಿದ್ದ ಕೈಯನ್ನು ಸರಕ್ಕನೆ ಹಿಂದಕ್ಕೆ ಎಳೆದುಕೊಂಡರು ಆನಂದನ ಮಾತು ಕೇಳಿ.

"ಇದೇನೊಂದ್ರೇ......ನಿಮಗೇನು ಹುಚ್ಚುಗಿಚ್ಚು ಹಿಡೀತೋ ಹೇಗೆ? ಮೂರು ನಾಲ್ಕು ಸಾವಿರ ರೂಪಾಯಿ ಸೊಸೈಟಿ ಲೆಕ್ಕಕ್ಕೆ ಸಾಲ ಇದೆ ಅಂದ ರೇನರ್ಥ? ಚೆನ್ನಾಗಿದೆ!!"

ತಮ್ಮ ಹಣವೇ ಮೂರು ನಾಲ್ಕು ಸಾವಿರ ರೂಪಾಯಿ ಕಳೆದುಕೊಂ
ದ್ದರೂ ಅವರಿಗೆ ಅಷ್ಟು ಆತಂಕವಾಗುತ್ತಿರಲಿಲ್ಲ. ಆಂಜನಪ್ಪ ಇವರುಗ
ಬಳಿ ಸೊಸೈಟಿಯ ಹಣದಲ್ಲಿ ಲೇವಾದೇವಿ ನಡೆಸುವುದೇ ಅನಸೂಯವ
ನವರಿಗೆ ಹಿತ ಕಂಡಿರಲಿಲ್ಲ. ಇನ್ನು ಸ್ವಂತ ಲೆಕ್ಕದಲ್ಲಿ ಸಾಲ ತೆಗೆಯುವು
ಎಂದರೆ ಎಷ್ಟು ಗಾಬರಿಯಾಗಬೇಡ!

ತಮ್ಮಿಬ್ಬರ ಮಾತಿನ ಮಧ್ಯೆ ಹೆಂಡತಿ ಬಾಯಿಹಾಕಿದ್ದು ಕಂಡು ಸಿ
ಗೆದ್ದರು. ಇತ್ತೀಚೆಗೆ ತಮ್ಮ ವ್ಯವಹಾರದ ವಿಷಯದಲ್ಲಿ ಅನಸೂಯಮ
ಏನಾದರೂ ಮಾತಾಡಲು ಬಂದರೆ ಅರಳಾಗುತ್ತಿದ್ದರು ರಾಯರು. ಹೆಂ
ತಿಯ ಕಡೆ ಕೆಂಡಗಣ್ಣು ಬಿಟ್ಟು ಕ್ರೂರವಾಗಿ ದಿಟ್ಟಿಸಿ ಹೇಳಿದರು ಗಡಸ
ದನಿಯಲ್ಲಿ—

"ನಿನಗೇಕೆ ಅಧಿಕ ಪ್ರಸಂಗಿತನ. ಗಂಡಸರ ವ್ಯವಹಾರ......ಹ
ಪಾಡು ಅಂತ ತೆಪ್ಪಗೆ ಬಿದ್ದಿರಲಿಕ್ಕೆ ಆಗಲ್ಲವೇನೋ! ಹೆಂಗಸಿನ ಲಕ್ಷಣವೆ
ಅಷ್ಟು! ಛಿಃಗಿನ್ನ ಬುದ್ಧಿಗಷ್ಟು........."

"ನಾನೇನು ಅನ್ನಬಾರದ್ದು ಅಂದೆ ಈಗ. ಯಾಕೆ ರೇಗ್ತಾ ಇದೀರಿ
ಚೆನ್ನಾಯ್ತು. ಸೊಸೈಟಿಯ ಲೆಕ್ಕದಲ್ಲಿ ಅಷ್ಟೊಂದು ಸಾಲ ಏಕೆ ಆಯ್ತು
ಅಂದಿದ್ದೇ ತಪ್ಪಾಯಿತೆ?" ಅನಸೂಯಮ್ಮ ಗಂಡನ ಕೋಪಕ್ಕೇ ಕಾರಣ
ತಿಳಿಯದೆ ನೊಂದುಕೊಂಡು ಕೇಳಿದರು.

"ಮಾತಾಡದೆ ಸುಮ್ಮನಿರುತ್ತೀಯೋ ಇಲ್ಲವೋ— ಇಷ್ಟೊಂದು ಹಣ
ಯಾವುದು ಆನಂದ? ಇಷ್ಟೂ ನನ್ನ ಲೆಕ್ಕದ್ದೆ.......!?"

ರಾಯರ ಮಾತು ಕೇಳಿ 'ಕಳಕ್' ಎಂದಿತು ಆನಂದನ ಮನಸ್ಸು
ಅವರ ಕಡೆಯೇ ನೋಡುತ್ತ ನಿಧಾನವಾಗಿ ಹೇಳಿದ—

"ನೋಟು ಬುಕ್‌ನಲ್ಲಿ ಎಲ್ಲಾ ಗುರುತು ಹಾಕಿಟ್ಟಿದ್ದೀನಿ. ಊಟ
ವಾದ ಮೇಲೆ ತೋರಿಸುತ್ತೇನೆ"

ಊಟವಾದ ಮೇಲೆ ನಡುಮನೆಯಲ್ಲಿ ಕುಳಿತುಕೊಂಡು ಮೂವರೂ
ಲೆಕ್ಕದ ಪರಿಶೀಲನೆ ಮಾಡತೊಡಗಿದರು. ಆನಂದ ಒಂದೊಂದಾಗಿ ವಿ
ರಣೆಕೊಟ್ಟ.

ಆನಂದ ಸೂಚಿಸಿದ್ದಂತೆ ರಾಯರ ಲೆಕ್ಕ ಮೂರು ಸಾವಿರದ ಎಂಟ ನೂರರ ವರೆಗೆ ಮುಂದುವರಿದಿತ್ತು. ಇಷ್ಟು ಗಿರಾಕಿಗಳಲ್ಲಿ ಒಬ್ಬರಿಗೂ ದಯಮಾಡಿ ಕಂಟ್ರೋಲ್ ದರಕ್ಕೆ ನಾಲು ಕೊಟ್ಟಿರಲಿಲ್ಲ ರಾಯರು! ಒಂದಕ್ಕೆ ಒಂದೂವರೆಯಷ್ಟು ಮೇಲೆ ಬರುವ ಆದಾಯ. ಕ್ಯೋಸ್ಕರ 'ಉದ್ದರಿ' ಕೊಟ್ಟಿದ್ದರೂ ವಸೂಲು ಮಾಡುವುದೂ ಒಂದು ಸಮಸ್ಯೆ ಎಂದು ರಾಯರು ಅರಿತಿದ್ದರು. ಆದರೆ ಅವರ ಮನದಲ್ಲಿ ದೃಢವಾಗಿ ಬೇರೂರಿದ್ದ ಆಸೆಯ ಕಲ್ಪಲತೆ, ಎಂತಹ ಸಮಸ್ಯೆ ಚಿಂತೆಗಳು ಬಂದರೂ ಎದೆತಟ್ಟಿ ನಿಲ್ಲುವ ಧೈರ್ಯ ತುಂಬುತ್ತಿತ್ತು. ಜುಮ್ಲಾ ಮೊತ್ತವನ್ನೇ ತಿರುಗಿಸಿ ತಿರುಗಿಸಿ ನೋಡುತ್ತಿದ್ದ ರಾಯರು ನಿಧಾನವಾಗಿ ಹೇಳಿದರು—

"ಲೆಕ್ಕ ತುಂಬ ಬೆಳೆದು ಬಿಟ್ಟಿದೆ. ಆ ಕಲ್ಲುಮನೆ ಅಯ್ಯಪ್ಪ, ಶುಕೂರು, ಹೋಟೆಲ್ ತಿಪ್ಪೇರುದ್ರಿ—ಇವರೆಲ್ಲಾ 'ಈಗ ರೊಕ್ಕ ತಂದು ಕೊಡ್ತೀವಿ' ಅಂತ ಹೇಳಿದವರು ಇನ್ನೂ ಕೊಡ್ತಾ ಇದ್ದಾರೆ."

"ಜನಗಳು ಎಲ್ಲರೂ ಹೇಳೋದು ಹಾಗೇ. ನಿಮ್ಮ ಹತ್ತಿರ ಏನಾದರೂ ಗೋಳು ಹೇಳ್ಕೊಂಡು ಪುಸಲಾಯಿಸುತ್ತಾರೆ. ಈಗ ನೋಡಿ ನಿಮಗೆಷ್ಟು ತೊಂದರೆ......"ರಾಜಣ್ಣ ಹೇಳಿದ.

"ನೀನು ಹೇಳೋದು ಸರಿ. ಇನ್ನು ಮೇಲೆ ನಾನು ಯಾವುದೂ ಹೆಚ್ಚಿಗೆ ಹೇಳೊಲ್ಲ. ಒಂದು ವೇಳೆ ಹೇಳಿದರೂ ನೀನು ಕಿವಿಗೆ ಹಾಕಿಕೊಳ್ಳಬೇಡ ಆನಂದ. ಇನ್ಮೇಲೆ ಇನ್‌ಸ್ಪೆಕ್ಟರು ಬಂದಾಗ ನನಗೆ ಹೇಳಿ ಕಳುಹಿಸು—ಈ ಲೆಕ್ಕ ಒಂದು ಹದಿನೈದು ದಿನದಲ್ಲೇ ಹೊಂದಿಸಿಕೊಡ್ತೀನಿ. ಗಾಬರಿ ಬೀಳಬೇಡ."

"ಗಾಬರಿಯ ಮಾತಲ್ಲ. ತಡಮಾಡಿದರೆ ತಲೇಹೋಗುತ್ತೆ ಅಂತ ಅಷ್ಟೆ."

"ನಿನಗಿಂತ ಹೆಚ್ಚಿನ ಭಯ ನನಗಿದೆ ಆನಂದ. ಇನ್ನೊಂದು ವಿಷಯ—ಮಾರಾಟ ಆದಮೇಲೆ ಹಣವನ್ನೆಲ್ಲಾ S.B. ಗೇಜಮಾ ಮಾಡಿಸಿ ಬಿಡು ಇನ್ಮೇಲೆ. ಹಣ ಎದುರಿಗಿದ್ದರೆ ಅಂಜನಪ್ಪ—ಇವರುಗಳ ಕಾಟ ಜಾಸ್ತಿ. ಹೌದೋ ಅಲ್ಲವೋ...?"

"ಸರಿ"

"ಅಂತೂ ಹುಷಾರಿ, ಕೆಲಸದಲ್ಲಿ......"

ರಾಯರು ಎಚ್ಚರಿಸಿದರು. ಆ ಮಾತು ತನಗೂ ಅನ್ವಯಿಸುವು ದೆಂಬುದು ಅವರಿಗೆ ಹೊಳೆಯಲೇ ಇಲ್ಲ.

"ಆಗಲಿ"

ಎಂದು ಆನಂದ ಮೇಲೆ ನಡೆದ ರಾಜಣ್ಣನೊಡನೆ.

ಇನ್ನೊಂದು ದಿನ—ಸೊಸೈಟಿಯ ಡೈರೆಕ್ಟರುಗಳ ಮೀಟಿಂಗ್ ನಡೆ ದಿತ್ತು. ಆಗ ರಾಜಣ್ಣನೂ ಆನಂದನೊಡನಿದ್ದ. ಸೊಸೈಟಿಯ ಹಣ ಪೋಲಾದ ಬಗ್ಗೆ ಡೈರೆಕ್ಟರುಗಳಲ್ಲಿ ಕೆಲವರು ಬಿರುಸಾಗಿ ಚರ್ಚಿಸಿದರು. ಮಾತಿಗೆ ಮಾತು ಬಂದು ಬುಸ್ಸಣ್ಣ ಮೀಟಿಂಗ್‌ನ ಜಾಗಬಿಟ್ಟು ಎದ್ದು ಹೋದರು.

ಆನಂದನಿಗೆ ಮೀಟಿಂಗಿನ ಸಮಯದಲ್ಲಿ ಸಾಕಷ್ಟು ಅವಮಾನ ವಾಗಿತ್ತು. ಅವನ ಅಭಿಮಾನಕ್ಕೆ ಪೆಟ್ಟು ತಗುಲಿತ್ತು. ಇನ್‌ಸ್ಪೆಕ್ಷನ್ ದಿನದ ಪರಾಭವವನ್ನು ಹೇಗೋ ಸಹಿಸಿದ್ದ. ಆದರೆ ಇಂದು ಅವನ ಸಹನೆ ಹಾರಿಹೋಗಿತ್ತು.

ಮೀಟಿಂಗ್ ಮುಗಿದು ಮನೆಗೆ ಬಂದ ಕೂಡಲೇ ಆನಂದ ಸೊಸೈ ಟಿಯ ಲೆಕ್ಕ ಪತ್ರಗಳನ್ನು ರಾಯರ ಮುಂದಿಟ್ಟು ನಿರ್ಧಾರದ ಧ್ವನಿಯಲ್ಲಿ ಹೇಳಿದ—

"ನಾನು ಸೊಸೈಟಿಯ ಛಾರ್ಜು ವಹಿಸಿಕೊಡಲು ಸಿದ್ಧನಾಗಿದ್ದೀನಿ. ನನಗೆ ಈ ಕೆಲಸದಿಂದ ಬಿಡುಗಡೆಮಾಡಿಸಿಬಿಡಿ. ಈ ಕೆಲಸವೂ ಸಾಕು, ಈ ಪ್ರಾರಬ್ಧವೂ ಸಾಕು."

ಮಾತಿನಿಂದ ಹೊರಬಂದ ನಿಟ್ಟುಸಿರು ಅವನ ಹೃದಯದಲ್ಲಾಗುತ್ತಿದ್ದ ಅಸಹ್ಯ ವೇದನೆಯನ್ನು ಹೊರಸೂಸುತ್ತಿತ್ತು.

ಆನಂದನ ಮಾತಿಗೆ ಉತ್ತರಕೊಡಲಾಗದೆ ಬಗ್ಗಿಸಿದ ತಲೆಯನ್ನು ಎತ್ತ ಲಿಲ್ಲ ಗುರುರಾಜರಾಯರು. ಅವರ ಮನಸ್ಸಿನಲ್ಲಿ ಪಶ್ಚಾತ್ತಾಪ ಮೂಡಿ ಬಂದಿತ್ತು. 'ನಿರಪರಾಧಿ ಆನಂದನಿಗೆ ನಿಷ್ಕಾರಣವಾಗಿ ಅವಮಾನ ದುಃಖ ಕೊಟ್ಟೆನಲ್ಲಾ' ಎಂದು ಒಳಒಳಗೇ ಅಳುತ್ತಿದ್ದ ಅವರ ಅವರ ಮನಸ್ಸು ಒಂದು ಸಲವಲ್ಲ, ನೂರು ಸಲ ತಪ್ಪಾಯಿತೆಂದು ಕೆನ್ನೆಗೆ ಹೊಡೆದುಕೊಂಡಿತು.

ಆನಂದನನ್ನು ದೂರ ಮಾಡುವುದು ಅವರಿಂದ ಸಾಧ್ಯವಿರಲಿಲ್ಲ. ದುಃಖ ತುಂಬಿದ ನಡುಗುವ ಧ್ವನಿಯಲ್ಲಿ ಹೇಳಿದರು—

"ನೀನು ಮೊದಲಿನಿಂದ ಹಣದ ವಿಷಯಕ್ಕೆ ಎಚ್ಚರಿಕೆಕೊಡುತ್ತಲೇ ಇದ್ದೆ. ನಾನು ಗಮನಕೊಡಲಿಲ್ಲ. ಆಯಿತು......! ನೀನು ಛಾರ್ಜು ಕೊಡುವುದು ಬೇಡ. ಹಾಗೆ ಮಾಡಿದರೆ ನನ್ನ ಮನಸ್ಸಿಗೆ ತುಂಬಾ ವ್ಯಥೆಯಾಗುತ್ತದೆ. ನೀನೇ ರಾಜು, ರಾಜೂನೇ ನೀನು ಅಂತ ನಾವು ತಿಳಿದುಕೊಂಡಿದ್ದೇವೆ. ಆದ್ದರಿಂದ ಇಲ್ಲಿಂದ ಬಿಟ್ಟುಹೋಗುವ ಮಾತು ಆಡಬೇಡ. ತಪ್ಪುಮಾಡಿದ್ದಾಯಿತು. ತಿದ್ದುಕೊಳ್ಳೋಣ. ಇವತ್ತಿನ ವಿಷಯ ಇಷ್ಟಕ್ಕೇ ಮರೆತುಬಿಡು. ಮನಸ್ಸಿಗೆ ಹಚ್ಕೋಬೇಡ."

ರಾಯರ ಮಾತು ಉತ್ಪ್ರೇಕ್ಷೆಯಾಗಿರಲಿಲ್ಲ. ಅವರ ಅಂತರಾತ್ಮ ನಿಜಕ್ಕೂ ವಿಹ್ವಲತೆಯಿಂದ ಬೀರಿತ್ತು. ರಾಯರ ಮಾತಿಗೆ ಆನಂದ ಏನೂ ಹೇಳಲಿಲ್ಲ. ಸುಮ್ಮನೇ ಮೇಲಕ್ಕೆ ಹೋದ. ಮೇಲೆ ರಾಜಣ್ಣ ಆನಂದನಿಗಾಗಿ ಕಾದಿದ್ದ. ಆನಂದನಿಂದ ವಿಷಯವೆಲ್ಲಾ ತಿಳಿದು ಅವನು ಹೇಳಿದ—

"ನೀನು ದುಡುಕಬೇಡ ಆನಂದ. ದುಡುಕಿನಕೈಗೆ ಬುದ್ಧಿಕೊಟ್ಟು ಕೆಲಸಕ್ಕೆ ರೆಸಿಗ್ನೇಷನ್ (Resignation) ಕೊಡಬೇಡ. ಹಾಗೆಮಾಡಿದರೆ ಮುಂದೆ ತುಂಬಾ ಪರದಾಡಬೇಕಾಗುತ್ತೆ. ಯಾವಾಗಲೂ ಕೂತು ಮಲಗಬೇಕು. ತಾಳಿದವನು ಬಾಳುತ್ತಾನೆ ನೀನು ವಿವೇಕಿ. ನಿನಗೆ ಹೆಚ್ಚಿಗೆ ಹೇಳುವುದೇನಿದೆ! ನಾನು ಅಧಿಕಪ್ರಸಂಗಮಾಡಿದೆನೆಂದುಕೊಳ್ಳಬೇಡ. ನನ್ನ ಆತ್ಮಸಾಕ್ಷಿಯಾಗಿ ನಿನ್ನ ಕ್ಷೇಮಕ್ಕಿಂತ ಹೆಚ್ಚಿನ ವಿಷಯ ನನ್ನ ಮನಸ್ಸಿನಲ್ಲಿಲ್ಲ."

ರಾಜಣ್ಣನ ಮಾತಿಗೆ ಗದ್ಗದಿತನಾಗಿ ಉತ್ತರಕೊಟ್ಟ ಆನಂದ—ಹೃದಯದ ಮಾರ್ದವತೆಯನ್ನೆಲ್ಲಾ ಹೊರಚೆಲ್ಲಿ—

"ರಾಜೂ, ನೀನೇ—ಅಲ್ಲ, ನೀವುಗಳೇ ನನ್ನ ಬಂಧುಗಳು, ಹಿತೈಷಿಗಳು, ಎಲ್ಲಾ.........! ನೀವು ಹೇಳಿದ ಹಾಗೆ ಮಾಡುವೆ—" ಎಂದ ಅಸಹಾಯಕನಂತೆ.

* * * * *

ಪರೀಕ್ಷೆಯ ಫಲಿತಾಂಶ ಬಂದಿತ್ತು. ರಾಜಣ್ಣನೂ ಅವನ ಗೆಳೆಯರೂ ಪಾಸಾಗಿದ್ದರು. ಅವನ ಮುಂದಿನ ವಿದ್ಯಾಭ್ಯಾಸಕ್ಕೆ ರಾಯರು ಅಡ್ಡಿ

ಪಡಿಸಲಿಲ್ಲ. 'ದೇವರು ಅನುಕೂಲಕೊಟ್ಟಿರುವಾಗ ಓದಿಸಿಬಿಡೋದು ಬಿಟ್ಟು ಸುಮ್ಮನೆ ಮನೇಲಿರು ಅನ್ನೋದೇಕೆ? ಇನ್ನೆರಡು ವರ್ಷ ಓದಿದರೆ ಡಿಗ್ರೀನೂ ಬಂದ ಹಾಗಾಗುತ್ತೆ' ಎಂದು ಅನಸೂಯಮ್ಮನವರೂ ಅಂದಿದ್ದರು. ಆನಂದ, ರಾಯರ ಬಳಿ 'ಕಷ್ಟವೋ ಸುಖವೋ, ಇನ್ನೆರಡು ವರ್ಷ ಓದಿದರೆ ಒಂದು ಹಂತಕ್ಕೆ ನಿಂತ ಹಾಗಾಗುತ್ತೆ. ಡಿಗ್ರಿಯೂ ದೊರೆಯುತ್ತೆ. ಇಲ್ಲದಿದ್ದರೆ ಅತ್ತಲೂ ಇಲ್ಲ, ರಾಜೂ ಮುಂದೆ ಓದುವುದೇ ಉತ್ತಮ' ಎಂದು ಸಲಹೆ ಕೊಟ್ಟಿದ್ದ. ಅಂತೆಯೇ ರಾಜಣ್ಣ ಮುಂದೆ ಓದುವುದು ನಿಶ್ಚಯವಾಯಿತು.

ಹುಡುಗರೆಲ್ಲರೂ ಬೆಂಗಳೂರಲ್ಲೇ ಓದುವುದು ಎಂದು ತೀರ್ಮಾನಿಸಿದ್ದರು.

ಹೊರಡುವ ಸಮಯದಲ್ಲಿ ಆನಂದನಿಗೆ ರಾಜಣ್ಣ ಕೇವಲ ಇಷ್ಟೇ ಹೇಳಿದ—

"ಕೆಲಸ ಚೆನ್ನಾಗಿ ನಡೆಯೋದಾದರೆ, ನಿನ್ನ ಮನಕ್ಕೂ ಆತಂಕವಿಲ್ಲದೆ ಹೋದರೆ ಇಲ್ಲೇ ಕೆಲಸ ನೋಡಿಕೊಂಡಿರು ಆನಂದ. ಇಲ್ಲದಿದ್ದರೆ ಬೇರೆಯ ಕಡೆಯಲ್ಲಿ ಪ್ರಯತ್ನಮಾಡು. ಆದರೆ ಮುಂದಾಲೋಚನೆಯಿಲ್ಲದೆ ಕೆಲಸ ಬಿಟ್ಟು ಕುಳಿತುಕೊಳ್ಳಬೇಡ. ಕೆಲಸ ಬಿಡಬೇಕಾದರೆ ನನಗೆ ತಿಳಿಸದೆ ಮಾತ್ರ ಇರಬೇಡ."

ರಾಜಣ್ಣನ ಮಾತಿನಲ್ಲಿ ತನ್ನ ಬಗ್ಗೆ ಇದ್ದ ಕರುಣೆ, ಸಹಾನುಭೂತಿ, ಎಲ್ಲಕ್ಕೂ ಮಿಗಿಲಾದ ಆತ್ಮೀಯತೆಗೆ ಆನಂದ ಏನೂ ಉತ್ತರ ಕೊಡದಾದ. ತನ್ನ ಜೀವನದಲ್ಲೇ ಅಪರೂಪವಾಗಿದ್ದ ದಯೆ, ಪ್ರೀತಿ, ವಾತ್ಸಲ್ಯಗಳನ್ನು ರಾಂಪುರದ ಮನೆಯಲ್ಲಿ ದೊರಕಿಸಿಕೊಂಡಿದ್ದ ಆನಂದ ಅದರ ಪ್ರತಿಯಾಗಿ ಕೃತಜ್ಞತೆಯ ವಂದನೆಗಳನ್ನು ಮೌನವಾಗಿಯೇ ಅರ್ಪಿಸುತ್ತಿದ್ದ. ಅಂತೆಯೇ ಇಂದೂ.

ಉಳಿದ ಗೆಳೆಯರೂ ಅಷ್ಟೆ, ಆನಂದನಿಗೆ ಸಹಾನುಭೂತಿ ತೋರಿದ್ದರು. ಅವನ ಬೆಂದ ಹೃದಯಕ್ಕೆ ಅವರ ನುಡಿ ಅಮೃತಸೇಚನೆ ಮಾಡಿತು—

"ಪರಿಸ್ಥಿತಿ ನಿಮ್ಮನ್ನು ತುಳಿಯುತ್ತಿದೆ ಆನಂದ. ಹೆದರಬೇಕಾದ್ದಿಲ್ಲ ಅದಕ್ಕಾಗಿ. ನೀವು ಯಾರೋ ಬೇರೆಯೆಂದು ನಾವು ಭಾವಿಸಿಲ್ಲ. ರಾಜಣ್ಣನೇ ನೀವು ಎಂದರೆ ತಪ್ಪಾಗಲಾರದು. ನಮ್ಮೂರಿಗೆ ಎಂದು ನೀವು ಕಾಲಿಟ್ಟಿರೋ ಅಂದೇ ನೀವು ನಮ್ಮವರಾದಿರಿ. ನಿಮ್ಮ ಕಷ್ಟ-ಸುಖ, ಕೆಟ್ಟದ್ದು-ಒಳ್ಳೆಯದು

ಎಲ್ಲದರಲ್ಲೂ ನಾವೂ ಭಾಗಿಗಳು. ರಾಂಪುರದ ಹುಡುಗರು ಅನ್ಯಾಯಕ್ಕೆ ತಲೆಬಾಗಿಲ್ಲ. ಅಂತೆಯೇ ನಮ್ಮ ದಾರಿ ನ್ಯಾಯವಿರುವ ಕಡೆ. ಮುಂದಿನ ನಮ್ಮ ಬಾಳು-ಬದುಕು, ನ್ಯಾಯದ ನೆರಳಲ್ಲಿ. ನಿಮ್ಮ ದಾರಿಯ ಕಂಟಕಗಳು ಕೆಲವೇ ದಿನಗಳಲ್ಲಿ ನಶಿಸುವುವು."

—ತಮ್ಮವರೆಲ್ಲರ ಪರವಾಗಿ ನೀಲಕಂಠಪ್ಪ— ಆಡಿದ್ದ ಮಾತು ಆನಂದನ ಹೃದಯದಲ್ಲಿ ಶಾಸನದಂತೆ ಅಚ್ಚಳಿಯದ ಹಾಗೆ ಮೂಡಿದುವು. ಆನಂದ ನೀಲಕಂಠಪ್ಪನ ಬಗ್ಗೆ ಗೌರವದಿಂದ ನುಡಿದ—

"ನಿಮ್ಮ ವಿಶ್ವಾಸ ಧಣೀ !"

"ಆತ್ಮಬಲದ ಬಗ್ಗೆ ಅಭಿಮಾನ ತೋರಿದ್ದೀರಿ. ಆ ಅಭಿಮಾನ ನಿಮ್ಮದೊಬ್ಬರದೇ ಅಲ್ಲ. ನಮ್ಮದೂ ಕೂಡ. ಜೀವನದ ಏರಿಳಿತ–ಉತ್ಕ್ರಾಂತಿಗಳಲ್ಲಿ ಆತ್ಮಬಲಕ್ಕಿಂತ ಉತ್ತಮ ರಕ್ಷೆ ಬೇರೆ ಯಾವುದೂ ಇಲ್ಲ. ಅಭಿಮಾನವಿರಲಿ"—ನೀಲಕಂಠಪ್ಪ ಹೇಳಿದ.

ಆನಂದ ತನ್ನ ಮಿತ್ರರನ್ನು ಬೀಳ್ಕೊಟ್ಟು ಬಂದ.

೧೫

ರಾಯರು ಯಾರ ಮಾತನ್ನೂ ಕೇಳುತ್ತಿರಲಿಲ್ಲ. ಆನಂದನಿಗೆ ರಾಯರ ವರ್ತನೆ ತುಂಬಾ ಖೇದವನ್ನುಂಟು ಮಾಡುತಿತ್ತು. ರಾಯರು ದುರಾಶೆಗೆ ಬಲಿಬಿದ್ದು ಸೊಸೈಟಿಯ ಹಣದ ಋಣ ಬೆಳಸುತ್ತಾ ಬರುತ್ತಿದ್ದುದರಿಂದ ಮುಂದೆ ಏನಾಗಬಹುದೆಂದು ಊಹಿಸುವುದು ಕಷ್ಟವಾಗಿತ್ತು. ರಾಯರ ದುಷ್ಟ ಸಹವಾಸ ಗುಣ ಅವರ ವಿವೇಕವನ್ನು ತೊಡೆದುಹಾಕಿತ್ತು.

ಸಾಲ ಏರಿದ ಹೊತ್ತಿನಲ್ಲಿ ಆಶ್ರಯವಿತ್ತು ಸಾಕಿದ ಆನಂದನನ್ನೇ ಬಲಿಕೊಡಲೂ ಅವರು ಹೇಸಲಿಲ್ಲ. ಜನಗಳ ಮುಂದೆ ಆದರ್ಶವಾದಿ ಆನಂದನನ್ನು ನಿಂದಿಸಿ ಜಗಳ ಕೆದರಿದ್ದರು ಒಂದೆರಡು ಬಾರಿ. ಇದ್ದಕಿದ್ದಂತೆ ಕ್ಯಾಶ್ ರಿಮಿಟೆನ್ಸ್ ಪುಸ್ತಕವನ್ನೇ ಒಂದು ದಿನ ರಾಯರು ಹುಚ್ಚನಂತೆ ಎಸೆದು ಆನಂದನೊಡನೆ ಕಾಳಗ ನಡೆಸಿ ಅವನ ತಂದೆ ತಾಯಿಗಳನ್ನೂ ನಿಂದಿಸಿದರು. ರಿಮಿಟೆನ್ಸ್ ಪುಸ್ತಕ ಇಲ್ಲದಿರಲು ಹಣ ಆನಂದ ಕೊಟ್ಟುದಕ್ಕೆ ಸಾಕ್ಷಿಯೇನು? ಆನಂದನ ತಲೆಯಲ್ಲಿ ಯೋಚನೆಯ ಸುಂಟರಗಾಳಿಯೆದ್ದಿತು. ಇದರಿಂದ

ಇಲ್ಲಿದ್ದರೆ ಕ್ಷೇಮವಿಲ್ಲವೆಂಬ ನಿರ್ಧಾರ ಅವನದಾಯಿತು. ಹಗಲು ಆನಂದ ನೊಡನೆ ಜಗಳ ಬೆಳೆಸಿದ ರಾಯರು ರಾತ್ರಿ ಮನೆಗೆ ಬಂದಿರಲಿಲ್ಲ. ಆನಂದನಿಗೆ ಒಂದೆರಡು ದಿನಗಳಿಂದ ತುಸು ಜ್ವರವೂ ಬರುತ್ತಿದ್ದಿತು.

ಮಾರಣೆ ದಿನ ಬೆಳಗ್ಗೆ ಆಂಜನಪ್ಪನ ಕ್ಲಬ್ಬಿನಿಂದ ರಾಯರು ಮುಖ ಸಣ್ಣದು ಮಾಡಿಕೊಂಡು ಮನೆಗೆ ಬಂದರು. ಗಡಿಯಾರ ಏಳೂವರೆ ಸೂಚಿಸುತ್ತಿತ್ತು. ರಾತ್ರೆಯೆಲ್ಲಾ ಆಟದಲ್ಲಿ ಕಳೆದು ಅಲ್ಲಿಯೇ ಬಿದ್ದು ಕೊಂಡಿದ್ದು ಎದ್ದು ಬಂದಿದ್ದರು. ಚಿಂತೆಯಿಂದ ಮನಸ್ಸು ಭಾರವಾಗಿತ್ತು. ರಾತ್ರೆ ಆಟದಲ್ಲಿ ಹಣ ಬೇರೆ ಕಳೆದುಕೊಂಡಿದ್ದರು. ಬರಿಗೈಯಿಂದ ಮನೆ ಬಿಟ್ಟ ಅವರು ಆಂಜನಪ್ಪನ ಬಳಿ ಎರವಲು ಪಡೆದು ಆಟವಾಡಿದ್ದರು. ಹಣಹೋದ ಚಿಂತೆಯೊಡನೆ ನಿನ್ನೆಯ ದಿನ ಆನಂದನನ್ನು ಸಿಕ್ಕಾಪಟ್ಟೆ ಅಂದು ಆಡಿದ್ದು ಬೇರೆ ಕಳವಳವುಂಟುಮಾಡಿತ್ತು. ಮನೆಗೆ ಬಂದಾಗ ಅನಸೂಯಮ್ಮ ಸುಮ್ಮನೆ ಕ್ಷಣಕಾಲ ಅವರ ಮುಖ ನೋಡಿದರಷ್ಟೇ, ಮಾತಾಡಲಿಲ್ಲ. ಅವರ ನೋಟದಲ್ಲಿ ನೋಡಿನೊಡನೆ ತಿರಸ್ಕಾರವಿತ್ತು. ರಾಯರು ತಲೆ ತಗ್ಗಿಸಿಕೊಂಡು ಬಚ್ಚಲ ಮನೆಗೆ ಹೋಗಿ ಮುಖ ತೊಳೆದು ಬಂದರು. ಅನಸೂಯಮ್ಮ ಕಾಫಿಯ ಲೋಟ ಮುಂದಿಟ್ಟರು. ರಾಯರ ಮನಸ್ಸು ಹಿಂದಿನ ದಿನದ ಘಟನೆಯಿಂದ ಸಂಪೂರ್ಣ ತಿಳಿಯಾಗಿತ್ತು. ಆನಂದನ ಬಗ್ಗೆ ತಾವು ವರ್ತಿಸಿದುದನ್ನು ನೆನೆದು ನಾಚಿಕೆಯಾಗಿತ್ತು. ಮೆಲುದನಿಯಲ್ಲಿ ಕೇಳಿದರು—

"ಆನಂದನಿಗೆ ಕೊಟ್ಟಾಯಿತೆ?"

"ಅವನಿನ್ನೂ ಎದ್ದಿಲ್ಲ ಏನೋ ಪಾಪ! ಮಲಗಿದಾನೆ; ಮಲಗಿರಲಿ."

"ನಿನ್ನೆ ಅವನನ್ನ ಮನಸ್ಸಿಗೆ ಬಂದ ಹಾಗೆ ಆಡಿ ಘಾಸಿಪಡಿಸಿದೆ. ಏನೆಂದುಕೊಂಡನೋ ಏನೋ ಪಾಪ. ಅವನು ಏಳಲಿ. ಜೊತೆಯಲ್ಲೇ ಕುಡಿಯುತ್ತೇನಿ."

"ಎದ್ದಿದ್ದಾನೇನೋ ನೋಡಮ್ಮ ಪ್ರಮೀ" ಎಂದು ಮಗಳಿಗೆ ಹೇಳಿ ಅನಸೂಯಮ್ಮ ಗಂಡನ ಕಡೆ ತಿರುಗಿ ಹೇಳಿದರು—

"ಈಗಲಾದರೂ ಒಂದೆರಡು ಒಳ್ಳೇ ಮಾತಾಡಿ. ನಾವು ಏನು ಆಡಿದರೂ ಮನಸ್ಸಿಗೆ ಹಚ್ಚಿಗೊಳ್ಳೋ ಹುಡುಗ ಅಲ್ಲ ಆನಂದ. ಅವನ ಮನಸ್ಸು ನೋಯಿಸಬಾರದು."

ಮೇಲೆ ಹೋಗಿದ್ದ ಪ್ರಮೀಲ ವಾಪಸು ಬಂದು,

"ರೂಮಿನಲ್ಲಿಲ್ಲ; ಎದ್ದು ಎಲ್ಲಿಗೋ ಹೋಗಿದಾರೆ" ಎಂದಳು.

"ಸೊಸೈಟಿಗೆ ಹೋಗಿದಾನೇನೋ ನೋಡಿಬರ್ತೀನಿ ಕಾಫಿ ಇಟ್ಟಿರು."

ಎಂದು ರಾಯರು ಸೊಸೈಟಿಯ ಕಡೆ ನಡೆದರು. ಸೊಸೈಟಿಯ ಬಾಗಿಲು ಮುಚ್ಚಿತ್ತು. ಶ್ರೀನಿವಾಸರಾಯರ ಹತ್ತಿರ ಮಾತಾಡಲು ಹೋಗಿರ ಬಹುದೆಂದು ನೇರವಾಗಿ ಆಸ್ಪತ್ರೆಯ ಕಡೆ ಧಾವಿಸಿದರು. ಶ್ರೀನಿವಾಸ ರಾಯರು ರಾಯರನ್ನು,

"ಏನು ಬಂದಿರಿ ?" ಎಂದು ಕೇಳಿದರು.

"ಆನಂದ ಬಂದಿದ್ದನೇ ?"

"ಇಲ್ಲವಲ್ಲಾ......ಅವನಿಗೆ ಹೇಗಿದೆ ?"

"ಹೇಗಿದೆಯೋ ಏನೋ. ಅವನು ಮನೇಲಿಲ್ಲ. ಇಲ್ಲಿಗೆ ಬಂದಿದ್ದಾ ನೇನೋ ಅಂತ ಬಂದೆ ಹುಡುಕಿಕೊಂಡು. ಹಾಗಾದರೆ ಇಲ್ಲಿಗೆ ಬರಲಿಲ್ಲವೆ!"

—ರಾಯರು ಗಾಬರಿಯಿಂದ ಕೇಳಿದರು. ಇದ್ದಕ್ಕಿದ್ದಂತೆ ಅವರ ಮನಸ್ಸಿನಲ್ಲಿ ಭಯ ಮೂಡತೊಡಗಿತ್ತು.

"ಮನೆಗೆ ಬಂದಿದ್ದನೇ ?"

"ಇಲ್ಲ. ನಾನು ಈಗತಾನೇ ಮನೆಯಿಂದ ಬಂದೆ."

"ಹಾಗಾದರೆ ಇನ್ನೆಲ್ಲಿಗೆ ಹೋದ......!"

ಆನಂದ ಎಲ್ಲಿಯೋ ಹೊರಟು ಹೋಗಿರಬೇಕೆಂದು ರಾಯರಿಗೆ ಖಚಿತ ವಾಗಿ ಅವರು ಹುಚ್ಚರಂತಾದರು. ಅಲ್ಲಿ ನಿಲ್ಲದೆ ಮನೆಗೆ ಬಂದರು.

"ಆನಂದ ಬರಲಿಲ್ಲವೆ ?"

"ಇಲ್ಲ. ಸೊಸೈಟಿಯಲ್ಲಿಲ್ಲವೆ ?"

"ಸೊಸೈಟಿಯಲ್ಲಿಲ್ಲ. ಆಸ್ಪತ್ರೆಯ ಕಡೆಗೂ ಹೋಗಿಲ್ಲ. ಅವನೆಲ್ಲಿಗೆ ಹೋಗಿದ್ದಾನೋ ಗೊತ್ತಿಲ್ಲ !"

"ಇದೇನು ಹೀಗೆ. ಮೈಲಿ ಹುಶಾರಿಲ್ಲ. ಇನ್ನೆಲ್ಲಿಗೆ ತಾನೇ ಹೋಗ್ತಾನೆ ಬಂದಿದಾನೇನೋ ನೋಡು ಪ್ರಮೀ......"

ಪ್ರಮೀಲೆಗೂ ಆನಂದನಿಲ್ಲವೆಂದು ತಿಳಿದು ಗಾಬರಿಯಾಯಿತು. ಮೇಲೆ ಬಂದು ನೋಡಿದಳು. ಆನಂದ ಇರಲಿಲ್ಲ. ಅವಳ ದೃಷ್ಟಿ ತಲೆ ದಿಂಬಿನ ಕಡೆ ಹರಿದು, ಅಲ್ಲಿ ಒಂದು ಕಾಗದ ಸಿಕ್ಕಿಸಿದ್ದಂತೆ ಕಂಡುಬಂದು ಕುತೂಹಲದಿಂದ ನೋಡಿದಳು. ಅದು ಆನಂದ ಬರೆದಿಟ್ಟಿದ್ದ ಪತ್ರ. ಒಳಗೆ ಇನ್ನೊಂದು ಪತ್ರವಿತ್ತು ಅವಳ ಎದೆ ಹೊಯ್ದುಕೊಳ್ಳಲಾರಂಭಿಸಿತು. ಪತ್ರವನ್ನು ಓದತೊಡಗಿದಳು. ಆ ಪತ್ರವನ್ನು ರಾಯರನ್ನುದ್ದೇಶಿಸಿ ಬರೆದಿದ್ದ ಆನಂದ.

ಶ್ರೀ-ಯವರಿಗೆ ಆನಂದನ ಅನಂತ ವಂದನೆಗಳು.

ನೀವು ಸೊಸೈಟಿಯ ಹಣದ ಬಗ್ಗೆ "ನಿನ್ನಿಷ್ಟ ಬಂದಹಾಗೆ ಮಾಡು" ಎಂದು ಒಂದೇ ಮಾತಿನಲ್ಲಿ ನನ್ನ ಬಾಯಿ ಮುಚ್ಚಿಸಲು ಪ್ರಯತ್ನಿಸಿದಿರಿ. ನಿಮ್ಮ ಹೇಳಿಕೆಯಂತೆ ನನ್ನಿಷ್ಟ ಬಂದ ಹಾಗೆ ಮಾಡಿದ್ದೇನೆ.

ನೀವು ಒಂದೇ ಮಾತಿನಲ್ಲಿ 'ಮುಚ್ಚು ಬಾಯಿ !' ಎಂದು ನಿಮ್ಮ ಘನತೆಯನ್ನು ವ್ಯಕ್ತಪಡಿಸಿದಿರಿ; ನೀತಿಯನ್ನು ತೋರಿಸಿಕೊಟ್ಟಿರಿ. ಆದರೆ ನಿಮ್ಮ ನೀತಿ ನಿಮ್ಮನ್ನು ಯಾವ ಕಡೆಗೆ ಒಯ್ಯುವುದೆಂಬುದನ್ನು ಶೀಘ್ರದಲ್ಲೇ ನೀವು ಮನಗಾಣುವಿರೆಂದು ನನ್ನ ಒಳನುಡಿ ಹೇಳುತ್ತಿದೆ. ಅದು ಹಾಗಾಗದೆ ದೇವರು ನಿಮಗೆ ಒಳ್ಳೆಯದನ್ನು ಮಾಡಲೆಂದು ಕೋರುತ್ತೇನೆ.

ನನ್ನನ್ನು ಹುಡುಕಿಸುವ ಯತ್ನ ಮಾಡಬೇಡಿ. ನಾನು ಸಿಗಲಾರೆ. ಅನಿವಾರ್ಯವಾಗಿ ನೀವು ಸೊಸೈಟಿಯ ಹಣದ ಸಂಪೂರ್ಣ ಋಣಭಾರ ಹೊರಬೇಕಾಗಿ ಬಂದುದಕ್ಕೆ ಮರುಗುತ್ತೇನೆ. ತಪ್ಪಿದ್ದರೆ ದೇವರು ನನ್ನನ್ನು ಕ್ಷಮಿಸಲಿ.

ಇತಿ, ಆನಂದ.

ಕಣ್ಣೀರೊರಸಿಕೊಂಡು ಆನಂದನ ಎರಡನೆಯ ಪತ್ರ ನೋಡಿದಳು. ಅದು ತನ್ನನ್ನೇ ಸಂಬೋಧಿಸಿ ಬರೆದಂತಿತ್ತು. ಓದತೊಡಗಿದಳು—

ನನ್ನ ಪ್ರಮೀಲ—

ಇಂತಹ ಪತ್ರಕೂಡ ಬರೆಯಬೇಕಾಗುವುದೆಂದು ನಾನೆಣಿಸಿರಲಿಲ್ಲ. ಪತ್ರ ಓದುತ್ತ ಓದುತ್ತ ನಿನಗೆ ಅತ್ಯಂತ ದುಃಖವಾಗಬಹುದು. ಆದರೆ ಅದಕ್ಕಿಂತ ನೂರು ಮಡಿಯಷ್ಟು ಸಹಸ್ರ ಮಡಿಯಷ್ಟು ದುಃಖ ಅನುಭವಿಸುತ್ತಿರುವೆ ನಾನು. ಆದರೂ ಬರೆಯುತ್ತಿರುವೆ

ನಾನು ಈ ಪ್ರಪಂಚದಲ್ಲಿ ಕಣ್ತೆರೆದು ಬಂದಾಗ ಏಕಾಕಿಯಾಗಿ ಬಂದೆ. ಅಂತೆಯೇ ಏಕಾಕಿಯಾಗಿ ಹೋಗುತ್ತಿರುವೆ. ನಿಜಕ್ಕೂ ಈ ಮಾತಿನಲ್ಲಿ ಯಾವ ವಿಶೇಷವಿಲ್ಲದಿದ್ದರೂ ನನ್ನ ಜೀವನದ ಸಮಗ್ರ ಹಿನ್ನೆಲೆಯೂ ಇದೇ ಆಗಿದೆ. ನನ್ನ ಜೀವನಚರಿತ್ರೆ ನಿಮ್ಮೆಲ್ಲರಿಗೂ ತಿಳಿದದ್ದೇ. ಅದನ್ನು ಮತ್ತೆ ತಿಳಿಸುವ ಅಗತ್ಯವಿಲ್ಲ.

ಜೀವನದಲ್ಲಿ ಒಂದು ಉತ್ತಮ ಸ್ಥಾನಗಳಿಸಬೇಕು, ಬದುಕಬೇಕು ಎಂಬ ಆಸೆಯಿಂದ ಇಲ್ಲಿಗೆ ಬಂದೆ. ನೀವುಗಳು ನನ್ನನ್ನು ಆದರಿಸಿದಿರಿ. ಎಲ್ಲಕ್ಕೂ ಮಿಗಿಲಾಗಿ ನೀನು ನನ್ನನ್ನು ಹುಚ್ಚನನ್ನಾಗಿ ಮಾಡಿದೆ. ನಿನ್ನ ಅನನ್ಯ ಸಾಧಾರಣ ಪ್ರೇಮ, ಮಮತೆಗಳ ಬಂಧನದಲ್ಲಿ ನನ್ನನ್ನು ಬಿಗಿದು ಬಿಟ್ಟೆ. ನಿಜಕ್ಕೂ ನಾನು ಸುಖಿಯೆಂದುಕೊಂಡೆ.

ನನ್ನ ಬಯಕೆ ಬಿಸಿಲುಗುದುರೆಯಾಯ್ತು. ಪ್ರೇಮ ಜವನಿಕೆಯ ಮೇಲೆ ನಾನು ಚಿತ್ರಿಸಲು ಹೊರಟಿದ್ದ ಕಲೆ ಅಮೋಘವಾದದ್ದು. ಆದರೆ ಕಲೆ ಪೂರ್ಣಗೊಳ್ಳುವ ಮುನ್ನ, ಸಾಧನೆಗೆ ಸಿದ್ಧಿದೊರೆಯುವ ಮುನ್ನ ಜವನಿಕೆ ಹರಿದುಬಿದ್ದಿದೆ. ಕೂಡುವ ಸಂಭವವಿಲ್ಲ. ನನ್ನ ಆಶಾಸಾಧವೀದಿನ ಮುರಿದುಬಿದ್ದಿದೆ. ಅದಕ್ಕಾಗಿ ನಿನ್ನನ್ನು ಮರೆತು ನಿನ್ನ ದೃಷ್ಟಿಯಿಂದ ಬಹು ದೂರ ಸಾಗತೊಡಗಿರುವೆ. ಆದರೆ......! ಮರೆಯುವುದು ಹೇಗೆ ಸಾಧ್ಯ ಪ್ರಮಿೂ......! ಪ್ರೇಮಿಸುವುದು ಸುಲಭ. ಆದರೆ ಪ್ರೇಮಿಸಿ ತಪ್ತ ಹೃದಯಿಯಾಗಿ ಮರಳುವುದು ಮಾತ್ರ ಅತಿ ಕಷ್ಟ. ನಾನು ಕೂಡ ಈಗ ಆ ಅನುಭವದಲ್ಲಿ ಸಿಲುಕಿರುವೆ.

ತಾಯಿತಂದೆಗಳ ಮಮತಾಶೂನ್ಯ ದಬ್ಬಾಳಿಕೆಯಿಂದ ನೊಂದು, ಮನ ಸಿಲ್ಲದ ಮನಸ್ಸಿನಿಂದ ಶಾಲೆಗೆ ತೆರಳುವ ಚಿಕ್ಕ ಬಾಲಕನಂತೆ ನಾನು ಕೂಡ ಮನಸ್ಸು ಹಿಡಿಮಾಡಿಕೊಂಡು ಹೊರಬೀಳುತ್ತಿರುವೆ.

ಚಿಕ್ಕಂದಿನಲ್ಲೇ ತಾಯಿ ತಂದೆಗಳನ್ನು ಕಳೆದುಕೊಂಡ ನಾನು ನಿನ್ನ ತಾಯಿತಂದೆಯರಲ್ಲಿ ಅರೂಪನ್ನು ಕಂಡೆ. ನನ್ನ ತಾಯಿತಂದೆಗಳಿಗಿಂತ ಹೆಚ್ಚೆಂದು ಭಾವಿಸಿದೆ, ಗೌರವಿಸಿದೆ, ಭಕ್ತಿತೋರಿದೆ. ಅದಕ್ಕಾಗಿ ನನ್ನ ಜೀವನವನ್ನೇ 'ಕೋರಲು'(ಬಲಿ)ಕೊಡಲು ಸಿದ್ಧನಾದೆ. ನಾನು ಎಲ್ಲರಿ ಗಿಂತ ಚಿಕ್ಕವನಾಗಿ, ವಿಧೇಯನಾಗಿ, ಆದರೂ ಗಣ್ಯನಾಗಿ ಬಾಳಬಯಸಿದೆ. ಆದರೆ, ನನ್ನ ಅತಿ ಔದಾರ್ಯವಿಂದು ನನ್ನನ್ನು ಕಬಳಿಸಿತು. ನನ್ನ ವಿಧೇ

ಯುತೆಯನ್ನು ಯಥೇಚ್ಛವಾಗಿ ಹೇಗೆ ಹೇಗೆ ಬೇಕೋ ಹಾಗೆ ಉಪಯೋಗಿಸಿ ಕೊಂಡರು ನಿಮ್ಮ ತಂದೆ. ನನ್ನ ಜೀವನದ ಸತ್ಯನಾಶಮಾಡುವುದಕ್ಕೂ ಹಿಂತೆಗೆಯಲಿಲ್ಲ. ನನ್ನನ್ನವರು ಅರಿತುಕೊಳ್ಳಲಿಲ್ಲ. ನಾನು ಸೊಸೈಟಿಯ ಕೆಲಸಕ್ಕೆ ಸೇರಬಾರದಾಗಿತ್ತು. ಅದೇ ದೊಡ್ಡ ತಪ್ಪಾಗಿದೆ. ಆ ದೋಷದ ಕಿಡಿಯಿಂದು ನನ್ನನ್ನು ದಹಿಸುತ್ತಿದೆ. ಅದರ ಕಮರು ನಿನಗೂ ತಗುಲಿದೆ!

ನಾನು ಒಳ್ಳೆಯ ಜೀವನವನ್ನು ಹುಡುಕಿಕೊಂಡು ಹೊರಬರುವೆ ಪ್ರಮಿೂ. ದೇವರು ನನಗೆ ಆತ್ಮಬಲ ನೀಡಲಿ.

ನಾನು ಎಲ್ಲಿದ್ದರೂ ಯಾವ ಸ್ಥಿತಿಯಲ್ಲಿದ್ದರೂ ನನ್ನವರನ್ನು ಮರೆಯ ಲಾರೆ. ಮಹಾ ಸಾಧ್ವಿ ನಿನ್ನ ತಾಯಿಯವರಿಗೆ ಅನೇಕ ನಮಸ್ಕಾರ ತಿಳಿಸು. ತಿಳಿಸದೆ ಹೊರಬಿದ್ದಿರುವೆ. ನನ್ನನು ಕ್ಷಮಿಸುವಂತೆ ನನಗಾಗಿ ಕೇಳು ವೆಯಾ! ಅವರದು ಮಾತೆಯ ಮಮತೆಯ ಹೃದಯ. ನನಗಾಗಿ ಅವರು ಹಲುಬುತ್ತಾರೆ. ಅವರನ್ನೂ ಸಮಾಧಾನಪಡಿಸುವುದು ನಿನ್ನ ಕರ್ತವ್ಯ. ರಾಜೂಗೆ ವಂದನೆ ತಿಳಿಸು, ನನ್ನನ್ನು ಕ್ಷಮಿಸಲು ಹೇಳು. ನಿನ್ನ ದುಃಖ ವನ್ನು ನಾನು ಬಲ್ಲೆ. ಆದರೆ ಸಹಿಸದೆ ವಿಧಿಯಿಲ್ಲ. ದುಃಖ ಮರೆಯಲು ಯತ್ನಿಸಬೇಕು ಪ್ರಮಿೂ...! ನಿನ್ನ ತಂದೆಯವರ ಬಗ್ಗೆ ಏನು ತಾನೇ ಹೇಳಲಿ? ಅವರಿಗೆ ತೊಂದರೆ ಸಂಭವಿಸದಂತೆ ದೇವರು ಕಾಯಲಿ.

ಮುಂದೆ ನಿಮ್ಮೆಲ್ಲರನ್ನೂ ನೋಡುವೆನೋ ಇಲ್ಲವೋ ಕಾಣೆ. ಆದರೂ ನನ್ನ ಮನಸ್ಸು ಆಸೆಯನ್ನಪ್ಪಿದೆ. ಆ ಒಳ್ಳೆಯ ದಿನ ಬರಬಹುದ!.......

ಇತಿ,

ನಿನ್ನ ಆನಂದ.

ಪತ್ರವನ್ನು ಓದುತ್ತ ಓದುತ್ತ ದುಃಖ ಉಕ್ಕಿ ಬಂತು ತನ್ನ ಜೀವನ ಬರಡಾದಂತೆ ಭಾಸವಾಯ್ತು ಪ್ರಮಿೂಳೆಗೆ.

ಮೇಲೆ ಹೋದ ಮಗಳು ಇನ್ನೂ ಬರಲಿಲ್ಲವೆಂದು ಗಂಡಹೆಂಡಿ ರಿಬ್ಬರೂ ಮೇಲೆ ಬಂದರು ಆನಂದ ಮೇಲೆ ಇದ್ದಾನೆಂಬ ನಂಬಿಕೆಯಿಂದಲೇ. ಅವರು ಬಂದಾಗ ಪ್ರಮಿೂಲ ಹಾಸಿನ ಬಳಿ ನಿಂತವಳು ನಿಂತಂತೆಯೇ ಕಣ್ಣೀ ರಿಡುತ್ತಿದ್ದಳು. ತಂದೆ ತಾಯಿಗಳು ಬಂದುದು ಕಂಡು ಕಣ್ಣೊರಸಿ ಕೊಂಡಳು. ತನ್ನ ಪತ್ರವನ್ನು ತೋರಗೊಡದೆ ಇನ್ನೊಂದನ್ನು ತಂದೆಯ ಕೈಗೆ ಕೊಟ್ಟಳು. ಮಗಳ ಮುಖ ನೋಡಿ ರಾಯರ ಶಂಕೆ ಪ್ರಬಲವಾಯ್ತು.

ಅನಸೂಯಮ್ಮನವರಂತೂ ಕುಗ್ಗಿಹೋದರು. ರಾಯರು ಪತ್ರ ಓದತೊಡಗಿದರು. ಓದುತ್ತ ಓದುತ್ತ ಅವರ ಮುಖ ಚೆಲುವೆಯು ಅರಿವೆಯಂತಾಯ್ತು.

"ಆನಂದಾ ನೀನು ಹೀಗೂ ಮಾಡುವೆಯೆಂದು ನಾನು ತಿಳಿಯಲಿಲ್ಲ!"

—ಎಂದು ರಾಯರು ಕುಸಿಬಿದ್ದು ಕುಳಿತರು ತಲೆಯ ಮೇಲೆ ಕೈ ಹೊತ್ತುಕೊಂಡು! ಅವರು ಹಾಗೆ ಕುಳಿತುದು ಕಂಡ ಅನಸೂಯಮ್ಮ 'ಏನಾಯಿತೂಂದ್ರೇ!' ಎಂದು ಗಾಬರಿಯಿಂದ ಕೇಳಿದರು.

"ಆಗುವುದಿನ್ನೇನು!......ಆನಂದ ಯಾರಿಗೂ ತಿಳಿಯದಂತೆ ಎಲ್ಲಿಯೋ ಹೋಗಿಬಿಟ್ಟಿದ್ದಾನೆ!"

"ಆ್ಞ......! ಇನ್ನೇನು ಗತಿ?......ರಾತ್ರಿ ನೀವು ತುಂಬಾ ದುಡುಕಿದಿರಿ. ಹಾಗೆಲ್ಲಾ ಮಾತಾಡಬಾರದಾಗಿತ್ತು. ಏನು ತಿಳಿದುಕೊಂಡನೋ ಏನೋ ಹೋಗಿಬಿಟ್ಟ."

"ಹೋದರೆ ಹೋಗಲಿ......ಆದರೆ ನನ್ನ ಮೇಲೆ ಜವಾಬ್ದಾರಿ ಹೇರಿ ಹೋಗಿಬಿಟ್ಟ. ಇನ್ನು ನಾನು ಉಳಿಯೋದು ಕಷ್ಟ!"

"ಹೋಗಲಿ ಬಿಡಿ......ಇಷ್ಟಕ್ಕೂ ರಿಮಿಟೆನ್ಸ್ ಬುಕ್ ಇಲ್ಲವಲ್ಲ...."

—ಆನಂದ ಮನೆಬಿಟ್ಟು ಹೋದುದರ ಜೊತೆಗೆ ರಾಯರು ಕಂಗಾಲಾಗಿರುವುದನ್ನು ಗಮನಿಸಿದ ಅನಸೂಯಮ್ಮನವರ ಮನಸ್ಸು ತಪಿಸತೊಡಗಿತು. ಮನಸ್ಸಿಲ್ಲದಿದ್ದರೂ ಅವರ ಬಾಯಿಂದ ಮಾತು ಹೊರಬಿದ್ದಿತ್ತು. ರಾಯರಿಗಾಗಿ ಆ ತಿರುಳಿಲ್ಲದ ಉಪಚಾರದ ಮಾತು ಆಡಲೇ ಬೇಕಾಗಿತ್ತು! ಹೆಂಡತಿಯ ಮಾತು ಕೇಳಿ ರಾಯರು ನಿರಾಸೆ, ಭಯಗಳ ಜೀವಂತ ಮೂರ್ತಿಯಾಗಿ ಹೇಳಿದರು—

"ಅಯ್ಯೋ......ಹಾಗಲ್ಲಕಣೇ......ಆನಂದ ಇದ್ದಿದ್ದರೆ ನಾನು ಹೆದರಬೇಕಾಗಿರಲಿಲ್ಲ. ಹೇಗೋ ಅವನು ಪಾರುಗಾಣಿಸುತ್ತಿದ್ದ. ಈಗ ರಿಮಿಟೆನ್ಸ್ ಬುಕ್ ಇಲ್ಲದೆ ಹೋದರೂ ನಾನೇ ಅಪರಾಧಿ ಅಂತ ಸಾಬೀತು ಆಗತ್ತೆ. ಬುಸ್ಸಣ್ಣ ತುಂಬ ಬೈಡು. ನನ್ನ ಜುಟ್ಟು ಅವನಿಗೆ ಸಿಕ್ಕ ಹಾಗೇ ಇನ್ನು! ಮುಂದೇನಿದೆಯೋ ದೇವರಿಗೇ ಗೊತ್ತು."

ಅನಸೂಯಮ್ಮ ದಿಗ್ಭ್ರಾಂತರಾಗಿ ಕೂತುಬಿಟ್ಟರು. ಅವರಿಗೂ ಏನೂ ತೋಚಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಎಚ್ಚೆತ್ತುಕೊಂಡು,

"ಹೊತ್ತು ಏರಿ ಬಂತು......ಇನ್ನೂ ಮಡೀನೇ ಉಟ್ಟಿಲ್ಲ. ಪ್ರವಿಲೊ ನೀರು ತೋಡು ಹೋಗವ್ಲ್ಯಾತಾಯಿ......ಯಾಕೋ ಕೈಕಾಲೇ ಬಿದ್ದ ಹೋಗಿವೆ. ದೇವರು ಪಾರುಮಾಡಬೇಕು ಅಷ್ಟೇ ಈ ಕುತ್ತನ್ನ" ಎಂದರು.

೧೬

ಒಮ್ಮೆಗೇ ರಾಯರ ಕೈ ನಿಂತುಹೋಯಿತು. ಇದ್ದಕ್ಕಿದ್ದಂತೆ ಜನಗಳ ಕೈಯಲ್ಲಿ ಹಣ ಇಲ್ಲದಂತಾಯಿತು. ಜನಗಳ ಬಾಯಲ್ಲಿ ಅನೇಕ ವಿಧವಾದ ಮಾತುಗಳು ಕೇಳಿಬರುತ್ತಿದ್ದುವು.

"ತಿಂಬಾಕೆ ಕೂಳಿಲ್ಲದೆ ಸಾಯೋ ಈ ಬರಗಾಲದಾಗೆ ರೊಕ್ಕಕ್ಕೂ ಪ್ಲೇಗು ಬಂತವ......

"ಹೌದಂತೆ. ಧಾರಣೆ ಇಳಿದಿದೆ ಅಂತ ಭಂಗಾರ ಕೊಳ್ಳೋಕ್ಕೆ ಏಟು ಹಾಕಿದಾನೆ ಗೇಣಪ್ಪ ಶೆಟ್ಟಿ. ಕ್ಷಣ ಕ್ಷಣಕ್ಕ ರೇಟಿಳೀತಾ ಇದೆ. ಈಗಲೇ ಕೊಂಡರೆ ಇನ್ನೂ ಧಾರಣೆ ಇಳಿಯುತ್ತೇನೋ ಅಂತ ಮೀನಮೇಷ ಎಣಿಸ್ತಿದಾನಂತೆ......

"ಭಂಗಾರ ಬೆಳ್ಳಿ ಯಾರಿಗೆ ಬೇಕು ಈ ಬರದಲ್ಲಿ. ತಿನ್ನಕ್ಕೇ ಕೂಳಿಲ್ಲ."

"ಕಾಳಿಗೂ ಧಾರಣೆ ಇಳೀತದಂತೆ ಹೌದಾ!......

"ಕಾಳುಕಡ್ಡಿ ಮಾರ್ಕೆಟ್ಟೂ ವಿಚಿತ್ರ ಆಗಿದೆ. ಇದು ವರೆಗೆ ಒಳಗೊಳಗೆ ಬ್ಲಾಕ್ ಮಾಡುತ್ತಿದ್ದವರು ಈಗ ಪೇಟೆಗೆ ಎಳೆದರೂ, ಚೀಲಗಟ್ಟಲೆ ಮಾಲು ಅಸಲಿಗೆ ಮೂರು ನಾಲ್ಕು ರೂಪಾಯಿ ಕಮ್ಮಿಗೆ ಕೊಡ್ತೀವಿ ಅಂದರೂ ಕೊಳ್ಳೋರು ಗತಿಯಿಲ್ಲಂತೆ. ರೊಕ್ಕ ಇದ್ದರೇ ತಾನೇ?......

—ಜನಗಳ ಮಾತು ನಿಜವಿತ್ತು. ಹಣದ ಮುಗ್ಗಟ್ಟು ವಿಪರೀತವಾಗಿತ್ತು. ಪೇಟೆಯ ಧಾರಣೆ ಇಳಿದಿದ್ದಾಗ ಸರ್ಕಾರೀ ಡಿಪೋಗಳಲ್ಲಿ ಸೊಸೈಟಿಗಳಲ್ಲಿ ಪಡಿತರ ದಿನಸಿ ಬಟ್ಟೆಬರೆಗಳ ಧಾರಣೆ ಎಂದಿನಂತೆಯೇ ಇತ್ತು. ಕೆಲವು ಮಾಲುಗಳಿಗೆ ಮಿತಿಮೀರಿ ಬೆಲೆ ಏರಿತ್ತು. ಫಲಿತಾಂಶ—ಬ್ಲಾಕ್ ಮಾರ್ಕೆಟ್ ಕುದುರೆ ನಾಗಾಲೋಟದಲ್ಲಿ ಓಡುತ್ತಿದ್ದುದು ಒಮ್ಮೆಗೇ ಕುಂಟಾಯಿತು. ಸಾಹುಕಾರರುಗಳ—ಹುಂಡೇಕಾರರುಗಳ ಚಲನ ವಲನ

ಸಂಪೂರ್ಣ ನಿಂತುಹೋಯಿತು. ಲಾಭಕ್ಕಾಗಿ ಬಚ್ಚಿಟ್ಟಿದ್ದ ಮಾಲು ಬಯಲಿಗೆ ಬಂತು. ವರ್ತಕರೆಲ್ಲರಿಗೂ ನಷ್ಟದ ಮೇಲೆ ನಷ್ಟ ಒದಗಿತು.

ಧನಾರ್ಜನೆಯ ದಾರಿಯಲ್ಲಿ ಮುಂದುವರಿದು ಋಣಮುಕ್ತರಾಗ ಬೇಕೆಂದಿದ್ದ ರಾಯರು ಹೆದರಿದರು. ದುರ್ಭಿಕ್ಷ ಕಾಲದಲ್ಲಿ ಅಧಿಕಮಾಸ ಬಂದಂತೆ ಆಗಿತ್ತು ಅವರ ಸದ್ಯದ ಪರಿಸ್ಥಿತಿ.

ಸೊಸೈಟಿಯಲ್ಲಿ ವ್ಯಾಪಾರ ನಿಂತಿತು. ರಾಯರು ಜಮೀನು ಮಾರಲು ಮುಂದೆ ಬಂದರೂ ಕೊಳ್ಳುವವರೇ ಮುಂದೆ ಬರಲಿಲ್ಲ. ಅರಕ್ಕೆ ಮೂರರ ಹಾಗೆ ಮಾರಿದರೂ ಸಾಲತೀರುವ ಭರವಸೆ ಕಾಣದೆ ರಾಯರು ಹತಾಶ ರಾದರು. ಜಮೀನು ಮಾರಲಾಗಲಿಲ್ಲ.

ಒಂದು ದಿನ ಕೈಕಾಲು ತೊಳೆಯಲು ಬಚ್ಚಲಿಗೆ ಹೋದಾಗ ಜಾರಿ ಬಿದ್ದದ್ದೇ ಕಾರಣವಾಗಿ ಅನಸೂಯಮ್ಮ ಹಾಸಿಗೆ ಹಿಡಿದರು.

ತಾಯಿ ಹಾಸಿಗೆ ಹಿಡಿದದ್ದು ಪ್ರಮೀಲೆಗೆ ಚಿಂತೆ ಹೆಚ್ಚಿಸಿತು. ಮರೆ ತಾದರೂ ತಾಯಿಯೆದುರು ಕಣ್ಣೀರಿಡುತ್ತಿರಲಿಲ್ಲ. ಮನೆಗೆಲಸವೆಲ್ಲಾ ಅವಳ ಮೇಲೇ ಬಿದ್ದಿತು. ಅನಸೂಯಮ್ಮ 'ಮಗಳೊಬ್ಬಳೇ ಕಷ್ಟಪಡುತ್ತಾಳಲ್ಲಾ' ಎಂದು ತಾವೂ ಎದ್ದು ಕೆಲಸಕ್ಕೆ ಕೈಹಚ್ಚುತ್ತಿದ್ದರು. ಪ್ರಮೀಲೆಗಿದು ಸಹಿಸುತ್ತಿರಲಿಲ್ಲ.

"ಅಮ್ಮಾ, ನಾನು ಅಳಬಾರದು ಎಂದುಕೊಂಡರೂ ಅಳಿಸಬೇಕೂಂತ ಹೀಗೆ ಮಾಡ್ತೀಯಾ ಹೇಳು?"

"ಅಳತೀಯ; ಅಳು. ನಿನ್ನ ಕರ್ಮ ಹಾಗಿದೆ. ನಾನೂ ನನ್ನ ಕರ್ಮಕ್ಕೆ ಅಳತೀನಿ!"

"ನೀನು ಸುಧಾರಿಸಿಕೋ ಹೋಗಮ್ಮ. ಕೆಲಸಕ್ಕೆ ಈಗಲೇ ಕೈಹಾಕ ಬೇಡ."

"ನನಗೇನಾಗಿದೆ ಧಾಡಿ. ಗುಂಡು ಕಲ್ಲಹಾಗಿದ್ದೀನಿ"

"ನಿನಗೆ ಏನೂ ಆಗಿಲ್ಲ......ಏನೂ ಆಗುವುದೂ ಬೇಡ ಸದ್ಯ......!"

"ಇದಕ್ಕಿಂತ ಇನ್ನೇನಾಗಬೇಕು."

"ಏನಾಗಿದೆ ಈಗ......ನೀನು ಸುಮ್ಮನೆ ಹಚ್ಚಿಕೋಬೇಡ...... ಹೋಗು."

"ನೀನೇ ಕೆಲಸ ಮಾಡ್ತೀಯಾ."

"ಮಾಡಿದರೇನು ನಾನು ಸವೆಯೋಲ್ಲ ಬಿಡು."

"ಎಷ್ಟು ಅಂತ ಜನ್ಮತೇಯುತೀಯೇ ತಾಯೀ......"

"ನನ್ನ ಕಣ್ಣಲ್ಲಿ ನೀರು ಹಾಕಿಸಬೇಡ ಸುಮ್ಮನಿರು ಅಮ್ಮಾ. ನೀನು ಮಲಕ್ಕೋ ಹೋಗು."

ಮಗಳ ಮಿತಿಮೀರಿದ ಸಹನೆ ಕಂಡು ಅನಸೂಯಮ್ಮನಿಗೆ ಕರುಳು ಕತ್ತರಿಸುವಷ್ಟು ವೇದನೆಯಾಗುತ್ತಿತ್ತು. ಒಳಗೇ ಮುಮ್ಮಲ ಮರುಗುತ್ತಿದ್ದರು.

ರಾಯರು ಕೂಡ ಅಷ್ಟೇ. ಎಲ್ಲ ಕಡೆಯಿಂದಲೂ ನಿರಾಸೆ ಎದ್ದು ಕಾಣುತ್ತಿತ್ತು. ಆಸೆಯೆಂಬ ಸಣ್ಣ ಕಿರಣವೂ ಅವರ ಪಾಲಿಗಿರಲಿಲ್ಲ.

ಕೊಡುತ್ತೇನೆ, ಕೊಡುತ್ತೇನೆ ಎಂದು ಹೇಳುತ್ತಿದ್ದ ಗೆಳೆಯರು ಕೈ ಕೊಟ್ಟುಬಿಟ್ಟರು. 'ಹಣಕ್ಕೇ ಕಷ್ಟವಾಗಿದೆಯಪ್ಪಾ. ನೋಡೋಣ ತಡೆ' ಎಂದು ತಾರಮ್ಮಯ್ಯ ಹಾಡಿದರು. ರಾಯರು ಗಟ್ಟಿಸಿ ಕೇಳಿದರು —

"ನಿಮ್ಮ ಕಷ್ಟಕ್ಕೆ — ಅನುವಿಗೆ ನಾನು ದುಡ್ಡು ಕೊಟ್ಟು ಕಾದಿರಲಿಲ್ಲವೆ? ನನ್ನ ಕಷ್ಟದಲ್ಲಿ ತಲೆಯನ್ನು ಕಾಯುವ ಕರುಣೆಯಿಲ್ಲ ನಿಮಗೆ. ನನ್ನ ಹಣ ಕೊಟ್ಟುಬಿಡಿ"

"ಹಣ ನಮಗೋಸ್ಕರ ಏನೂ ಕೊಟ್ಟಿರಲಿಲ್ಲ. ಬುಸ್ಸಣನಿಗೆ ಕೊಟ್ಟಿರೋದು. ಅವನನ್ನೇ ಕೇಳಿಕೋ."

"ಹಣ ತಗೊಂಡವರು ನೀವು. ನಿಮ್ಮನ್ನೇ ಕೇಳೋದು ನಾನು. ನನ್ನ ಹಣ ಕೊಟ್ಟುಬಿಡಿ."

"ನೀನು ನಮಗೆ ಯಾವ ಹಣವನ್ನೂ ಕೊಟ್ಟಿಲ್ಲ. ನಾವು ನಿಮಗೆ ಕೊಡಬೇಕಾದ್ದೂ ಇಲ್ಲ. ಕೊಡು ಅಂತ ನಾವು ನಿನ್ನನ್ನು ಕೇಳಿಯೂ ಇರಲಿಲ್ಲ" ಇದು ಅವರ ಆಪ್ತರ ಉತ್ತರ.

ರಾಯರು ಮನಸ್ಸಿನಲ್ಲೇ ಬೈದಾಡಿದರು. ಅತ್ತರು; ಕಾಡಿದರು; ಬೇಡಿದರು. ಪ್ರಯೋಜನವಾಗಲಿಲ್ಲ. ಮುಳುಗಿದೆ ಎಂದುಕೊಂಡರು!

ರಾಯರಿಗೆ ಊಟ ತಿಂಡಿ ಸೇರದ ಹಾಗಾಯ್ತು. ಯಾವಾಗಲೂ ಮೇಲ್ಮನೆಯಲ್ಲೇ ಮುಖ ಮರೆಸಿಕೊಂಡು ಇರತೊಡಗಿದರು.

ಒಂದು ದಿನ ಯಾಕೋ ಸುಮ್ಮನೆ ಆನಂದನ ಮೇಜನ್ನು ಎಳೆದಾಗ 'ಹುಣ್ಣಿಮೆಯ ರಾತ್ರಿ'ಯಲ್ಲಿ ಆನಂದನ ಪತ್ರ ಸಿಕ್ಕಿತು. ಪತ್ರವನ್ನು ಓದಿದರು. ಮೊದಲ ಪುಟದಲ್ಲಿದ್ದ ಇಬ್ಬರ ಪದ್ಯಗಳನ್ನೂ ನೋಡಿದರು. ಆನಂದ ಪ್ರಮೀಳರಿಬ್ಬರಲ್ಲಿ ಮೂಡಿಬಂದಿದ್ದ ಅನುರಾಗದ ಗಾಢತೆ ಕಂಡು ಸಂತಸ ವಾಯಿತು. ಹಿಂದೆಯೇ ಅವರ ಜೀವನಕ್ಕೆ ತಾನೇ ಮುಳ್ಳಾದುದರ ಅರಿವಾಗಿ ಮರುಗಿದರು.

ತಂದೆಯ ಉದಾಸೀನ ಭಾವನೆ ಕಂಡಾಗಿನಿಂದ ಪ್ರಮೀಳ ಧೈರ್ಯ ಗೆಟ್ಟಳು. ಊಟ ತಿಂಡಿ ಬಿಟ್ಟದ್ದು ಬೇರೆ ಯೋಚನೆಗೆ ಕಾರಣವಾಗಿತ್ತು. ಅಪಮಾನಕ್ಕೆ ಹೆದರಿ ಪ್ರಾಣ ಕಳೆದುಕೊಂಡರೇನು ಗತಿ ಎಂದು ನಡುಗಿದಳು. ತಂದೆಯನ್ನು ಮಾತಾಡಿಸಲು ಅವಳಿಗೆ ಭಯವಾಗುತ್ತಿತ್ತು ಈಚೆಗೆ. ಆದರೆ ಸುಮ್ಮನಿರುವುದು ಯಾವ ಮಾತ್ರಕ್ಕೂ ಚೆನ್ನಿರಲಿಲ್ಲ. ಒಂದು ದಿನ ಗಟ್ಟಿ ಮನಸ್ಸು ಮಾಡಿ ಮಾತಾಡಿಯೇ ಬಿಟ್ಟಳು—

"ಅಪ್ಪಾ ನೀವು ಹೀಗೆ ಮಾಡಬಾರದು."

"ಏನು ಪ್ರಮೀ......?"

"ನೀವು ದೊಡ್ಡವರು......ಯಜಮಾನರು. ನೀವೇ ಹೀಗೆ ಕೈಕಾಲು ಗೆಟ್ಟು ಕುಳಿತರೆ......ಹೇಗೆ?"

"ನನ್ನ ಯಜಮಾನಿಕೆ ಸುಟ್ಟಿತು......ನಾನೂ ಒಬ್ಬ ಮನುಷ್ಯನೇ?!"

"ಇಷ್ಟೊಂದು ಮನಸ್ಸಿಗೆ ಹಚ್ಚಿಕೋಬಾರದು. ಅಮ್ಮ ಹಾಸಿಗೆ ಹಿಡಿದಿದಾಳೆ. ನೀವೂ ಹೀಗೆ ಕುಳಿತರೆ ನನಗೆ ಯಾರು ಧೈರ್ಯ ಹೇಳ ಬೇಕಪ್ಪಾ......?"

"ನಿನಗೆ ಧೈರ್ಯ ಹೇಳಬೇಕೆ? ನಿನಗೆ ಹೇಳಲು ನಾನು ಯಾರು? ನನ್ನ ಮಾತು ಕೇಳೋ ಹಾಗಿದ್ದಿದ್ದರೆ ಹೀಗಾಗ್ತಾ ಇತ್ತೆ?"

"ಇಲ್ಲ ಅಪ್ಪಾ..... ನನ್ನದೇ ತಪ್ಪು. ನಿಮ್ಮ ಮಾತು ಕೇಳಲಿಲ್ಲ. ಕ್ಷಮಿಸಿ–ಆದುದು ಆಯಿತು; ಮರೆತು ಬಿಡಿ......ಧೈರ್ಯದಿಂದ ಮುಂದಿನ ಯೋಚನೆ ಮಾಡಿ."

"ನೇಣು ಹಾಕಿಕೊಳ್ಳುವುದೊಂದೇ ಮುಂದಿನ ಯೋಚನೆ"

"ಛೀ.... ...ಹಾಗೆಲ್ಲಾ ಅಮಂಗಳದ ಮಾತಾಡಬಾರದಪ್ಪಾ!"

"ಇನ್ನು ಈ ಮನೇಲಿ ಮಂಗಳ ಹಾಡುವ ದಿನ ಬರಲ್ಲ ಪ್ರಮೀ.......

"ಇಷ್ಟು ನಿರಾಸೆಯಾಗಬಾರದು ಅಪ್ಪಾ ಕಷ್ಟನಷ್ಟ ಎಲ್ಲರಿಗ ಬರುತ್ತೆ ನಮಗೂ ಬಂದಿದೆ. ಧೈರ್ಯದಿಂದ ಎದುರಿಸೋಣ."

"ನೀನು ಬಹಳಾ ಬುದ್ಧಿವಂತೆ ಪ್ರಮೀ. ನಾನೇ ದಡ್ಡ—ಇನ್ನು ನನ ಜುಟ್ಟು ಹಿಡಿದು ಆಜ್ಞೆ ಮಾಡು."

"ಪ್ರಮೀಲೆಗೆ ತಂದೆಯ ನಿರಾಸೆ, ಹಟ ಕಂಡು ದುಃಖ ಉಮ್ಮಳಿಸಿತು ಕಣ್ಣು ತುಂಬಿಬಂತು. ಗದ್ಗದಿತಳಾಗಿ ಹೇಳಿದಳು—

"ಇಲ್ಲಪ್ಪಾ......ನಾನಿನ್ನೇನು ಹೇಳುವುದಿಲ್ಲ. ನನ್ನದು ತಪ್ಪು...!"

ಮಗಳು ಕಣ್ಣೀರು ಹಾಕಿದುದು ಕಂಡು ರಾಯರಿಗೆ ತಡೆಯಲಾಗಲಿಲ್ಲ

"ಪ್ರಮೀ......ಅಳತೀಯಾ......ಅಳಬಾರದಮ್ಮಾ. ನಿನ್ನದು ತಪ್ಪಿಲ್ಲ ನನ್ನದೇ ತಪ್ಪು......ನಿನ್ನ ಜೀವನ ಹಾಳುಮಾಡಿದ ಪಾಪಿ ನಾನು. ನನಗೆ ಯಾವ ಶಿಕ್ಷೆ ಕಾದಿದೆಯೋ......ನನ್ನ ಕ್ಷಮಿಸೂ ಪ್ರಮೀ........!"

"ಹಾಗೆ ಅನ್ನಬಾರದಪ್ಪಾ. ಯಾವಾಗಲೂ ಹೀಗೆ ಮುಖ ಮರೆಸಿ ಕೊಂಡು ಕೂಡಬೇಡಿ. ಹೊರಗೆ ಮುಖ ತೋರಿಸದೆ ಇದ್ದರೆ ಜನಗಳಿಗೂ ಇಲ್ಲದ ಸಲ್ಲದ ಮಾತಾಡಲು ಅವಕಾಶವಾಗತ್ತೆ. ಧೈರ್ಯವಾಗಿ ಓಡಾಡಿ ಕೊಂಡಿರಿ. ದೇವರು ಕೈಬಿಡೋದಿಲ್ಲ. ಅಮ್ಮನ ಕಾಯಿಲೆ ಜಾಸ್ತಿಯಾಗಿದೆ ಅವಳ ಹತ್ತಿರ ಮಾತಾಡುವುದೇ ಇಲ್ಲ ನೀವು. ಹಾಗೆ ಮಾಡಬಾರದು ಅಣ್ಣನ ಪರೀಕ್ಷೆಯೂ ಮುಗಿಯುತ್ತ ಬಂತು. ಅಣ್ಣ ಬರ್‍ತಾನೆ. ಎಲ್ಲ ಸರಿಹೋಗುತ್ತೆ."

"ರಾಜೂ ಇಷ್ಟರಲ್ಲೇ ಬರ್‍ತಾನೆಯೇ? ಅವನು ಬಂದರೆ ನಾನು ಮುಖ ತೋರಿಸಬಾರದು ಪ್ರಮೀ........!"

"ನಿಮ್ಮ ದಮ್ಮಯ್ಯ ಹಾಗೆ ಆಡಬೇಡಿ ಅಪ್ಪಾ!"

"ಸರಿ."

"ಇನ್ನು ಮೇಲೆ ಹೀಗೆ ಉದಾಸೀನವಾಗಿರಬೇಡಿ. ಊಟ ತಿಂಡಿ ಬಿಡಬೇಡಿ."

"ಆಗಲಿ."

"ನನಗೆ ಸಮಾಧಾನವಾಯ್ತು ಈಗ."

"ರಾಯರು ಸುತ್ತಲೂ ನೋಡಿದರು. ಮನೆಯಲ್ಲಿ ಮೊದಲ ಕಳೆಯಿರಲಿಲ್ಲ. ಮನೆ ಭಣಭಣ ಸುರಿಯುತ್ತಿತ್ತು. ರಾಯರು ನಿಟ್ಟುಸಿರಿಟ್ಟು,

"ಇದು ಯಾಕೋ ಸರಿಹೋಗಲಿಲ್ಲ ಪ್ರಮೀ" ಎಂದರು.

"ಸರಿಹೋಗುತ್ತಪ್ಪಾ ಯೋಚಿಸಬೇಡಿ.......!" ಎಂದು ಕಣ್ಣೀರೊರಸಿಕೊಂಡಳು ಪ್ರಮೀಲ.

೧೭

ರಾಂಪುರದ ಜನರಿಗೆ ಮೂರು ವಿಷಯಗಳು ಒಮ್ಮೆಗೇ ತಿಳಿದುವು ಖಚಿತವಾಗಿ — ಸೊಸೈಟಿ ಗುರುರಾಜರಾಯರು ಅರೆಸ್ಟ್ ಮಾಡಲ್ಪಟ್ಟು ಮೊಳಕಾಲ್ಮುರುವಿಗೆ ನಡೆದರು......!

ಸಜ್ಜಿಗೆ ಬುಸ್ಸಣ್ಣ ಎಲೆಕ್ಷನ್‌ನಲ್ಲಿ ಆರಿಸಿಬಂದರು!

'ಸೋಮಾರಿಕಟ್ಟೆಯ ಹುಡುಗರು ರಜಾದಿನಗಳಲ್ಲಿ ಟೂರ್ ಹೊರಟರು.'

— ಟೂರ್ ಹೊರಟ ವಿಷಯಕ್ಕೆ ಊರಜನ ಆಶ್ಚರ್ಯಪಟ್ಟರು. ಬುಸ್ಸಣ್ಣನ ಉದಾರತೆಯಿದ್ದರೂ ಇರಬಹುದು. ಇಲ್ಲದಿದ್ದರೆ ದೇಶ ತಿರುಗಲಿಕ್ಕೆ ಹಣವಾದರೂ ಹೇಗೆ ಬರಬೇಕೆಂದು ಅವರುಗಳ ಊಹೆ. 'ಕಂಠೀ' (ನೀಲಕಂಠಪ್ಪ) ಗುಂಪಿಗೆ ಮುಂದಾಳು ಎಂದಮೇಲೆ, ನಿಜವೇ ಇರಬೇಕೆಂದು ಅವರುಗಳ ವಾದ.

ಬುಸ್ಸಣ್ಣ ಎಲೆಕ್ಷನ್‌ನಲ್ಲಿ ಜಯಗಳಿಸಿದುದು ಆಂಜನಪ್ಪನ ಕಡೆಯವರಿಗೆ ಮುಖ ಪರಚಿದ ಹಾಗಾಗಿತ್ತು. ಬುಸ್ಸಣ್ಣನವರ ಜಯಕ್ಕೆ ಕೈ ಕೈ ಹಿಸುಗಿಕೊಂಡರು. ಆದರೆ ಯಾವ ಮಾತೂ ಆಡುವಂತಿರಲಿಲ್ಲ. ಇಷ್ಟು ಮಾತ್ರ ಆಡಿಕೊಂಡರು—

'ಮಂಗನಿಗೆ ಮಾಣಿಕ್ಯ ಸಿಕ್ಕಹಾಗಾಯಿತು ಬಿಡು!'

ಊರವರಿಗೆ ಇದೊಂದೂ ಬೇಕಾಗಿರಲಿಲ್ಲ. ಅವರಿಗೆ ಬೇಕಾಗಿದ್ದುದು ಗುರುರಾಜರಾಯರ ಗೃಹಕೃತ್ಯದ ಸಮಸ್ಯೆ.

"ಅದೇನೋ ಗಾದೆ ಹೇಳಿದ ಹಾಗೆ, 'ನಮ್ಮಪ್ಪ ಬಲು ದಪ್ಪಾಗಿ ಬಪ್ಪಾರು ಕಸುಗೊಂಡು ಒಳಗೇ ಕುಂತ' ಅಂತ, ಈ ಗುರುರಾಜಪ್ಪನ

ಸುದ್ದಿ ನೋಡು. ಮಂದೀ ಮಾತು ಕೇಳಿಕೊಂಡು ಮುಂದಾಗ್ತೇನಿ ಅ
ಈಗ ಹೋದನಪ್ಪಾ ಜೈಲಿಗೆ!"

"ಹೌದೂ. ಆ ರಾಜಣ್ಣಗೆ ಸುದ್ದೀ ಮುಟ್ಟಿಲ್ಲವೇ ಇನ್ನೂ. ಬ
ಬೇಕಾಗಿತ್ತಪ್ಪ ಇಷ್ಟು ಹೊತ್ತಿಗೆ."

"ಸುದ್ದಿ ಮುಟ್ಟಿರಬಹುದು ಯಾಕೆ ಬರಲಿಲ್ಲವೋ ಏನೋ. ಜಲಸ
ಹೊಡೀಲಿಕ್ಕೆ ಹೊರಟೇ ಬಿಟ್ಟಿದ್ದಾನೋ......ಹೆಂಗೋ......"

"ಪಾಪ, ಆ ಡಾಕ್ಟರು ಒಳ್ಳೇ ಜನ ನೋಡು. ಗುರುರಾಜಪ್ಪ
ಮನೇ ಕಷ್ಟಸುಖ ಹಚ್ಚಿಕೊಂಡಿದಾರೆ. ಇಲ್ದಿದ್ರೆ ಯಾರು ಕೇಳಬೇಕಾಗಿತ
ಅವರನ್ನ."

ನಿಜ. ಶ್ರೀನಿವಾಸರಾಯರನ್ನು ಬಿಟ್ಟರೆ ಕೇಳುವವರಾದರ
ಯಾರಿದ್ದರು!

* * * *

ಹೊಸಪೇಟೆಯ ಬಸ್ ಸ್ಟಾಂಡಿನಲ್ಲಿ ಕುಳಿತಿದ್ದ ತಿಪ್ಪೇರುದ್ರಿಗೆ ಅದ
ತಾನೇ ಶಿವಮೊಗ್ಗೆಯ ಕಡೆಯಿಂದ ಬಂದ ಬಸ್‌ಕಡೆ ದೃಷ್ಟಿ ಹರಿಯಿತ
ಬಸ್ಸಿನಲ್ಲಿ ರಾಂಪುರದ ಹುಡುಗರಿದ್ದಂತೆ ಕಂಡುಬಂದು ಅಲ್ಲಿಗೆ ನಡೆ
ತಿಪ್ಪೇರುದ್ರಿಯ ಊಹೆ ನಿಜವಾಗಿತ್ತು. ರಾಂಪುರದ ಹುಡುಗರು ಹಂಪೆ
ಪ್ರಯಾಣ ಹೊರಟು ಆ ಬಸ್ಸಿನಿಂದ ಇಳಿದಿದ್ದರು. ತಿಪ್ಪೇರುದ್ರಿ ನೀ
ಕಂಠಪ್ಪನನ್ನು ಕರೆದ.

"ಓಹೋ ಏನು ತಿಪ್ಪೇರುದ್ರೀ. ನೀನು ಬಂದಿದ್ದೀ ಹೊಸಪೇಟೆಗ
ನೆಂಟರ ಮನೆಗೇ ಅಂತಲೋ? ಹಂಪೆಗೋ" ನೀಲಕಂಠಪ್ಪನೇ ಮಾತಾಡಿಸಿದ

"ನೆಂಟರ ಮನೆಗೇ ಬಂದಿದ್ದೆ. ರಾಜಣ್ಣ ಬಂದಿಲ್ವಾ?"

"ನಾವೆಲ್ಲಾ ಬಂದಿದ್ದೀವಿ. ರಾಜಣ್ಣನೂ ಬಂದಿದ್ದಾನೆ."

"ಹಾಗಾದರೆ ನಿಮಗೇನೂ ಗೊತ್ತೇ ಇಲ್ಲ?"

"ಏನು?"

"ಗುರುರಾಜಪ್ನೋರ್ನ ಜೈಲಿಗೆ ತಗೊಂಡು ಹೋದರು. ಅನಸೂಯ
ಮ್ಮಗೆ ತುಂಬಾ ಸುಸ್ತಿ. ಬದುಕೋ ಹಂಗಿಲ್ಲ. ಆ ಸಣ್ಣಾಯಮ್ಮಾತ್ರಿಗು
ಅಷ್ಟೆ."

"ಹ್ಞ ನಿಜವೇ! ನಮುಗೇನೂ ಗೊತ್ತಾಗಲೇ ಇಲ್ಲವಲ್ಲಾ" ಆತಂಕದಿಂದ ಕೇಳಿದ 'ಧನಿ'.

"ಡಾಕ್ಟರು ಟೆಲಿಗ್ರಾಂ ಕೊಟ್ಟರಂತೆ ಅದು ವಾಪಸು ಬಂತಂತೆ. ಆಗಲೆ ಹತ್ತು ಹನ್ನೆರಡು ದಿನದ ಮೇಲಾಯ್ತು."

"ಆನಂದ ಊರಲ್ಲಿಲ್ಲವೇ?"

"ಆತ ಓಡಿಹೋಗಿ ತಿಂಗಳ ಮೇಲಾಯ್ತು."

"ಸರಿ. ಹೀಗೇನು!" ಎಂದು ನೀಲಕಂಠಪ್ಪ ರಾಜಣ್ಣನ ಬಳಿ ಬಂದು ತಿಳಿಸಿದ.

ದುರ್ದಾನ ತೆಗೆದುಕೊಂಡವನ ಹಾಗೆ ರಾಜಣ್ಣ ತಿಪ್ಪೇರುದ್ರಿಯ ಬಳಿ ಓಡಿಬಂದು ಎಲ್ಲಾ ಸಮಾಚಾರವನ್ನೂ ಕೇಳಿ ತಿಳಿದುಕೊಂಡ. ಸ್ವಲ್ಪ ಹೊತ್ತಿನ ನಂತರ ತುಂಬಿದ ದುಃಖದಿಂದ,

"ಹಂಪೆಗೆ ನೀವುಗಳು ಹೋಗಿ ಬನ್ನಿ ಧಣೀ.....ಯಾಕೋ ಇವತ್ತು ಎದ್ದ ಘಳಿಗೆ ಚೆನ್ನಿಲ್ಲ. ಕೆಟ್ಟ ಸುದ್ದಿ ಕೇಳಿದೆ" ಎಂದು ಬಳ್ಳಾರಿಗೆ ಹೋಗುವ ಬಸ್ ಕಡೆಗೆ ತನ್ನ ಸಾಮಾನುಗಳನ್ನು ತೆಗೆದುಕೊಂಡು ಹೊರಟ.

ಗೆಳೆಯರೆಲ್ಲರಿಗೂ ವಿಷಯ ತಿಳಿದು ವ್ಯಥೆಯಾಯ್ತು. ರಾಜಣ್ಣನನ್ನು ಬಿಟ್ಟು, ಹಂಪೆಗೆ ಉಳಿದವರು ಹೋಗುವುದೇ ಬೇಡವೇ ಎಂದು ಎಲ್ಲರೂ ಯೋಚಿಸುತ್ತಿದ್ದಾಗ ಜಕ್ರಿಯ—

"ಆತ ಊರಿಗೆ ಹೋಗಲಿ ಬಠ್ರಯ್ಯಾ. ಇಲ್ಲೀತನಕ ಬಂದು ಹಂಪೆಗೆ ಹೋಗಿ ಬರದೆ ಇದ್ದರೆ ಹೇಗೆ" ಎಂದ.

ನೀಲಕಂಠಪ್ಪನಿಗೆ ಮೈಯೆಲ್ಲಾ ಉರಿದುಹೋಯಿತು. ರೋಷದಿಂದ ಹೇಳಿದ—

"ನಿಮ್ಮಪ್ಪ ಜೈಲಿಗೆ ಹೋಗಿದ್ದು, ನಾವು ನಿನ್ನ ಹಾಗೇ ಅಂದಿದ್ದರೆ ನಿನಗೆ ಸಂಕಟ ಆಗ್ತಾ ಇರಲಿಲ್ಲವೇನೋ ಸಾಲಾ! ಉರಿಯೋ ಗಾಯಕ್ಕೆ ಉಪ್ಪು ಕೂರಿದ ಹಾಗೆ, ರಾಜಣ್ಣ ತನ್ನ ದುಃಖದಲ್ಲಿ ತಾನಿರೋವಾಗ ಅವನು ಹೋಗಲಿ ಬೇಕಾದರೆ ಅಂತೀಯಲ್ಲೋ. ಇದೇನೇ ನಿನ್ನ ದೋಸ್ತೀ; ಇದೇನೇ ನಿನ್ನ ಸ್ನೇಹ ಧರ್ಮ.......? ಹಂಪೆಗೂ ಬೇಡ ಕೊಂಪೆಗೂ ಬೇಡ. ರಾಂಪುರಕ್ಕೆ ಹೋಗೋಣ ನಡೀರಿ ಎಲ್ಲಾರೂ......"

ಎಲ್ಲರಿಗೂ ಮುಂದೆ ನೀಲಕಂಠಪ್ಪನೇ ಬಳ್ಳಾರಿಗೆ ಹೋಗುವ ಬಸ್ಸಿನ ಕುಳಿತ ಎಲ್ಲರೂ ಅವನನ್ನೇ ಅನುಸರಿಸಿದರು.

ರಾಜಣ್ಣ ಗೆಳೆಯರೊಡನೆ ಮನೆಗೆ ಬಂದ. ಎಲ್ಲರೂ ಅಂಗಳದ ನಿಂತರು. ರಾಜಣ್ಣ ಒಳಹೊಕ್ಕು ನೋಡಿದಾಗ ಕರುಳು ಬಾಯಿಗೆ ಬಂದ ತಾಯ್ತು ಅವನಿಗೆ. ತಾಯಿ ಅದೇ ತಾನೇ ನಿದ್ದೆ ಹೋಗಿದ್ದರು. ರುಕ್ಮಿಣಮ 'ನಿದ್ದೆ ಬಂದಿದೆ' ಎಂದು ರಾಜಣ್ಣನನ್ನು ಎಚ್ಚರಿಸಿದರು. ಬಟ್ಟೆಸುತ್ತಿ ಕಟ್ಟಿಗೆಯಂತಿದ್ದ ತಾಯಿ ತಂಗಿಯರನ್ನು ಕಂಡ ರಾಜಣ್ಣನ ಕಣ್ಣಲ್ಲಿ ನೀರ ಛಲಛಲಿಸಿತು. ಪ್ರಮಿೂಲಳ ಬಳಿ ಬಂದು "ಪ್ರಮಿೂ......ಪ್ರಮಿೂಲ...... ಎಂದ.

ಪ್ರಮಿೂಲ ಕಣ್ಣು ತೆರೆದಳು. ಎದುರಿಗೆ ಅಣ್ಣನನ್ನು ಕಂಡು ದುಃ ತುಂಬಿದ ಕಂಠದಿಂದ—

"ರಾಜೂ........ನೀನು........ಬಂದೆ......!" ಎಂದಳು. ಕಣ್ಣಿನಲ್ಲಿ ನೀರೂರಿತು.

"ಅಣ್ಣ ಬಂದ. ಇನ್ನು ಪರವಾಗಿಲ್ಲ ಪ್ರಮಿೂ......" ಎಂದರ ರುಕ್ಮಿಣಮ್ಮ.

ರಾಜಣ್ಣ ಬಂದ ಸುದ್ದಿ ಕೇಳಿ ಶ್ರೀನಿವಾಸರಾಯರು ಆಸ್ಪತ್ರೆಯಿಂ ಓಡಿ ಬಂದರು.

"ನಿನ್ನ ದಾರೀಗೇ ಕಾಯ್ತಾ ಇದ್ದೆ ರಾಜೂ! ನೀನು ಬಂದೆ ಇನ್ನು ಪರವಾಗಿಲ್ಲ. ಯಾವ ಭಯವೂ ಇಲ್ಲ."

ಎಂದು ಹೊರಗೆ ಬಂದು ಹುಡುಗರೊಡನೆ—

"ನೀವೆಲ್ಲಾ ಸ್ವಲ್ಪ ಆ ಮೇಲೆ ಬನ್ನೀಪ್ಪ ಮಾತಾಡೋದಿದೆ. ಬರು ತ್ತೀರಿ ತಾನೆ? ಎಂದರು.

"ಅಗತ್ಯವಾಗಿ ಬರ್ತೀವಿ ಸಾರ್. ಅಮ್ಮಾವ್ರಿಗೆ ಹೇಗಿದೆ ಸಾರ್?"

"ಏನೂ ಭಯವಿಲ್ಲ."

ಸಮಾಧಾನದ ಉಸಿರೆಳೆಯುತ್ತ ಎಲ್ಲರೂ ಮನೆಯ ಕಡೆ ನಡೆದರು.

*　*　*　*

ನೀಲಕಂಠಪ್ಪ ಅಣ್ಣನ ಜೊತೆ ಮಾತಾಡುತ್ತ ಕುಳಿತಿದ್ದ. ತನ್ನ ಸ್ನೇಹಿತ ರಾಜಣ್ಣನ ಮನೆಯ ದುಸ್ಥಿತಿಯ ಬಗ್ಗೆ ಅವನಿಗೆ ನಿಜಕ್ಕೂ ವ್ಯಥೆಯಾಗಿತ್ತು. ಪರಿಹಾರ ಹುಡುಕುತ್ತಿದ್ದ ನೀಲಕಂಠಪ್ಪ ಅಣ್ಣನನ್ನು ಕೇಳಿದ,

"ಗುರುರಾಜರಾಯರನ್ನು ಜಾಮೀನಿನ ಮೇಲೆ ಬಿಡಿಸಲು ಯಾರೂ ಮುಂದೆ ಬರಲಿಲ್ಲವೆ?"

"ಯಾರು ಮುಂದೆ ಬಂದಾರು ಕಂಠೀ. ಒಂದೇ, ಎರಡೇ ಹಣ! ಅವರ ಬಳಿ ಮೇಯುವಾಗ ಎಲ್ಲರೂ ಸ್ನೇಹಿತರಾಗಿಯೇ ಇದ್ದರು. ಈಗ ಯಾರೂ ಹತ್ತಿರ ಸುಳಿಯುತ್ತಿಲ್ಲ."

"ಅಷ್ಟೊಂದು ಹಣ ಹೇಗೆ ಹಾಳಾಯಿತು? ನನಗೆ ಅದೇ ಆಶ್ಚರ್ಯ!"

"ಜೊತೆಗಾರರು ಎತ್ತಿ ಹಾಕಿದರು. ನನಗೆ ತಿಳಿಯದ ಹಾಗೆ ಎಲೆಕ್ಷನ್ ಖರ್ಚಿಗೆ ಅಂತ ಕೇಳಿ ಹಣ ತಗೊಂಡರು. ಆ ಮೇಲೆ 'ತಾರಮ್ಮಯ್ಯ' ಹಾಡಿದರು.

"ಗುರುರಾಜರಾಯರು ನಿಮ್ಮನ್ನು ಕೇಳಲಿಲ್ಲವೆ?"

"ಯಾವ ಮುಖದಿಂದ ಕೇಳುತ್ತಾರೆ. ನನಗೆ ವಿಷಯವೇ ಗೊತ್ತಿರಲಿಲ್ಲ. ಆನಂದ ಹೋದ ಮೇಲೆ ಸೊಸೈಟಿಯ ಲೆಕ್ಕದ ಕಡೆ ಗಮನ ಕೊಟ್ಟಾಗ ಗೊತ್ತಾಯಿತು."

"ಆನಂದ ಯಾಕೆ ಓಡಿಹೋದರು?"

"ರಾಯರ ಮೋಸದಿಂದ, ಹಣ ಹಿಂತಿರುಗಲಾರದೆಂಬ ಭಯಕ್ಕೆ ರಿಮಿಟೆನ್ಸ್ ಮುಚ್ಚಿಟ್ಟರು. ಅಷ್ಟಕ್ಕೇ ಆನಂದ ಹೊರಟುಹೋದ."

"ಗುರುರಾಜರಾಯರ ಬಳಿ ನೀವು ಮಾತಾಡಿ ಹಣದ ಬಗ್ಗೆ ವ್ಯವಸ್ಥೆ ಮಾಡುವುದಕ್ಕಾಗುತ್ತಿರಲಿಲ್ಲವೇ?"

"ನೀನು ಹುಚ್ಚು ಹುಡುಗ ಕಂಠೀ. ಇದು ಅವರವರ ವ್ಯವಹಾರ. ನನಗೆ ತಿಳಿಸದಂತೆ ಮಾಡಿಸಿದ್ದು. ನಾನು ಪ್ರವೇಶಿಸುವುದು ಚೆನ್ನಿರಲಿಲ್ಲ. ನಾನು ಮುಂದುವರಿಯಲಿಲ್ಲ."

"ನೀವು ಮಾಡಿದ್ದು ಸರಿ. ಕೆಟ್ಟ ಹೆಸರು ಯಾರಿಗೆ ಬಂತು ಗೊತ್ತೆ?"

"ಕೆಟ್ಟ ಹೆಸರೇಕೆ?"

"ತನ್ನ ಅಗತ್ಯಕ್ಕೆ ಸಾಲ ಮಾಡಿ ಬ್ರಾಹ್ಮಣನನ್ನು ಮುಳುಗಿಸಿ
ಬ್ರಾಹ್ಮಣನ ಗಂಟು ದಕ್ಕಿ ಹಾಕಿಕೊಂಡ ಅಂತ ಯಾರನ್ನ ಅಂತಾರೆ?"

"ನಾನು ಹಾಗೆಲ್ಲಾ ಮಾಡಿದ್ದರೆ ತಾನೆ?"

"ಮಾಡಿಲ್ಲ ನಿಜ. ಆದರೆ ಆಂಜನಪ್ಪನ ಕಡೆಯುವರಿಂದಂ
ಬಂದಿರಲೇ ಬೇಕಲ್ಲ. ಇವತ್ತು ಅವರು ಮಾತಾಡಿದರು. ನಾಳೆ ಊ
ಊರೇ ಮೊರೆಯುತ್ತೆ."

"ಹಾಗಂತ ನಾನು ನಷ್ಟ ಹೊರಬೇಕೆ ಕಂಠೀ."

"ನ್ಯಾಯವಾಗಿ ಹೋದರೆ ನಷ್ಟವೇಕಣ್ಣಾ. ಆಂಜನಪ್ಪ—ಜೊತೆ
ವರನ್ನ ಹಿಡಿದು ನಿಲ್ಲಿಸಿ ಕೇಳಿಬಿಡಲೇ ನಾನು. ಇಂತಹ ವಿಷಯಗಳ
ಯಾವಾಗಲೂ ನೇರವಾದ ವ್ಯವಹಾರವಿರಬೇಡವೇ ಹೇಳಿ."

"ನಷ್ಟ ಹೊತ್ತಾಗಲೂ ಗುರುರಾಜರಾಯರು ನನ್ನ ಬಳಿ ಮಾತೆತ್ತಲಿ
ಸುಮ್ಮನೆ ಇದ್ದರು. ನಾನೇನು ಮಾಡಲಿ ಹೇಳು?"

"ನೀವು ಜಾಮೀನಿನ ಮೇಲೆ ರಾಯರನ್ನು ಬಿಡಿಸಬಹುದಾಗಿತ್ತು."

"ಯಾವ ನಂಬಿಕೆಯಿಂದ......?"

"ಹಣ ಹೋಗುತ್ತದೆಂತಲೆ? ಅವರಿಗೆ ಯಾವ ಆಧಾರವೂ ಇರಲಿಲ್ಲವ
ಈ ಮೊದಲು......ನೀವು ಅಷ್ಟು ದೂರ ಆಲೋಚಿಸಿ ಕೆಟ್ಟ ಹೆಸ
ಕೊಳ್ಳಲು ಸಿದ್ಧರಾದಿರಾ?"

"ಇಲ್ಲ ಕಂಠೀ. ನಿನ್ನ ಮಾತು ಕೇಳುವುದಿತ್ತು. ನಾನೂ ರಾಯರನ
ಬಿಡಿಸುವ ಉದ್ದೇಶದ ಮೇಲಿದ್ದೆ" ಬುಸ್ಸಣ್ಣನವರು ವಾಸ್ತವಾಂಶವನ
ನುಡಿದರು.

"ನಾನು ಈ ವಿಷಯಕ್ಕೆ ಒಪ್ಪುತ್ತಿರಲಿಲ್ಲವೆ?"

"ಸಾಲಮಾಡಿದ್ದ—ಜಾಮೀನಿನ ಮೇಲೆ ಬಿಡಿಸಿದ ಎಂಬ ಮಾ
ತಪ್ಪಲೆಂದು ನಿನ್ನ ಹಾದಿ ನೋಡಿದೆ. ನೀವು ಹುಡುಗರೆಲ್ಲ ಬಂದಿದ್ದೀ
ನಿಮಗೆ ಎಲ್ಲಾ ವಿಷಯಗಳೂ ಗೊತ್ತಾದ ಮೇಲೆ ನಾನು ಮುಂದುವರಿಯೋ
ವೆಂದುಕೊಂಡೆ ಅಷ್ಟೆ. ನಿನ್ನಿಷ್ಟ ಹೇಗೋ ಹಾಗೆ ನನ್ನಿಷ್ಟ."

"ನನ್ನಿಷ್ಟದ ಅವಲಂಬನೆ ಯಾಕೆ ಅಣ್ಣಾ. ವ್ಯರ್ಥ ಅಪವಾ
ಬೇಕೆಂಬ ಇಷ್ಟವಿದ್ದರೆ ನಿಮಗೆ ತಿಳಿದ ಹಾಗೆ ಮಾಡಿ. ನಾನು ನಾಳೆ ಎ

ವನ್ನೂ ಇತ್ಯರ್ಥ ಮಾಡುತ್ತೇನೆ. ಮಾತು ಉಳಿಯಲಿ, ಇಲ್ಲಾ ಹೋಗಲಿ ನನ್ನದೊಂದೇ ನಿರ್ಧಾರ!

ನೀಲಕಂಠಪ್ಪ ಪ್ರತಿಜ್ಞಾ ಸ್ವೀಕಾರ ಮಾಡಿದಂತೆ ಆಡಿದ. ತಿಳಿದೂ ತಿಳಿದೂ ಅಣ್ಣ ನಷ್ಟದ ಮುಖನೋಡಿ ಅಪವಾದವನ್ನು ಸ್ವಾಗತಿಸುತ್ತಿದ್ದುದು ಅವನಿಗೆ ಸಹಿಸಲಿಲ್ಲ.

ಬುಸ್ಸೆಣ್ಣನವರೂ ಯೋಚಿಸದಿರಲಿಲ್ಲ ಯೋಚಿಸಿಯೇ ತಟಸ್ಥರಾಗಿದ್ದರು. 'ಎಲೆಕ್ಷನ್‌ಗೆ ಮಾಡಿದ ಸಾಲಕ್ಕೆ ಜಾಮೀನಾದ' ಎಂಬ ಮಾತು ನಿಲ್ಲುವುದೆಂದು ಅವರಿಗೆ ಗೊತ್ತಾಗಿತ್ತು. ಹಣದ ವಿಷಯದಲ್ಲಿ ಆಂಜನಪ್ಪನ ಕಡೆಯವರೊಡನೆ ಮಾತಾಡದೇ ಇದ್ದುದೂ ಒಳ್ಳೆಯದಲ್ಲವೆನ್ನಿಸಿತು. 'ನಾಳೆಯೇ ನಾನೂ ಇತ್ಯರ್ಥ ಮಾಡುವೆ' ಎಂದು ನಿರ್ಧರಿಸಿದರು. ತಮ್ಮನೊಡನೆ—

"ನಿನಗೆ ತಿಳಿದ ಹಾಗೆ ಮಾಡು ಕಂಠೀ ನಾನು ಅಡ್ಡಬರುವುದಿಲ್ಲ ನಿನ್ನ ಮಾತಿನಂತೆ ನಾನು" ಎಂದು ಸಮ್ಮತಿ ಕೊಟ್ಟರು.

"ನನ್ನ ಮಾತಿನಿಂದ ನಿಮಗೆ ಅಸಮಾಧಾನವಾಗಲಿಲ್ಲ ತಾನೇ ?"

"ಖಂಡಿತ ಇಲ್ಲ."

"ಎಲೆಕ್ಷನ್‌ನಲ್ಲಿ ಜಯ ನಮ್ಮದಾಯಿತು. ಎಷ್ಟೋ ಹಣ ಅಹಲಾಯವಾಗಿ ಹೋಯಿತು. ನಮ್ಮಿಂದ ಗುರುರಾಜರಾಯರ ಜೀವನ ಹಾಳಾಯಿತು ಅನ್ನೋ ಮಾತು ನಮಗೇಕೆ ಬರಬೇಕು. ಹಣ ಹೋದರೆ ಹೋಗಲಿ. ಸಂಪಾದಿಸುವ ಚೈತನ್ಯ ನಮಗಿದೆ. ಒಂದು ಕುಟುಂಬ ಉದ್ಧಾರ ಮಾಡಿದ ಪುಣ್ಯ ನಮ್ಮದಾಗತ್ತೆ. ನಾಳೆ ಮೊಳಕಾಲ್ಮುರುವಿಗೆ ಹೋಗಿ ಬರುತ್ತೇನೆ."

"ಬೇಡ ನಾನೇ ಹೋಗುತ್ತೇನೆ. ನಿನ್ನಿಂದ ಕೆಲಸವಾಗಲಿಕ್ಕಿಲ್ಲ. ಇಲ್ಲಿ ನೀನು ಮಾಡುವುದೇನಾದರೂ ಇದ್ದರೆ ಯೋಚಿಸು."

"ಸರಿ ಹಾಗೇ ಮಾಡಿ."

ನೀಲಕಂಠಪ್ಪ ಜೊತೆಯವರೊಡನೆ ಶ್ರೀನಿವಾಸರಾಯರ ಮನೆಗೆ ಬಂದ. ಆ ವೇಳೆಗೆ ರಾಜಣ್ಣನೂ ಊಟ ಮುಗಿಸಿಕೊಂಡು ಶ್ರೀನಿವಾಸರಾಯರೊಡನೆ ಮುಂದೆ ಏನು ಮಾಡುವುದೆಂಬ ಬಗ್ಗೆ ಮಾತಾಡುತ್ತ ಕುಳಿತಿದ್ದ.

"ಬಾ ನೀಲಕಂಠಪ್ಪ. ಬನ್ನಿ ಎಲ್ಲರೂ......" ಶ್ರೀನಿವಾಸರಾಯ
ಸ್ವಾಗತಿಸಿಕೊಂಡು ಹೇಳಿದರು.

"ನಿಮಗೆ ಬರಹೇಳಿದ್ದೆ; ರಾಜಣ್ಣನ ಮನೆಯ ವಿಚಾರ ನಿಮ್ಮೊ
ಮಾತಾಡುವುದಿತ್ತು. ನೀವುಗಳೆಲ್ಲಾ ಒಂದು ಉಪಕಾರ ಮಾಡ
ಸಿದ್ಧರಿದ್ದೀರಾ?"

"ನಮ್ಮ ಕೈಲಾದ ಮಟ್ಟಿಗೆ ಮಾಡಬಲ್ಲೆವು" ನೀಲಕಂಠಪ್ಪ ಎಲ್ಲ
ಪರವಾಗಿ ಆಡಿದ.

"ಗುರುರಾಜರಾಯರ ಹಣಕ್ಕೆ ಮೋಸವಾಗಿದೆ. ಕೆಲವರೆಲ್ಲಾ ದಕ
ಹಾಕಿಕೊಂಡಿದಾರೆ. ನೀವುಗಳೆಲ್ಲಾ ವಸೂಲು ಮಾಡಲು ನಿಂತರೆ ವಸ
ಲಾಗಬಹುದೆಂಬ ಭರವಸೆಯಿದೆ. ರಾಜಣ್ಣ ನಿಮ್ಮ ಸ್ನೇಹಿತ. ಅವನಿಗಾ
ಅಷ್ಟು ಮಾಡುತ್ತೀರಿ ತಾನೆ?"

"ಈ ವಿಷಯ ನನ್ನ ಆಲೋಚನೆಯಲ್ಲೂ ಇತ್ತು" ನೀಲಕಂಠಪ್
ರಾಜಣ್ಣನ ಕಡೆ ತಿರುಗಿ ಹೇಳಿದ—

"ರಾಜೂ ನಿಮ್ಮ ತಂದೆ ಇಟ್ಟಿರತಕ್ಕ ಪಟ್ಟಿಯಿದ್ದರೆ ಹುಡುಕಿಡು
ನಾಳೆಯೇ ಪ್ರಾರಂಭವಾಗಲಿ ನಮ್ಮ ಪ್ರಯತ್ನ."

"ಗಲಾಟೆ ಮಾಡಲಿಕ್ಕೆ ಹೋಗಬೇಡಿ. ಡಾಕ್ಟರು ಈ ಕೆಲಸಕ್ಕೆ ಕೈ
ಹಚ್ಚಿಸಿದರು ಅಂದುಕೋಬೇಡಿ. ನೀವುಗಳು ನೀತಿಪರರಾದ ತರುಣರು
ನಿಮ್ಮ ಮೇಲೆ ನನಗೆ ನಂಬಿಕೆಯಿದೆ."

"ನೀವು ಆ ಬಗ್ಗೆ ಯೋಚಿಸಬೇಡಿ ಸಾರ್. ನಾಳೆ ಬೆಳಗ್ಗೆ ಎಲ್ಲಾ
ರಾಜಣ್ಣನ ಮನೆ ಹತ್ತಿರ ಬಂದುಬಿಡ್ರೋ".

ನೀಲಕಂಠಪ್ಪ ಜೊತೆಯವರಿಗೆ ಹೇಳಿದ ಖಚಿತ ಆಜ್ಞೆ ಕೊಟ್ಟ ಹಾಗೆ.

ನೇರವಾದ ಲಕ್ಷ್ಯ ಸಾಧಿಸ ಹೊರಟಂತೆ ನೀಲಕಂಠಪ್ಪ ಮಾರನೆಯದಿನ
ಬೆಳಗ್ಗೆ ಪೋಲೀಸ್ ಸ್ಟೇಷನ್ನಿಗೆ ಹೋಗಿ ಮಾತನಾಡಿಕೊಂಡು ಬಂದ.
ತಮ್ಮ ನ್ಯಾಯವಾದ ಕರ್ತವ್ಯದ ಹಾದಿಯಲ್ಲಿ ಅವರುಗಳು ಅಂದರೆ ಪೋಲೀ
ಸರುಗಳು ಅಡ್ಡಿ ಬಾರದಿರಲೆಂಬ ಉದ್ದೇಶದಿಂದ ಸಬ್ ಇನ್‌ಸ್ಪೆಕ್ಟರೆದುರು
'ಘರ್ಷಣೆಗೆ ಅವಕಾಶ ಕೊಡುವುದಿಲ್ಲ' ಎಂದು ಖಚಿತವಾಗಿ ಹೇಳಿ ಬಂದ.

ಆಂಜನಪ್ಪನ ಮನೆಗೆ ರಾಜಣ್ಣ ನೀಲಕಂಠಪ್ಪ ಇಬ್ಬರೇ ಹೊರಟರು. ಹಿಂದಿನಿಂದ ಒಬ್ಬೊಬ್ಬರೇ ಉಳಿದವರು ಬಂದು ಸೇರುವಂತೆ ಮಾತಾಡಿ ಕೊಂಡಿದ್ದರು. ಆಂಜನಪ್ಪನ ಮನೆಯ ಬಳಿ ಸಾಗಿದ್ದಾಗ ಆತ ಎಲ್ಲಿಗೋ ಪ್ರಯಾಣಕ್ಕೆ ಸಿದ್ಧನಾಗಿದ್ದ. ಆತನ ಜೊತೆಯಲ್ಲಿ ಧರಣಯ್ಯನೂ ಇದ್ದ. ಒಂಟಿ ಬ್ರಾಹ್ಮಣ ಶಕುನವಾಯಿತಲ್ಲಾ ಎಂದುಕೊಂಡು ರಾಜಣ್ಣನನ್ನು ಕಂಡ ವರೇ ಕಾರಿನಲ್ಲಿ ಕೂಡಲು ಬಂದಿದ್ದ ಅವರು ಮತ್ತೆ ವಾಪಾಸು ಹೋಗಿ ಜಗಲಿಯ ಮೇಲೆ ಕುಳಿತರು.

"ಏನು ರಾಜಣ್ಣಾ ಅಪರೂಪಕ್ಕೆ ಬಂದ ಹಾಗಾಯಿತು. ಮೊಳಕಾ ಲ್ಮುರುನಿಂದ ಗುರುರಾಜಪ್ಪ ಬಂದನೇನು? ನಾವು ಹೇಳಿದೆವು. ಬೇಡ ಗುರು ರಾಜಪ್ಪ ಸೊಸೈಟಿ ರೊಕ್ಕ ಬಳಸಬೇಡಾಂತ. ಕೇಳ್ಲಿಲ್ಲ ಆತ!"

—ಹಿತೈಷಿಯ ಹಾಗೆ ಮಾತಾಡುತ್ತ ಚುಚ್ಚುವ ಹಾಗೆ ಮಾತಾಡಿದ ಆಂಜನಪ್ಪ. ನೀಲಕಂಠಪ್ಪನ ಮೈ ಉರಿಯತೊಡಗಿತು ಮಾತು ಕೇಳಿ. ರಾಜಣ್ಣ ಉಕ್ಕಿ ಬಂದಿದ್ದ ಕೋಪವನ್ನು ನುಂಗಿಕೊಂಡು ಹೇಳಿದ—

"ನೀವುಗಳೆಲ್ಲ ಸಹಾಯಮಾಡಿದರೆ ತಾನೇ ಅಪ್ಪನ್ನ ಬಿಡಿಸಿಕೊಂಡು ಬರೋದು."

"ಏನು ಸಹಾಯನಪ್ಪ ಮಾಡೋದು, ಒಂದಾ, ಎರಡಾ—ಜಗ್ಗಿ [ಬಹಳ] ಬಳಸಿಕೊಂಡು ಬಿಟ್ಟ. ನಾವೂನೂ ನೋಡಿದೆವು. ಏನಾರ ಮಾಡಿ ಬಿಡಿಸಿಕೊಳ್ಳೋಣ ಅಂತ. ನಮ್ಮ ಕೈ ಮೀರಿದೆ"—ಧರಣ ಯ್ಯನೆಂದ ಆಂಜನಪ್ಪನನ್ನು ನೋಡುತ್ತ.

"ಇನ್ನೊಂದಷ್ಟು ಬಾಚೋಣ ಅಂತ ನೋಡಿದಿರಿ. ಆಗಲಿಲ್ಲ ಅಲ್ಲವೇ" —ತಾಳ್ಮೆ ತಪ್ಪಿ ಕೇಳಿದ ನಿಲಕಂಠಪ್ಪ.

"ಏನು ಕಂಠೀ ಇವತ್ತು ಒಂದುಪರಿ ಮಾತಾಡ್ಲಿಕ್ಕೆ ಹತ್ತಿದ್ದೀ. ಜಗಳಾ ಕಾಯೋಕೆ ಬಂದೋನ ಹಾಗೆ."

"ರಾಜಣ್ಣ ನಾವು ಬಂದ ಕೆಲಸ ಏನೋ ಅಷ್ಟು ಮಾಡಿಕೊಂಡು ಹೋಗೋಣ. ಇವರ ಚರ್ಚೆ ಜಗಳಗಳು ನಮಗೇಕೆ? ನಿನ್ನ ವಿಷಯ ವೇನೋ ನೋಡು."

ರಾಜಣ್ಣ ರಾಯರ ಲೆಕ್ಕದಲ್ಲಿದ್ದಷ್ಟು ಹಣ ಆಂಜನಪ್ಪನನ್ನು ಕೊ
ವಂತೆ ಕೇಳಿದ. ಧರಣಯ್ಯನವನನ್ನೂ ಕೊಡುವಂತೆ ಕೇಳಿದ. ಅದ
ಕಂಡ ಆಂಜನಪ್ಪ,

"ವಸೂಲಿಗೆ ಹೊರಟಿರೋ ನೀವು. ಈಗ ಅರ್ಥ ಆದಂಗಾ
ನೀನು ಹೇಳೋದು ಕರೇವೆ [ಖರೆ= ನಿಜ] ಗುರುರಾಜಪ್ಪನ್ನೂ ನನ
ತುಂಬಾ ವ್ಯವಹಾರ ಅದೆ. ಅದು ಮುಗಿಯೋ ವರೆಗೆ ನಮ್ಮ ತಾಗೆ ಏನ
ದೊರೆಯೋ ಹಂಗಿಲ್ಲ." ಎಂದ.

"ಆ ವಿಷಯ ನನಗೆ ಗೊತ್ತಿಲ್ಲ. ಎಲೆಕ್ಷನ್ನಲ್ಲಿ ನೀವು ಹಣತಗೊಂ
ವಿಷಯ ನಿಜ. ನಿಮ್ಮ ನಿಮ್ಮ ವ್ಯವಹಾರದ್ದು ನಾನು ಕೇಳ್ತಿಲ್ಲ. ಎಲೆಕ್ಷ
ನಲ್ಲಿ ತಗೊಂಡ ಹಣ ಕೇಳ್ತಾ ಇದ್ದೀನಿ."

"ಅದು ಬುಸ್ನೆಣ್ಣ ಕೊಡೋದಪ್ಪಾ. ಕಂಠೀ ನಿಮ್ಮ ಅಣ್ಣನಿ
ಹೇಳಪ್ಪಾ."

"ಇಸಕೊಂಡ ಹಣ ಕೊಡದೇ ಗಂಟು ಕಳ್ಳತನ ಮಾಡ್ತಾ ಇದ್ದಾ
ಆಂಜನಪ್ಪ ಅಂತಲೆ?" — ರೋಷದಿಂದ ಕೇಳಿದ ನೀಲಕಂಠಪ್ಪ.

ರೋಷ ಅವಮಾನಗಳ ಕಿಡಿ ಊದಿದಂತಾಗಿ ಆಂಜನಪ್ಪ ಕೆರಳಿದ.

"ಏಯ್ ಯಾರತ್ರ ಮಾತಾಡ್ತಿದಿಯ? ದವಡೆಭದ್ರ ನೋಡಿಕೊಂ
ಮಾತಾಡು ಮತ್ತೆ. ರಾಜಣ್ಣ ನಿಮ್ಮಪ್ಪಗೆ ನಾನೇನೂ ಕೊಡಬೇಕಾದ್ದಿ
ಆತನಿಂದಲೇ ನಮಗೆಷ್ಟೋ ಬರಬೇಕಾದ್ದಿದೆ. ಮಾತಾಡಿದ್ರೆ ಇನ್ನು ಸ
ಹೋಗಾಕಿಲ್ಲ. ಇನ್ನು ನನ್ನ ಕೇಳಕ್ಕೇ ಕೂಡದು. ಹೊತ್ತಾತು ಬ
ಧರಣಯ್ಯ!"

ಆಂಜನಪ್ಪ ಧರಣಯ್ಯನ ಜೊತೆ ಕಾರಿನಲ್ಲಿ ಬಂದು ಕುಳಿತ.

"ನೀವು ಹಣ ಕೊಟ್ಟ ಹೊರತು ಕಾರು ಮುಂದೆ ಬಿಡಲಾರಿರಿ."

ರಾಜಣ್ಣ ಕಾರಿಗೆ ಅಡ್ಡಾಗಿ ನಿಂತ.

"ಗೂಂಡಾಗಳು ಮಾಡಿದ ಹಾಗೆ ಮಾಡ್ತಿದೀರಾ ಪೋಲೀಸಿಗೆ ಕ
ಪ್ಲೇಂಟ್ ಕೊಡ್ತೀನಿ. ರಾಜಣ್ಣ ನಿಮ್ಮಪ್ಪನಿಗೆ ನಾನೇನು ಒಂದು ದಮ್ಮ
ಕೊಡೋದು ಕೂಡ ಇಲ್ಲ. ಸುಮ್ಮನೆ ಚರ್ಚೆ ಬೇಡ."

ರಾಜಣ್ಣ ಹಟತೊಟ್ಟು ನಿಂತೇಬಿಟ್ಟ. ಆ ವೇಳೆಗೆ ಒಬ್ಬೊಬ್ಬರೇ ಬಂದು ಸೇರಿದರು. ಅವರುಗಳನ್ನೆಲ್ಲಾ ನೋಡಿ ಬೆದರಿದರೂ ತೋರ ಗೊಡದೆ,

"ಇವನೇನು ಮಾಡ್ತಾನೋ ಮಾಡಲಿ. ಕಾರು ಮುಂದಕ್ಕೆ ಬಿಡೋ."

—ಆಂಜನಪ್ಪ ಡ್ರೈವರನ್ನು ಎಚ್ಚರಿಸಿದ.

"ಚಕ್ರ ಒಂದೇ ಉರುಳು ಉರುಳಿದರೂ ಕಾರಿಗೆ ಬೆಂಕಿ ಹಚ್ಚಿಬಿಡ್ತೀವಿ ಹುಷಾರ್! ಕಂಡೋರ ಗಂಟು ಎತ್ತಿ ಹಾಕೋ ವಿದ್ಯೆಗಳು ನಮ್ಮ ಹತ್ತರ ನಡೆಯಲ್ಲ. ಹಣ ವಸೂಲಾಗೋ ವರೆಗೆ ಕಾಂಪೋಂಡ್ ಬಿಟ್ಟು ಅಲುಗ ಬೇಡ್ರೋ ಯಾರೂನೂ. ಇವತ್ತು ನಮ್ಮಗಳ ಮೇಲೆ ಕೇಸಾಗಲಿ ನೋಡೋಣವಂತೆ. ಈ ಊರಲ್ಲಿ ಈ ದೊಡ್ಡ ಮನುಷ್ಯರ ಪುಂಡು ಅಡಗ ಬೇಕು ಇಲ್ಲಾ—ಆಗೋದೆಲ್ಲಾ ಆಗೇ ಹೋಗಬೇಕು."—ನೀಲಕಂಠಪ್ಪ ಸಿಂಹದ ಹಾಗೆ ಗರ್ಜಿಸಿದ.

"ಮಂಗನ ಮಕ್ಕಳಾ! ಪುಂಡಾಳಗಳಾಡ್ತೀರಾ. ಪೋಲೀಸರನ್ನ ಕರೀಸ್ತಿನಿ. ಲೌಡಿ ಮಕ್ಕಳಾ"—ಆಂಜನಪ್ಪ ತಾನೇ ಡ್ರೈವ್ ಮಾಡಲು ಕುಳಿತ.

"ಕಾರ ಮುಂದೆ ಮಲಗಿರೋ ಇಬ್ಬರು. ಪೆಟ್ರೋಲ್ ಟ್ಯಾಂಕ್ ಕಿತ್ತು ಹಾಕಿ. ಕಡ್ಡೀ ಗೀರಿಬಿಡಿ. ಮುಂದೆ ಆಗೋದು ನೋಡೋಣ."

ಮಾತು ಹೊರಬರುತ್ತಿದ್ದಂತೆಯೇ ಕಾರ್ಯರೂಪಕ್ಕೆ ಬರುತ್ತಿದ್ದುದು ಕಂಡು ಆಂಜನಪ್ಪ ಧರಣಯ್ಯ ಹೆದರಿದರು. ಆಂಜನಪ್ಪ ಕೆಳಗಿಳಿದು ಎಲ್ಲ ರನ್ನೂ ದೂರಕ್ಕೆ ತಳ್ಳತೊಡಗಿದ. ಎಲ್ಲರೂ ಬೊಬ್ಬೆ ಹಾಕಿದರು.

"ರೂಪಸ್ಲ್ಯಾ ನಾಯ್ಕನ ಹತ್ತಿರ ಲಂಚತಿಂದ್ಹಂಗಲ್ಲಾ. ನಮ್ಮ ರೊಕ್ಕ ತಿಂದು ರೂಪಸ್ಲ್ಯಾಗೆ ಕ್ಯಾನ್‌ವಾಸ್ ಮಾಡಿದ್ಹಂಗಲ್ಲಾ. ಅವತ್ತಿನ ಸೊಕ್ಕು ಇವತ್ತಿಳಿಸದೆ ಇದ್ರೆ ಈ ರಾಂಪುರದ ಮುಖ ನೋಡೋಲ್ಲ ನಾವು. ಏನಂತ ತಿಳಿದಿದೀ. ಲೌಡಿ ಮಕ್ಕಳಂತೆ....! ಲೌಡಿ ಮಕ್ಕಳು!! ನಮಗೆ ಕೊಡೋ ರೊಕ್ಕ ಸ್ವಲ್ಪ. ಕಾರು—ಹದಿನಾಲ್ಕು ಸಾವಿರ!"

ಒಂದೇ ಕ್ಷಣ ಹದಿನಾಲ್ಕು ಸಾವಿರ ಬೆಲೆಯ—ಕಾರು, ಕಾರಿನೊಡನೆ ತಾನೂ ಭಸ್ಮವಾಗುವುದರಲ್ಲಿ ಸಂದೇಹವೇ ಇಲ್ಲವೆಂದರಿತ ಆಂಜನಪ್ಪ ಹಣ

ಕೊಡದಿದ್ದರೆ ಬೇರೆ ಮಾರ್ಗವೇ ಇಲ್ಲವೆಂದುಕೊಂಡ. ನೆರೆದ ಜನ ತನ್ನ
ಅಪಮಾನಗೊಳಿಸುವುದರಲ್ಲಿ ಸಂದೇಹವಿಲ್ಲವೆಂದರಿತ ಅವನು ಚೀರಿದ—

"ನಿಲ್ರೋ ನಿಮ್ಮ ರೊಕ್ಕ ಬಿಸಾಕ್ತಿನಿ. ಯಾಕೆ ಬೊಬ್ಬೆ ಹಾಕ್ತಿದೀರಿ
ನಿಮ್ಮ" ಅವನ ದನಿಯಲ್ಲಿ ಪೆಟ್ಟು ತಿಂದ ಹಾವಿನ ರೋಷವಿತ್ತು. ಜ
ಯಲ್ಲಿ ಅಳುವಿನ ನಡುಕವಿತ್ತು.

"ಹಾಗೇ ಬಾ ದಾರಿಗೆ!" -- ಎಲ್ಲರೂ ಸುತ್ತುಗಟ್ಟಿಕೊಂಡು ಆಂಜನ
ಧರಣಯ್ಯರನ್ನು ಹಿಂದಕ್ಕೆ ಕರೆದೊಯ್ದರು.

ಆಂಜನಪ್ಪ ತಾನು ಕೊಡಬೇಕಾದ ಹಣ ತಿಜೋರಿಯಿಂದ ತೆಗೆ
ಕೊಟ್ಟ.

"ನಿನ್ನದು ?" ನೀಲಕಂಠಪ್ಪ ಧರಣಯ್ಯನ ಕಡೆ ನೋಡಿದ.

"ಇಗೋ ಧರಣಯ್ಯನದು"— ಆಂಜನಪ್ಪ ಧರಣಯ್ಯನ ಬಾಬ್ತು ಹ
ವನ್ನು ಚೆಲ್ಲಿದ.

"ಚಿನ್ನಪ್ಪನ್ನ ಹಿಡಿಯೋಣ ನಡೆಯಿರಿ" ಎಂದು ಎಲ್ಲರೂ ಚಿನ್ನಪ್ಪ
ಮನೆಯ ಕಡೆ ನಡೆದರು

"ಸೂಳೆಯ ಮಕ್ಕಳಾ— ಈಗಲ್ಲ ನಿಮಗೆ ಮಾಡ್ತೀನಿ ತಡೀರಿ" ಎಂದ
ಆಂಜನಪ್ಪ ಸ್ಟೇಷನಿಗೆ ಬಂದು ಒಂದಕ್ಕೆ ಹತ್ತರಷ್ಟು ವರದಿಮಾಡಿದ.

ಸಬ್ ಇನ್ಸ್‌ಪೆಕ್ಟರರು ಗಂಭೀರವಾಗಿ,

"ಹಣ ಕೊಟ್ಟೆರಿ ತಾನೇ. ತುಂಬಾ ಸಂತೋಷ. ಅವರಿಗೆ ಸೇರಬೇ
ಕಾದ ಹಣ ಅವರು ವಸೂಲು ಮಾಡಿಕೊಂಡರು. ಕಾರು ಸುಡಲಿಕ
ಬಂದರು ಅಂದಿರಿ. ಸುಟ್ಟಿದ್ದರೆ ನಾವು ಆ ವಿಷಯದಲ್ಲಿ ಕೈಹಾಕುತ್ತಿದ್ದೆವು
ಏನೂ ಗಲಾಟೆ ನಡೆಯದೆ ಪ್ರವೇಶ ಮಾಡೋದಾದರೂ ಹೇಗೆ ?" ಎಂದರು

"ಸ್ವಾಮಿ, ನೀವೂ ಅವರ ಕಡೆ ವಾದಿಸಲಿಕ್ಕೆ ಹೊರಟರೆ ಚೆನ್ನಾಗಿ
ನೋಡಿ."

"ಅಷ್ಟೇನೋ. ನೀವು ಹಣದ ಬೆಲೆ ಅರಿತವರು. ಅವರುಗಳ
ಕಾನೂನಿನ ನೆಲೆಯನ್ನು ಅರಿತಿದ್ದಾರೆ. ನಿಮ್ಮ ಹತ್ತಿರ ಪ್ರೀತಿ ಪಡೆದುಕೊ
ಡರೆ ಎಷ್ಟು ಲಾಭವೋ ಅಷ್ಟೇ ಅವರ ಬಳಿ ದ್ವೇಷ ಕಟ್ಟಿಕೊಂಡರೆ ನ

ವಾಗುತ್ತೆ ನನಗೆ. ಯಾರ ಬಳಿಯೂ ನಾನು ದ್ವೇಷ ಕಟ್ಟಿಕೊಳ್ಳಲಾರೆ. ನೀವೂ ಅಷ್ಟೆ. ನ್ಯಾಯವಾದ ರೀತಿಯಲ್ಲಿ ನಡೆಯುತ್ತಿರುವ ಅವರುಗಳ ಬಗ್ಗೆ ದ್ವೇಷ ಸಾಧಿಸಿದರೆ ಒಳ್ಳೆಯ ಪರಿಣಾಮವಾಗಲಾರದು. ರೊಚ್ಚಿಗೆದ್ದ ಹುಡುಗರು ಮಚ್ಚರವಿಟ್ಟ ಸರ್ಪದ ಹಾಗೆ. ಅದರಲ್ಲೂ ನಿಮ್ಮ ಊರ ಹುಡುಗರು ಅಸಾಧ್ಯರು. ಅವರ ಬಳಿ ಸಾಮೋಪಾಯವೇ ಮುಖ್ಯ ಪರಿಣಾಮಕಾರಿಯಾಗಬಲ್ಲುದೇ ಹೊರತು ಉಳಿದವು ಖಂಡಿತ ನಮಗೇ ವಿನಾಶಕಾರಿ. ನೀವು ಇಷ್ಟಪಡುವುದಾದರೆ ನಿಮ್ಮ ಹಗೆತನ ಇನ್ನೆಂದಾದರೂ ತೀರಿಸಿಕೊಳ್ಳಿ. ಈ ದಿನ ಬೇಡಿ. ನಿಮ್ಮ ಜೊತೆಯವರು ಇನ್ನೂ ಯಾರು ಯಾರು ಹಣ ಕೊಡಬೇಕಾದ್ದು ಇದೆಯೋ ಕೊಡಿ, ಕೊಟ್ಟು ಪರಿಸ್ಥಿತಿಯನ್ನು ಶಾಂತಗೊಳಿಸಿ."

"ಹಾಗಾದರೆ ನೀವೂ ಅವರ ಕಡೆ ಷಾಮೀಲಾಗಿದೀರಿ?" ಆಂಜನಪ್ಪ ಕೆರಳಿ ಕೇಳಿದ.

"ಷಾಮೀಲಾಗುವ ಮಾತಲ್ಲ. ನಾನು ಈ ವಿಷಯವನ್ನಾಲೋಚಿಸಿದೀನಿ. ಯಾವ ಗಲಾಟೆಯೂ ನಡೆವಿಲ್ಲ. ಹುಡುಗರೆಲ್ಲಾ ಸ್ವಾಭಾವಿಕವಾದ ವರ್ತನೆಯಿಂದ ನಿಮಗೆ ಕೃತ್ರಿಮ ಬೆದರಿಕೆ ತೋರಿದ್ದಾರಷ್ಟೇ ವಿನಹ ನಿಮ್ಮ ಮೇಲೆ ವೃಥಾ ದಬ್ಬಾಳಿಕೆಗೆ ಹೋಗಿಲ್ಲ ನೀವು ಹೇಳಿದಂತೆ ಅವರಿಂದ ಯಾವುದೇ ಒಂದು ದಬ್ಬಾಳಿಕೆ ನಡೆದದ್ದು ನಿಜವಾಗಿದ್ದರೆ, ಇಗೋ ನಾನು ಸಿದ್ಧವಾಗಿ ನಿಂತಿದ್ದೀನಿ ಆಕ್ಷನ್ ತೆಗೆದುಕೊಳ್ಳಲಿಕ್ಕೆ."

"ಕಾರಿಗೆ ಬೆಂಕಿ ಹಚ್ಚಲು ಬಂದಿದ್ದು ದಬ್ಬಾಳಿಕೆಯಲ್ಲವೇ?"

"ಅಡ್ಡನಿಂತವರ ಮೇಲೆ ಕಾರುಬಿಡಹೊರಟಿದ್ದು ದಬ್ಬಾಳಿಕೆಯಲ್ಲವೆ?"

"ಆಗಲಿ. ನೀವೂ ಒಂದು ಕೈ ಚಲಾಯಿಸಬೇಕೂ ಅಂತ ಮಾಡಿದೀರಿ ನಮ್ಮ ಮೇಲೆ. ನಾವೂ ನೋಡ್ಕೋತೀವಿ." ಎಂದು ಆಂಜನಪ್ಪ ಸಿಟ್ಟಿನಿಂದ ಹೊರಬಂದ

ಹುಡುಗರೆಲ್ಲಾ ಚಿನ್ನಪ್ಪನ ಆಸ್ಪತ್ರೆಗೆ ನುಗ್ಗಿ ಧಾಳಿ ನಡೆಸತೊಡಗಿದರು. ಆಂಜನಪ್ಪ ಅಲ್ಲಿಗೆ ನೇರವಾಗಿ ಬಂದ. ಚಿನ್ನಪ್ಪ ಆಂಜನಪ್ಪನನ್ನು ಕಂಡು ಧೈರ್ಯಗೊಂಡ. ಆದರೆ ಆಂಜನಪ್ಪ ಬಂದವನೇ ಚಿನಪ್ಪನಿಗೆ ಏನೋ ಹೇಳಿದ. ಚಿನ್ನಪ್ಪ ಮರುಮಾತಾಡದೆ ಹಣ ಒಪ್ಪಿಸಿಕೊಟ್ಟ.

ವಾಮನರಾಯರು ಮನೆಯಲ್ಲಿ ಹುದುಗಿಕೊಂಡು ಕುಳಿತಿದ್ದರು
ಆಂಜನಪ್ಪ, ಧರಣಯ್ಯ, ಚಿನ್ನಪ್ಪ, ಇವರುಗಳೇ ತಣ್ಣಗಾದಾಗ
ಜಬರ್ದಸ್ತೇನೂ ನಡೆಯಲಾರದೆಂದು ನಿರ್ಧರಿಸಿದ್ದರು. ಹುಡುಗರ
ಮನೆಯ ಮುಂದೆ ಬಂದಾಗ 'ನೀವು ಗಲಾಟೆ ಮಾಡದೆ ಸುವ
ನಾನು ರೊಕ್ಕ ಕೊಡ್ತೀನಿ' ಎಂದು ಬೇಡಿದರು.

"ರೊಕ್ಕ ಬರಲಿ ಬಡಾನೇ" — ಜಕ್ರಿಯು ಅಣಕಿಸಿದ ನಗುತ್ತ.

"ವಾಮನರಾಯರು ಸಿಟ್ಟಿನಿಂದ 'ಸ್ವಲ್ಪ ಬಿದ್ದಿರ್ರಿಲೇ' ಎಂದು
ಒಂಟಿ ಕಣ್ಣನ್ನು ಕೆಂಪಗೆ ಮಾಡಿ ಗದರಿಸಿದರು."

"ಹಾಕ್ರಲೇ ಏನು ನೋಡ್ತೀರಿ ಒಂದು ಕೈ..... !" ನೀಲಕ
ಕೂಗಿದ.

"ಬ್ರಾಹ್ಮಣ ಯಾಕಾದಾನಯ್ಯಾ ನೀನೂ... .ನಾಚಿಕೆ ಆಗಲ್ಲವೇ
ಎಂದು ಗರಗಪ್ಪ ಛೇದಿಸಿದ.

ವಾಮನರಾಯರು ಆರು ನೂರು ರೂಪಾಯಿ ಕೊಟ್ಟು ಉಳಿದ
ಆಂಜನಪ್ಪನ ಬಳಿ ಎರವಲು ಪಡೆದುಕೊಟ್ಟರು.

ವಿಜಯೋತ್ಸಾಹದಿಂದ ಹುಡುಗರುಗಳು ಕೇಕೆ ಹಾಕುತ್ತ ರಾಜ
ಮನೆಗೆ ಬಂದರು. ಅದೇ ಸಮಯಕ್ಕೆ ಮಧ್ಯಾಹ್ನದ ಬಸ್ಸಿನಲ್ಲಿ
ರೊಡನೆ ಬುಸ್ಸಣ್ಣನವರೂ ಬಂದಿಳಿದರು. ಬಿಡುಗಡೆಯಾಗಿ ಬಂದ
ಯನ್ನು ಕಂಡು ರಾಜಣ್ಣನಿಗೆ ಆಶ್ಚರ್ಯವಾಯಿತು. ಜೊತೆಯಲ್ಲಿ
ಬುಸ್ಸಣ್ಣನವರಿದ್ದುದರಿಂದ ಎಲ್ಲವೂ ಅರ್ಥವಾಗಿ ಅವರಿಗೆ ಕೃತಜ್ಞತೆಯ
ವಂದಿಸಿದ. ರಾಯರಂತೂ ಬುಸ್ಸಣ್ಣನವರು ತೋರಿದ ಔದಾರ್ಯ
ದಿಂದ ಕುಗ್ಗಿ ಹೋಗಿದ್ದರು. ಅಷ್ಟು ಜನರೆದುರು ಮುಖ ತೋರಿ
ನಾಚಿಕೆಯಾಗಿದ್ದರೂ ನಿರ್ವಾಹವಿಲ್ಲದೆ ತಲೆತಗ್ಗಿಸಿಕೊಂಡು ನಿಂತಿದ
ಶ್ರೀನಿವಾಸರಾಯರೂ ಸುದ್ದಿ ಕೇಳಿ ಬಂದರು. ಬುಸ್ಸಣ್ಣನವರ
ರ್ಯಕ್ಕೆ ತಲೆದೂಗಿದರು. ಹುಡುಗರ ಜಯವನ್ನು ತಿಳಿದು ಸಂತಸ
"ಇವತ್ತಿನ ಜಯ ನಿಮ್ಮೆಲ್ಲರದು. ರಾಜಣ್ಣನ ಬಗ್ಗೆ ನೀವು ನಿಮ್ಮ ಸ್ನೇ
ಅನನ್ಯ ಸಾಧಾರಣ ರೂಪು ತೋರಿಸಿದ್ದೀರಿ. ಬುಸ್ಸಣ್ಣನವರು; ಅ
ದೊಡ್ಡ ಮನಸ್ಸು ಮಾಡಿದರು. ಅವರ ಸ್ವಭಾವ ಬಿಗಿ. ಆದರೆ ಹೃ
ವಿಶಾಲವಾದದ್ದು. ಆಪತ್ತಿನ ಸಮಯದಲ್ಲಿ ನೀವುಗಳೆಲ್ಲರೂ ತೊ

ಧೈರ್ಯ—ಸಹಾನುಭೂತಿ ನಿಜಕ್ಕೂ ಹೆಮ್ಮೆಯವು. ನಿಮ್ಮಲ್ಲಿ ಧೈರ್ಯ, ಕೆಚ್ಚು, ಉತ್ಸಾಹಗಳಿವೆ. ಜೊತೆಯಲ್ಲೇ ಆದರ್ಶ ಧ್ಯೇಯಗಳಿವೆ. ಶ್ರದ್ಧೆ, ಸಹಾನುಭೂತಿ, ಔದಾರ್ಯಗಳಿವೆ. ಇದು ನಿಮ್ಮ ಜೀವನದಲ್ಲಿ ಶಾಶ್ವತ ವಾಗಿ ನೆಲೆಗೊಳ್ಳಲಿ. ನೊಂದವರ ಬಗ್ಗೆ ಮನಮುಟ್ಟಿ ತೋರುವ ಅನು ಕಂಪವೇ ನಿಜವಾದ ಭಕ್ತಿ. ಅಂತಹರ ಸಾಂತ್ವನೆಗೆ ಮಾಡುವ ಸೇವೆಯೇ ನಿಜವಾದ ಪೂಜೆ. ಇದು ದೇವರು ಮೆಚ್ಚುವ ಭಕ್ತಿ, ಪೂಜೆ. ನಿಮ್ಮ ಈ ಉನ್ನತ ಧ್ಯೇಯ ನಿಮ್ಮ ಮಾರ್ಗದ ಬೆಳಕಾಗಲಿ" ಎಂದು ಪುಟ್ಟ ಭಾಷಣ ವನ್ನೇ ಮಾಡಿದರು.

ವಸೂಲಾದ ಹಣ, ಬುಸ್ಸಣ್ಣನವರ ವಶಕೊಟ್ಟು ಕೃತಜ್ಞತೆ ಅರ್ಪಿ ಸಿದ ರಾಜಣ್ಣ.

"ತುಂಬಾ ಅವಸರವಾಗಿತ್ತು ನನಗೆ ಹಣಕ್ಕೆ!"—ಬುಸ್ಸಣ್ಣ ನಕ್ಕರು.

"ಹಾಗಾದರೆ ಉಳಿದ ಹಣ ಬರೋದು ನಿಧಾನವೇ ನಿಮಗೆ. ನಮ್ಮ ಅವಸರಕ್ಕೆ ನೀವು ಆತುಕೊಂಡದ್ದು ನಮ್ಮ ಪುಣ್ಯ. ನಿಮಗೆ ನಾವು ಋಣಿಗಳು!"

—ಎಂದ ರಾಜಣ್ಣ. ರಾಯರು ಬುಸ್ಸಣ್ಣನವರ ಕಡೆ ಕೃತಜ್ಞತೆ ಬೀರಿದರು ಅಷ್ಟೆ. ಮಾತಾಡಲಿಲ್ಲ.

ರುಕ್ಮಿಣಮ್ಮನವರ ಮುಖಾಂತರ ಎಲ್ಲವನ್ನೂ ಕ್ರಮೇಣ ಅರಿತಿದ್ದ ಅನಸೂಯಮ್ಮನವರಿಗೆ ಪತಿ ಮರಳಿ ಮನೆಗೆ ಬಂದುದು ಕಂಡು ಕಣ್ಣಂಚಿ ನಿಂದ ನೀರು ಹರಿಯಿತು. ಸಮಾಧಾನದ ನಿಟ್ಟುಸಿರು ಹೊರಬಿಟ್ಟು ಪ್ರಮೀ ಲೆಯ ಕಡೆ ತಿರುಗಿದರು. ಮುಚ್ಚಿದ ಕಣ್ಣು ಮುಚ್ಚಿದಂತೆಯೇ ಅವಳ ಕಣ್ಣಲ್ಲೂ ನೀರು ಚಿಮ್ಮಿತ್ತು. ಅದು ಮರಳಿ ಮನೆಗೆ ಬಂದ ತಂದೆಯ ಬಗ್ಗೆ ಆನಂದ ಬಾಷ್ಪವೋ, ಆನಂದನ ನೆನಪಿನ ವೇದನೆಯ ಕುದಿ ನೀರೋ— ಅನಸೂಯಮ್ಮನವರಿಗೆ ಅರಿವಾಗಲಿಲ್ಲ.

*　　*　　*　　*

ಪ್ರಮೀಲ ದಿನದಿಂದ ದಿನಕ್ಕೆ ಕಡ್ಡಿಯಾಗುತ್ತಾ ಬಂದುದನ್ನು ಕಂಡು ರಾಜಣ್ಣ ಆನಂದನ ಪತ್ತೆಗಾಗಿ ತವಕಪಡುತ್ತಿದ್ದ. ಎಲ್ಲಿದ್ದರೂ ಆನಂದನನ್ನು ಹುಡುಕಿ ತಂದು ಕೊಡುವೆನೆಂದು ತಂಗಿಗೆ ಆತ ಭರವಸೆಯಿತ್ತಿದ್ದ. ಅಣ್ಣ ನೊಡನೆ ಸಲುಗೆಯಿಂದ – ತಡೆಯಲಾರದ ಸಂಕಟದಿಂದ "ಅವರಿನ್ನು ಬರು

ವುದಿಲ್ಲ. ನಾನಿನ್ನು ಬದುಕುವುದಿಲ್ಲ" ಎಂದು ನುಡಿದುದನ್ನು ಆನಂದನು ಸಿಗದಿದ್ದರೆ ಪ್ರಮೀಲೆ ಉಳಿಯುವಳೋ ಉಳಿಯ ಎಂಬುದೇ ಅವನಿಗೆ ಸಂದೇಹವಾಗಿತ್ತು. ಆನಂದನ ಆಗಮನ ರಾ ಪ್ರಿಯವೇ ಆಗಿತ್ತು. ಪತ್ರಿಕೆಯಲ್ಲಿ ಪ್ರಕಟಣೆಯಿತ್ತರೂ ಪತ್ತೆಯಿಲ್ಲ.

ಪ್ರಮೀಲ ಚಾಪೆ ಹಿಡಿದಿದ್ದಳು. ಕನಸಿನಲ್ಲಿ ಆನಂದನನು ಮಾತನಾಡುತ್ತಿದ್ದಳು. ಆ ದಿನ ಎಲ್ಲರೂ ಗಾಬರಿಗೊಂಡಿದ್ದರು ಭದ್ರಾ ಪ್ರೊಜೆಕ್ಟಿನಲ್ಲಿ ಕಲ್ಲು ಮನಸ್ಸು ಮಾಡಿ ಎಲ್ಲವನ್ನೂ ಮರೆತು ಸೇರಿದ್ದ ಆನಂದನನ್ನು ಅಲ್ಲಿಗೆ ಹೋದ ಶ್ರೀನಿವಾಸರಾಯರೂ ಚಿತ್ರ D. M. O. ಸುಬ್ಬರಾಯರೂ ಕಾರಿನಲ್ಲಿ ಕರಕೊಂಡು ಬಂದು ಮನೆಯ ಮುಂದೆ ನಿಲ್ಲಿಸಿದರು. "ನಿನ್ನನ್ನು ಕಾಣದೆ ಪ್ರಮೀಲೆ ದಕ್ಕೆ ಸಿದ್ಧವಾಗಿದ್ದಾಳೆ ಚಾಪೆ ಹಿಡಿದಿದ್ದಾಳೆ." ಎಂದುದರಿಂದ ಪಾತಾಳಕ್ಕಿಳಿದು ಹೋಗಿದ್ದ. ಅವನೆದೆ "ಪ್ರಮೀ" ಎಂದು ಕೂಗ ಆ ದಿನ ರಾಯರಿಗೆ ಆನಂದನನ್ನು ಕಂಡಾಗ ಏನುಮಾಡಬೇಕೋ ತಿ

"ಆನಂದ ಇದು ನಿನ್ನ ಮನೆಯೇ ಅಲ್ಲವೇ? ನೀನಿಲ್ಲದೆ ಈ ವಾಯಿತು" ಎಂದು ತಪ್ಪಿಕೊಂಡರು.

"ಕ್ಷಮಿಸಿ" ಎಂದ ಆನಂದ.

"ಎಲ್ಲಿ ಹೋದರೂ ಮರಳಿ ಮನೆಗೆ ಬರೋದು ರೂಢಿ ಆನಂದ್, ಪ್ರಮೀ ಹತ್ರ ನೀನು ಕ್ಷಮೆ ಕೇಳು" ಎಂದು ರಾಜಣ್ಣ ನಗು ಬೀರಿದ.